ಸೋಮವಾರ, ಜುಲೈ 14, 2025 | ₹ 7.00

prajavani.net prajavani

www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



87ನೇ ಜಿಎಂ

ಚೆನ್ನೈನ ಹರಿಕೃಷ್ಣ ಎ.ಆರ್. ಅವರು ದೇಶದ 87ನೇ ಚೆಸ್ ಗ್ರ್ಯಾಂಡ್‌ಮಾಸ್ಟರ್ ಎನಿಸಿದರು. ಫ್ರಾನ್ಸ್‌ನಲ್ಲಿ ಲಾ ಪ್ಲಾನ್ಯ ಚೆಸ್ ಫೆಸ್ಟಿವಲ್‌ನಲ್ಲಿ ಮೂರನೇ ಜಿಎಂ ನಾರ್ಮ್ ಪಡೆದರು

ದೇಗುಲ ಭೇಟಿ

ಸಿಕಂದರಾಬಾದ್‌ನ ಉಜ್ಜಯಿನಿ ಮಹಾಕಾಳಿ ದೇವಸ್ಥಾನದಲ್ಲಿ ನಡೆದ 'ಬೋನಾಲು' ಉತ್ಸವದಲ್ಲಿ ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಭಾಗಿಯಾದರು

‘ಇಂಧನ ಸ್ವಿಚ್ ಪರಿಶೀಲನೆ ನಡೆಸಿರಲಿಲ್ಲ’

ಏರ್ ಇಂಡಿಯಾ ವಿಮಾನ ಪತನ ಪ್ರಕರಣ: ವಿಮಾನ ಅಪಘಾತ ತನಿಖಾ ಬ್ಯೂರೊ ವರದಿಯಲ್ಲಿ ಉಲ್ಲೇಖ

• ಜಯಸಿಂಹ ಆರ್.



ಪತನವಾದ ವಿಮಾನದ ಇಂಧನ ಸ್ವಿಚ್‌ಗಳು (ಎಡಚಿತ್ರ). ಬೋಯಿಂಗ್ ಬಿ–787 ವಿಮಾನದ ಇಂಧನ ಸ್ವಿಚ್‌ನ ಮಾದರಿ

ಬೆಂಗಳೂರು: ಬೋಯಿಂಗ್ ಬಿ–787 ಸರಣಿಯ ವಿಮಾನದ ಎಂಜಿನ್‌ಗಳ ಇಂಧನ ಸ್ವಿಚ್‌ಗಳಲ್ಲಿ ತಾಂತ್ರಿಕ ಸಮಸ್ಯೆ ಇದ್ದು, ಅವುಗಳನ್ನು ಬದಲಿಸಿ ಎಂದು ಅಮೆರಿಕದ ಫೆಡರಲ್ ವಿಮಾನಯಾನ ಸಂಸ್ಥೆ (ಎಫ್‌ಎಎ) 2018ರಲ್ಲೇ ಸುತ್ತೋಲೆ ಹೊರಡಿಸಿತ್ತು. ಅಹಮದಾಬಾದ್‌ನಲ್ಲಿ ಪತನವಾದ ಬಿ–787 ವಿಮಾನದಲ್ಲೂ ಇದೇ ಸ್ವಿಚ್ ಬಳಕೆಯಾಗಿದ್ದು, ಅವುಗಳು ಸುಸ್ಥಿತಿಯಲ್ಲಿ ಇದ್ದವೇ ಎಂಬುದರ ಬಗ್ಗೆ ಏರ್ ಇಂಡಿಯಾವು ಪರಿಶೀಲನೆ ನಡೆಸಿರಲಿಲ್ಲ.

ಏರ್ ಇಂಡಿಯಾ ವಿಮಾನ ಪತನದ ತನಿಖೆಯ ಕುರಿತು, ವಿಮಾನ ಅಪಘಾತ ತನಿಖಾ ಬ್ಯೂರೊ (ಎಎಐಬಿ) ಶನಿವಾರ ಬಿಡುಗಡೆ ಮಾಡಿದ್ದ ಪ್ರಾಥಮಿಕ ವರದಿಯಲ್ಲಿ ಈ ಮಾಹಿತಿ ಇದೆ.

ಇಂಧನ ಸ್ವಿಚ್‌ಗಳಲ್ಲಿ ಇರುವ ತಾಂತ್ರಿಕ ಸಮಸ್ಯೆ ಬಗ್ಗೆ ಎಫ್‌ಎಎ 2018ರ ಡಿಸೆಂಬರ್‌ನಲ್ಲಿ ಸುತ್ತೋಲೆ ಹೊರಡಿಸಿತ್ತು.

‘ಬೋಯಿಂಗ್ 737 ಸರಣಿಯ ವಿಮಾನಗಳ ಇಂಧನ ಸ್ವಿಚ್‌ನಲ್ಲಿ ತಾಂತ್ರಿಕ ಸಮಸ್ಯೆ ವರದಿಯಾಗಿದೆ. ಈ ಸ್ವಿಚ್‌ಗಳಲ್ಲಿ ‘ರನ್’ (ಎಂಜಿನ್‌ಗೆ ಇಂಧನ ಪೂರೈಸುವ ಸ್ಥಿತಿ) ಸ್ಥಿತಿಯಲ್ಲಿ ಇದ್ದಾಗ, ಅವು ಲಾಕ್ ಆಗಿರುತ್ತವೆ. ಸ್ವಿಚ್‌ಗಳನ್ನು ‘ರನ್’ ಸ್ಥಿತಿಯಿಂದ, ‘ಕಟ್ ಆಫ್’ (ಇಂಧನ ಪೂರೈಕೆ ಸ್ಥಗಿತ) ಸ್ಥಿತಿಗೆ ತರುವುದಕ್ಕೂ ಮೊದಲು ಲಾಕ್ ತೆರೆಯಬೇಕಾಗುತ್ತದೆ. ಪೈಲಟ್‌ಗಳು ಏನು ಮಾಡದೇ ಇದ್ದರೂ ಈ ಲಾಕ್‌ಗಳು ತನ್ನಿಂದತಾನೇ ತೆರೆದುಕೊಳ್ಳುತ್ತಿದ್ದವು’ ಎಂದು ಸುತ್ತೋಲೆಯಲ್ಲಿ ವಿವರಿಸಿತ್ತು.

‘ಪೈಲಟ್‌ಗಳ ಅರಿವಿಗೆ ಬರದೆಯೇ ಈ ಲಾಕ್‌ಗಳು ತೆರೆದುಕೊಳ್ಳುತ್ತಿದ್ದವು. ಅಪ್ಪಿತಪ್ಪಿ ಸ್ವಿಚ್‌ನ ಲಿವರ್‌ಗೆ ಪೈಲಟ್‌ಗಳ ಕೈ ತಾಕಿದರೆ ಅಥವಾ ಮತ್ತಿತರ ಬಾಹ್ಯ ಸ್ಪರ್ಶದಿಂದ ಅವು, ದಿಢೀರ್ ಎಂದು ‘ಕಟ್ ಆಫ್’ ಸ್ಥಿತಿಗೆ ಬದಲಾಗಬಹುದು. ಇದು ಅತ್ಯಂತ ಅಪಾಯಕಾರಿಯಾಗಿ ಪರಿಣಮಿಸಬಲ್ಲದು’ ಎಂದು ಎಫ್‌ಎಎ ಕಳವಳ ವ್ಯಕ್ತಪಡಿಸಿತ್ತು.

‘ಬೋಯಿಂಗ್ 737 ಸರಣಿಯ ವಿಮಾನದಲ್ಲಿ ಇದ್ದಂತಹದ್ದೇ ವಿನ್ಯಾಸ, ತಾಂತ್ರಿಕತೆಯ ಇಂಧನ ಸ್ವಿಚ್‌ಗಳನ್ನು (ಪಾರ್ಟ್ ಸಂಖ್ಯೆ: 4TL837-3D) ಬಿ–787 ವಿಮಾನದಲ್ಲೂ ಬಳಸಲಾಗಿದೆ. ಅವುಗಳ ಕಾರ್ಯಕ್ಷಮತೆಯನ್ನು ಪರಿಶೀಲಿಸಬೇಕು’ ಎಂದು ಎಫ್‌ಎಎ ಹೇಳಿತ್ತು.

‘ವಿಮಾನಗಳು ನಿಲುಗಡೆ ಸ್ಥಿತಿಯಲ್ಲಿದ್ದಾಗ, ಸ್ವಿಚ್‌ಗಳನ್ನು ಪರಿಶೀಲಿಸಬೇಕು. ಸ್ವಿಚ್‌ಗಳನ್ನು ‘ರನ್’ ಸ್ಥಿತಿಗೆ ಬದಲಿಸಿ, ಲಾಕಿಂಗ್ ಸೌಲಭ್ಯವನ್ನು ಸಕ್ರಿಯ ಮಾಡಬೇಕು. ನಂತರ ಸ್ವಿಚ್‌ಗಳನ್ನು ಬಲವಂತವಾಗಿ ‘ಕಟ್ ಆಫ್’ ಸ್ಥಿತಿಗೆ ತಳ್ಳಬೇಕು. ಸ್ವಿಚ್ ಸ್ಥಿತಿ ಬದಲಾದರೆ, ಲಾಕ್ ವ್ಯವಸ್ಥೆ ದೋಷದಿಂದ ಕೂಡಿದೆ ಎಂದರ್ಥ. ಆ ಬಗ್ಗೆ ಬೋಯಿಂಗ್‌ಗೆ ತಕ್ಷಣವೇ ಮಾಹಿತಿ ನೀಡಿ, ಸ್ವಿಚ್‌ಗಳನ್ನು ಬದಲಿಸಬೇಕು’ ಎಂದು ಸೂಚಿಸಿತ್ತು.

ಪ್ರಜಾವಾಣಿ ವಿಶೇಷ

ಅಹಮದಾಬಾದ್‌ನಲ್ಲಿ ಪತನವಾದ ಏರ್ ಇಂಡಿಯಾದ ‘ಬಿ–787–8 ವಿಟಿ–ಎಎನ್‌ಬಿ’ ವಿಮಾನದಲ್ಲೂ ಇದೇ ಸ್ವಿಚ್‌ಗಳನ್ನು (ಪಾರ್ಟ್ ಸಂಖ್ಯೆ: 4TL837-3D) ಬಳಸಲಾಗಿತ್ತು. ಪತನ ಪ್ರಕರಣದ ತನಿಖೆ ನಡೆಸುತ್ತಿರುವ ಎಎಐಬಿ, ಸ್ವಿಚ್ ಕಾರ್ಯಕ್ಷಮತೆಯ ಪರಿಶೀಲನೆಯ ವರದಿ ನೀಡಿ ಎಂದು ಏರ್ ಇಂಡಿಯಾವನ್ನು ಕೇಳಿತ್ತು.

ಆದರೆ, ಏರ್ ಇಂಡಿಯಾವು ‘ಬಿ–787–8 ವಿಟಿ–ಎಎನ್‌ಬಿ’ ವಿಮಾನದಲ್ಲಿ ಅಂತಹ ಯಾವುದೇ ಪರಿಶೀಲನೆ ನಡೆಸಿರಲಿಲ್ಲ. ಈ ಬಗ್ಗೆ ಎಎಐಬಿಗೆ ಉತ್ತರ ಬರೆದಿದ್ದ ಏರ್ ಇಂಡಿಯಾ, ‘ಎಫ್‌ಎಎ ನೀಡಿದ್ದ ಸುತ್ತೋಲೆ ಸಲಹೆ ರೂಪದಲ್ಲಿತ್ತು. ಸ್ವಿಚ್‌ಗಳ ಪರಿಶೀಲನೆ ಕಡ್ಡಾಯವಾಗಿರಲಿಲ್ಲ. ಹೀಗಾಗಿ ನಾವು ಯಾವುದೇ ರೀತಿಯ ಪರಿಶೀಲನೆ ನಡೆಸಿಲ್ಲ’ ಎಂದು ವಿವರಿಸಿತ್ತು. ಈ ಮಾಹಿತಿ ಎಎಐಬಿಯ ಪ್ರಾಥಮಿಕ ವರದಿಯಲ್ಲಿ ಇದೆ.

‘ಇಂಧನ ಪೂರೈಕೆಯ ಸ್ವಿಚ್‌ಗಳು ‘ಕಟ್ ಆಫ್’ ಸ್ಥಿತಿಗೆ ಬಂದಿದ್ದರಿಂದಲೇ, ಏರ್ ಇಂಡಿಯಾ ವಿಮಾನದ ಎಂಜಿನ್‌ಗಳು ಸ್ಥಗಿತವಾಗಿದ್ದವು’ ಎಂಬ ವಿವರ ಪ್ರಾಥಮಿಕ ವರದಿಯಲ್ಲಿ ಇದೆ. ಪೈಲಟ್‌ಗಳು ಸ್ವಿಚ್‌ಗಳ ಸ್ಥಿತಿ ಬದಲಾಯಿಸಿದ್ದರೇ ಅಥವಾ ತಾಂತ್ರಿಕ ಸಮಸ್ಯೆಯ ಕಾರಣದಿಂದ ಸ್ವಿಚ್‌ಗಳು ‘ಕಟ್ ಆಫ್’ ಸ್ಥಿತಿಗೆ ಬಂದವೇ ಎಂಬುದರ ಬಗ್ಗೆ ವರದಿಯಲ್ಲಿ ಯಾವುದೇ ವಿವರಣೆ ಇಲ್ಲ.

ವಿಮಾನ ಹಾರಾಟಕ್ಕೂ ಮುನ್ನ ದೋಷ ಸರಿಪಡಿಸಲಾಗಿತ್ತು

ಅಹಮದಾಬಾದ್‌ನಿಂದ ಲಂಡನ್‌ನ ಪ್ರಯಾಣಕ್ಕೂ ಮುನ್ನ ಏರ್ ಇಂಡಿಯಾದ ‘ಬಿ–787–8 ವಿಟಿ–ಎಎನ್‌ಬಿ’ ದೆಹಲಿಯಿಂದ ಅಹಮದಾಬಾದ್‌ಗೆ ಬಂದಿತ್ತು. ಈ ಪ್ರಯಾಣದ ವೇಳೆ ವಿಮಾನದ ಸ್ಥಿರೀಕರಣ ವ್ಯವಸ್ಥೆಯಲ್ಲಿ ಸಮಸ್ಯೆ ಇದೆ ಎಂಬುದನ್ನು ಪೈಲಟ್‌ಗಳು ಲಾಗ್ ಪುಸ್ತಕದಲ್ಲಿ ‘STAB POS XDCR’ ಎಂದು ನಮೂದಿಸಿದ್ದರು.

ವಿಮಾನವು ಹಾರಾಟದ ಸ್ಥಿತಿಯಲ್ಲಿ ಇರುವಾಗ, ಅದರ ತಳಭಾಗವು ನೆಲದ ಮೇಲ್ಮೈಗೆ ಹೊಂದಿಕೊಳ್ಳುವಂತೆ ಇರಬೇಕು. ಅಂದರೆ ವಿಮಾನದ ಮುಂಭಾಗ ಮತ್ತು ಹಿಂಭಾಗ ಎರಡೂ ಒಂದೇ ಎತ್ತರದಲ್ಲಿದಲ್ಲಿರಬೇಕು. ವಿಮಾನವು ಮುಂಭಾಗ ಮತ್ತು ಹಿಂಭಾಗಕ್ಕೆ ಬಾಗಿಕೊಂಡಿರಬಾರದು. ವಿಮಾನವನ್ನು ಹೀಗೆ ಕಾಯ್ದುಕೊಳ್ಳುವ ವ್ಯವಸ್ಥೆಯನ್ನು ‘ಸ್ಟೆಬಿಲೈಸರ್ ಪೊಸಿಷನ್ ಟ್ರಾನ್ಸ್‌ಡ್ಯೂಸರ್’ ಎಂದು ಕರೆಯಲಾಗುತ್ತದೆ. ಈ ವ್ಯವಸ್ಥೆಯಲ್ಲಿ ಸಮಸ್ಯೆ ಇದೆ ಎಂಬುದನ್ನು ಪೈಲಟ್‌ಗಳು ‘STAB POS XDCR’ ಎಂಬ ಕೋಡ್‌ನ ಮೂಲಕ ಸೂಚಿಸಿದ್ದರು.

ಈ ಸಮಸ್ಯೆಯನ್ನು ಏರ್ ಇಂಡಿಯಾದ ಎಂಜಿನಿಯರ್‌ಗಳು ಸರಿಪಡಿಸಿದ್ದರು. ಆನಂತರ ವಿಮಾನವನ್ನು ಲಂಡನ್ ಪ್ರಯಾಣಕ್ಕೆ ಸಿದ್ಧಗೊಳಿಸಲಾಗಿತ್ತು ಎಂಬ ಮಾಹಿತಿ ತನಿಖಾ ವರದಿಯಲ್ಲಿ ಇದೆ. ಆದರೆ, ವಿಮಾನ ಪತನವಾಗುವುದಕ್ಕೆ ಇದೂ ಒಂದು ಕಾರಣವೇ ಅಥವಾ ಅಲ್ಲವೇ ಎಂಬುದರ ಬಗ್ಗೆ ವರದಿಯಲ್ಲಿ ಯಾವುದೇ ವಿವರಣೆ ಇಲ್ಲ.

ಸುದ್ದಿ 2 ನಿಮಿಷ

‘ಗೋಮಾಂಸ ರಫ್ತು ಪ್ರಶ್ನಿಸಲಿ’

ದಾವಣಗೆರೆ: ‘ಬೀದಿನಾಯಿಗಳಿಗೆ ಪೌಷ್ಟಿಕ ಆಹಾರ ನೀಡುವುದನ್ನು ಟೀಕಿಸುವ ಬಿಜೆಪಿ ನಾಯಕರು, ಗೋಮಾಂಸ ರಫ್ತು ಮಾಡುವುದನ್ನೂ ಪ್ರಶ್ನಿಸಬೇಕು’ ಎಂದು ಸಚಿವ ಸಂತೋಷ್ ಲಾಡ್ ಆಗ್ರಹಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಗೋಮಾಂಸ ರಫ್ತಿನಲ್ಲಿ ಭಾರತವು ವಿಶ್ವದಲ್ಲೇ 2ನೇ ಸ್ಥಾನದಲ್ಲಿದೆ. 20 ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದ್ದರೂ ಗೋಮಾಂಸ ರಫ್ತು ತಡೆಯಲು ಈವರೆಗೆ ಏಕೆ ಸಾಧ್ಯವಾಗಿಲ್ಲ’ ಎಂದು ಪ್ರಶ್ನಿಸಿದರು.



‘ಖೇಲೊ ಇಂಡಿಯಾದ ಅಡಿ ಗುಜರಾತಿಗೆ ₹600 ಕೋಟಿ ಅನುದಾನ ನೀಡಲಾಗಿದೆ. ಉತ್ತರಪ್ರದೇಶಕ್ಕೆ ₹400 ಕೋಟಿ ಹಂಚಿಕೆಯಾಗಿದೆ. ಈ ರಾಜ್ಯಗಳಲ್ಲಿ ಒಬ್ಬರೇ ಒಬ್ಬರು ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ನಿದರ್ಶನವಿಲ್ಲ. ಹೆಚ್ಚು ಪದಕ ಗೆದ್ದ ಕ್ರೀಡಾಪಟುಗಳಿರುವ ಪಂಜಾಬ್ ಮತ್ತು ಹರಿಯಾಣಕ್ಕೆ ಕಡಿಮೆ ಅನುದಾನ ನೀಡಲಾಗಿದೆ. ತಮಿಳುನಾಡಿಗೆ ₹43 ಕೋಟಿ ಮಾತ್ರ ಕೊಡಲಾಗಿದೆ. ಈ ತಾರತಮ್ಯ ಸಹಿಸಲು ಸಾಧ್ಯವಿಲ್ಲ’ ಎಂದು ಹೇಳಿದರು.

‘ಭಾಗವತ್ ಹೇಳಿಕೆ: ಬಿಜೆಪಿ ಆತ್ಮಾವಲೋಕನ ಮಾಡಿಕೊಳ್ಳಲಿ’

ಹುಬ್ಬಳ್ಳಿ: ‘ಪ್ರಧಾನಿ ಮೋದಿ ನಾಯಕತ್ವ ಬದಲಾಗಿ ಯುವಕರಿಗೆ ಆದ್ಯತೆ ಸಿಗಬೇಕಿದೆ.ಆ ಕಾರಣಕ್ಕಾಗಿಯೇ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು 75 ವರ್ಷ ಆದವರು ರಾಜಕೀಯ ನಿವೃತ್ತಿ ಪಡೆಯಬೇಕು ಎಂದಿದ್ದಾರೆ’ ಎಂದು ಸರ್ಕಾರದ ಮುಖ್ಯ ಸಚೇತಕ, ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್ ಹೇಳಿದರು.

‘ಭಾಗವತ್ ಅವರ ಹೇಳಿಕೆಗೆ ಭಾನುವಾರ ಇಲ್ಲಿ ‘ಪ್ರಧಾನಿ ಮೋದಿ ಅವರನ್ನು ಉದ್ದೇಶಿಸಿಯೇ ಈ ಹೇಳಿಕೆ ನೀಡಿದ್ದು, ಇದು ಮಹತ್ವದ್ದಾಗಿದೆ’ ಎಂದರು.

‘ಇದು ಬಿಜೆಪಿಯ ಆಂತರಿಕ ವಿಚಾರವಾಗಿದ್ದರೂ, ಪ್ರಸ್ತುತವಾಗಿದೆ. ಬಿ.ಎಸ್.ಯಡಿಯೂರಪ್ಪ ಅವರಿಗೆ 75 ವರ್ಷ ಆಗಿದೆ ಎಂದು ಮುಖ್ಯಮಂತ್ರಿ ಸ್ಥಾನದಿಂದ ಬದಲಾವಣೆ ಮಾಡಿದರು. ಬಿಜೆಪಿಯವರು ಈಗ ಆತ್ಮಾವಲೋಕನ ಮಾಡಿಕೊಳ್ಳಬೇಕು’ ಎಂದು ಹೇಳಿದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	122.36	16,004	13,172
ಹಾರಂಗಿ	2,859	2,853.74	3,563	3,333
ಕಬಿನಿ	2,284.00	2,281. 91	10,834	12,000
ಹೇಮಾವತಿ	2,922	2,920.82	8,780	6,700
ಲಿಂಗನಮಕ್ಕಿ	1,819	1,799.60	30,793	4,455
ಸೂಪಾ (ಮೀ)	564	544.37	11,911.60	5,609.26
ಮಾಣಿ	595	586.80	2,858	814
ತುಂಗಭದ್ರಾ	1,633	1,625.32	42,844	35,300
ಮಲಪ್ರಭಾ	2,079.5	2,070.60	5,833	194
ಘಟಪ್ರಭಾ	2175	2,167.58	7,793	5,558
ಭದ್ರಾ *	186	175.6	10,151	3,588
ಆಲಮಟ್ಟಿ (ಮೀ)	519.6	517.58	78,497	20,000
ನಾರಾಯಣಪುರ (ಮೀ)	492.25	491.16	20,000	6,000

* ನೆಲಮಟ್ಟದಿಂದ

ರಾಜಕೀಯ ಬೆಳವಣಿಗೆ ಕುರಿತು ಕಾಶಪ್ಪನವರ ಹೇಳಿದ್ದಾರೆ: ಎಚ್‌.ಕೆ.ಪಾಟೀಲ

‘ಶಾಸಕರ ಖರೀದಿಗೆ ಅವಕಾಶವಿಲ್ಲ’

ಪ್ರಜಾವಾಣಿ ವಾರ್ತೆ


ಎಚ್‌.ಕೆ. ಪಾಟೀಲ

ಗದಗ: ‘ಶಾಸಕರ ಖರೀದಿಗೆ ಅವಕಾಶ ಇಲ್ಲ. ಶಾಸಕರ ಖರೀದಿ ವ್ಯಾಪಾರ ನಡೆಯುತ್ತಿದೆ ಅಂತ ನನಗೇನೂ ಅನ್ನಿಸಿಲ್ಲ’ ಎಂದು ಸಚಿವ ಎಚ್‌.ಕೆ. ಪಾಟೀಲ ಹೇಳಿದರು.

‘ಈ ಕುರಿತ ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿಕೆ ಗಮನಿಸಿದ್ದು, ಅವರು ರಾಜಕೀಯ ಬೆಳವಣಿಗೆ ಕುರಿತು ಆಕ್ರೋಶ ವ್ಯಕ್ತಪಡಿಸಿದ್ದಾರೆ’ ಎಂದು ಭಾನುವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು ಹೇಳಿದರು.

‘ಸಿ.ಎಂ., ಡಿಸಿಎಂ ‘ಮನಿ ಪವರ್’ ಬಳಸಿ ಕುದುರೆ ವ್ಯಾಪಾರಕ್ಕೆ ಇಳಿದಿದ್ದಾರೆ’ ಎಂಬ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಹೇಳಿಕೆಗೆ, ‘ಸರ್ಕಾರ ಐದು ವರ್ಷ ಭದ್ರವಾಗಿರುತ್ತದೆ. ಊಹಾತ್ಮಕ ವಿಷಯ ಬಿಟ್ಟು, ವಾಸ್ತವ ಕುರಿತು ಮಾತನಾಡಲಿ’ ಎಂದು ತಿರುಗೇಟು ನೀಡಿದರು.

‘ಗ್ಯಾರಂಟಿ ಯೋಜನೆಗಳಿಂದ ಜನರಲ್ಲಿ ಸೋಮಾರಿತನ’ ಎಂಬ ರಂಭಾಪುರ ಶ್ರೀಗಳ ಹೇಳಿಕೆಗೆ ಅವರು, ‘ಯಾರು ಭಾರತೀಯರೋ, ಯಾರು ದೇಶಪ್ರೇಮಿಗಳೋ ಅವರು ಗ್ಯಾರಂಟಿ ವಿರುದ್ಧ ಮಾತನಾಡುವುದಿಲ್ಲ. ಸೋಮಾರಿ ಆಗುತ್ತಾರೆ ಅನ್ನುವುದನ್ನು ಒಪ್ಪಲಾಗದು’ ಎಂದರು.

‘ಸಿ.ಎಂ., ಡಿಸಿಎಂರಿಂದ ‘ಮನಿ ಪವರ್’ ಬಳಕೆ’

ಪ್ರಜಾವಾಣಿ ವಾರ್ತೆ

ಪ್ರಲ್ಹಾದ ಜೋಶಿ

ಹುಬ್ಬಳ್ಳಿ: ‘ಸಿ.ಎಂ ಸ್ಥಾನ ಉಳಿಸಿಕೊಳ್ಳಲು ಸಿದ್ದರಾಮಯ್ಯ ಹಾಗೂ ಮುಖ್ಯಮಂತ್ರಿ ಆಗಬೇಕು ಎಂದು ಡಿ.ಕೆ.ಶಿವಕುಮಾರ್ ಅವರು ‘ಮನಿ ಪವರ್’ ಬಳಸಿ ಕುದುರೆ ವ್ಯಾಪಾರಕ್ಕೆ ಇಳಿದಿದ್ದಾರೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಇಲ್ಲಿ ಆರೋಪಿಸಿದರು.

‘55 ಶಾಸಕರ ಪಟ್ಟಿ ಹಿಡಿದುಕೊಂಡು ಬಿಜೆಪಿ ಜಾರಿ ನಿರ್ದೇಶನಾಲಯದ ಹೆಸರಿನಲ್ಲಿ ಬೆದರಿಕೆಯೊಡ್ಡಿ ಆಪರೇಷನ್ ಕಮಲಕ್ಕೆ ಮುಂದಾಗಿದೆ’ ಎನ್ನುವ ಕಾಂಗ್ರೆಸ್ ಶಾಸಕ ವಿಜಯಾನಂದ ಕಾಶಪ್ಪನವರ್ ಹೇಳಿಕೆಗೆ ಭಾನುವಾರ ನಗರದಲ್ಲಿ ಮಾಧ್ಯಮಗಳಿಗೆ ಅವರು ಪ್ರತಿಕ್ರಿಯಿಸಿದರು.

‘ಸಿ.ಎಂ ಸ್ಥಾನಕ್ಕೆ ಕಾಂಗ್ರೆಸ್‌ನಲ್ಲಿ ಅವರದ್ದೇ ಶಾಸಕರ ಖರೀದಿ ನಡೆದಿದೆ. ಇದು ಹೊರಬರಬಾರದು ಎಂದು, ಜನರ ದಿಕ್ಕುತಪ್ಪಿಸಲು ಸುಳ್ಳು ಆರೋಪ ಮಾಡಿದ್ದಾರೆ’ ಎಂದು ಹೇಳಿದರು.

‘ಅಧಿಕಾರದ ಕಚ್ಚಾಟದಿಂದ ಆಡಳಿತದ ಮೇಲೆ ದುಷ್ಪರಿಣಾಮ ಬೀರಿದೆ. ಭ್ರಷ್ಟಾಚಾರ ಹೆಚ್ಚುತ್ತಿದೆ. ವರ್ಗಾವಣೆ ಹೆಸರಲ್ಲಿ ಲೂಟಿ ನಡೆಯುತ್ತಿದೆ. ಕಾಂಗ್ರೆಸ್ ಹೈಕಮಾಂಡ್ ಇದನ್ನು ಗಂಭೀರವಾಗಿ ಪರಿಗಣಿಸಬೇಕು’ ಎಂದು ಜೋಶಿ ಒತ್ತಾಯಿಸಿದರು.

ತುಂಗಭದ್ರಾ ನದಿಯಲ್ಲಿ ಮುಳುಗಿ ಮೂವರು ಯುವಕರು ಸಾವು

ಪ್ರಜಾವಾಣಿ ವಾರ್ತೆ

ಅಜಿತ್, ಸಚಿನ್, ಪ್ರಮೋದ

ರಾಯಚೂರು: ಮಂತ್ರಾಲಯ ಬಳಿ ತುಂಗಭದ್ರಾ ನದಿಗೆ ಈಜಲು ತೆರಳಿದ್ದ ಹಾಸನ ಮೂಲದ ಮೂವರು ಯುವಕರು ಮೃತಪಟ್ಟಿದ್ದಾರೆ. ಹಾಸನ ಜಿಲ್ಲೆ ಮೂಲದ ಅಜಿತ್ (20), ಸಚಿನ್ (20) ಹಾಗೂ ಪ್ರಮೋದ (19) ಮೃತರು.

ಐವರು ಶನಿವಾರ ಯುವಕರು ರಾಘವೇಂದ್ರ ಸ್ವಾಮಿಗಳ ದರ್ಶನಕ್ಕೆ ರಾಯರ ಮಠಕ್ಕೆ ಬಂದಿದ್ದರು. ಬೆಳಿಗ್ಗೆ ಸ್ನಾನ ಮಾಡಿ ರಾಯರ ದರ್ಶನ ಪಡೆದಿದ್ದರು. ಸಂಜೆ ಮತ್ತೆ ಸ್ನಾನ ಮಾಡಲು ನಿರ್ಧರಿಸಿ ನದಿಗಿಳಿದಿದ್ದರು. ಆಗ, ಮೂವರು ನೀರು ಪಾಲಾಗಿದ್ದರು.

ಇವರ ಪತ್ತೆಗೆ ಮುಳುಗು ತಜ್ಞರ ನೆರವು ಪಡೆಯಲಾಗಿತ್ತು. ಭಾನುವಾರ, ಎಸ್‌ಡಿಆರ್‌ಎಫ್ ತಂಡ ಯುವಕರು ಮುಳುಗಿದ್ದ ಜಾಗದಲ್ಲೇ ಶೋಧ ನಡೆಸಿದಾಗ ಶವಗಳು ಪತ್ತೆಯಾದವು. ಮರಣೋತ್ತರ ಪರೀಕ್ಷೆ ಬಳಿಕ ಸಂಬಂಧಿಗಳಿಗೆ ಶವಗಳನ್ನು ಹಸ್ತಾಂತರಿಸಲಾಯಿತು.

ಮಂತ್ರಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿಟಿಕೆ ಸುದ್ದಿ

ಮರಾಠಿ ವಿರೋಧಿ ಹೇಳಿಕೆ: ಆಟೊ ಚಾಲಕನಿಗೆ ಥಳಿತ

ಪಾಲ್ಘರ್ (ಪಿಟಿಐ): ಮರಾಠಿ ವಿರೋಧಿ ಹೇಳಿಕೆ ನೀಡಿದ್ದಕ್ಕಾಗಿ ಆಟೊ ಚಾಲಕನನ್ನು ಶಿವಸೇನಾ (ಯುಬಿಟಿ) ಕಾರ್ಯಕರ್ತರು ಶನಿವಾರ ಮನಸೋಇಚ್ಛೆ ಥಳಿಸಿದ್ದಾರೆ. ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ವಿರಾರ್ ರೈಲು ನಿಲ್ದಾಣ ಸಮೀಪ ಮಹಿಳೆಯರು ಸೇರಿದಂತೆ ಕಾರ್ಯಕರ್ತರ ಗುಂಪೊಂದು ಹಲ್ಲೆ ನಡೆಸಿದ್ದು, ಸಾರ್ವಜನಿಕವಾಗಿ ಕ್ಷಮೆಯಾಚಿಸುವಂತೆ ಒತ್ತಾಯಿಸಿತ್ತು. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ಇದು, ರಾಜ್ಯದಲ್ಲಿ ಭಾಷಾ ವಿಷಯದ ವಿವಾದಕ್ಕೆ ಕಾರಣವಾಗಿದೆ.

‘ಆಟೊ ಚಾಲಕನನ್ನು ಥಳಿಸುತ್ತಿರುವ ವಿಡಿಯೊ ಲಭ್ಯವಾಗಿದೆ. ಆದರೆ, ಈ ವಿಚಾರವಾಗಿ ಯಾವುದೇ ಅಧಿಕೃತ ದೂರು ಬಂದಿಲ್ಲ. ಹೀಗಾಗಿ, ಯಾವುದೇ ಪ್ರಕರಣ ದಾಖಲಿಸಿಕೊಂಡಿಲ್ಲ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕೋಲ್ಕತ್ತ ಐಐಎಂ ಅತ್ಯಾಚಾರ ಪ್ರಕರಣ ತನಿಖೆಗೆ ಎಸ್‌ಐಟಿ

ಕೋಲ್ಕತ್ತ (ಪಿಟಿಐ): ಕೋಲ್ಕತ್ತದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್‌ನಲ್ಲಿ (ಐಐಎಂ) ನಡೆದಿದೆ ಎನ್ನಲಾಗಿರುವ ಅತ್ಯಾಚಾರ ಪ್ರಕರಣದ ತನಿಖೆಗಾಗಿ 9 ಸದಸ್ಯರ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ಭಾನುವಾರ ರಚಿಸಲಾಗಿದೆ.

ನೈರುತ್ಯ ವಿಭಾಗದ ಉಪ ಪೊಲೀಸ್ ಆಯುಕ್ತರ ನೇತೃತ್ವದಲ್ಲಿ ತಂಡ ರಚಿಸಲಾಗಿದ್ದು, ಡಿಜಿಟಲ್ ಸಾಕ್ಷ್ಯಗಳು ಹಾಗೂ ವಿಧಿವಿಜ್ಞಾನ ಸಾಕ್ಷ್ಯಗಳ ಸಂಗ್ರಹಕ್ಕೆ ತನಿಖಾ ತಂಡ ಆದ್ಯತೆ ನೀಡಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈಗಾಗಲೇ ವಿಧಿವಿಜ್ಞಾನ ತಂಡವು ಘಟನಾ ಸ್ಥಳಕ್ಕೆ ಭೇಟಿ ನೀಡಿ ವಿವಿಧ ವಸ್ತುಗಳ ಮಾದರಿಯನ್ನು ಸಂಗ್ರಹಿಸಿದೆ.

ತನಿಖೆಯ ಭಾಗವಾಗಿ ಸಿಸಿಟಿವಿ ದೃಶ್ಯಗಳನ್ನು ಒದಗಿಸುವಂತೆಯೂ ಐಐಎಂಗೆ ಕೇಳಲಾಗಿದೆ ಎಂದೂ ಮಾಹಿತಿ ನೀಡಿದ್ದಾರೆ.

ಕೋಲ್ಕತ್ತ ಐಐಎಂನ ಆವರಣದಲ್ಲಿ ಇರುವ ಬಾಲಕರ ಹಾಸ್ಟೆಲ್‌ಗೆ ಕೌನ್ಸಿಲಿಂಗ್ ನೀಡಲು ತೆರಳಿದ್ದ ಮಹಿಳೆಯೊಬ್ಬರು ತಮ್ಮ ಮೇಲೆ ಐಐಎಂನ ವಿದ್ಯಾರ್ಥಿಯಿಂದಲೇ ಶುಕ್ರವಾರ ಅತ್ಯಾಚಾರ ನಡೆದಿದೆ ಎಂದು ಆರೋಪಿಸಿದ್ದಾರೆ.

ಖಳಬೇಡನ ರಂಜನೆ...

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ಮೊಹರಂ ಅಂಗವಾಗಿ ಕೊಪ್ಪಳದ ಗಡಿಯಾರ ಕಂಬದ ಬಳಿ ಭಾನುವಾರ ಖಳಬೇಡ ಪಾತ್ರಧಾರಿ ಹೆಗಲುಗಳನ್ನು ಬದಲಿಸುತ್ತ, ಬೀದಿಗಳಲ್ಲಿ ಸುತ್ತಿ, ಜನರನ್ನು ರಂಜಿಸಿದ ಬಗೆ

ಶಿರೂರು ಪರ್ಯಾಯ ಪೂರ್ವ ಕಟ್ಟಿಗೆ ಮುಹೂರ್ತ

ಪ್ರಜಾವಾಣಿ ವಾರ್ತೆ

ಉಡುಪಿ: ಶಿರೂರು ಮಠಾಧೀಶ ವೇದವರ್ಧನ ತೀರ್ಥ ಶ್ರೀಪಾದರ ಪ್ರಥಮ ಪರ್ಯಾಯದ ಮುಹೂರ್ತಗಳಲ್ಲಿ ಮೂರನೆಯದಾದ ಕಟ್ಟಿಗೆ ಮುಹೂರ್ತ ಶ್ರೀಕೃಷ್ಣ ಮಠದಲ್ಲಿ ಪರಿಸರದಲ್ಲಿ ಭಾನುವಾರ ಜರುಗಿತು.

ದಿವಾನ ಉದಯಕುಮಾರ ಸರಳತ್ತಾಯ ನೇತೃತ್ವದಲ್ಲಿ ಪುರೋಹಿತ ಗಿರಿರಾಜ ಉಪಾಧ್ಯಾಯ ಅವರು ವಿಠಲ ದೇವರಿಗೆ ಪ್ರಾರ್ಥನೆ ಸಲ್ಲಿಸಿದರು. ಬಳಿಕ ರಥಬೀದಿಯಲ್ಲಿ ಚಂದ್ರೇಶ್ವರ, ಅನಂತೇಶ್ವರ, ಕೃಷ್ಣ ಮಠದಲ್ಲಿ ಕೃಷ್ಣ ಮುಖ್ಯಪ್ರಾಣ ದೇವರಿಗೂ ಪ್ರಾರ್ಥನೆ ಸಲ್ಲಿಸಲಾಯಿತು.

ಕಲ್ಸಂಕದ ಬಳಿಯ ಲಕ್ಷ್ಮಿ ತೋಟದಿಂದ ಕಟ್ಟಿಗೆಗಳನ್ನು ಮೂರು ಎತ್ತಿನ ಗಾಡಿಗಳಲ್ಲಿ ಮತ್ತು ಭಕ್ತರು ತಲೆಹೊರೆಯಲ್ಲಿ ರಥಬೀದಿಗೆ ತಂದರು. ಮಧ್ವ ಸರೋವರದ ಈಶಾನ್ಯ ಭಾಗದ ನಿಗದಿತ ಸ್ಥಳದಲ್ಲಿ ನವಧಾನ್ಯ ದಾನ, ಪೂಜೆ ಸಲ್ಲಿಸಲಾಯಿತು.

ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಶ್ರೀಪಾದರು, ಕಿರಿಯ ಶ್ರೀ ಸುಶ್ರೀಂದ್ರತೀರ್ಥ ಶ್ರೀಪಾದರು ಹಾಗೂ ವೇದವರ್ಧನತೀರ್ಥ ಶ್ರೀಪಾದರು ಜೊತೆಯಾಗಿ ಕಟ್ಟಿಗೆ ರಥ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಿದರು.

ಕಟ್ಟಿಗೆ ಮುಹೂರ್ತ ಕಾರ್ಯಕ್ರಮದಲ್ಲಿ ಪರ್ಯಾಯ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ, ಕಿರಿಯ ಯತಿ ಸುಶ್ರೀಂದ್ರ ತೀರ್ಥ ಸ್ವಾಮೀಜಿ ಉಪಸ್ಥಿತರಿದ್ದರು

ಧಾರ್ಮಿಕ ಸಭೆಯಲ್ಲಿ ಮಾತನಾಡಿದ ವೇದವರ್ಧನ ತೀರ್ಥ ಶ್ರೀಪಾದರು, ‘ಇದು ನಮ್ಮ ಪರ್ಯಾಯ ಎನ್ನುವುದಕ್ಕಿಂತಲೂ ಕೃಷ್ಣ ಭಕ್ತರ ಪರ್ಯಾಯವಾಗಿದೆ’ ಎಂದು ಹೇಳಿದರು.

‘ಕೃಷ್ಣನಿಗೆ ನೈವೇದ್ಯ ಸಮರ್ಪಿಸಿ, ಅದನ್ನು ಪ್ರಸಾದ ರೂಪದಲ್ಲಿ ವಿತರಿಸಲಾಗುತ್ತದೆ. ಇದನ್ನು ಸಿದ್ಧಪಡಿಸಲು ಕಟ್ಟಿಗೆಗಳನ್ನು ಭಕ್ತರ ಸಹಕಾರದಿಂದಲೇ ಸಂಗ್ರಹಿಸಲಾಗಿದೆ’ ಎಂದರು.

‘ನರೇಗಾ’ದಡಿ ಹೊರಗುತ್ತಿಗೆ ಸಿಬ್ಬಂದಿಗೆ ಏಳು ತಿಂಗಳಿಂದ ಪಾವತಿಯಾಗದ ವೇತನ

ಸಂಕಷ್ಟಕ್ಕೆ ಸಿಲುಕಿದ 5,400 ಸಿಬ್ಬಂದಿ

• ಪ್ರಮೋದ ಕುಲಕರ್ಣಿ

ಕೊಪ್ಪಳ: ರಾಜ್ಯದಲ್ಲಿ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ (ಮನರೇಗಾ) ಯೋಜನೆಯಡಿ ವಿವಿಧ ಹಂತಗಳಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಸಿಬ್ಬಂದಿಗೆ ಏಳು ತಿಂಗಳಿಂದ ವೇತನ ಪಾವತಿಯಾಗಿಲ್ಲ. ಅಂದಾಜು 5,400 ಸಿಬ್ಬಂದಿ ಸಂಕಷ್ಟದಲ್ಲಿದ್ದಾರೆ.

ಜಿಲ್ಲಾ ಐಇಸಿ ಸಂಯೋಜಕ, ಜಿಲ್ಲಾ ಲೆಕ್ಕ ವ್ಯವಸ್ಥಾಪಕರು, ತಾಲ್ಲೂಕು ಆಡಳಿತ ಸಹಾಯಕರು, ತಾಲ್ಲೂಕು ಐಇಸಿ ಸಂಯೋಜಕ, ಸಹಾಯಕ ಕಾರ್ಯಕ್ರಮ ಸಂಯೋಜಕರು, ಗ್ರಾಮ ಕಾಯಕ ಮಿತ್ರರು, ತಾಂಡಾ ರೋಜಗಾರ್ ಮಿತ್ರ, ತಾಂತ್ರಿಕ ಸಂಯೋಜಕರು ಹೀಗೆ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಹುದ್ದೆಗಳಲ್ಲಿ ಇರುವವರು ಬಹುತೇಕರು ಬಡ ಮತ್ತು ಮಧ್ಯಮ ವರ್ಗದವರು.

ಕಾರಣವೇನು: ಕೇಂದ್ರ ಸರ್ಕಾರ ಕಳೆದ ವರ್ಷ ತನ್ನ ಯೋಜನೆಗಳ ಲೆಕ್ಕಪತ್ರಗಳ ನಿರ್ವಹಣೆಯನ್ನು ಎಸ್‌ಎನ್‌ಎ ಸ್ಪರ್ಶ್ ತಂತ್ರಾಂಶದ ಮೂಲಕ ಆರಂಭಿಸಿದೆ. ರಾಜ್ಯ ಸರ್ಕಾರ ನರೇಗಾ, ಖಜಾನೆ–2 ಜೊತೆ ಸೇರಿಸಿ ರೀಟ್ ಎನ್ನುವ ತಂತ್ರಾಂಶ ಅಭಿವೃದ್ಧಿ ಪಡಿಸಿತ್ತು.

ಕೇಂದ್ರದ ಸೂಚನೆ ಮೇರೆಗೆ ರಾಜ್ಯವೂ ಸ್ಪರ್ಶ್ ತಂತ್ರಾಂಶ ಅಳವಡಿಸಿಕೊಂಡಿದ್ದು ಇದು ಖಜಾನೆ–2 ಜೊತೆ ಸುಗಮವಾಗಿ ಕೆಲಸ ಮಾಡುವ ವಿಷಯ ಖಚಿತಪಡಿಸಿಕೊಳ್ಳದೆ ರೀಟ್ ತಂತ್ರಾಂಶವನ್ನು ನಿಷ್ಕ್ರಿಯ ಮಾಡಿದ್ದರಿಂದ ಹಣವಿದ್ದರೂ ವೇತನ ಪಾವತಿ ವಿಳಂಬವಾಗುತ್ತಿದೆ ಎಂದು ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ಹೇಳುತ್ತಾರೆ.

ಬಹಳಷ್ಟು ಸಿಬ್ಬಂದಿಗೆ ಮೇ, ಜೂನ್‌ನಲ್ಲಿ ಮಕ್ಕಳ ಶಿಕ್ಷಣದ ಶುಲ್ಕ ಪಾವತಿಸಲಾಗಿಲ್ಲ. ಆರೋಗ್ಯ ಸಂಬಂಧಿ ಖರ್ಚುಗಳ ನಿರ್ವಹಣೆಗೆ ಹಣವಿಲ್ಲದಂತಾಗಿದೆ. ಬಾಕಿ ವೇತನಕ್ಕಾಗಿ ಅನೇಕ ಕಡೆ ಸಿಬ್ಬಂದಿ ಪ್ರತಿಭಟನೆ ನಡೆಸಿದ್ದಾರೆ. ಸದ್ಯ, ಕಚೇರಿ ಯಲ್ಲಿ ಇದ್ದುಕೊಂಡೇ ಕರ್ತವ್ಯಕ್ಕೆ ‘ಅಸಹಕಾರ’ ಹೋರಾಟ ನಡೆಸುತ್ತಿದ್ದಾರೆ.

‘ಮಾಸಿಕ ವೇತನವನ್ನೇ ಈ ಸಿಬ್ಬಂದಿ ಆಧರಿಸಿದ್ದಾರೆ. ಮಕ್ಕಳಿಗೆ ಅಗತ್ಯ ವಸ್ತು ಕೊಡಿಸಲು ಸಾಧ್ಯವಾಗಿಲ್ಲ. ಅವಲಂಬಿತರ ಆರೋಗ್ಯ ಕಾಳಜಿ ಮಾಡಲಾಗುತ್ತಿಲ್ಲ’ ಎಂದು ಕೊಪ್ಪಳ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಶ್ರೀನಿವಾಸ ಚಿತ್ರಗಾರ, ಬಾಳಪ್ಪ ಬೇಸರ ವ್ಯಕ್ತಪಡಿಸಿದರು.

ಮುಖ್ಯಾಂಶಗಳು

- ಜೀವನ ಸಾಗಿಸಲು ಸಿಬ್ಬಂದಿ ಪರದಾಟ
- ಹಳೆಯ ರೀಟ್ ತಂತ್ರಾಂಶ ನಿಷ್ಕ್ರಿಯ
- ಖಜಾನೆ–2 ಜೊತೆ ಹೊಂದಿಕೆಯಾಗದ ಹೊಸ ತಂತ್ರಾಂಶ

‘ಎರಡು ದಿನಗಳಲ್ಲಿ ವೇತನ ಪಾವತಿ’

ಪ್ರಿಯಾಂಕ್ ಖರ್ಗೆ

ಕೇಂದ್ರದಿಂದ ಅನುದಾನ ಬರುವುದು ತಡವಾಗಿತ್ತು. ಈ ಬಗ್ಗೆ ಎರಡು ಬಾರಿ ಪತ್ರ ಬರೆದಿದ್ದೆ. ಅಲ್ಲದೇ ಕೇಂದ್ರದ ಎನ್‌ಐಸಿ ಪೋರ್ಟಲ್ ರಾಜ್ಯದ ಖಜಾನೆ–2ನೊಂದಿಗೆ ಹೊಂದಿಕೆಯಾಗುವುದರಲ್ಲಿ ತಾಂತ್ರಿಕ ದೋಷಗಳು ಎದುರಾಗಿದ್ದವು. ಪ್ರಾಯೋಗಿಕವಾಗಿ ಮಂಡ್ಯ ಜಿಲ್ಲೆಯ ಸಿಬ್ಬಂದಿಗೆ ವೇತನ ಜಮಾ ಮಾಡಲಾಗಿದ್ದು, ಇನ್ನು ಎರಡು ದಿನಗಳಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳ ನರೇಗಾ ಸಿಬ್ಬಂದಿಗೆ ವೇತನ ಪಾವತಿಯಾಗಲಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

> **ತಂತ್ರಾಂಶದ ಬದಲಾವಣೆಯ ತಾಂತ್ರಿಕ ಕಾರಣದಿಂದ ವೇತನ ಪಾವತಿಸಲು ಸಾಧ್ಯವಾಗುತ್ತಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ವೇತನವಿಲ್ಲದೆ ಕಷ್ಟವಾಗುತ್ತಿದೆ**
> **ಸುರೇಶ ಬಾಳಿಕಾಯಿ,** ಉಪಾಧ್ಯಕ್ಷ, ರಾಜ್ಯ ನರೇಗಾ ಕ್ಷೇಮಾಭಿವೃದ್ಧಿ ಸಂಘ

> **ಹೊಸ ತಂತ್ರಾಂಶ ಅಳವಡಿಕೆ ಹಾಗೂ ಸರ್ವರ್ ಸಮಸ್ಯೆಯಿಂದಾಗಿ ವೇತನ ಪಾವತಿ ವಿಳಂಬವಾಗಿದೆ. ರಾಜ್ಯದಾದ್ಯಂತ ಸಮಸ್ಯೆ ಇದ್ದು, ಶೀಘ್ರ ಪರಿಹಾರ ಸಿಗಲಿದೆ**
> **ವರ್ಣಿತ್ ನೇಗಿ,** ಸಿಇಒ, ಜಿಲ್ಲಾ ಪಂಚಾಯಿತಿ, ಕೊಪ್ಪಳ

ಗದಗದ ದಿಂಗಾಲೇಶ್ವರ ಸ್ವಾಮೀಜಿ ಟೀಕೆ

‘ಗೌರವಕ್ಕಾಗಿ ಮುಪ್ಪಿನಲ್ಲಿ ಮಂತ್ರಿಗಿರಿ ಹಂಬಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಪ್ಪಿನವರೆಗೂ ರಾಜಕಾರಣಿಗಳು ಸಚಿವ ಸ್ಥಾನಕ್ಕೆ ಹಂಬಲಿಸುತ್ತಾರೆ. ಮಾಜಿಯಾದಲ್ಲಿ ಸತ್ತಾಗ ಗೌರವ ಸಿಗುವುದಿಲ್ಲ ಎಂಬ ಕಾರಣಕ್ಕೆ ಕೊನೆಯವರೆಗೂ ಮಂತ್ರಿಯಾಗಿಯೇ ಇರಲು ಬಯಸುತ್ತಾರೆ’ ಎಂದು ಗದಗದ ಶಿರಹಟ್ಟಿಯ ಫಕೀರೇಶ್ವರ ಮಠದ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

ಅಖಿಲ ಭಾರತ ವಚನ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಿಷತ್ತು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಂಸ್ಥೆಯ ದಶಮಾನೋತ್ಸವ ಹಾಗೂ ಸರ್ವ ಧರ್ಮಗಳ ಸಮ್ಮೇಳನದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

‘ಈಗಿನ ಬಹಳಷ್ಟು ಮಂತ್ರಿಗಳು ಬೇರೆಯವರಿಗೆ ರಾಜಕೀಯದಿಂದ ಸನ್ಯಾಸತ್ವ ಕೊಡಿಸಲು ಪ್ರಯತ್ನಿಸುತ್ತಾರೆ ಹೊರತು, ಅವರು ಸಾಯುವವರೆಗೂ ಸನ್ಯಾಸಿಯಾಗುವುದಿಲ್ಲ. ಸತ್ತಾಗಲೂ ಗೌರವ ಬಯಸುವ ಅವರು, ಇಳಿ ವಯಸ್ಸಿನಲ್ಲಿಯೂ ಮಂತ್ರಿ ಆಗಬೇಕೆಂದು ಬಯಸುತ್ತಾರೆ. ಸಾಯುವ ವೇಳೆ ಮಂತ್ರಿಯಾಗಿರದಿದ್ದಲ್ಲಿ ಯಾರೂ ತಮಗೆ ಗೌರವ ನೀಡುವುದಿಲ್ಲ ಎಂಬ ಭಾವನೆ ಅವರಲ್ಲಿದೆ. ಆದ್ದರಿಂದಲೇ ರಾಜಕೀಯ ಸನ್ಯಾಸ ಪಡೆಯುವುದಿಲ್ಲ’ ಎಂದು ತಿಳಿಸಿದರು.

‘ಹಿಂದೂ ಸಂಸ್ಕೃತಿಯಲ್ಲಿ ನಾಲ್ಕು ಆಶ್ರಮಗಳನ್ನು ಪರಿಚಯಿಸಲಾಗಿದ್ದು, ಪ್ರತಿಯೊಂದೂ ಅದರ ನಿರ್ದಿಷ್ಟ ಕರ್ತವ್ಯಗಳನ್ನು ಹೊಂದಿದೆ. ಬಾಲ್ಯದಲ್ಲಿ ತಾಯಿಯ ಹತ್ತಿರ ಇದ್ದರೆ, ತಾರುಣ್ಯದಲ್ಲಿ ಮಹಾತ್ಮರ ಬಳಿ ಇರಬೇಕು. ಮುಪ್ಪಿನಲ್ಲಿ ಪರಮಾತ್ಮನ ಹತ್ತಿರ ಹೋಗಬೇಕು. 50 ವರ್ಷಗಳವರೆಗೂ ಮೋಜು ಮಸ್ತಿ ಮಾಡುತ್ತಾ, ಬಳಿಕ ದುಡಿಯಲು ಪ್ರಾರಂಭಿಸಿದರೆ ಕುಟುಂಬಸ್ಥರ ಜತೆಗೆ ಸಮಾಜವೂ ತಿರಸ್ಕರಿಸುತ್ತದೆ’ ಎಂದು ಹೇಳಿದರು.

ಬಸವಕಲ್ಯಾಣದ ಹುಲಸೂರಿನ ಗುರು ಬಸವೇಶ್ವರ ಮಠದ ಶಿವಾನಂದ ಸ್ವಾಮೀಜಿ, ‘12ನೇ ಶತಮಾನದಲ್ಲಿ ಬಸವಣ್ಣ ಅವರು ಜಾತಿ, ಧರ್ಮವನ್ನು ಕಿತ್ತೆಸೆದು, ಎಲ್ಲರಿಗೂ ಬೆಳಕಾದರು. ಬಸವಾದಿ ಶರಣರು ರಚಿಸಿದ ವಚನಗಳನ್ನು ಓದಿ, ಅವುಗಳ ಪ್ರಕಾರ ನಡೆಯಬೇಕು’ ಎಂದರು.

ವಿವಿಧ ಮಠಾಧೀಶರು ಹಾಗೂ ಧರ್ಮಗುರುಗಳು ಸಮ್ಮೇಳನದಲ್ಲಿ ಉಪಸ್ಥಿತರಿದ್ದರು. ಇದಕ್ಕೂ ಮೊದಲು ನಡೆದ ಜಾನಪದ ಮೆರವಣಿಗೆಗೆ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಚಾಲನೆ ನೀಡಿದರು.

ಸಮ್ಮೇಳನದಲ್ಲಿ (ಕುಳಿತವರು ಎಡದಿಂದ) ಪ್ರೊ. ಮಲ್ಲಿಕಾರ್ಜುನ ಯಾಳವಾರ ಮತ್ತು ರಾಜೇಂದ್ರ ಎಸ್. ಗಡಾದ ಅವರಿಗೆ ‘ಸಾಹಿತ್ಯ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಅಖಿಲ ಭಾರತ ವಚನ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಎನ್‌.ತಿಮ್ಮಪ್ಪ, ದಿಂಗಾಲೇಶ್ವರ ಸ್ವಾಮೀಜಿ, ಶಿವಾನಂದ ಸ್ವಾಮೀಜಿ, ಪೂರ್ಣಾನಂದಪುರಿ ಸ್ವಾಮೀಜಿ, ನರೇಂದ್ರ ಬಾಬು ಶರ್ಮಾ (ಬ್ರಹ್ಮಾಂಡ ಗುರೂಜಿ) ಮತ್ತು ಶಿವರುದ್ರ ಸ್ವಾಮೀಜಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಸೋಮವಾರ, ಜುಲೈ 14, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 194 | ಪುಟ 14
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕೃತಜ್ಞತೆ

ನೇಮಕಾತಿ ಪತ್ರ ಪಡೆದ ಬಾರಾಮುಲ್ಲಾ ದಾಳಿಯ ಸಂತ್ರಸ್ತರ ಕುಟುಂಬದವರು ಜಮ್ಮು–ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರ ಕೈಗೆ ಮುತ್ತಿಕ್ಕಿದರು

ವಾಷಿಂಗ್ಟನ್ ಮಿಂಚು

ಭಾರತದ ಸ್ಪಿನ್ನರ್ ವಾಷಿಂಗ್ಟನ್ ಸುಂದರ್ ಅವರು ಇಂಗ್ಲೆಂಡ್ ವಿರುದ್ಧದ ಸರಣಿಯ ಮೂರನೇ ಟೆಸ್ಟ್‌ನ ಎರಡನೇ ಇನಿಂಗ್ಸ್‌ನಲ್ಲಿ ನಾಲ್ಕು ವಿಕೆಟ್ ಪಡೆದು ಮಿಂಚಿದರು

ತೆರಿಗೆ ಮರುಪಾವತಿ ಹೆಚ್ಚಳ 8 | ತಮಿಳುನಾಡು: ಗೂಡ್ಸ್ ರೈಲಿಗೆ ಬೆಂಕಿ 9

ಕೃಷಿ ಲಾಭಕ್ಕೆ ‘ಬುದ್ಧಿಮತ್ತೆ’

ಜಾಗತಿಕ ಬೆಳೆ, ಬೆಲೆ ವಿಶ್ಲೇಷಣೆ ಆಧಾರದಲ್ಲಿ ಸ್ಥಳೀಯ ಬಿತ್ತನೆಯ ಮಾಹಿತಿ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕೃಷಿಯನ್ನು ಲಾಭದಾಯಕ ಕ್ಷೇತ್ರವಾಗಿ ಅಭಿವೃದ್ಧಿಪಡಿಸಿ, ಇಳುವರಿ ಹೆಚ್ಚಳಕ್ಕೆ ನೆರವಾಗಲು ರಾಜ್ಯ ಸರ್ಕಾರ ಕೃತಕ ಬುದ್ಧಿಮತ್ತೆ ಆಧಾರಿತ ಕೃಷಿ ಸೇವಾ ಕೇಂದ್ರಗಳನ್ನು ಸ್ಥಾಪಿಸುತ್ತಿದೆ.

ಆಯಾ ಪ್ರದೇಶದ ಭೂ ವೈವಿಧ್ಯ, ಹವಾಗುಣ, ಮಣ್ಣಿನ ಮಾದರಿ, ತೇವಾಂಶ, ಮಳೆಯ ಪ್ರಮಾಣ, ಪ್ರಸ್ತುತ ಇರುವ ಬೆಳೆ ಪದ್ಧತಿ, ಪಡೆಯುತ್ತಿರುವ ಇಳುವರಿಗಳನ್ನು ಲೆಕ್ಕಹಾಕಿ ಜಾಗತಿಕ ಭೂ ನಕ್ಷೆ, ಕೇಂದ್ರೀಕೃತ ಡಿಜಿಟಲ್ ವೇದಿಕೆ ಸಿದ್ಧಪಡಿಸಲಾಗುತ್ತಿದೆ. ಇವುಗಳ ದತ್ತಾಂಶ ಬಳಸಿಕೊಂಡು ಕೃತಕ ಬುದ್ಧಿಮತ್ತೆ, ಯಾಂತ್ರಿಕ ಅಧ್ಯಯನ ತಂತ್ರಜ್ಞಾನದ ಆಧಾರದಲ್ಲಿ ರಾಜ್ಯದ ರೈತರು ಹಾಗೂ ಕೃಷಿ ನೀತಿ ನಿರೂಪಕರಿಗೆ ನೆರವು ನೀಡುವ ಸರ್ಕಾರ ಕಾರ್ಯಕ್ರಮ ರೂಪಿಸಿದೆ.

ಆಯಾ ವರ್ಷದ ಹವಾಮಾನ, ಮಳೆ, ಅತಿವೃಷ್ಟಿ, ಅನಾವೃಷ್ಟಿಯ ಆಧಾರದಲ್ಲಿ ಯಾವ ಋತುವಿನಲ್ಲಿ ಯಾವ ಬೆಳೆಗಳಿಗೆ ಬೇಡಿಕೆ ಇರುತ್ತದೆ. ಯಾವ ದೇಶದಲ್ಲಿ ಯಾವ ಬೆಳೆಯನ್ನು ಹೆಚ್ಚು ಬೆಳೆಯುತ್ತಾರೆ. ಅಲ್ಲಿನ ಹವಾಮಾನ ಸ್ಥಿತಿ ಹೇಗಿದೆ? ಪ್ರಾಕೃತಿಕ ವಿಕೋಪಗಳಿಗೆ ಸಿಲುಕಿ ಯಾವ ಪ್ರದೇಶಗಳಲ್ಲಿ ಬೆಳೆಯುವ ಬೆಳೆ ನಷ್ಟವಾಗಬಹುದು. ಯಾವ ಬೆಳೆಗಳಿಗೆ ದಿಢೀರ್ ಬೇಡಿಕೆ ಬರಬಹುದು. ಯಾವ ಬೆಳೆಗಳಿಂದ ಉತ್ತಮ ಬೆಲೆ ಸಿಗಬಹುದು ಎನ್ನುವುದರ ಆಧಾರದಲ್ಲಿ ಆಯಾ ಪ್ರದೇಶದ ರೈತರು ಯಾವ ಆಹಾರ–ವಾಣಿಜ್ಯ ಬೆಳೆಗಳನ್ನು ಬೆಳೆಯಬೇಕು ಎನ್ನುವ ಬೆಳೆ ಹಂಚಿಕೆಯ ಖಚಿತ ಮಾಹಿತಿಯನ್ನು ಈ ಕೃಷಿ ಸೇವಾ ಕೇಂದ್ರಗಳು ಒದಗಿಸಲಿವೆ.

ಮಡಗಾಸ್ಕರ್, ಇಂಡೋನೇಷ್ಯಾ, ಚೀನಾ, ಮೆಕ್ಸಿಕೊ ಮೊದಲಾದ ದೇಶಗಳು ವೆನಿಲಾ ಬೆಳೆಗೆ ಪ್ರಸಿದ್ಧಿ ಪಡೆದಿವೆ. ಕೆಲ ವರ್ಷಗಳ ಹಿಂದೆ ಅಲ್ಲಿ ಸಂಭವಿಸಿದ ಪ್ರಕೃತಿ ವಿಕೋಪಗಳಿಂದ ವೆನಿಲಾ ಬೆಲೆ ಗಗನಕ್ಕೇರಿತ್ತು.

▶ 4

> ರಾಜ್ಯ ಸರ್ಕಾರ ಸ್ಥಾಪಿಸುತ್ತಿರುವ ಕೃತಕ ಬುದ್ಧಿಮತ್ತೆ ಆಧಾರಿತ ಡಿಜಿಟಲ್ ಸೇವಾ ಕೇಂದ್ರಗಳು ಕೃಷಿ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತರಲಿವೆ. ಭವಿಷ್ಯದಲ್ಲಿ ರೈತರಿಗೆ ವರದಾನವಾಗಲಿವೆ
>
> **ಶಾಲಿನಿ ರಜನೀಶ್,** ಸರ್ಕಾರದ ಮುಖ್ಯಕಾರ್ಯದರ್ಶಿ

ರಾಜ್ಯಮಟ್ಟದ ತಜ್ಞರ ಸಮಿತಿ ರಚನೆ

ತಂತ್ರಜ್ಞಾನ ಬಳಸಿಕೊಂಡು ಹೆಚ್ಚಿನ ಇಳುವರಿ ಪಡೆಯಲು, ಆಯಾ ಪ್ರದೇಶಕ್ಕೆ ಅನುಗುಣವಾಗಿ ಅಧಿಕ ಲಾಭ ತರುವ ಬೆಳೆಗಳನ್ನು ಆಯ್ಕೆ ಮಾಡಿಕೊಳ್ಳುವ ಕುರಿತು ನೆರವಾಗಲು ರಾಜ್ಯಮಟ್ಟದ ತಂತ್ರಜ್ಞರ ಸಮಿತಿ ರಚಿಸಲಾಗಿದೆ.

2025–26ನೇ ಸಾಲಿನ ಋತುಗಳಲ್ಲಿ ಭತ್ತದ ಬೆಳೆಯಲ್ಲಿ ತಂತ್ರಜ್ಞಾನದ ಮಾದರಿಯನ್ನು (ಎಸ್‌–ಟೆಕ್) ಅಳವಡಿಸಲು ಬಳ್ಳಾರಿ, ದಾವಣಗೆರೆ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ವಿಜಯನಗರ ಮತ್ತು ಯಾದಗಿರಿ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ.

ಸಹಭಾಗಿ ಸಂಸ್ಥೆಗಳು

- ಕೃಷಿ ಇಲಾಖೆ
- ಸಿಬ್ಬಂದಿ ಮತ್ತು ಆಡಳಿತ
- ಸುಧಾರಣಾ ಇಲಾಖೆ
- ಪ್ರಾದೇಶಿಕ ದೂರ ಸಂವೇದಿ ಕೇಂದ್ರ
- ಕೃಷಿ ವಿಶ್ವವಿದ್ಯಾಲಯಗಳು
- ಕರ್ನಾಟಕ ದೂರ ಸಂವೇದಿಅನ್ವಯಿಕ ಕೇಂದ್ರ
- ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ
- ಆರ್ಥಿಕ ಮತ್ತು ಅಂಕಿಅಂಶಗಳ ಇಲಾಖೆ
- ಜಲಾನಯನ ಅಭಿವೃದ್ಧಿ ಇಲಾಖೆ
- ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

ಕೀಟ, ರೋಗಗಳ ನಿವಾರಣೆ

ಇ–ಸ್ಯಾಪ್ ತಂತ್ರಾಂಶ (ಎಲೆಕ್ಟ್ರಾನಿಕ್ಸ್ ಪರಿಹಾರ) ಬಳಸಿ 52 ಕೃಷಿ ಬೆಳೆಗಳಲ್ಲಿ ಕಂಡು ಬರುವ 1,000ಕ್ಕೂ ಹೆಚ್ಚು ಕೀಟ, ರೋಗಗಳನ್ನು ನಿವಾರಣೆ ಮಾಡುವ ಕಾರ್ಯಕ್ಕೆ ಕೃಷಿ ಇಲಾಖೆ ಚಾಲನೆ ನೀಡಿದೆ.

ರಾಯಚೂರು ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿ ಪಡಿಸಿದ ಇ–ಸ್ಯಾಪ್ ತಂತ್ರಾಂಶ ಕೀಟ ರೋಗಗಳ ನಿವಾರಣೆಯ ಜತೆಗೆ, ಪೋಷಕಾಂಶಗಳ ಕೊರತೆಯನ್ನು ನೀಗಿಸಲು ನೆರವಾಗುತ್ತದೆ. ರೋಗದ ತೀವ್ರತೆ, ಹವಾಮಾನ ಪರಿಸ್ಥಿತಿ, ಬೆಳೆಯ ಆರ್ಥಿಕ ಪ್ರಾಮುಖ್ಯದ ಆಧಾರದಲ್ಲಿ ಕೈಗೊಳ್ಳಬಹುದಾದ ಕ್ರಮಗಳ ಮಾಹಿತಿಯನ್ನು ರೈತರಿಗೆ ಒದಗಿಸಲಾಗುತ್ತದೆ.

ಈ ತಂತ್ರಜ್ಞಾನದಿಂದಾಗಿ ಕೀಟಗಳ ನಾಶಕ್ಕೆ ಅನಗತ್ಯ ರಾಸಾಯನಿಕ, ಕೀಟನಾಶಗಳ ಬಳಕೆ ತಗ್ಗಿಸಬಹುದು. ಇದುವರೆಗೆ 1.76 ಲಕ್ಷ ರೈತರು ಪ್ರಯೋಜನ ಪಡೆದಿದ್ದಾರೆ ಎಂದು ಕೃಷಿ ಇಲಾಖೆ ಹೇಳಿದೆ.

ಶೃಂಗ್ಲಾ, ನಿಕಮ್ ಸೇರಿ ನಾಲ್ವರು ರಾಜ್ಯಸಭೆಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಜಿ ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ ಶೃಂಗ್ಲಾ, ಹಿರಿಯ ವಕೀಲ ಉಜ್ವಲ್ ನಿಕಮ್, ಇತಿಹಾಸಕಾರ್ತಿ ಡಾ.ಮೀನಾಕ್ಷಿ ಜೈನ್ ಹಾಗೂ ಕೇರಳದ ಬಿಜೆಪಿ ನಾಯಕ ಸಿ.ಸದಾನಂದನ್ ಮಾಸ್ಟರ್ ಅವರನ್ನು ರಾಜ್ಯಸಭೆಗೆ ನಾಮನಿರ್ದೇಶನ ಮಾಡಲಾಗಿದೆ.

ಈ ಕುರಿತ ಅಧಿಸೂಚನೆಯನ್ನು ಗೃಹ ಸಚಿವಾಲಯ ಶನಿವಾರ ರಾತ್ರಿ ಪ್ರಕಟಿಸಿದೆ. ಇದರೊಂದಿಗೆ, ನಾಮನಿರ್ದೇಶನ ಕೋಟಾ ಅಡಿಯ ಎಲ್ಲ 12 ಸ್ಥಾನಗಳನ್ನು ಭರ್ತಿ ಮಾಡಿದಂತಾಗಿದೆ. ಜಮ್ಮು–ಕಾಶ್ಮೀರದಿಂದ ನಾಲ್ಕು, ಹರಿಯಾಣದ ಒಂದು ಸ್ಥಾನ ಖಾಲಿ ಉಳಿದಿವೆ.

ಒಟ್ಟು 240 ಸದಸ್ಯ ಬಲದ ರಾಜ್ಯಸಭೆಯಲ್ಲಿ, ಬಿಜೆಪಿ ನೇತೃತ್ವದ ಎನ್‌ಡಿಎ ಈಗ 135 ಸಂಸದರ ಬೆಂಬಲ ಹೊಂದಿದಂತಾಗಿದೆ. ಹೊಸದಾಗಿ ನಾಮನಿರ್ದೇಶನಗೊಂಡಿರುವ ಈ ಸಂಸದರ ಅಧಿಕಾರಾವಧಿ ಆರು ವರ್ಷ.

▶ 8

ಹರ್ಷವರ್ಧನ ಶೃಂಗ್ಲಾ | ಡಾ.ಮೀನಾಕ್ಷಿ ಜೈನ್ | ಸದಾನಂದನ್ ಮಾಸ್ಟರ್ | ಉಜ್ವಲ್ ನಿಕಮ್

ಸಿ.ಎಂ.ಗೆ ಅಗೌರವ; ಜಟಾಪಟಿ

ಅಂಬಾರಗೋಡ್ಲು – ಕಳಸವಳ್ಳಿ ಸೇತುವೆ ಲೋಕಾರ್ಪಣೆ ಇಂದು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಸಾಗರ ತಾಲ್ಲೂಕಿನ ಅಂಬಾರಗೋಡ್ಲು-ಕಳಸವಳ್ಳಿ ನಡುವೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿರ್ಮಿಸಿರುವ ₹473 ಕೋಟಿ ವೆಚ್ಚದ ತೂಗುಸೇತುವೆಯನ್ನು ಜುಲೈ 14ರಂದು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಲೋಕಾರ್ಪಣೆ ಮಾಡುವರು.

ಸೇತುವೆಯ ಉದ್ಘಾಟನೆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸ್ಥಳೀಯ ಮುಖಂಡರಿಗೆ ಆಹ್ವಾನ ನೀಡುವ ವಿಚಾರದಲ್ಲಿ ಶಿಷ್ಟಾಚಾರದ ಪಾಲನೆ ಸಂಗತಿ ಈಗ ಜಿಲ್ಲೆಯಲ್ಲಿ ರಾಜಕೀಯ ಜಟಾಪಟಿಗೆ ಕಾರಣವಾಗಿದೆ.

‘ಇದು ಬಿಜೆಪಿ ಕಾರ್ಯಕ್ರಮವಾಗಿ ಮಾರ್ಪಟ್ಟಿದೆ. ಸೇತುವೆ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಹಣ ಕೊಟ್ಟಿರಬಹುದು. ಕಾಮಗಾರಿ ವೇಳೆ ರಾಜ್ಯ ಸರ್ಕಾರ ಸಹಕಾರ ಕೊಟ್ಟಿಲ್ಲವೇ’ ಎಂದು ಶಾಸಕ ಬೇಳೂರು ಗೋಪಾಲಕೃಷ್ಣ ಪ್ರಶ್ನಿಸಿದ್ದಾರೆ.

‘ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಅವರನ್ನು ಕರೆಯುವಾಗ ಶಿಷ್ಟಾಚಾರದಂತೆ ಆಹ್ವಾನಪತ್ರ ನೀಡದೇ ಅಗೌರವ ತೋರಿದ್ದಾರೆ. ಸಾಗರ ಕ್ಷೇತ್ರದ ಶಾಸಕನಾದ ನನಗೇ ಆಹ್ವಾನ ನೀಡಿಲ್ಲ. ಸಿಗಂದೂರು ದೇವಸ್ಥಾನದ ಧರ್ಮದರ್ಶಿ ಎಸ್. ರಾಮಪ್ಪ ಅವರನ್ನೂ ಕರೆಯದೆ ಅಪಮಾನಿಸಲಾಗಿದೆ’ ಎಂದು ಬೇಳೂರು ದೂರಿದ್ದಾರೆ.

‘ಮಂಗಳೂರಿನಲ್ಲಿ ಸೇತುವೆ ಉದ್ಘಾಟಿಸಲು ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ಟರನ್ನು ಕರೆಯಲಾಗಿತ್ತು. ಈಗ ಆಹ್ವಾನಪತ್ರದಲ್ಲಿ ಸಿಗಂದೂರು ಧರ್ಮದರ್ಶಿ ಹೆಸರು ಹಾಕಲು ಶಿಷ್ಟಾಚಾರದ ನೆಪ ಒಡ್ಡಿದ್ದಾರೆ’ ಎಂಬುದು ಇಲ್ಲಿನ ಶ್ರೀ ನಾರಾಯಣಗುರು ವಿಚಾರ ವೇದಿಕೆಯ ಜಿಲ್ಲಾ ಘಟಕದ ಅಧ್ಯಕ್ಷ ಪ್ರವೀಣ್ ಹಿರೇಗೋಡು ಆರೋಪ.

▶ 4

ಸೋಮವಾರ ಲೋಕಾರ್ಪಣೆಗೆ ಸಿದ್ಧವಾಗಿರುವ ಅಂಬಾರಗೋಡ್ಲು–ಕಳಸವಳ್ಳಿ ನಡುವಿನ ತೂಗುಸೇತುವೆ

‘ಸಿ.ಎಂ.ಗೆ ತಡವಾಗಿ ಆಹ್ವಾನ’

ಚಿತ್ರದುರ್ಗ: ‘ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಅವರಿಗೆ ತಡವಾಗಿ ಆಹ್ವಾನ ನೀಡಲಾಗಿದೆ. ಅವರು ಬೇರೆ ಸಮಾರಂಭದಲ್ಲಿ ಪಾಲ್ಗೊಳ್ಳುತ್ತಿರುವುದರಿಂದ ಹೋಗುತ್ತಿಲ್ಲ’ ಎಂದು ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

‘ಕಾರ್ಯಕ್ರಮಕ್ಕೆ ಕರೆದಿದ್ದಾರೋ ಬಿಟ್ಟಿದ್ದಾರೋ ಬೇರೆ ಪ್ರಶ್ನೆ. ಕೇಂದ್ರ ಸಚಿವರು ಬರುತ್ತಿರುವುದರಿಂದ ಅವರನ್ನು ಗೌರವಿಸಲು ನಾನು ಹೋಗುತ್ತಿದ್ದೇನೆ’ ಎಂದು ಭಾನುವಾರ ಮಾಧ್ಯಮದವರಿಗೆ ಹೇಳಿದರು.

ಕಾರ್ಯಕ್ರಮ ಮುಂದೂಡಿ ಸಿ.ಎಂ ಪತ್ರ

ಬೆಂಗಳೂರು: ‘ಲಿಂಗನಮಕ್ಕಿ ಹಿನ್ನೀರಿನಲ್ಲಿ ನಿರ್ಮಿಸಿರುವ ಸೇತುವೆ ಉದ್ಘಾಟನೆಯ ಕಾರ್ಯಕ್ರಮದ ಕರಡು ಆಹ್ವಾನ ಪತ್ರಿಕೆಯ, ಆಹ್ವಾನಿತರ ಪಟ್ಟಿಯಲ್ಲಿ ನನ್ನ ಹೆಸರನ್ನು ಮುದ್ರಿಸಲಾಗಿದೆ. ಆದರೆ ಈ ಬಗ್ಗೆ ನಿಮ್ಮ ಸಚಿವಾಲಯದಿಂದ ನನಗೆ ಮಾಹಿತಿಯನ್ನೇ ನೀಡಿಲ್ಲ’ ಎಂದು ಆಕ್ಷೇಪ ವ್ಯಕ್ತಪಡಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಪತ್ರ ಬರೆದಿದ್ದಾರೆ.

ಶಿವಮೊಗ್ಗದ ಸಾಗರ ತಾಲ್ಲೂಕಿನಲ್ಲಿ ಸೋಮವಾರ (ಜುಲೈ 14) ಸೇತುವೆ ಉದ್ಘಾಟನೆ ಕಾರ್ಯಕ್ರಮವನ್ನು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಆಯೋಜಿಸಿದೆ. ಈ ಕಾರ್ಯಕ್ರಮದಲ್ಲಿ ನಿತಿನ್ ಗಡ್ಕರಿ ಅವರು ಭಾಗಿಯಾಗಲಿದ್ದಾರೆ. ಇದೇ 11ರಂದು ಪತ್ರ ಬರೆದಿರುವ ಅವರು, ‘ಸಾಧ್ಯವಾದರೆ ಕಾರ್ಯಕ್ರಮ ಮುಂದೂಡಿ. ನಿಮ್ಮ ಅನುಕೂಲದ ದಿನಾಂಕಗಳನ್ನು ತಿಳಿಸಿದರೆ ನಾನೂ ಜತೆಯಾಗುತ್ತೇನೆ’ ಎಂದಿದ್ದಾರೆ.

▶ 4

ಮತದಾರರ ಪಟ್ಟಿ: ದೇಶದ ಎಲ್ಲೆಡೆ ವಿಶೇಷ ಪರಿಷ್ಕರಣೆ

ನವದೆಹಲಿ (ಪಿಟಿಐ): ಬಿಹಾರದಲ್ಲಿ ನಡೆಸುತ್ತಿರುವ ರೀತಿಯಲ್ಲಿಯೇ ದೇಶದಾದ್ಯಂತ ಮತದಾರರ ಪಟ್ಟಿಯ ‘ವಿಶೇಷ ಸಮಗ್ರ ಪರಿಷ್ಕರಣೆ’ಯನ್ನು (ಎಸ್‌ಐಆರ್) ಚುನಾವಣಾ ಆಯೋಗ ಮುಂದಿನ ತಿಂಗಳಿಂದ ಕೈಗೆತ್ತಿಕೊಳ್ಳುವ ಸಾಧ್ಯತೆಯಿದೆ. ಈ ದಿಸೆಯಲ್ಲಿ ಆಯೋಗವು ಎಲ್ಲ ರಾಜ್ಯಗಳಲ್ಲಿನ ತನ್ನ ಚುನಾವಣಾ ಶಾಖೆಯನ್ನು ಸಕ್ರಿಯಗೊಳಿಸಿದೆ ಎಂದು ಮೂಲಗಳು ತಿಳಿಸಿವೆ.

ಬಿಹಾರದಲ್ಲಿ ಚುನಾವಣಾ ಆಯೋಗ ನಡೆಸುತ್ತಿರುವ ಎಸ್‌ಐಆರ್ ಅನ್ನು ‘ಸಾಂವಿಧಾನಿಕ ಹೊಣೆಗಾರಿಕೆ’ ಎಂದು ಕಳೆದ ವಾರ ಉಲ್ಲೇಖಿಸಿದ ಸುಪ್ರೀಂ ಕೋರ್ಟ್, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣಾ ಕಾರ್ಯವನ್ನು ಮುಂದುವರಿಸಲು ಅನುಮತಿ ನೀಡಿತ್ತು. ಹೀಗಾಗಿ, ಆಯೋಗ ಈ ಕಸರತ್ತನ್ನು ದೇಶದಾದ್ಯಂತ ವಿಸ್ತರಿಸಲು ಮುಂದಾಗಿದೆ.

ವಿರೋಧ ಪಕ್ಷಗಳು ಈ ಪರಿಷ್ಕರಣಾ ಕಾರ್ಯವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಅರ್ಹ ಪ್ರಜೆಗಳ ಮತದಾನದ ಹಕ್ಕನ್ನು ಎಸ್‌ಐಆರ್ ಕಸಿದುಕೊಳ್ಳುತ್ತದೆ ಎಂದು ಪ್ರತಿಪಾದಿಸಿವೆ. ಇದೇ 28ಕ್ಕೆ ಸುಪ್ರೀಂ ಕೋರ್ಟ್‌ನಲ್ಲಿ ಪುನಃ ವಿಚಾರಣೆ ನಡೆಯಲಿದೆ. ಆ ಬಳಿಕವಷ್ಟೇ ಆಯೋಗವು ಎಸ್‌ಐಆರ್ ಅನ್ನು ರಾಷ್ಟ್ರದಾದ್ಯಂತ ವಿಸ್ತರಿಸುವ ಕುರಿತು ಅಂತಿಮ ತೀರ್ಮಾನ ತೆಗೆದುಕೊಳ್ಳಲಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

▶ 4

ಚಿನಕುರುಳಿ ಪ್ರಕಾಶ್ ಶೆಟ್ಟಿ

‘ಬಿಲ್ಡರ್‌ಗಳ ಭೂಮಿ ಎಷ್ಟಿದೆ ಗೊತ್ತು’

ಬೆಂಗಳೂರು: ‘ದೇವನಹಳ್ಳಿ ಸುತ್ತಮುತ್ತ ಯಾವ–ಯಾವ ಬಿಲ್ಡರ್‌ಗಳು ಎಷ್ಟೆಷ್ಟು ಭೂಮಿ ಖರೀದಿಸಿದ್ದಾರೆ, ಯಾರ ಜೊತೆ ಅವರು ಒಪ್ಪಂದ ಮಾಡಿಕೊಂಡಿದ್ದಾರೆ, ಯಾವ ರಾಜಕಾರಣಿಗಳ ಜಮೀನು ಎಷ್ಟಿದೆ ಎಂಬುದರ ಸಂಪೂರ್ಣ ಮಾಹಿತಿ ಇದೆ’ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು. ‘ರೈತರ ಹೆಸರಿನಲ್ಲಿನ ಹೋರಾಟದ ಹಿಂದೆ ಯಾರ ಕುಮ್ಮಕ್ಕು ಇದೆ ಎಂಬುದೂ ನಮಗೆ ಗೊತ್ತಿದೆ’ ಎಂದರು.

ವಿವರ ▶ 4

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಮಳೆಯಾಗುವ ಸಾಧ್ಯತೆ ಇದೆ

ರಸ್ತೆ ತಡೆಗೋಡೆಗೆ ಕಾರು ಡಿಕ್ಕಿ: ಮೂವರು ಸಾವು

ಪ್ರಜಾವಾಣಿ ವಾರ್ತೆ

ತಮ್ಮಣ್ಣ ಗೌಡ

ಮುತ್ತುರಾಜು ಗೌಡ

ಶಶಾಂಕ್

ರಾಮನಗರ: ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ–275ರ ಜಯಪುರ ಸೇತುವೆ ಬಳಿ ಭಾನುವಾರ ವೇಗವಾಗಿ ಬಂದ ಕಾರು ಹೆದ್ದಾರಿ ತಡೆಗೋಡೆಗೆ ಡಿಕ್ಕಿ ಹೊಡೆದಿದ್ದರಿಂದ ಮೂವರು ಮೃತಪಟ್ಟಿದ್ದು, ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೈಸೂರು ಜಿಲ್ಲೆಯ ಕೆ.ಆರ್ . ನಗರ ತಾಲ್ಲೂಕಿನ ಚಿಕ್ಕನಾಯಕನಹಳ್ಳಿಯ ತಮ್ಮಣ್ಣ ಗೌಡ (54), ಅವರ ಪುತ್ರ ಮುತ್ತುರಾಜು ಗೌಡ (27) ಹಾಗೂ ಕಾರು ಚಾಲಕ ಶಶಾಂಕ್ (26) ಮೃತರು.

ಮುತ್ತುರಾಜ ಅವರ ಬಾಮೈದ ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನ ಸಂಜು (ಸಚಿನ್) ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ಮುತ್ತುರಾಜ್ ಮತ್ತು ಸಂಜು ಅವರು, ಬೆಳಿಗ್ಗೆ ಬಾಡಿಗೆ ಕಾರಿನಲ್ಲಿ ತಮ್ಮ ಗ್ರಾಮದಿಂದ ಬೆಂಗಳೂರು ಕಡೆಗೆ ಹೋಗುತ್ತಿದ್ದರು. ಕಾರು ಚಾಲನೆ ಮಾಡುತ್ತಿದ್ದ ಶಶಾಂಕ್ ಜಯಪುರ ಸೇತುವೆ ಬಳಿಯ ತಡೆಗೋಡೆಗೆ ಡಿಕ್ಕಿ ಹೊಡೆದಿದ್ದಾರೆ ಎಂದು ರಾಮನಗರ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

ಮೂವರ ಶವಗಳನ್ನು ರಾಮನಗರ ಜಿಲ್ಲಾಸ್ಪತ್ರೆಗೆ ಸಾಗಿಸಿ, ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬದವರಿಗೆ ಹಸ್ತಾಂತರಿಸಲಾಯಿತು. ಘಟನೆ ಕುರಿತು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

Entrepreneurship Development Institute of India
Nr. Village Bhat, Via Ahmedabad Airport & Indira Bridge, Bhat 382428, Dist. Gandhinagar, Tel Nos. (079-6910 4900/4999/5000)

TENDER NOTICE

EDII's Bangalore office invites tenders from experienced agencies for below mentioned work under the Project HAL

Sr. No.	Name of the Work
01.	Procurement of items for Training Cum Production Centre (Food Processing)

Tender document may be downloaded from https://www.ediindia.org/the-institute/tenders/ from 14-07-2025 (10.00 am) to 03-08-2025 (till 17.00hrs).

'ಬಮೂಲ್ ನಷ್ಟದಲ್ಲಿ'

ಮಾಗಡಿ: ಕಳೆದ ಎರಡು ತಿಂಗಳಿನಿಂದ ಬೆಂಗಳೂರು ಹಾಲು ಒಕ್ಕೂಟ (ಬಮೂಲ್) ಕೋಟ್ಯಂತರ ರೂಪಾಯಿ ನಷ್ಟದಲ್ಲಿದೆ ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದ್ದಾರೆ. ಬಮೂಲ್ ಆಡಳಿತ ಮಂಡಳಿ ನಿರ್ದೇಶಕರಿಗೆ ಭಾನುವಾರ ಇಲ್ಲಿ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಈ ವಿಷಯ ತಿಳಿಸಿದರು.

ಉಗ್ರನ ಜತೆ ಸಂಪರ್ಕ ಪತ್ತೆ: ಎನ್‌ಐಎ

ಆರೋಪಿಗಳ ಮೊಬೈಲ್ ಕರೆಗಳ ವಿವರ ಪರಿಶೀಲಿಸಿದ ಸಿಡಿಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಕಾರಾಗೃಹದಲ್ಲಿ ಉಗ್ರರಿಗೆ ನೆರವು ನೀಡಿದ ಆರೋಪದಡಿ ಎನ್‌ಐಎ ಬಂಧಿಸಿರುವ ಮೂವರು ಆರೋಪಿಗಳ ಮೊಬೈಲ್ ಕರೆಗಳ ವಿವರ (ಸಿಡಿಆರ್) ಪರಿಶೀಲನೆ ನಡೆಸಿದ ವೇಳೆ, ಮಹತ್ವದ ಮಾಹಿತಿ ಲಭ್ಯವಾಗಿದೆ.

ಪರಪ್ಪನ ಅಗ್ರಹಾರ ಜೈಲಿನ ಮನೋವೈದ್ಯ ನಾಗರಾಜ್, ಸಶಸ್ತ್ರ ಮೀಸಲು ಪಡೆಯ ಎಎಸ್‌ಐ ಚಾಂದ್ ಪಾಷಾ ಹಾಗೂ ವಿದೇಶದಲ್ಲಿ ತಲೆ ಮರೆಸಿಕೊಂಡಿರುವ ಆರೋಪಿ ಜುನೈದ್ ಅಹಮದ್‌ನ ತಾಯಿ ಅನೀಸ್ ಫಾತಿಮಾ ಅವರ ಮೊಬೈಲ್ ಕರೆ ವಿವರಗಳ ಪರಿಶೀಲನೆ ನಡೆಸಿದ್ದು, ಆರೋಪಿಗಳು ಯಾರ ಜತೆ ಸಂಪರ್ಕದಲ್ಲಿದ್ದರು? ಯಾರಿಗೆಲ್ಲಾ ಕರೆ ಮಾಡಿದ್ದರು? ಯಾರೊಂದಿಗೆ ಎಷ್ಟು ಗಂಟೆ ಮಾತನಾಡಿದ್ದರು? ಕೊನೆಯ ಬಾರಿಗೆ ಯಾರ ಜತೆ ಮಾತನಾಡಿದ್ದರು? ಎಂಬುದನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಪತ್ತೆಹಚ್ಚಿದೆ.

ಕರೆಗಳ ಮಾಹಿತಿಯ ಜಾಡು ಹಿಡಿದು ತನಿಖೆ ನಡೆಸಿದಾಗ, ಉಗ್ರ ಟಿ.ನಾಸಿರ್ ಸೂಚನೆಯಂತೆ ವಿದೇಶದಲ್ಲಿ ತಲೆಮರೆಸಿಕೊಂಡಿರುವ ಶಂಕಿತ ಉಗ್ರ ಜುನೈದ್ ಅಹ್ಮದ್, ತನ್ನ ತಾಯಿ ಫಾತಿಮಾಗೆ ಹಲವು ಬಾರಿ ಕರೆ ಮಾಡಿ ಗೋಪ್ಯ ಮಾತುಕತೆ ನಡೆಸಿರುವುದು ಪತ್ತೆಯಾಗಿದೆ.

ಪುತ್ರನ ಜತೆಗಿನ ಮಾತುಕತೆ ವಿವರವನ್ನು ಫಾತಿಮಾ ಅವರು ಎಎಸ್‌ಐ ಚಾಂದ್ ಪಾಷಾ ಅವರೊಂದಿಗೆ ಹಂಚಿಕೊಳ್ಳುತ್ತಿದ್ದರು. ಬಳಿಕ ಪಾಷಾ ಅವರು ನಾಸಿರ್‌ಗೆ ವಿಷಯ ತಲುಪಿಸುತ್ತಿದ್ದರು ಎಂಬುದು ಎನ್‌ಐಎ ತನಿಖೆಯಲ್ಲಿ ಗೊತ್ತಾಗಿದೆ.

ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡಿರುವ ತನಿಖಾಧಿಕಾರಿಗಳು, ಆರೋಪಿಗಳು ಸಂಪರ್ಕದಲ್ಲಿದ್ದವರ ಪಟ್ಟಿ ಸಿದ್ಧಪಡಿಸಿದ್ದಾರೆ. ನೋಟಿಸ್ ನೀಡಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಿದ್ದಾರೆ ಎನ್ನಲಾಗಿದೆ.

ಆರೋಪಿಗಳ ಪೊಲೀಸ್ ಕಸ್ಟಡಿ ಸೋಮವಾರ ಅಂತ್ಯಗೊಳ್ಳಲಿದ್ದು, ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸ ಲಾಗುತ್ತದೆ. ತನಿಖೆ ವೇಳೆ ಲಭ್ಯವಾಗಿರುವ ಬಲವಾದ ಸಾಕ್ಷ್ಯಾಧಾರಗಳನ್ನು ಅಧಿಕಾರಿಗಳು ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ತನಿಖೆಗಾಗಿ ಆರೋಪಿಗಳನ್ನು ಮತ್ತೆ ಒಂದು ವಾರ ಕಸ್ಟಡಿಗೆ ನೀಡುವಂತೆ ಮನವಿ ಮಾಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಬ್, ಪಾರ್ಟಿ: ಪತ್ನಿ ವರ್ತನೆಗೆ ಬೇಸತ್ತು ಹಲ್ಲೆ

ಅಪರಾಧ ಸುದ್ದಿ

ಮಂಜುಳಾ

'ಪಾರ್ಟಿ, ಪಬ್ ಎಂದೆಲ್ಲ ಸುತ್ತುತ್ತಾ, ತನ್ನ ಮೋಜಿನ ಜೀವನಕ್ಕಾಗಿ ಫ್ಲ್ಯಾಟ್‌ನ ಭೋಗ್ಯದ ಹಣದೊಂದಿಗೆ ಪರಾರಿಯಾಗಲು ಸಂಚು ರೂಪಿಸಿದ್ದಳು. ಅವಳ ವರ್ತನೆಯಿಂದ ಬೇಸತ್ತು ಚಾಕುವಿನಿಂದ ಹಲ್ಲೆ ಮಾಡಿದೆ' ಎಂದು ಪೊಲೀಸ್ ವಿಚಾರಣೆ ವೇಳೆ ಕಿರುತೆರೆ ನಟಿ ಸಿ.ಮಂಜುಳಾ ಪತಿ ಅಮರೇಶ್ ಹೇಳಿಕೆ ನೀಡಿದ್ದಾರೆ.

ಕೌಟುಂಬಿಕ ಕಲಹಕ್ಕೆ ಸಂಬಂಧಿಸಿದಂತೆ ಕಿರುತೆರೆ ನಟಿ, ನಿರೂಪಕಿ ಸಿ. ಮಂಜುಳಾ ಅಲಿಯಾಸ್ ಶ್ರುತಿ ಅವರಿಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ ಆರೋಪದಡಿ ಪತಿ ಅಮರೇಶ್‌ನನ್ನು ಹನುಮಂತನಗರ ಠಾಣೆ ಪೊಲೀಸರು ಬಂಧಿಸಿದ್ದರು.

'ಅಮೃತಧಾರೆ' ಸೇರಿದಂತೆ ಹಲವು ಧಾರಾವಾಹಿಗಳಲ್ಲಿ ನಟಿಸಿರುವ ಮಂಜುಳಾ ಮತ್ತು ನಾನು 20 ವರ್ಷಗಳ ಹಿಂದೆ ಪ್ರೀತಿಸಿ ಮದುವೆಯಾಗಿದ್ದು, ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ನನ್ನ ಮತ್ತು ಮಕ್ಕಳ ಬಗ್ಗೆ ಕಾಳಜಿ ಮಾಡುತ್ತಿರಲಿಲ್ಲ. ಶ್ರೀನಗರದಲ್ಲಿ ಮನೆಯನ್ನು ಭೋಗ್ಯಕ್ಕೆ ಹಾಕಿಕೊಂಡು ವಾಸ ಮಾಡುತ್ತಿದ್ದೆವು. ಹೆಣ್ಣುಮಕ್ಕಳಿಗೆ ತಾಯಿ ಪ್ರೀತಿಯನ್ನೇ ಕೊಟ್ಟಿಲ್ಲ' ಎಂದು ಹೇಳಿದ್ದಾರೆ.

'ಮನೆ ಜವಾಬ್ದಾರಿಯನ್ನು ನಾನೇ ನೋಡಿಕೊಳ್ಳುತ್ತಿದ್ದೆ. ಶೂಟಿಂಗ್ ನೆಪದಲ್ಲಿ ಸರಿಯಾಗಿ ಮನೆಗೆ ಬರುತ್ತಿರಲಿಲ್ಲ. ಒಮ್ಮೊಮ್ಮೆ ಮನೆಯಿಂದ ಹೊರಹೋದರೆ 15 ದಿನಗಳಾದರೂ ಬರುತ್ತಿರಲಿಲ್ಲ. ಕೆಲ ದಿನಗಳ ಹಿಂದೆ ಯಾರಿಗೂ ಹೇಳದೇ 15 ದಿನ ಪ್ರಯಾಗರಾಜ್‌ಗೆ ಹೋಗಿದ್ದಳು. ಈ ವಿಚಾರಕ್ಕೆ ನಮ್ಮಿಬ್ಬರ ನಡುವೆ ಗಲಾಟೆ ಆಗಿತ್ತು' ಎಂದು ಆರೋಪಿ ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾರೆ ಎಂದು ಗೊತ್ತಾಗಿದೆ.

'ಗಂಡ, ಮಕ್ಕಳು ಇದ್ದರೂ ಅಣ್ಣನ ಜೊತೆ ಇರುವುದಾಗಿ ಗಲಾಟೆ ಮಾಡುತ್ತಿದ್ದಳು. ಕಾಲೇಜಿಗೆ ಹೋಗುವ ಮಕ್ಕಳು ಇದ್ದ ಕಾರಣ ₹25 ಲಕ್ಷ ನೀಡಿ ಫ್ಲ್ಯಾಟ್ ಒಂದನ್ನು ಭೋಗ್ಯಕ್ಕೆ ಹಾಕಿಸಿಕೊಂಡಿದ್ದೆ. ಭೋಗ್ಯಕ್ಕಿದ್ದ ಫ್ಲ್ಯಾಟ್ ಖಾಲಿ ಮಾಡಿ, ಆ ಹಣದೊಂದಿಗೆ ಪರಾರಿಯಾಗಲು ಸಂಚು ರೂಪಿಸಿದ್ದಳು. ಇದಕ್ಕೆ ನಾನು ಒಪ್ಪದಿದ್ದಾಗ ನನ್ನ ಮೇಲೆ ಪೊಲೀಸರಿಗೆ ದೂರು ನೀಡಿದ್ದಳು. ಇದೇ ವಿಚಾರಕ್ಕೆ ಮತ್ತೆ ಜಗಳವಾದಾಗ, ತಾಳ್ಮೆ ಕಳೆದುಕೊಂಡು ಚಾಕುವಿನಿಂದ ಹಲ್ಲೆ ನಡೆಸಿದ್ದೇನೆ' ಎಂದು ವಿಚಾರಣೆ ವೇಳೆ ಆರೋಪಿ ತಪ್ಪೊಪ್ಪಿಕೊಂಡಿದ್ದಾರೆ. ಹಲ್ಲೆಯಿಂದ ಗಾಯಗೊಂಡಿರುವ ಮಂಜುಳಾ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಚೇತರಿಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಬ್, ರೆಸ್ಟೋರೆಂಟ್ ಮೇಲೆ ದಾಳಿ

ನಗರದ ವಿವಿಧೆಡೆ ಪಬ್, ರೆಸ್ಟೋರೆಂಟ್‌ಗಳ ಮೇಲೆ ಶನಿವಾರ ರಾತ್ರಿ ಸಿಸಿಬಿ (ಮಾದಕ ದ್ರವ್ಯ ನಿಗ್ರಹ ದಳ) ಹಾಗೂ ವಿದೇಶೀಯರ ವಿಭಾಗೀಯ ನೋಂದಣಾಧಿಕಾರಿ ಕಚೇರಿ (ಎಫ್‌ಆರ್‌ಆರ್‌ಒ) ಅಧಿಕಾರಿಗಳ ತಂಡ ಜಂಟಿಯಾಗಿ ದಾಳಿ ನಡೆಸಿ, ಮಾದಕವಸ್ತುಗಳನ್ನು ಜಪ್ತಿ ಮಾಡಿದೆ.

ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಟ್ರಿನಿಟಿ ಸರ್ಕಲ್, ಚರ್ಚ್ ಸ್ಟ್ರೀಟ್, ಕೋರಮಂಗಲದ ಹಲವು ಕಡೆ ಕ್ಲಬ್ ಮತ್ತು ರೆಸ್ಟೋರೆಂಟ್‌ಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ. ಈ ವೇಳೆ ವಿದೇಶಿ ಡ್ರಗ್ಸ್ ಪೆಡ್ಲರ್ ಒಬ್ಬನನ್ನು ಬಂಧಿಸಿದ್ದು, ಎಷ್ಟು ಮೊತ್ತದ ಡ್ರಗ್ಸ್ ಜಪ್ತಿ ಮಾಡಲಾಗಿದೆ ಎಂಬುದನ್ನು ಬಹಿರಂಗಪಡಿಸಿಲ್ಲ. ಈ ಬಗ್ಗೆ ಕಬ್ಬನ್ ಪಾರ್ಕ್ ಹಾಗೂ ಕೋರಮಂಗಲ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಎಫ್‌ಐಆರ್ ದಾಖಲಿಸಿದ್ದಾರೆ.

ನೈಜೀರಿಯಾದ ಪೆಡ್ಲರ್‌ನನ್ನು ವಶಕ್ಕೆ ಪಡೆದು ಎಫ್‌ಆರ್‌ಆರ್ ಅಧಿಕಾರಿಗಳು ವಿಚಾರಣೆ ನಡೆಸಿದಾಗ, ವೀಸಾ ಅವಧಿ ಮುಕ್ತಾಯಗೊಂಡಿದ್ದರೂ ನಗರದಲ್ಲಿ ಅಕ್ರಮವಾಗಿ ವಾಸವಾಗಿರುವುದು ಪತ್ತೆಯಾಗಿದೆ. ಪಬ್‌ಗೆ ಬರುವ ಗ್ರಾಹಕರಿಗೆ ಡ್ರಗ್ಸ್ ಪೂರೈಕೆ ಮಾಡುತ್ತಿದ್ದ ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

₹5 ಸಾವಿರಕ್ಕಾಗಿ ಗಾಯಕನ ಕೊಲೆ

ಮಾರುತಿ ಅಡಿವೆಪ್ಪ ಲಠ್ಠೆ

ರಾಯಬಾಗ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಬೂದಿಹಾಳ ಗ್ರಾಮದ ಬಳಿ ಗುರುವಾರ ರಾತ್ರಿ ಕೇವಲ ₹5000ಕ್ಕೆ ಜಾನಪದ ಗಾಯಕ ಮಾರುತಿ ಅಡಿವೆಪ್ಪ ಲಠ್ಠೆ (22) ಅವರನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ ಘಟನೆ ನಡೆದಿದೆ.

ಈರಪ್ಪ ವಸಂತ ಅಕ್ಕಿವಾಟೆ ಬಳಿ ಗಾಯಕ ಮಾರುತಿ ಲಠ್ಠೆ, ಕಬ್ಬು ಕಟಾವು ಮಾಡುವವರ ಗುಂಪಿನಲ್ಲಿ ಕೆಲಸ ಮಾಡುತ್ತಿದ್ದರು. ಅದಕ್ಕಾಗಿ ₹50 ಸಾವಿರ ಮುಂಗಡ ಹಣ ಪಡೆದಿದ್ದರು. ಅದರಲ್ಲಿ ₹45 ಸಾವಿರ ಮರು ಪಾವತಿಸಿದ್ದರು. ಇನ್ನೂ ಐದು ಸಾವಿರ ಕೊಡಬೇಕಾಗಿತ್ತು.

ದೇವನಕಟ್ಟಿಯ ಗ್ರಾಮದ ಸಿದ್ದರಾಮ ವಡೆಯರ (32) ಹಾಗೂ ಜೋಡಟ್ಟಿ ಗ್ರಾಮದ ಆಕಾಶ ಉರ್ಫ್ ಅಕ್ಷಯ ಪೂಜೇರಿ (20) ಎಂಬ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಇತರರಿಗೆ ಶೋಧ ನಡೆಸಿದ್ದಾರೆ.

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್, ಕಾವೇರಿ ಭವನ, ಬೆಂಗಳೂರು–560009,
ದೂರವಾಣಿ: 080–23118888/22106888 ವೆಬ್‌ಸೈಟ್: https://ashraya.karnataka.gov.in

ಅಂತಿಮ ಪ್ರಕಟಣೆ

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಿಂದ ಅನುಷ್ಠಾನಗೊಳಿಸಲಾಗುತ್ತಿರುವ 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ ಈ ಕೆಳಕಂಡ ಯೋಜನಾ ಸ್ಥಳಗಳಲ್ಲಿ 1 ಬಿ.ಹೆಚ್.ಕೆ. ಫ್ಲಾಟ್ ಗಳು ಪೂರ್ಣಗೊಂಡಿದ್ದು, ಸದರಿ ಫ್ಲಾಟ್ ಗಳನ್ನು ಫಲಾನುಭವಿಗಳ ಹೆಸರಿಗೆ ನೋಂದಣಿ ಮಾಡಿಕೊಡುವ ಸಲುವಾಗಿ ಗೃಹ ಸಾಲ ಮೇಳಗಳನ್ನು ಆಯೋಜಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

ಯೋಜನಾ ಸ್ಥಳ	ಆಯ್ಕೆಯಾದ ಫಲಾನುಭವಿಗಳಿಗೆ ಗೃಹ ಸಾಲ ಮೇಳದ ದಿನಾಂಕ	ಸ್ಥಳ
ಕುಕ್ಕನಹಳ್ಳಿ ಸ.ನಂ. 77 & ಕುಕ್ಕನಹಳ್ಳಿ ಸ.ನಂ. 78	16–07–2025	ಕುಕ್ಕನಹಳ್ಳಿ ಸ.ನಂ. 77 ದಾಸನಪುರ ಹೋ. ಬೆಂಗಳೂರು ಉತ್ತರ ತಾ.
ಕೆಂಚನಪುರ ಸ.ನಂ. 63	17–07–2025	ಕೆಂಚನಪುರ ಸ.ನಂ. 63, ಕೆಂಗೇರಿ ಹೋ. ಬೆಂಗಳೂರು ದಕ್ಷಿಣ ತಾ.
ನೆಲಗುಳಿ ಭಾಗ–2 & ಭಾಗ–3 ಸ.ನಂ. 145	18–07–2025	ನೆಲಗುಳಿ ಭಾಗ–2 & ಭಾಗ–3 ಉತ್ತರಹಳ್ಳಿ ಹೋ. ಬೆಂಗಳೂರು ದಕ್ಷಿಣ ತಾ
ಬಿದರಹಳ್ಳಿ ಸ.ನಂ. 193	19–07–2025	ಬಿದರಹಳ್ಳಿ ಸ.ನಂ. 193, ಬೆಂಗಳೂರು ಪೂರ್ವ ತಾಲ್ಲೂಕು.
ಸಾದೇನಹಳ್ಳಿ ಸ.ನಂ. 30	21–07–2025	ಸಾದೇನಹಳ್ಳಿ ಸ.ನಂ. 30, ಯಲಹಂಕ ಹೋ. & ತಾ
ಚಿಕ್ಕಲ್ಲೂರು–ರಾಂಪುರ ಸ.ನಂ.1	22–07–2025	ಚಿಕ್ಕಲ್ಲೂರು–ರಾಂಪುರ ಸ.ನಂ.1, ತಾವರೆಕೆರೆ ಹೋ. ಬೆಂಗಳೂರು ದಕ್ಷಿಣ ತಾ.
ದೇವಗೆರೆ ಸ.ನಂ. 67 ಮತ್ತು ದೇವಗೆರೆ ಸ.ನಂ. 68 (A ಬ್ಲಾಕ್)	23–07–2025	ದೇವಗೆರೆ ಸ.ನಂ. 68, ಕೆಂಗೇರಿ ಹೋ. ಬೆಂಗಳೂರು ದಕ್ಷಿಣ ತಾ.
ಚಿಕ್ಕನಹಳ್ಳಿ–ಕಾಮನಹಳ್ಳಿ ಸ.ನಂ. 71 & ಕೂಗೂರು ಸ.ನಂ. 69	24–07–2025	ಚಿಕ್ಕನಹಳ್ಳಿ–ಕಾಮನಹಳ್ಳಿ ಸ.ನಂ. 71, ಸರ್ಜಾಪುರ ಹೋ. ಆನೇಕಲ್ ತಾ.
ಗೂಳಿಮಂಗಲ ಸ.ನಂ. 67	25–07–2025	ಗೂಳಿಮಂಗಲ ಸ.ನಂ. 67, ಸರ್ಜಾಪುರ ಹೋ. ಆನೇಕಲ್ ತಾ.
ಲಿಂಗಾಪುರ ಸ.ನಂ. 112 ಮತ್ತು ಜೆ.ಭಿಂಗೀಪುರ ಸ.ನಂ. 29	28–07–2025	ಲಿಂಗಾಪುರ ಸ.ನಂ. 112, ಜಿಗಣಿ ಹೋ. ಆನೇಕಲ್ ತಾ.
ದೊಡ್ಡನಾಗಮಂಗಲ ಸ.ನಂ. 11	29–07–2025	ದೊಡ್ಡನಾಗಮಂಗಲ ಸ.ನಂ. 11, ಬೇಗೂರು ಹೋ. ಬೆಂಗಳೂರು ದಕ್ಷಿಣ ತಾ.

ಸರ್ಕಾರವು **"ಬಡ್ಡಿ ಸಹಾಯಧನ (Interest Subvention)"** ಎಂಬ ನೂತನ ಯೋಜನೆಯನ್ನು ಜಾರಿಗೆ ತಂದಿದ್ದು, ಸದರಿ ಯೋಜನೆಯಡಿ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ" ಫಲಾನುಭವಿಗಳು **ರಾಷ್ಟ್ರೀಕೃತ/ಖಾಸಗಿ/NBFC** ಹಣಕಾಸು ಸಂಸ್ಥೆಗಳಿಂದ ಪಡೆದುಕೊಂಡ ಗೃಹ ಸಾಲ ಬಡ್ಡಿ ಮೊತ್ತದಲ್ಲಿ ಶೇ. 3% ರಿಂದ 5% ವರೆಗೆ ಅಥವಾ ಮಾಸಿಕ ಗರಿಷ್ಠ ರೂ.3000/– ಗಳ ಮಿತಿಯೊಳಗೆ 10 ವರ್ಷಗಳ ಅವಧಿಗೆ ಸರ್ಕಾರದಿಂದಲೇ ಭರಿಸಲಾಗುವುದು.

ಈ ಯೋಜನೆಯಲ್ಲಿ ಫ್ಲಾಟ್ ಆಯ್ಕೆ ಮಾಡಿಕೊಂಡಿರುವ ಫಲಾನುಭವಿಗಳು "ಬಡ್ಡಿ ಸಹಾಯಧನ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳಲು **ಅಂತಿಮ ಅವಕಾಶವಾಗಿದ್ದು,** ಗೃಹ ಸಾಲಕ್ಕಾಗಿ ದಿನಾಂಕ: **30–07–2025ರೊಳಗೆ** ಮೇಲ್ಕಂಡ ಸ್ಥಳ ಮತ್ತು ದಿನಾಂಕಗಳಂದು ನಿಮ್ಮ ಆಯ್ಕೆಯ ಬ್ಯಾಂಕ್ ಗೆ ಅರ್ಜಿ ಸಲ್ಲಿಸಿ, ಸಂಬಂಧಿಸಿದ ನಿಗಮದ AEE ರವರಿಗೆ ದಾಖಲೆ ಸಲ್ಲಿಸಲು ತಿಳಿಸಿದೆ. ತಪ್ಪಿದಲ್ಲಿ, ನಿಯಮಾನುಸಾರ **ಪ್ರಾರಂಭಿಕ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು,** ತಮ್ಮ ಆಯ್ಕೆಯ ಫ್ಲಾಟ್ ಅನ್ನು ರದ್ದುಗೊಳಿಸಲಾಗುವುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

DIPR/CP/SPAN/1791/2025-26

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. 12/2025/SBC, ದಿನಾಂಕ: 04.07.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ
ಎಲ್8255905	ಹೆವಿ ಡ್ಯೂಟಿ ರಿವರ್ಸಿಬಲ್ ಮಾದರಿಯ ಪ್ರಯಾಣಿಕರ ಎಸ್ಕಲೇಟರ್‌ನ ವಿನ್ಯಾಸ, ತಯಾರಿಕೆ, ಸ್ಥಳದಲ್ಲಿ ಪೂರೈಕೆ, ಸ್ಥಾಪನೆ, ಪರಿಶೀಲನೆ, ಕಾರ್ಯಾರಂಭ ಮತ್ತು ನಿರ್ವಹಣೆ (ಪರಿಮಾಣ: 1 ನಂ.).

ಬಿಡ್‌ಗಳನ್ನು ಸಲ್ಲಿಸಲು/ಟೆಂಡರು ಕೊನೆಯ ದಿನಾಂಕ: 31.07.2025, 10:30 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/278/AAMO/PRB/SWR/2025-26 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಅರ್ಜಿ ಅಧಿಸೂಚನೆ ಸಂ.
No. 565/ M-UTS Sahayak/SBC/2025

ಭಾರತದ ರಾಷ್ಟ್ರಪತಿಗಳ ಪರವಾಗಿ ಬೆಂಗಳೂರು ವಿಭಾಗದ ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ನೈಋತ್ಯ ರೈಲ್ವೆ, ಬೆಂಗಳೂರು – 560 023, ಬೆಂಗಳೂರು ವಿಭಾಗದ ನಿವೃತ್ತ ರೈಲ್ವೆ ನೌಕರರು / ಸಾರ್ವಜನಿಕರಿಂದ ಎಸ್‌ಬಿಸಿ ವಿಭಾಗದ ಕೆಎಸ್‌ಆರ್ ಬೆಂಗಳೂರು ನಗರ ನಿಲ್ದಾಣದಲ್ಲಿ ಎಂ–ಯುಟಿಎಸ್ ಸಹಾಯಕ್ ಆಗಿ ನೇಮಕಗೊಳ್ಳಲು ಒಂದು ವರ್ಷದ ಅವಧಿಗೆ ರೀಚಾರ್ಜ್ ಬೋನಸ್ ಆಧಾರದ ಮೇಲೆ ಎಂ–ಯುಟಿಎಸ್ ಮೂಲಕ ಕಾಯ್ದಿರಿಸದ / ಸಾಮಾನ್ಯ ಟಿಕೆಟ್‌ಗಳನ್ನು ನೀಡಲು ಮೊಹರು ಮಾಡಿದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ನಿಲ್ದಾಣದ ಹೆಸರು	ಹುದ್ದೆಗಳ ಸಂಖ್ಯೆ
ಕೆಎಸ್‌ಆರ್ ಬೆಂಗಳೂರು ಸಿಟಿ	07

ಅರ್ಜಿ ನಮೂನೆ, ಅರ್ಹತಾ ಮಾನದಂಡಗಳು ಮತ್ತು ಇತರ ವಿವರಗಳಿಗಾಗಿ ನಮ್ಮ ವೆಬ್‌ಸೈಟ್ ಆದ www.swr.indianrailways.gov.in ನಿಂದ ಡೌನ್‌ಲೋಡ್ ಮಾಡಬಹುದು.

ಅರ್ಜಿಯನ್ನು ಸಲ್ಲಿಸಬೇಕಾದ ದಿನಾಂಕ ಮತ್ತು ಸಮಯ:
04.04.2025 ರಂದು 10:00 ರಿಂದ 15:00 ರವರೆಗೆ
ಅರ್ಜಿಯನ್ನು ತೆರೆಯುವ ದಿನಾಂಕ ಮತ್ತು ಸಮಯ:
04.08.2025, 15:05 ಗಂಟೆಗೆ

ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು / ಬೆಂಗಳೂರು ವಿಭಾಗ

PUB/285/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

'ಏಕತೆಗೆ ಕೋಮುವಾದಿ ಶಕ್ತಿ ಮಾರಕ'

ಪ್ರಜಾವಾಣಿ ವಾರ್ತೆ

ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಭಾನುವಾರ ನಡೆದ 'ಮಹಾನಾಯಕ ಸಾಮ್ರಾಟ್ ಅಶೋಕ' ನಾಟಕವನ್ನು ನಾಗ್ಪುರದ ಬುದ್ಧಿಸ್ಟ್ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್‌ನ ಕಲಾವಿದರು ಪ್ರಸ್ತುತಪಡಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: 'ದೇಶದಲ್ಲಿ ಕೋಮುವಾದಿ ಹಾಗೂ ಮನುವಾದಿ ಶಕ್ತಿಗಳು ಹುಚ್ಚೆದ್ದು ಕುಣಿಯುತ್ತಿವೆ. ಜಾತಿಯ ಹೆಸರಿನಲ್ಲಿ ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿದ್ದು, ಸಮಾಜವನ್ನು ವಿಭಜಿಸುವ ಕೆಲಸ ಮಾಡುತ್ತಿವೆ. ಇದು ದೇಶದ ಏಕತೆ ಮತ್ತು ಸಮಗ್ರತೆಗೆ ಮಾರಕವಾಗಿದೆ' ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಕಳವಳ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಹಾಗೂ ನಾಗಪುರದ ಬುದ್ಧಿಸ್ಟ್ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ 'ಮಹಾನಾಯಕ ಸಾಮ್ರಾಟ್ ಅಶೋಕ' ನಾಟಕ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಜಾತಿರಹಿತ ಸಮಸಮಾಜ ನಿರ್ಮಿಸುವುದಕ್ಕೆ ಬುದ್ಧ, ಬಸವ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಸೇರಿದಂತೆ ಅನೇಕ ನಾಯಕರು ಹೋರಾಟ ನಡೆಸಿದ್ದಾರೆ. ಆದರೆ ಇದುವರೆಗೂ ಅದು ಸಾಧ್ಯವಾಗಿಲ್ಲ. ಇಂದಿಗೂ ಸಮಾಜದಲ್ಲಿ ಜಾತೀಯತೆ, ಮೂಢನಂಬಿಕೆ, ಅಸ್ಪೃಶ್ಯತೆ ಆಚರಣೆಯಲ್ಲಿದೆ' ಎಂದು ಹೇಳಿದರು.

'ಸಾಮ್ರಾಟ ಅಶೋಕನ ಆಡಳಿತ ಕಾಲದಲ್ಲಿ ಎಲ್ಲ ಧರ್ಮಗಳನ್ನು ಗೌರವಿಸಲಾಗುತ್ತಿತ್ತು. ಅಶೋಕನ ತತ್ವ ಸಿದ್ಧಾಂತಗಳು ಇಂದಿಗೂ ಪ್ರಸ್ತುತವಾಗಿದ್ದು, ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇವುಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ನಾವು ಕೆಲಸ ಮಾಡಬೇಕು. ಎಲ್ಲರೂ ಬುದ್ಧ, ಬಸವ ಹಾಗೂ ಡಾ.ಬಿ. ಆರ್. ಅಂಬೇಡ್ಕರ್ ಅವರ ತತ್ವ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು' ಎಂದರು.

'ದೇಶದಲ್ಲಿರುವ 140 ಕೋಟಿ ಜನ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಸಬಲರಾದಾಗ ಮಾತ್ರ ನಮ್ಮ ದೇಶ ಬಲಾಢ್ಯವಾಗಲಿದೆ. ವಿಶೇಷವಾಗಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಮಹಿಳೆಯರು, ರೈತರು, ಕಾರ್ಮಿಕರ ಅಭಿವೃದ್ಧಿಗೆ ಒತ್ತು ನೀಡಬೇಕಿದೆ' ಎಂದು ಹೇಳಿದರು.

ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ, ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಡಿ.ಜಿ. ಸಾಗರ್ ಉಪಸ್ಥಿತರಿದ್ದರು.

ಮೋರಿಗೆ ನುಗ್ಗಿದ ಕಾರು: ಐವರಿಗೆ ಗಂಭೀರ ಗಾಯ

ಚಿಂತಾಮಣಿ: ಬೆಂಗಳೂರು–ಮದನಪಲ್ಲಿ ರಸ್ತೆಯ ಐಮರೆಡ್ಡಿಹಳ್ಳಿ ಬಳಿ ಭಾನುವಾರ ರಾತ್ರಿ ಕಾರು ಮೋರಿಯ ತಡೆಗೋಡೆ ಡಿಕ್ಕಿ ಹೊಡೆದು ಐವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಬೆಂಗಳೂರಿನ ಯಲಹಂಕ ತಾಲ್ಲೂಕಿನ ಚಿಕ್ಕಜಾಲ ಸಮೀಪದ ಮಾರನಾಯಕನಹಳ್ಳಿಯ ಲಕ್ಷ್ಮೀಕಾಂತ್, ಅನಂತಕುಮಾರ್, ವೆಂಕಟೇಶ್, ಮೀನುಕುಂಟೆ ಗ್ರಾಮದ ಅಂಬರೀಶ್ ಮತ್ತು ರಾಮಚಂದ್ರ ಗಾಯಗೊಂಡವರು.

ಆಷಾಢ ಮಾಸದ ಅಂಗವಾಗಿ ನೆರೆಯ ಆಂಧ್ರ ಪ್ರದೇಶದ ಬಾಯಿಕೊಂಡಗೆ ಬೆಂಗಳೂರಿನಿಂದ ಕಾರಿನಲ್ಲಿ ತೆರಳಿ ಗಂಗಮ್ಮದೇವಿಯ ದರ್ಶನ ಮಾಡಿಕೊಂಡು ಬೆಂಗಳೂರಿಗೆ ವಾಪಸ್ ಹೋಗುವಾಗ ದುರ್ಘಟನೆ ನಡೆದಿದೆ.

ಐಮರೆಡ್ಡಿಹಳ್ಳಿ ಬಳಿ ಕಾರು ಮೋರಿಯ ತಡೆಗೋಡೆಗೆ ಡಿಕ್ಕಿ ಹೊಡೆದಿದೆ. ಕಾರು ಸಂಪೂರ್ಣವಾಗಿ ಜಖಂಗೊಂಡಿದೆ.

ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ತೆರಳಿ ಗಾಯಾಳುಗಳನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿದ್ದಾರೆ. ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಚಿಕ್ಕಬಳ್ಳಾಪುರದ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ.

ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರು–ಬೈಕ್ ಸರಣಿ ಅಪಘಾತ

ಪ್ರಜಾವಾಣಿ ವಾರ್ತೆ

ಸರಣಿ ಅಪಘಾತದಲ್ಲಿ ನುಜ್ಜುಗುಜ್ಜಾಗಿರುವ ಕಾರು

ನೆಲಮಂಗಲ: ತಾಲ್ಲೂಕಿನ ಟಿ.ಬೇಗೂರು ಬಳಿ ಬೆಂಗಳೂರು ತುಮಕೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಐದು ಕಾರು, ಒಂದು ಬೈಕ್ ನಡುವೆ ಸರಣಿ ಅಪಘಾತ ಸಂಭವಿಸಿದ್ದು, ಯಾವುದೇ ಸಾವು–ನೋವು ಸಂಭವಿಸಿದ ವರದಿಯಾಗಿಲ್ಲ.

ತಾಲ್ಲೂಕಿನ ಟಿ.ಬೇಗೂರು ಬಳಿ ಅಪಘಾತ ನಡೆದಿದ್ದು, ಬೈಕ್ ಸವಾರ ತಿರುವು ತೆಗೆದು ತೆಗೆದುಕೊಂಡು (ಯು ಟರ್ನ್) ಬಲಕ್ಕೆ ಚಲಿಸುವ ವೇಳೆ ತಕ್ಷಣ ಬ್ರೇಕ್ ಹಾಕಿದ ಪರಿಣಾಮ ಹಿಂದೆ ಬರುತ್ತಿದ್ದ ಕಾರುಗಳು ಒಂದಕ್ಕೊಂದು ಡಿಕ್ಕಿಯಾಗಿವೆ. ಘಟನೆಯಲ್ಲಿ ಬೈಕ್ ಸವಾರ ನೆಲಕ್ಕೆ ಬಿದ್ದಿದ್ದಾನೆ. ಆದರೆ ಯಾವುದೇ ತೊಂದರೆಯಾಗಿಲ್ಲ. ಕಾರಿನಲ್ಲಿದ್ದವರಿಗೆ ಸಣ್ಣಪುಟ್ಟ ಪುಟ್ಟ ಗಾಯಗಳಾಗಿವೆ.

ಅಪಘಾತದಿಂದ ಕೆಲ ಹೊತ್ತು ಸಂಚಾರ ದಟ್ಟಣೆ ಉಂಟಾಗಿತ್ತು. ನೆಲಮಂಗಲ ಸಂಚಾರಿ ಪೊಲೀಸರು ದಟ್ಟಣೆ ನಿಯಂತ್ರಿಸಿದರು. ಅಪಘಾತ ಕುರಿತು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕ್ಯಾಂಟರ್ ಚಕ್ರ ಹರಿದು ವಿದ್ಯಾರ್ಥಿನಿ ಸಾವು

ಬೆಂಗಳೂರು: ಕ್ಯಾಂಟರ್ ಹಾಗೂ ದ್ವಿಚಕ್ರ ವಾಹನ ನಡುವೆ ಅಪಘಾತ ಸಂಭವಿಸಿದ ಪರಿಣಾಮ ಹಿಂಬದಿ ಸವಾರರೊಬ್ಬರು ಮೃತಪಟ್ಟಿರುವ ಘಟನೆ ಆಡುಗೋಡಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಕೋರಮಂಗಲದ ನಿವಾಸಿ, ಜೈನ್ ಶಕೀನಾ (23) ಮೃತ ಯುವತಿ. ನಗರದ ಕಾಲೇಜಿನಲ್ಲಿ ಓದುತ್ತಿರುವ ಯುವತಿ, ತನ್ನ ಸಹೋದರನ ಜತೆ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಈ ವೇಳೆ ದ್ವಿಚಕ್ರ ವಾಹನವು ಕ್ಯಾಂಟರ್‌ಗೆ ತಾಗಿದೆ. ನಿಯಂತ್ರಣ ತಪ್ಪಿ ಇಬ್ಬರು ಕೆಳಗೆ ಬಿದ್ದಿದ್ದಾರೆ. ಬಲಕ್ಕೆ ಬಿದ್ದ ಯುವತಿ ಮೇಲೆ ಕ್ಯಾಂಟರ್ ಚಕ್ರ ಹರಿದಿದೆ. ತೀವ್ರವಾಗಿ ಗಾಯಗೊಂಡ ಅವರು ಸ್ಥಳದಲ್ಲಿಯೇ ಮೃತಪಟ್ಟರು. ಸವಾರನಿಗೆ ಸಣ್ಣ ಗಾಯವಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಸ್ಥಳಕ್ಕೆ ಆಡುಗೋಡಿ ಸಂಚಾರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಚಾಲಕ ಹಾಗೂ ಕ್ಯಾಂಟರ್ ಅನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನಗರದಲ್ಲಿ ಇಂದು

ಪೌರಾಣಿಕ ನಾಟಕೋತ್ಸವ–2025: ಉದ್ಘಾಟನೆ: ಪಂಪನಗೌಡ ಮೇಲ್ಸೀಮೆ, ಅಧ್ಯಕ್ಷತೆ: ಆರ್. ರಮೇಶ್, ಉಪಸ್ಥಿತಿ: ಎಚ್.ಎಸ್. ಗೋವಿಂದಗೌಡ, ಎಂ. ಜಗದೀಶ್‌ಗೌಡ, ಅತಿಥಿ: ಕೆ. ನಾಗರಾಜು, ಆಯೋಜನೆ: ಕರ್ನಾಟಕ ರಂಗಸಂಗೀತ ಪರಿಷತ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಪದಾಧಿಕಾರಿಗಳ ಪದಗ್ರಹಣ ಸಮಾರಂಭ: ಉಪಸ್ಥಿತಿ: ರಜನಿ ಗೌಡ, ಶ್ರೀಮತಿ ಮಾಸ್ಟರ್, ಆಯೋಜನೆ: ಇನ್ನರ್ ವ್ಹೀಲ್ ಕ್ಲಬ್ ಆಫ್ ಬೆಂಗಳೂರು, ಸ್ಥಳ: ರೋಟರಿ ಹೌಸ್ ಆಫ್ ಫ್ರೆಂಡ್‌ಶಿಪ್, ಲಾವೆಲ್ಲೆ ರಸ್ತೆ, ಸಂಜೆ 7

'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

SRI DEVARAJ URS EDUCATIONAL TRUST
RLJIT Campus Kodigehalli, Doddaballapur - 561203

ದೇ.ಅರಸ್ ವಿ.ಸಂಸ್ಥೆ DUET

JALAPPA LAW COLLEGE SDUET DODDABALLAPUR

JALAPPA LAW COLLEGE
Affiliated to Karnataka State Law University | Approved by Bar Council of India | Recognized by Govt. of Karnataka

Special Occasion of CENTENARY Year Birthday Celebration of R L Jalappa

Join our Law Programs for the Academic Year 2025-26

Courses Offered
L.L.B. - 3 Years
Completion of any Degree from recognized University of India
B.A. L.L.B. - 5 Years Integrated
2nd PUC in any Stream / +2 (CBSE)

FACILITIES:
- Well Experienced Teaching Faculty
- Moot Court
- Modern well-equipped Library
- Computer Labs
- Smart Board Class Rooms
- Bus Facilities in & around Doddaballapur Town

Faculty Required
Position : ASSISTANT PROFESSORS
LLM with 5 years of Teaching Experience. / Ph.D/NET/K-SET in Law.
Contact HRD :- 9902516464, Email:- hrmrljgi@rljit.in

Sri R.L. Jalappa
Founder Chairman, SDUET
"Real achievers are Ordinary People with Extraordinary Determination"

FOR MORE INFORMATION PLEASE CONTACT
9448064270 / 9663397471 / 9591526412
principal.jlcdbp@gmail.com
RLJIT Campus Kodigehalli, Doddaballapur, Bengaluru North - 561203

ಸೊರಗಿದ ನಾಯಿಗಳಿಗಷ್ಟೇ ಆಹಾರ

ಪಶುಪಾಲನಾ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ 2.7 ಲಕ್ಷ ನಾಯಿಗಳ ಪೈಕಿ ಆಹಾರ ಇಲ್ಲದೆ ಸೊರಗುವ ಆಯ್ದ 4,000 ನಾಯಿಗಳಿಗೆ ಮಾತ್ರ ಬಿಬಿಎಂಪಿ ವತಿಯಿಂದ ಆಹಾರ ನೀಡಲಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಟೆಂಡರ್ ಆಹ್ವಾನಿಸಿದ್ದು, ಅಂತಿಮಗೊಂಡಿಲ್ಲ. ಅಲ್ಲದೇ ಬಿರಿಯಾನಿ ನೀಡುವ ಯಾವುದೇ ಪ್ರಸ್ತಾವ ಟೆಂಡರ್‌ನಲ್ಲಿ ಇಲ್ಲ ಎಂದು ಪಶುಪಾಲನಾ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಸ್ಪಷ್ಟನೆ ನೀಡಿದ್ದಾರೆ.

ಸಾಧಕ-ಬಾಧಕಗಳನ್ನು ಪರಿಶೀಲಿಸಿದ ನಂತರ ಅಂತಿಮ ನಿರ್ಣಯ ಕೈಗೊಳ್ಳಲಾಗುವುದು. ಬೀದಿ ನಾಯಿಗಳಿಗೆ ಆಹಾರ ನೀಡುವುದನ್ನು ಕೋವಿಡ್ ಸಮಯದಲ್ಲಿಯೇ ಕೈಗೆತ್ತಿಕೊಳ್ಳಲಾಗಿತ್ತು. ಅದರ ಮುಂದುವರಿಕೆಯಾಗಿ ಕಳೆದ ವರ್ಷವೂ ನಿಗದಿತ ಸಂಖ್ಯೆಯಲ್ಲಿ ನಾಯಿಗಳಿಗೆ ಆಹಾರ ನೀಡಲಾಗಿತ್ತು. ಅಲ್ಲಿ ಕಲಿತ ಪಾಠಗಳ ಆಧಾರದ ಮೇಲೆ, ಈ ಯೋಜನೆಯನ್ನು ಇನ್ನಷ್ಟು ಸುಧಾರಣೆ ಮಾಡಲಾಗಿದೆ. ಕೇಂದ್ರ ಸರ್ಕಾರ ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿಯ ಮೂಲಕ ಪ್ರಾಣಿ ಜನನ ನಿಯಂತ್ರಣ ನಿಯಮಗಳನ್ನು ರೂಪಿಸಿದೆ. ಅದರಂತೆ ಬಿಬಿಎಂಪಿ ಈಗ ಪ್ರತಿ ವಲಯದಲ್ಲಿ ಆಯಾ ವಲಯ ಸಹಾಯಕ ನಿರ್ದೇಶಕರು ಗುರುತಿಸಿದ ಮತ್ತು ಮೇಲ್ವಿಚಾರಣೆ ಮಾಡುವ ಸ್ಥಳಗಳಲ್ಲಿ ಸಮತೋಲಿತ ಆಹಾರವನ್ನು ಒದಗಿಸಲು ಟೆಂಡರ್ ಆಹ್ವಾನಿಸಿದೆ ಎಂದು ಅವರು ತಿಳಿಸಿದ್ದಾರೆ.

ಆಹಾರ ಯೋಜನೆಯ ಮೂಲಕ ಭಯ ಹುಟ್ಟಿಸುವ ನಾಯಿಗಳನ್ನು ಹಿಡಿಯಬಹುದು. ನಾಯಿ ಕಡಿತ ನಿಯಂತ್ರಿಸಬಹುದು. ರೇಬಿಸ್ ವಿರೋಧಿ ಲಸಿಕೆಯನ್ನು ಸುಲಭವಾಗಿ ನಾಯಿಗಳಿಗೆ ನೀಡಬಹುದು. ಸಂತಾನಶಕ್ತಿ ಹರಣ ಚಿಕಿತ್ಸೆಯನ್ನು ಈಗಾಗಲೇ ಶೇ 70ರಷ್ಟು ಮಾಡಿದ್ದು, ಉಳಿದ ನಾಯಿಗಳಿಗೂ ಆಹಾರ ನೀಡುವಾಗ ಮಾಡಲು ಸಾಧ್ಯ ಎಂದು ವಿವರಿಸಿದ್ದಾರೆ.

ಒಟ್ಟು ಯೋಜನಾ ವೆಚ್ಚ ₹2.88 ಕೋಟಿ ಇದ್ದು, ಪ್ರತಿ ವಲಯದಲ್ಲಿ 100 ಆಹಾರ ಸ್ಥಳ, ಪ್ರತಿ ವಲಯದಲ್ಲಿಯೂ 500 ನಾಯಿಗಳಿಗೆ ದಿನಕ್ಕೆ ಒಂದು ಬಾರಿಯಂತೆ 365 ದಿನ ಆಹಾರ ನೀಡಲಾಗುತ್ತದೆ. ಆಹಾರ ಸಾಗಣೆ ವೆಚ್ಚ ₹8 ಮತ್ತು ಆಹಾರದ ವೆಚ್ಚ ₹11 ಸೇರಿ ಪ್ರತಿ ನಾಯಿಗೆ ಪ್ರತಿದಿನ ₹19 ವೆಚ್ಚ ತಗಲುತ್ತದೆ ಎಂದು ಹೇಳಿದ್ದಾರೆ.

ಮುಖ್ಯಾಂಶಗಳು

- ನಾಯಿಗಳನ್ನು ಸ್ಥಳಾಂತರಿಸಲು, ಆಶ್ರಮಗಳಲ್ಲಿ ಇಡಲು ಅವಕಾಶವಿಲ್ಲ
- ಪರಿಷ್ಕೃತ ಮಾರ್ಗಸೂಚಿ ಪ್ರಕಾರ ಕ್ರಮ
- ನಾಯಿಗಳಿಗೆ ಬೇಯಿಸಿದ ಅಕ್ಕಿ ತರಕಾರಿ, ಕೋಳಿ ಮಾಂಸ

ಬೀದಿ ನಾಯಿಗಳು

ಮನೆ ಜಪ್ತಿ ಮಾಡಿದ ಫೈನಾನ್ಸ್ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಸಕಾಲದಲ್ಲಿ ಸಾಲ ಮರು ಪಾವತಿಸಿಲ್ಲ ಎಂದು ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಸಂಸ್ಥೆಯು ಪಟ್ಟಣದ ತೊರೆದೊಡ್ಡಿ (ಇಟ್ಟಮಡು) ಗ್ರಾಮದ ಮನೆಯೊಂದಕ್ಕೆ ಬೀಗ ಜಡಿದು ಜಪ್ತಿ ಮಾಡಿದೆ.

ನ್ಯಾಯಾಲಯದ ಜಪ್ತಿ ಆದೇಶ ಹಿಡಿದು ಪೊಲೀಸರೊಂದಿಗೆ ಶನಿವಾರ ಗ್ರಾಮಕ್ಕೆ ಬಂದ ಫೈನಾನ್ಸ್ ಸಿಬ್ಬಂದಿ ಅಲಮೇಲಮ್ಮ ಅವರ ಮನೆ ಜಪ್ತಿ ಮಾಡಿ ಬೀಗ ಜಡಿದರು. ಮನೆ ಜಪ್ತಿ ನೋಟಿಸ್ ಅನ್ನು ಮನೆಗೆ ಅಂಟಿಸಲಾಗಿದೆ.

ಸಂಸ್ಥೆಯಿಂದ ಗೃಹಸಾಲ ಪಡೆದಿದ್ದ ಗ್ರಾಮದ ಅಲಮೇಲಮ್ಮ ಸಕಾಲದಲ್ಲಿ ತೀರಿಸಿರಲಿಲ್ಲ. ನಾಲ್ಕು ಸಲ ನೋಟಿಸ್ ನೀಡಲಾಗಿತ್ತು ಎಂದು ಎಂದು ಫೈನಾನ್ಸ್ ಸಿಬ್ಬಂದಿ ತಿಳಿಸಿದರು.

ಯಲಹಂಕ: ‘ಸಸ್ಯ ಸಂತೆ’ಗೆ ಚಾಲನೆ

ಯಲಹಂಕ: ನಗರೀಕರಣದ ಭರಾಟೆಯಲ್ಲಿ ಜನರು ಕೃಷಿಯನ್ನು ಮರೆಯುತ್ತಿರುವುದು ಅಪಾಯಕಾರಿ ಬೆಳವಣಿಗೆ’ ಎಂದು ಶಾಸಕ ಎಸ್.ಆರ್. ವಿಶ್ವನಾಥ್ ಕಳವಳ ವ್ಯಕ್ತಪಡಿಸಿದರು.

ಜಿಕೆವಿಕೆ ಆವರಣದಲ್ಲಿರುವ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ(ಬಾಗಲಕೋಟೆ). ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಹಾಗೂ ತೋಟಗಾರಿಕೆ ಮಹಾವಿದ್ಯಾಲಯದ ಆಶ್ರಯದಲ್ಲಿ ನಡೆದ ಸಸ್ಯಸಂತೆ ಉದ್ಘಾಟಿಸಿ ಅವರು ಮಾತನಾಡಿದರು.

ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಎಸ್.ಬಿ.ದಂಡಿನ, ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಜಿ.ಎಸ್.ಕೆ.ಸ್ವಾಮಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅಧ್ಯಕ್ಷ ರಾಜಾಸಾಬ್. ಎ.ಎಚ್ ಮತ್ತಿತರರು ಇದ್ದರು.

‘ಯೋಜಿತವಲ್ಲದ ನಗರೀಕರಣದಿಂದ ಸಮಸ್ಯೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯೋಜಿತವಲ್ಲದ ನಗರೀಕರಣದಿಂದಾಗಿ ಬೆಂಗಳೂರು ಸೇರಿದಂತೆ ವಿಶ್ವದ ಅನೇಕ ನಗರಗಳಲ್ಲಿ ನೀರಿನ ಸಮಸ್ಯೆ ಉಂಟಾಗುತ್ತಿದೆ, ಪರಿಸರ ಮಾಲಿನ್ಯ ವಿಪರೀತವಾಗುತ್ತಿದೆ’ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನಿ ಟಿ.ವಿ.ರಾಮಚಂದ್ರ ಅಭಿಪ್ರಾಯಪಟ್ಟರು.

ಟಿ.ವಿ. ರಾಮಚಂದ್ರ

ದಿ ಮಿಥಿಕ್ ಸೊಸೈಟಿ ಆಯೋಜಿಸಿದ್ದ ರಾವ್ ಬಹದ್ದೂರ್ ಎಚ್. ಕೃಷ್ಣಶಾಸ್ತ್ರಿ ಸ್ಮಾರಕ ಹಾಗೂ ಬಿಬಿಎಂಪಿ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ‘ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಬೆಂಗಳೂರು ಪರಿಸರವನ್ನು ಅರ್ಥೈಸಿಕೊಳ್ಳುವುದು’ ಎಂಬ ವಿಷಯದ ಕುರಿತು ಅವರು ಉಪನ್ಯಾಸ ನೀಡಿದರು.

‘ಜಕ್ಕೂರು ಕೆರೆಯನ್ನು ಪುನಶ್ಚೇತನಗೊಳಿಸಿದ್ದರಿಂದ ಸುತ್ತಲಿನ 300 ಕೊಳವೆ ಬಾವಿಗಳಲ್ಲಿ ನೀರು ಬರತೊಡಗಿತು. ಸಾರಕ್ಕಿ ಕೆರೆಯ ಪುನಶ್ಚೇತನದಿಂದ ಸುತ್ತಲಿನ ಪರಿಸರ ಉತ್ತಮವಾಯಿತು. ಕೆರೆಗಳು ಸುಸ್ಥಿತಿಯಲ್ಲಿದ್ದರೆ ಅಂತರ್ಜಲ ಸುಸ್ಥಿರವಾಗಿರುತ್ತದೆ ಎಂಬುದಕ್ಕೆ ಇವೆಲ್ಲ ಉದಾಹರಣೆ. ನಗರದಲ್ಲಿ ಸುರಿಯುವ ಮಳೆ ನೀರನ್ನು ಸಮರ್ಪಕವಾಗಿ ಬಳಸಿಕೊಂಡರೆ, ಕಾವೇರಿ, ಶರಾವತಿ, ಎತ್ತಿನಹೊಳೆಯಂತಹ ಯಾವ ಯೋಜನೆಗಳೂ ಬೇಕಾಗುವುದಿಲ್ಲ’ ಎಂದು ಅಭಿಪ್ರಾಯಪಟ್ಟರು.

‘ಹೆಚ್ಚು ಹಸಿರು ಇದ್ದ ಕಡೆ ವಾತಾವರಣ ತಂಪಾಗಿರುತ್ತದೆ. ಬ್ರ್ಯಾಂಡ್ ಬೆಂಗಳೂರು ಎಂದರೆ ಉತ್ತಮ ಗಾಳಿ, ನೀರಿನೊಂದಿಗೆ ಉತ್ತಮ ಪರಿಸರ ನೀಡುವ ಮೂಲಕ ವಾಸಯೋಗ್ಯ ನಗರವನ್ನಾಗಿಸುವುದು’ ಎಂದು ವಿವರಿಸಿದರು.

ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಟಿ.ವಿ.ನಾಗರಾಜು ಅವರು, ‘ಬೆಂಗಳೂರು ಪರಿಸರದ ಪ್ರಾಚೀನ ಕೆರೆಗಳು’ ಕುರಿತು ಉಪನ್ಯಾಸ ನೀಡಿದರು. ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ, ಇನ್ಫೋಸಿಸ್ ಸಂಸ್ಥೆಯ ಮುಖ್ಯಸ್ಥ ಎನ್.ಆರ್. ನಾರಾಯಣಮೂರ್ತಿ ಮತ್ತು ಮಿಥಿಕ್ ಸೊಸೈಟಿ ಗೌರವ ಕಾರ್ಯದರ್ಶಿ ಎಸ್.ರವಿ, ಎಂ.ಆರ್. ಪ್ರಸನ್ನಕುಮಾರ್, ಹಿರಿಯ ಸಂಶೋಧನಾ ಸಂಯೋಜಕ ಪಿ. ಜಯಸಿಂಹ ಉಪಸ್ಥಿತರಿದ್ದರು.

ಚಿತ್ರಾವಳಿ

ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟವು ಎರಡನೇ ಕನ್ನಡ ಸಮ್ಮೇಳನವನ್ನು ಆಯೋಜಿಸುವ ಕುರಿತು ಭಾನುವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ಒಕ್ಕೂಟದ ಅಧ್ಯಕ್ಷ ಕೆ.ಸಿ. ಜಗನ್ನಾಥ ರೆಡ್ಡಿ, ವಿಧಾನ ಪರಿಷತ್‌ನ ಮಾಜಿ ಸದಸ್ಯ ರಮೇಶ್ ಗೌಡ, ಬಿಬಿಎಂಪಿ ಮಾಜಿ ಸದಸ್ಯ ಬಿ. ಗೋವಿಂದರಾಜು, ಪಿ. ಬಾಬು, ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎನ್. ಮುನಿರಾಜು ಸೇರಿದಂತೆ ಕನ್ನಡಪರ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು

ಯಲಹಂಕ ತಾಲ್ಲೂಕು ಬ್ರಾಹ್ಮಣ ಸಂಘದ ಲಕ್ಷಾರ್ಚನ ಸಮಿತಿ ವತಿಯಿಂದ ಬಿಡಿಕೆ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಲಲಿತ ಲಕ್ಷಾರ್ಚನೆ ಹಾಗೂ ಸತ್ಯನಾರಾಯಣಸ್ವಾಮಿ ಪೂಜಾ ಕಾರ್ಯಕ್ರಮದಲ್ಲಿ ನೂರಾರು ಮಹಿಳೆಯರು ಭಾಗವಹಿಸಿದ್ದರು. ನಿರ್ದೇಶಕ ಸಾಯಿಪ್ರಕಾಶ್, ತಾಲ್ಲೂಕು ಬ್ರಾಹ್ಮಣ ಸಂಘದ ಪದಾಧಿಕಾರಿಗಳಾದ ವೈ.ಜಿ.ವಿಶ್ವನಾಥಶಾಸ್ತ್ರಿ, ವೈ.ಜಿ.ರಾಘವೇಂದ್ರರಾವ್, ಆರ್. ನಾಗರಾಜ, ಎಸ್.ಭಿಮಸೇನಾಚಾರ್ಯ ಉಪಸ್ಥಿತರಿದ್ದರು

ಪದ್ಮನಾಭನಗರದ ವಾಜಪೇಯಿ ಕ್ರೀಡಾಂಗಣದಲ್ಲಿ ‘ರಾಮಯ್ಯ ಕಪ್’ ರಾಜ್ಯಮಟ್ಟದ ಪುರುಷ ಮತ್ತು ಮಹಿಳೆಯರ ಕಬಡ್ಡಿ ಫೈನಲ್ ಪಂದ್ಯ ವೀಕ್ಷಣೆಗೆ ಬಂದಿದ್ದ ಸಂಸದ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ವಿ.ಸೋಮಣ್ಣ, ವಿಧಾನ ಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಕ್ರೀಡಾಪಟುಗಳನ್ನು ಅಭಿನಂದಿಸಿದರು

AMITY UNIVERSITY BENGALURU
AMITY BENGALURU
BIOTECH
The Science of Innovation & Life
Apply at: amity.edu/bengaluru
By: 19th July, 2025
7303-399-000

- Leading companies visiting the campus include Biocon, Serum Institute of India, Dr. Reddy's Lab, Zydus Lifesciences, Sun Pharma, Cipla, Jubilant Biosys, Syngene, MedGenome...
- Frequent industry visits to top-notch organisations like C-CAMP, FNDR, MITC, L&T Lifesciences, Merck...
- Research collaborations with Aster Hospitals, Bengaluru Bio-innovation Centre-an initiative of Deptt. of IT-BT-S&T, Govt. of Karnataka and DBT-GoI...
- 12 State-of-the-art labs with cutting-edge equipment like -80°C Freezer, Cooling Centrifuge, Shaker, Incubator, Spectrophotometer, Gel Electrophoresis...
- 160+ Distinguished faculty, scientists & staff guiding your academic journey
- 5-Week Study Abroad Program (optional) in New York, Singapore, London or Dubai
- Govt. projects like those with Ministry of Mines, DBT; headed by Ramalingaswami Re-entry Fellow...

BIOTECHNOLOGY
- B.Sc-Biotechnology (Hons/Hons with Research)
- B.Tech-Biotechnology
- M.Sc-Biotechnology

OTHER PROGRAMMES OFFERED UNDER SCIENCE (BIOLOGY) STREAM
PHARMACY
- B.Pharm

- Biotech Club 'GENOVATE' in collaboration with Spinco Biotech (Shimadzu)
- Student special interest clubs including GitHub, Google Developer, Environmental Awakening...
- Option to learn foreign languages like German or Spanish to enhance global employability
- Lateral entry also offered

MERIT SCHOLARSHIPS

PROG LEVEL	Agg%	SCH 100%	SCH 50%	SCH 25%
UG	12th	95	90	85
PG (Non-MBA)	12th	95	90	-
	UG	80	75	-

Architectural representation of Amity University Bengaluru Campus

Amity University Bengaluru, NH 648 (Old NH 207), Devanahalli-Doddaballapur Road, Bengaluru | E: admissions.blr@amity.edu

|| JAI SRI GURUDEV ||
BGSKH Education Trust (R.)
A Unit of Adichunchanagiri Shikshana Trust (R.)
BGS COLLEGE OF ENGINEERING AND TECHNOLOGY
(Approved By AICTE, New Delhi and Affiliated To VTU, Belagavi)

ADMISSIONS OPEN 2025-26

B.E - 4 Years
- Computer Science and Engineering
- Information Science and Engineering
- Artificial Intelligence and Data Science
- Artificial Intelligence and Machine Learning
- Computer Science and Design

MBA - 2 Years
- General MBA (HR, Finance, Marketing, Data Analytics)
- Digital Marketing

HIGHLIGHTS (Motto: Create, Enrich & Transform)
» State-of-the-art digital classrooms for engaging learning and holistic student development.
» Located in heart of Bengaluru ear shot distance from Mahalakshmi Metro Station (green line) and IISc.
» Best lab facilities with 500+ computers in networking and programming.
» Student Development Activities Technical Events, Hackathons, Sports day and Extracurricular activities are conducted.
» Dedicated Career Development and Corporate Affairs' Center with 100% placement assurance for eligible students.
» Dedicated Faculties 90 dedicated, experienced faculties with 40% Doctorate and more than 50% pursuing PhD.
» 100% admissions from last 3 years with a CET cutoff rank of around 12 - 16K. Consistent results with a pass percentage of more than 90 at VTU Exams.
» Sports, NSS and Hostel Facilities Dedicated Sports director, coaches and trainers promoting physical and mental health and NSS program officer. Boys and Girls Hostel with dedicated wardens.
» Fests and Hackathons SUSHUMNA - Annual cultural fest, ADVAYA - Pan-India 24 hours Hackathon, Sports day, Workshops and seminars for students skill development.
» R&D and Incubation Centres 40 Patents: 12 granted. International Conference - IEEE, ERCICA
» 5 CoEs and SDCs In association with leading industries: CISCO, Exaleap, Technodysis and 5G. VTU Skill Development Centre in association with NSDC
» SEED & Student Clubs |Student centric activities and peer-to-peer learning, IEEE & CSI Chapters. Various Clubs including NSS, Youth Red Cross, Green Campus Initative, Coding & NDLI Clubs

KCET Code: E-286
COMED-K Code: E-207
PGCET Code: B099

www.bgscet.ac.in | principal@bgscet.ac.in
Mahalakshmipuram, Bengaluru, Karnataka - 560086
FOR ADMISSIONS CONTACT - 98448 46820 / 99648 97207 / 97312 92555

|| JAI SRI GURUDEV ||
Sri Adichunchanagiri Shikshana Trust (R.)
SJC INSTITUTE OF TECHNOLOGY
(An Autonomous Institution under VTU from 2024-25) AICTE Approved,
Accredited by NBA (CSE, ISE, ECE, ME, CV, AE) & NAAC with A+ Grade, NIRF (151-300), Gold rated by QS I-Gauge
ADMISSIONS OPEN 2025-26

Undergraduate Engineering Programs - 4 years
- Computer Science & Engineering
- Information Science & Engineering
- Computer Science & Engineering (AI & ML)
- Artificial Intelligence & Data Science
- Computer Science & Design
- Electronics & Communication Engineering
- Aeronautical Engineering
- Aerospace Engineering
- Mechanical Engineering
- Civil Engineering
- Civil Engineering (Kannada)

M.Tech - 2 Years
- Computer Science & Engineering
- Digital Communication & Networking
- Structural Engineering
- Machine Design

VTU Recognized R&D Centers @ CSE, ECE, ME, CV, AE, MBA and Basic Science Departments

MBA - 2 years
- Finance
- Human Resource (HR)
- Marketing
- Dual Specialization
- Business Analytics

HIGHLIGHTS (Motto: Education, Empowerment and Environment)
» 39 Years of Legacy Providing relentless service to society, imbibing Cultural & Spiritual Values, Rural Centric, Disciplined work culture
» 64-acres Sprawling Lush Green Wi-Fi Campus State-of-the-art Infrastructure and Amenities, 1000 MBPS BW with 40+ Access Points, Hostel facility for Boys & Girls
» 54 Well Equipped and Spacious Labs 6 Seminar Halls, Auditorium, 2 Play Grounds, Gym, Indoor Stadium, Amphitheatre, BGS Conference Hall, Gallery Room, 24x7 Security with CCTV coverage
» 23000+ Strong Alumni Network | 3400+ Students | 95% Results 79 VTU Ranks | 21 Gold Medals | 85% Placements
» Blended Learning & Training Model 2022 Batch – 846+ Offers | 2023 Batch – 744+ Offers 2024 Batch – 540+ Offers | 2025 Batch – 684* Offers (Aptitude, soft-skills and Technical training)* Ongoing 86 Companies, Highest Package: 28 LPA, Avg. Package: 5.6 LPA
» 175 Faculty Experienced, Well qualified & Passionate faculty. 62 PhDs, 96 Pursuing PhD
» IQAC, Academic Audit and MoUs Quality Assurance Policies, 28 MoUs with Industries and Govt.
» 6 CoEs AI & ML, DS, IoT, VLSI & IP, Aerospace, Structures, Bosch Bosch Automation Centre, Artisan Centre Cisco Enabled Campus
» SEED and Student Clubs Student Excellence & Empowerment Development Centre-Student Centric, Promotes Activity based and Peer-to-peer learning, IEEE & CSI Student Chapters | Scholarships from GO, NGO & endowment | Sports, Cultural and Technical Fests
» BGS R&D Centre in Association with BARC, VTU, NAIN and KITS ₹5 Crore worth funded projects | 39 Patents: 6 Granted & 6 Published 3 IEEE Intl. Conferences Organized
» BGS-SJCIT Incubation Foundation (BGS-SIF)(Company under section-8) IIC, EDC, IPR Cell, Start-ups
» NCC, NSS & Community Service Culture Community Service, Blood Donation, CSR, Planting Saplings
» BGS-ARPIT Payload Designed, Developed and Launched by our students along with SpaDeX Satellite of ISRO during Dec-2024

CORE VALUES
Spiritual | Judicious
Commitment | Integrity
Trustworthy

KCET Code: E-014
COMED-K Code: E-108
PGCET Code: MBA B-265
M. Tech T-865

Chickballapur - 562 101, Karnataka
FOR ADMISSIONS CONTACT - 9731292555 / 9880143028
www.sjcit.ac.in

ವಾರಕ್ಕೆ ಒಮ್ಮೆಯೂ ಬಾರದ 'ಕಾವೇರಿ'

ಬಂಜಾರ ಬಡಾವಣೆ, ಪುಣ್ಯಭೂಮಿ ಲೇಔಟ್, ಕಲ್ಕೆರೆ ನಿವಾಸಿಗಳ ಅಳಲು

• ಗಾಣಧಾಳು ಶ್ರೀಕಂಠ

ಬೆಂಗಳೂರು: ಮನೆಗಳಿಗೆ ಸಮರ್ಪಕವಾಗಿ ಕಾವೇರಿ ನೀರು ಪೂರೈಕೆಯಾಗುತ್ತಿಲ್ಲ. ಕೆಲವು ಮನೆಗಳಿಗೆ ನಿಗದಿತ ಸಮಯದಲ್ಲೂ ನೀರು ಬಿಡುತ್ತಿಲ್ಲ. ಠೇವಣಿ ಪಾವತಿಸಿ ನೀರಿನ ಸಂಪರ್ಕ ಪಡೆದರೂ, ಹಣ ತೆತ್ತು ಟ್ಯಾಂಕರ್ ನೀರು ಖರೀದಿಸುವುದು ತಪ್ಪಿಲ್ಲ!

ಇದು ಬೆಂಗಳೂರು ಪೂರ್ವ ತಾಲ್ಲೂಕಿನ ಹೊರಮಾವು ವ್ಯಾಪ್ತಿಯ ಬಂಜಾರ ಬಡಾವಣೆ, ಕಲ್ಕೆರೆ, ಪುಣ್ಯಭೂಮಿ ಬಡಾವಣೆ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದ ನಿವಾಸಿಗಳ ಬೇಸರದ ನುಡಿಗಳು.

ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಗೊಂಡಿರುವ 110 ಹಳ್ಳಿಗಳಲ್ಲಿ ಈ ಬಡಾವಣೆಗಳಿವೆ. ಕೆಲವರು ಕಳೆದ ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಜಲಮಂಡಳಿ ನಡೆಸಿದ 'ಕಾವೇರಿ ನೀರು ಸಂಪರ್ಕ' ಅಭಿಯಾನದ ಸಂದರ್ಭದಲ್ಲಿ ಠೇವಣಿ ಪಾವತಿಸಿ ನೀರಿನ ಸಂಪರ್ಕ ಪಡೆದಿದ್ದಾರೆ. ಇನ್ನೂ ಕೆಲವರು ಒಂದೂವರೆ ತಿಂಗಳ ಹಿಂದೆ ಸಂಪರ್ಕ ಪಡೆದಿದ್ದಾರೆ. 'ಆದರೆ ಅನೇಕ ಮನೆಗಳಿಗೆ ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿಲ್ಲ' ಎಂಬುದು ನಿವಾಸಿಗಳ ದೂರು.

ಮುಖ್ಯಾಂಶಗಳು
- ಅಸಮರ್ಪಕ ಕಾವೇರಿ ನೀರು ಪೂರೈಕೆ: ನಿವಾಸಿಗಳ ದೂರು
- ಪೂರೈಕೆ ಪ್ರಮಾಣ ಕಡಿಮೆ : ತಪ್ಪದ ಟ್ಯಾಂಕರ್ ನೀರಿನ ಅವಲಂಬನೆ
- ನಿಗದಿತ ದಿನ, ಸಮಯದಲ್ಲಿ ನೀರು ಪೂರೈಸಿ

'ದೊಡ್ಡಕಂಪೇಗೌಡ ಬಡಾವಣೆ, ಪುಣ್ಯಭೂಮಿ ಲೇಔಟ್, ಬಂಜಾರ ಬಡಾವಣೆ ಮತ್ತು ಗೋಲ್ಡನ್ ಎನ್‌ಕ್ಲೇವ್‌ನಲ್ಲಿ ಒಂದಷ್ಟು ಮನೆಗಳಿಗೆ ಕಾವೇರಿ ನೀರು ವಾರಕ್ಕೆ ಒಂದು ದಿನ ಬರುತ್ತದೆ. ಕೆಲವು ರಸ್ತೆಗಳಲ್ಲಿ ಅದೂ ಇಲ್ಲ. ಪೂರೈಕೆಯಾಗುವ ನೀರಿನ ಪ್ರಮಾಣ ತುಂಬಾ ಕಡಿಮೆ. ಹೀಗಾಗಿ ಹಣ ತೆತ್ತು ಟ್ಯಾಂಕರ್ ನೀರು ಖರೀದಿಸುವುದು ತಪ್ಪಿಲ್ಲ' ಎಂದು ಕಲ್ಕೆರೆ ನಿವಾಸಿ ಕುಮಾರ್ ಹೇಳಿದರು.

'ಮನೆಗೆ ಕಾವೇರಿ ನೀರಿನ ಸಂಪರ್ಕ ಪಡೆದ ದಿನದಿಂದಲೂ ಈ ಸಮಸ್ಯೆ ಇದೆ. ಆರಂಭದಲ್ಲಂತೂ ನೀರೇ ಬರುತ್ತಿರಲಿಲ್ಲ. ದೂರು ನೀಡಿದ ನಂತರ, ವಾರಕ್ಕೊಮ್ಮೆ ಸಣ್ಣದಾಗಿ ನೀರು ಬರುತ್ತಿತ್ತು. ಈಗ 15 ದಿನಗಳಿಗೊಮ್ಮೆಯೂ ನೀರು ಬರುತ್ತಿಲ್ಲ. ಈ ಬಗ್ಗೆ ಜಲಮಂಡಳಿಯ ಅಧಿಕಾರಿಗಳಿಗೆ ದೂರು ನೀಡಿದ್ದೇವೆ. ಸಮಸ್ಯೆ ಬಗೆಹರಿದಿಲ್ಲ' ಎಂದು ಬಂಜಾರ ಬಡಾವಣೆಯ ನಿವಾಸಿ ಸೌಭಾಗ್ಯ ಸಮಸ್ಯೆಯನ್ನು ವಿವರಿಸಿದರು.

'ನಮ್ಮ ಪಕ್ಕದ ರಸ್ತೆಯ ಮನೆಗಳಿಗೆ ನೀರು ಬರುತ್ತದೆ, ನಮ್ಮ ರಸ್ತೆಯ ಮನೆಗಳಿಗೆ ಬರುವುದಿಲ್ಲ. ಕಾರಣ ಏನೆಂದೂ ಹೇಳುವುದಿಲ್ಲ. ನೀರು ಬಂದು 15–20 ದಿನಗಳಾಯಿತು. ವಾಲ್‌ಮೆನ್‌ಗಳಿಂದ ಹಿಡಿದು ಎಲ್ಲ ಹಂತದ ಸಿಬ್ಬಂದಿಗೂ ತಿಳಿಸಿದ್ದೇವೆ. ಅವರು ದೂರು ದಾಖಲಿಸಿ ಕೊಂಡಿದ್ದೇವೆ ಎನ್ನುತ್ತಾರೆ, ನೀರು ಮಾತ್ರ ಬರುವುದಿಲ್ಲ' ಎಂದು ಪುಣ್ಯಭೂಮಿ ಬಡಾವಣೆಯ ನಿವಾಸಿ ರಾಜು ದೂರಿದರು. 'ನಮಗೆ ತಿಂಗಳಿಗೆ ಎಂಟು ಟ್ಯಾಂಕರ್ ನೀರು ಬೇಕು. ಜಲಮಂಡಳಿಗೆ ಠೇವಣಿಯನ್ನೂ ಕಟ್ಟಿ, ಈ ಕಡೆ ಟ್ಯಾಂಕರ್‌ಗೂ ಹಣ ಕೊಡುವುದು ಕಷ್ಟ' ಎಂದು ಬೇಸರ ವ್ಯಕ್ತಪಡಿಸಿದರು.

'ನಮ್ಮ ಮನೆಗೆ ತಿಂಗಳಿಗೆ ಐದಾರು ಟ್ಯಾಂಕರ್‌ಗಳಷ್ಟು ನೀರು ಬೇಕು. ಕಾವೇರಿ ನೀರಿನ ಸಂಪರ್ಕ ಪಡೆದ ಮೇಲೆ ಟ್ಯಾಂಕರ್ ಬಳಕೆ ಕಡಿಮೆಯಾಗಿಲ್ಲ. ಹೀಗಿದ್ದಾಗ, ಕಾವೇರಿ ನೀರಿನ ಸಂಪರ್ಕ ಯಾಕೆ ಬೇಕು' ಎಂದು ನಿವಾಸಿಯೊಬ್ಬರು ಪ್ರಶ್ನಿಸಿದರು.

ನೀರು, ಹಣ ವ್ಯರ್ಥ

ಜಲಮಂಡಳಿಯವರು ವಾರಕ್ಕೆ ಎರಡು ದಿನ ಕಾವೇರಿ ನೀರು ಬಿಡುತ್ತೇವೆಂದು ಹೇಳುತ್ತಾರೆ. ಅದು ಯಾವ ದಿನ, ಯಾವ ಸಮಯ ಎಂದು ಸರಿಯಾಗಿ ಹೇಳುವುದಿಲ್ಲ. ಒಮ್ಮೊಮ್ಮೆ ನಾವು ಟ್ಯಾಂಕರ್ ನೀರು ಹಾಕಿಸಿಕೊಂಡ ದಿನವೇ ಕಾವೇರಿ ನೀರು ಬಿಡುತ್ತಾರೆ. ಇದರಿಂದ ನಮಗೆ ಹಣ ವ್ಯರ್ಥವಾಗುತ್ತದೆ. ನಿಗದಿತ ಸಮಯದಲ್ಲಿ ನೀರು ಪೂರೈಕೆ ಮಾಡದಿದ್ದರೆ, ನೀರು ವ್ಯರ್ಥವಾಗುವ ಸಾಧ್ಯತೆಯೂ ಹೆಚ್ಚು ಎಂದು ಬಂಜಾರ ಪಡಾವಣೆ ನಿವಾಸಿ ಇಂದಿರಾ ಬೆನಕನಹಳ್ಳಿ ಸಮಸ್ಯೆಯ ಇನ್ನೊಂದು ಮಗ್ಗಲನ್ನು ವಿವರಿಸಿದರು.

'ಸಮಸ್ಯೆ ಸರಿಪಡಿಸಲು ಕ್ರಮ'

ಬಂಜಾರ ಬಡಾವಣೆ ಸೇರಿದಂತೆ ಕೆಲವು ಕಡೆಗಳಲ್ಲಿ ಮುಖ್ಯ ಕೊಳವೆಗಳೊಂದಿಗಿನ ಸಂಪರ್ಕ ತಪ್ಪಿರುತ್ತದೆ (ಮಿಸ್ಸಿಂಗ್ ಲಿಂಕ್). ನೀರಿನ ಸೋರಿಕೆ ಸಮಸ್ಯೆಯೂ ಇದೆ. ಎಲ್ಲವನ್ನೂ ಹಂತ ಹಂತವಾಗಿ ಸರಿಪಡಿಸುತ್ತಿದ್ದೇವೆ. ನೀರು ಪೂರೈಕೆಯಲ್ಲಿ ಸಮಸ್ಯೆಯಾಗಿರುವ ಕುರಿತು ಜಲಮಂಡಳಿಗೆ ಮಾಹಿತಿ ನೀಡಿದರೆ, ತಕ್ಷಣ ಬಗೆಹರಿಸುತ್ತೇವೆ

ಜಲಮಂಡಳಿ ಅಧಿಕಾರಿಗಳು, ಬೆಂಗಳೂರು ಪೂರ್ವ ವಲಯ

ಕರ್ನಾಟಕ ರಾಜ್ಯ ಜೈವಿಕ ಇಂಧನ ಮಂಡಳಿಯ ಅಧ್ಯಕ್ಷ ಮತ್ತು ಸದಸ್ಯರ ಜತೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸಭೆ ನಡೆಸಿದರು

'ಜೈವಿಕ ಇಂಧನಕ್ಕೆ ಉತ್ತೇಜನ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೈವಿಕ ಇಂಧನ ಉತ್ಪಾದನಾ ಘಟಕಗಳಿಗೆ ತೆರಿಗೆ ರಿಯಾಯಿತಿ, ಪ್ರೋತ್ಸಾಹ ಮತ್ತು ಮೂಲಸೌಕರ್ಯಗಳನ್ನು ಒದಗಿಸಿಕೊಟ್ಟರೆ, ಐದು ವರ್ಷಗಳಲ್ಲಿ ₹1 ಲಕ್ಷ ಕೋಟಿ ಬಂಡವಾಳ ಆಕರ್ಷಿಸಬಹುದು. ಇದಕ್ಕಾಗಿ ಕ್ರಮ ತೆಗೆದುಕೊಳ್ಳಬೇಕು' ಎಂದು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

ಜೈವಿಕ ಇಂಧನ ಕಾರ್ಯಯೋಜನೆಗಳು ಮತ್ತು ನೂತನ ಜೈವಿಕ ಇಂಧನ ನೀತಿ ಕುರಿತು, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ನೇತೃತ್ವದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಂಡಳಿಯ ಅಧ್ಯಕ್ಷ ಎಸ್.ಇ. ಸುಧೀಂದ್ರ ಅವರು ಈ ವಿಷಯ ಪ್ರಸ್ತಾಪಿಸಿದರು.

'ಜೈವಿಕ ಇಂಧನ ಉತ್ಪಾದನೆ ಮತ್ತು ಬಳಕೆ ಉತ್ತೇಜಿಸಲು ಬಿಬಿಎಂಪಿ, ನಗಾರಾಭಿವೃದ್ಧಿ ಇಲಾಖೆ, ತೋಟಗಾರಿಕೆ ಇಲಾಖೆ, ಜಲಮಂಡಳಿ, ಅರಣ್ಯ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳ ಸಹಕಾರ ಅತ್ಯಗತ್ಯ. ಆದರೆ ಯಾವ ಇಲಾಖೆ ಮತ್ತು ಸಂಸ್ಥೆಗಳೂ ಸಹಕಾರ ನೀಡುತ್ತಿಲ್ಲ' ಎಂದು ಸುಧೀಂದ್ರ ಅವರು ಸಭೆಗೆ ತಿಳಿಸಿದರು.

'ಜೈವಿಕ ಡೀಸೆಲ್ ಮಾರಾಟ ಮಳಿಗೆಗಳ ಪ್ರಾರಂಭಕ್ಕೆ ನಿರಾಕ್ಷೇಪಣ ಪತ್ರ ಮತ್ತು ಪರವಾನಗಿ ನೀಡುವಲ್ಲಿ ಈ ಇಲಾಖೆಗಳು ವಿಳಂಬ ಮಾಡುತ್ತಿವೆ. ಈ ಕಾರ್ಯಗಳನ್ನು ಮಾಡಲು ಮಂಡಳಿಯನ್ನೇ ನೋಡಲ್ ಏಜೆನ್ಸಿಯಾಗಿ ನೇಮಿಸಬೇಕು' ಎಂದು ಕೋರಿದರು. ಮುಖ್ಯ ಕಾರ್ಯದರ್ಶಿಯು, 'ಈ ಬಗ್ಗೆ ಪರಿಶೀಲನೆ ನಡೆಸಿ ಕ್ರಮ ತೆಗೆದುಕೊಳ್ಳುತ್ತೇವೆ' ಎಂದರು.

20ರಂದು ಕೆಂಪೇಗೌಡ ಜಯಂತ್ಯುತ್ಸವ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಭಾರತ ಯುವ ಕೇಂದ್ರದಿಂದ ಬಾಗಲಗುಂಟೆಯ ಶ್ರೀಸಾಯಿ ಕಲ್ಯಾಣ ಮಂಟಪದಲ್ಲಿ ಇದೇ 20ರಂದು ಸಂಜೆ 5 ಗಂಟೆಗೆ ಕೆಂಪೇಗೌಡ ಜಯಂತ್ಯುತ್ಸವ ಮತ್ತು ನಾಡಪ್ರಭು ಕೆಂಪೇಗೌಡ ಪುಸ್ತಕ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

'ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದ ನಾಥ ಸ್ವಾಮೀಜಿ ಮತ್ತು ವಿಜಯನಗರ ಶಾಖಾ ಮಠದ ಪೀಠಾಧ್ಯಕ್ಷ ಸೌಮ್ಯನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುವವರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ' ಎಂದು ಕೇಂದ್ರದ ಅಧ್ಯಕ್ಷ ವಿನೋದ್ ಗೌಡ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇಕಡಾ 95ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಕೆಂಪೇಗೌಡ ಪ್ರಶಸ್ತಿ ನೀಡಿ ಅಭಿನಂದಿಸಲಾಗುವುದು. ಇದೇ ವೇಳೆ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ' ಎಂದು ಅವರು ತಿಳಿಸಿದರು.

ಬಿಎಂಆರ್‌ಸಿಎಲ್‌ಗೆ ಜಮೀನು ಹಸ್ತಾಂತರಿಸಿ: ಸುರೇಶ್ ಕುಮಾರ್

ಪ್ರಜಾವಾಣಿ ವಾರ್ತೆ

ಎಸ್‌.ಸುರೇಶ್ ಕುಮಾರ್

ಬೆಂಗಳೂರು: 'ಹೆಬ್ಬಾಳ ಬಳಿ ಬಹು ಮಾದರಿ ಸಾರಿಗೆ ಕೇಂದ್ರದ ವಿನ್ಯಾಸದಲ್ಲಿ ರಾಜಿ ಮಾಡಿಕೊಳ್ಳದೆ, 45 ಎಕರೆ ಜಮೀನನ್ನು ಬಿಎಂಆರ್‌ಸಿಎಲ್‌ಗೆ ಹಸ್ತಾಂತರಿಸಲು ಕ್ರಮ ಕೈಗೊಳ್ಳಬೇಕು' ಎಂದು ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಅವರು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಈ ಬಗ್ಗೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. 'ಬಹು ಮಾದರಿ ಸಾರಿಗೆ ಕೇಂದ್ರದ ವಿನ್ಯಾಸದಲ್ಲಿ ರಾಜಿ ಮಾಡಿಕೊಳ್ಳುವಂತೆ ಬೆಂಗಳೂರು ಮೆಟ್ರೊ ರೈಲು ನಿಗಮ ಲಿಮಿಟೆಡ್ (ಬಿಎಂಆರ್‌ಸಿಎಲ್) ಮೇಲೆ ಸ್ಥಾಪಿತ ಹಿತಾಸಕ್ತಿಗಳು ಭಾರಿ ಒತ್ತಡ ಹೇರುತ್ತಿವೆ. ಒತ್ತಡಕ್ಕೆ ಒಳಗಾದ ಬಿಎಂಆರ್‌ಸಿಎಲ್ ಈಗ ಯೋಜನೆಗೆ ತನ್ನ ಭೂಮಿಯ ಬೇಡಿಕೆಯನ್ನು 45 ಎಕರೆಗಳಿಂದ 9 ಎಕರೆಗಳಿಗೆ ಇಳಿಸಿದೆ. ಇದನ್ನು ಸರಿಹೊಂದಿಸಲು ಡಿಪೊ, ಪಾರ್ಕಿಂಗ್ ಸ್ಥಳ ಮತ್ತು ವಿಮಾನ ನಿಲ್ದಾಣ ಮೆಟ್ರೊ ಮಾರ್ಗವನ್ನು ಸಂಪರ್ಕಿಸುವ ಟ್ರೈ-ಜಂಕ್ಷನ್ ಅನ್ನು ಒಳಗೊಂಡಿರುವ ಮೆಗಾ ಹಬ್ ಸೇರಿದಂತೆ ನಾಗರಿಕಸ್ನೇಹಿ ಸೌಲಭ್ಯಗಳನ್ನು ಕೈಬಿಟ್ಟಿದೆ. ರಾಜಕೀಯ ಮತ್ತು ರಿಯಲ್ ಎಸ್ಟೇಟ್ ಲಾಬಿಗಳಿಂದ ಅಸಹನೀಯ ಒತ್ತಡಕ್ಕೆ ಮಣಿದು, ರಾಜಿ ಮಾಡಿಕೊಳ್ಳುತ್ತಿದೆ' ಎಂದು ಹೇಳಿದ್ದಾರೆ.

'2024ರ ಮಾರ್ಚ್‌ನಿಂದ 45 ಎಕರೆ ಭೂಮಿಗಾಗಿ ಬಿಎಂಆರ್‌ಸಿಎಲ್ ಮನವಿಯನ್ನು ಪರಿಶೀಲಿಸಲಾಗುತ್ತಿದೆ. ಈ ವಿಳಂಬವು ವಿಮಾನ ನಿಲ್ದಾಣ ಸಂಪರ್ಕಿಸುವ ಮೆಟ್ರೊದ ಯೋಜನೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಸ್ವಾಧೀನದಲ್ಲಿರುವ 45 ಎಕರೆ ಭೂಮಿಗೆ ಸಂಬಂಧಿಸಿದಂತೆ, ಭೂಮಾಲೀಕರಿಗೆ ಪಾವತಿಸಲು ಕೆಐಎಡಿಬಿ ನಿಗದಿಪಡಿಸಿದ ಬೆಲೆಯನ್ನು ಪಾವತಿಸಲು ಬಿಎಂಆರ್‌ಸಿಎಲ್ ಸಿದ್ಧವಾಗಿದೆ. ಖಾಸಗಿ ಹಿತಾಸಕ್ತಿಗಿಂತ ಸಾರ್ವಜನಿಕ ಹಿತಾಸಕ್ತಿಗೆ ಆದ್ಯತೆ ನೀಡಿ, ಈ ನಿರ್ಣಾಯಕ ಸ್ಥಳದಲ್ಲಿ ಮೆಟ್ರೊ ಯೋಜನೆಯ ಕೆಲಸವನ್ನು ವೇಗಗೊಳಿಸಬೇಕು' ಎಂದು ಮನವಿ ಮಾಡಿದ್ದಾರೆ.

'3 ವರ್ಷಗಳಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್ ಇರಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಿಂದ 100 ಕಿ.ಮೀ. ವ್ಯಾಪ್ತಿಯಲ್ಲಿ ಇನ್ನು ಮೂರು ವರ್ಷಗಳಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್ ಇರುವುದಿಲ್ಲ. ಲೆವೆಲ್ ಕ್ರಾಸಿಂಗ್ ಇರುವ ಕಡೆಗಳಲ್ಲಿ ರೈಲ್ವೆ ಕೆಳ ಸೇತುವೆ (ಆರ್‌ಯುಬಿ) ಅಥವಾ ಮೇಲ್ಸೇತುವೆ (ಆರ್‌ಒಬಿ) ನಿರ್ಮಿಸಲಾಗುವುದು ಎಂದು ಕೇಂದ್ರದ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ಭಾನುವಾರ ಚಲ್ಲಘಟ್ಟದಲ್ಲಿ ರೈಲ್ವೆ ಕೆಳ ಸೇತುವೆಯನ್ನು ಉದ್ಘಾಟಿಸಿ, ರಾಮೋಹಳ್ಳಿಯಲ್ಲಿ ನಿರ್ಮಾಣಗೊಳ್ಳಲಿರುವ ಕೆಳ ಸೇತುವೆಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

'ಒಂದೂವರೆ ತಿಂಗಳ ಒಳಗಾಗಿ 100 ಕಿ.ಮೀ. ವ್ಯಾಪ್ತಿಯ ಎಲ್ಲ ಲೆವೆಲ್ ಕ್ರಾಸಿಂಗ್ ಗೇಟ್‌ಗಳ ಸಮೀಕ್ಷೆ ನಡೆಸಿ ವರದಿ ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಲೆವೆಲ್ ಕ್ರಾಸಿಂಗ್ ಗೇಟ್ ಮುಕ್ತ ಹಳಿಯೇ ನಮ್ಮ ಉದ್ದೇಶವಾಗಿದೆ. ಆಗ ರೈಲು ಬರುವ ಸಮಯದಲ್ಲಿ ವಾಹನಗಳು ಸಾಲುಗಟ್ಟಿ ನಿಂತು ಕಾಯುವುದು ತಪ್ಪಲಿದೆ' ಎಂದು ಮಾಹಿತಿ ನೀಡಿದರು.

ಬೆಂಗಳೂರು ನಗರದ ಅಭಿವೃದ್ಧಿಗೆ ರೈಲ್ವೆ ಇಲಾಖೆ ಅನೇಕ ಯೋಜನೆಗಳ ಮೂಲಕ ಕೊಡುಗೆ ನೀಡುತ್ತಿದೆ. ₹1,300 ಕೋಟಿ ಅಂದಾಜು ವೆಚ್ಚದಲ್ಲಿ ಕೆಎಸ್‌ಆರ್ ರೈಲು ನಿಲ್ದಾಣ ಮೇಲ್ದರ್ಜೇಗೇರಿಸಲಾಗುವುದು. ಕಂಟೋನ್ಮೆಂಟ್ ರೈಲು ನಿಲ್ದಾಣವನ್ನು ₹484 ಕೋಟಿ ವೆಚ್ಚದಲ್ಲಿ ನವೀಕರಣ ಮಾಡಲಾಗುತ್ತಿದೆ. ಯಶವಂತಪುರ ರೈಲು ನಿಲ್ದಾಣವನ್ನು ₹377.86 ಕೋಟಿ ವೆಚ್ಚದಲ್ಲಿ ನವೀಕರಿಸಲಾಗುತ್ತಿದೆ. ತುಮಕೂರು-ಬೆಂಗಳೂರು ರೈಲು ಮಾರ್ಗದಲ್ಲಿ ನಾಲ್ಕು ಪಥ ನಿರ್ಮಿಸಲಾಗುತ್ತಿದೆ. ಉಪನಗರ ರೈಲು ಯೋಜನೆಗೆ ವೇಗ ನೀಡಲಾಗುತ್ತಿದೆ ಎಂದರು.

ರಾಮೋಹಳ್ಳಿಯಲ್ಲಿ ನಿರ್ಮಾಣಗೊಳ್ಳಲಿರುವ ರೈಲ್ವೆ ಕೆಳ ಸೇತುವೆಗೆ ವಿ. ಸೋಮಣ್ಣ, ಶೋಭಾ ಕರಂದ್ಲಾಜೆ ಭಾನುವಾರ ಶಂಕುಸ್ಥಾಪನೆ ನೆರವೇರಿಸಿದರು

ಕೇಂದ್ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, 'ಈ ಭಾಗದ ದಶಕಗಳ ಬೇಡಿಕೆಯಾದ ಚಲ್ಲಘಟ್ಟ ಕೆಳ ಸೇತುವೆಯನ್ನು ₹5.52 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ₹7.74 ಕೋಟಿ ವೆಚ್ಚದಲ್ಲಿ ರಾಮೋಹಳ್ಳಿ ರೈಲ್ವೆ ಕೆಳ ಸೇತುವೆ ಕಾಮಗಾರಿಗೆ ಶಂಕುಸ್ಥಾಪನೆ ಮಾಡಲಾಗಿದೆ. ಇದರಿಂದ ಸುರಕ್ಷಿತ ಮತ್ತು ತಡೆರಹಿತ ಸಂಚಾರಕ್ಕೆ ಅನುಕೂಲವಾಗಲಿದೆ' ಎಂದರು.

ವಿಧಾನ ಪರಿಷತ್ ಸದಸ್ಯ ಟಿ.ಎನ್. ಜವರಾಯಿಗೌಡ, ನೈರುತ್ಯ ರೈಲ್ವೆ ಬೆಂಗಳೂರು ವಿಭಾಗೀಯ ವ್ಯವಸ್ಥಾಪಕ ಅಶುತೋಷ್ ಕುಮಾರ್ ಸಿಂಗ್ ಉಪಸ್ಥಿತರಿದ್ದರು.

ವಾಹನ ದಟ್ಟಣೆಗೆ ಪರಿಹಾರ

ಆರ್.ಆರ್. ಎಂಜಿನಿಯರಿಂಗ್ ಕಾಲೇಜು ಕಡೆಯಿಂದ ರಾಮೋಹಳ್ಳಿ ಕಡೆಗೆ ಹೋಗುವ ಮಾರ್ಗದಲ್ಲಿ ಬೆಳಿಗ್ಗೆ ಮತ್ತು ಸಂಜೆಯ ಹೊತ್ತು ಸಂಚರಿಸುವ ರೈಲುಗಳ ಸಂಖ್ಯೆಯೂ ಹೆಚ್ಚು, ಇದೇ ಸಮಯದಲ್ಲಿ ವಾಹನದಟ್ಟಣೆಯೂ ಹೆಚ್ಚು. ಇದರಿಂದಾಗಿ ರೈಲು ಸಂಚರಿಸುವ ಸಮಯದಲ್ಲಿ ಎರಡೂ ಕಡೆಗಳಲ್ಲಿ ಅರ್ಧ ಕಿಲೋಮೀಟರ್‌ವರೆಗೆ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿದ್ದವು.

ಮೈಸೂರು ರಸ್ತೆಯಲ್ಲಿ ಮಾರಿಗೋಲ್ಡ್ ಸ್ಕೂಲ್ ಕಡೆಯಿಂದ ಅರ್ಚಕರ ಬಡಾವಣೆ, ಕೆಂಪೇಗೌಡ ಬಡಾವಣೆ, ಭೀಮನಕೊಪ್ಪ ಮತ್ತಿತರ ಪ್ರದೇಶಗಳಿಗೆ ಹೋಗುವಾಗಲೂ ಇದೇ ಸ್ಥಿತಿಯಾಗಿತ್ತು.

ಈಗ ಚಲ್ಲಘಟ್ಟ ಬಳಿ ಆರ್‌ಯುಬಿ ನಿರ್ಮಾಣವಾಗಿ ಚಾಲನೆ ದೊರೆತಿರುವುದರಿಂದ ವಾಹನಗಳು ಸಾಲುಗಟ್ಟಿ ನಿಲ್ಲುವುದು ತಪ್ಪಿದೆ. ಅಲ್ಲದೇ ರಾಮೋಹಳ್ಳಿಯಲ್ಲಿ ಕೂಡ ವಾಹನಗಳು ನಿಲ್ಲುವ ಬದಲು ಎರಡು ಕಿ.ಮೀ. ದೂರದಲ್ಲಿರುವ ಚಲ್ಲಘಟ್ಟ ಕೆಳಸೇತುವೆಯ ಮೂಲಕವೇ ಸಂಚರಿಸಲು ಅವಕಾಶ ಇರುವುದರಿಂದ ಅಲ್ಲಿಯೂ ದಟ್ಟಣೆ ತಪ್ಪಲಿದೆ. ರಾಮೋಹಳ್ಳಿಯಲ್ಲಿ ಆರ್‌ಯುಬಿ ನಿರ್ಮಿಸಲು ಶಂಕಸ್ಥಾಪನೆಯಾಗಿದ್ದು, ಬೇಗ ಕಾಮಗಾರಿ ಪೂರ್ಣಗೊಳಿಸಿದರೆ ವಾಹನಗಳು ಸಾಲುಗಟ್ಟಿ ನಿಲ್ಲುವ ಪ್ರಮೇಯವೇ ಇರುವುದಿಲ್ಲ ಎಂದು ಸ್ಥಳೀಯರು ತಿಳಿಸಿದ್ದಾರೆ.

ಕುಂದು ಕೊರತೆ — ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

'ಕಸ ವಿಲೇವಾರಿ ಮಾಡಿ'

ದೊಡ್ಡಕನ್ನಲ್ಲಿಯ ಗೇರ್ ಇಂಟರ್‌ನ್ಯಾಷನಲ್ ಶಾಲೆ ಬಳಿ ಇರುವ ಮುಖ್ಯರಸ್ತೆಯ ಪಕ್ಕದಲ್ಲಿರುವ ಖಾಲಿ ನಿವೇಶನವು ಕಸದಿಂದ ತುಂಬಿದೆ. ಹಲವು ದಿನಗಳಿಂದ ಇರುವ ಈ ಕಸದ ರಾಶಿಯನ್ನು ತೆರವು ಮಾಡುತ್ತಿಲ್ಲ. ಮಳೆಯ ಕಾರಣ ಕಸ ಕೊಳೆತು, ಸಾಂಕ್ರಾಮಿಕ ರೋಗಕ್ಕೆ ಕಾರಣವಾಗುವ ಸಾಧ್ಯತೆಯಿದೆ. ಆದ್ದರಿಂದ ಇಲ್ಲಿ ಕಸ ಹಾಕದಂತೆ ತಡೆಯಲು ಹಾಗೂ ಈಗ ಇರುವ ಕಸವನ್ನು ತುರ್ತಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕು.

ಅನುದೀಪ್, ಸ್ಥಳೀಯ ನಿವಾಸಿ

'ರಾಜಕಾಲುವೆ: ಹೂಳು ತೆರವುಗೊಳಿಸಿ'

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ಕಮ್ಮನಹಳ್ಳಿ ವಾರ್ಡ್ ಸಂಖ್ಯೆ 28ರ ರಾಮಸ್ವಾಮಿ ಪಾಳ್ಯದ ಜೋಡಿ ಉದ್ಯಾನ ಹಾಗೂ ಡಾ. ರಾಜ್‌ಕುಮಾರ್ ಆಟದ ಮೈದಾನ ಪಕ್ಕದಲ್ಲಿರುವ ರಾಜಕಾಲುವೆಯಲ್ಲಿ ಹೂಳು ತುಂಬಿಕೊಂಡಿದೆ. ತ್ಯಾಜ್ಯ ನೀರು ಸರಾಗವಾಗಿ ಹರಿಯುತ್ತಿಲ್ಲ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗಿದೆ. ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ರಾಜಕಾಲುವೆ ಸ್ವಚ್ಛತೆಗೆ ಆದ್ಯತೆ ನೀಡಬೇಕು.

ಬಿ. ಗೋಪಾಲ್‌ರೆಡ್ಡಿ, ಎಂ.ಎಸ್. ನಗರ

'ಸ್ಕೈವಾಕ್‌ಗೆ ಹಾಕಿರುವ ಫ್ಲೆಕ್ಸ್ ತೆಗೆಯಿರಿ'

'ಹೆಬ್ಬಾಳದ ಎಸ್ಟೀಮ್ ಮಾಲ್ ಹತ್ತಿರದ ಸ್ಕೈವಾಕ್‌ನ ಎರಡೂ ಬದಿಯಲ್ಲಿ ಫ್ಲೆಕ್ಸ್ ಹಾಕಲಾಗಿದೆ. ಸ್ಕೈವಾಕ್ ಗುಹೆಯಾಗಿ ಮಾರ್ಪಟ್ಟಿದ್ದು, ಇಲ್ಲಿಂದ ಹೋಗುವವರು ಬೇರೆಯವರೆಗೆ ಕಾಣುವುದಿಲ್ಲ. ಹಾಗಾಗಿ ಇದು ಅಕ್ರಮ ಚಟುವಟಿಕೆಗಳ ತಾಣವಾಗಿ ಮಾರ್ಪಟ್ಟಿದೆ. ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ಈ ಸ್ಕೈವಾಕ್ ಬಳಸದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ಹಾಕಿರುವ ಫ್ಲೆಕ್ಸ್ ತೆರವುಗೊಳಿಸಬೇಕು.

ಪತ್ತಂಗಿ ಎಸ್. ಮುರಳಿ, ಕುಮಾರಸ್ವಾಮಿ ಬಡಾವಣೆ

'ಪೀಣ್ಯ: ಅಗೆದ ರಸ್ತೆ ಸರಿಪಡಿಸಿ'

ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯ ಟಿವಿಎಸ್ ಕ್ರಾಸ್‌ನಿಂದ ಪೀಣ್ಯ ಪೊಲೀಸ್ ಠಾಣೆಯ ರಸ್ತೆಯವರೆಗಿನ ರಸ್ತೆ ಸಂಪೂರ್ಣವಾಗಿ ಹಾಳಾಗಿದೆ. ಈ ಮಾರ್ಗದ ಮೂಲಕ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆ ಹಾಳಾಗಿರುವ ಪರಿಣಾಮ ಸಂಚಾರ ದಟ್ಟಣೆ ಆಗುತ್ತಿದೆ. ಅಗೆದಿರುವ ಈ ರಸ್ತೆಗೆ ಎರಡು ವರ್ಷಗಳಿಂದ ಡಾಂಬರ್ ಹಾಕಿಲ್ಲ. ಈ ಬಗ್ಗೆ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಬಿಬಿಎಂಪಿ ಅಧಿಕಾರಿಗಳು ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ಚಿನ್ಮಯ್, ಪೀಣ್ಯ

'ರಸ್ತೆ ಮಧ್ಯದಲ್ಲಿ ಗುಂಡಿ'

ನಗರದ ರಾಜಾರಾಮ್ ಮೋಹನ್‌ರಾಯ್ ಮುಖ್ಯರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ರಸ್ತೆ ಹಾಳಾಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆ ಹಾಳಾಗಿರುವುದರಿಂದ ಸಂಚಾರ ದಟ್ಟಣೆ, ಅಪಘಾತಗಳು ಸಂಭವಿಸುತ್ತಿವೆ. ಒಳಚರಂಡಿ ಮೇಲಿನ ಮುಚ್ಚಳ ತೆರೆದುಕೊಂಡಿದೆ. ಏನಾದರೂ ಅನಾಹುತಗಳು ಸಂಭವಿಸುವ ಮುನ್ನ ಇದನ್ನು ಸರಿಪಡಿಸಬೇಕು. ಸಂಚಾರ ವಿಭಾಗದ ಪೊಲೀಸರು ಇಲ್ಲಿ ಬ್ಯಾರಿಕೇಡ್ ಹಾಕಿದ್ದಾರೆ.

ಶಿವಪ್ರಸಾದ್, ವಾಹನ ಸವಾರ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
This is to inform the general public that we are the sole and absolute owners of the Immovable Property being a Factory building bearing No. B-21 measuring a total built up area of about 2400 sq.ft. constructed on the Industrial Land measuring 18.20 m x 35.30 m, totally measuring 642.46 sq mtrs. forming a part of the industrial estate at Dyavasandra, Bangalore having purchased the same under a Deed of Sale dated 12.09.1997 executed in our favour by the predecessor-in-title M/s. Mansfield Engineering Industries, a registered partnership firm which has been duly registered as Document No 6078/1997-98 in Book 1, Volume 1491, Pages 162-169 with the Sub Registrar Krishan Raj Puram.
The said predecessor in title M/s. Mansfield Engineering Industries had in turn purchased the aforesaid property under a Sale Deed dated 28.07.1988 executed in its favour and registered as Document No.5378 in Book-1, Volume 2915, Pages 136 to 141 in the office of the Sub-Registrar, Bangalore South Taluk, Bangalore.
In this regard we wish to notify the general public that the original of the Sale Deed dated 28.07.1988, has either been lost or irretrievably mis placed and consequently, we are unable to trace the same in spite of our best efforts. In this regard, we have lodged a police complaint with Karnataka State Police, Bangalore City which has thereafter issued a Lost Article Report bearing No. 1692294 dated 08/07/2025.
Any person/s who are in custody of this original of the aforesaid Sale Deed may kindly return the same to us immediately.
Any person/s who have any claims on the aforesaid property on the basis of the original of aforesaid sale deed may kindly submit their claims in writing to us on or before a period of 15 days from the date of this notice.
For M/s. K.P.S. STEEL
Sd/- SATISH GUPTA,
Partner
#13, B C I Estate,
Dooravaninagar
Bangalore - 560 016.
Date: 14-07-2025

ಕ್ಲಾಸಿಫೈಡ್ಸ್
ADMISSION CORNER

VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY ®
Recognised by GOK, Affiliated to VTU Approved by AICTE
KCET CODE: E087
NAAC ACCREDITED COLLEGES ENG | LAW | DEGREE
Admissions Open 2025-26
B.E: ENGINEERING
CSE | ISE | AI&ML
ECE | MECH | CIVIL
VIVEKANANDA COLLEGES
PHARMA: D.PHARM, B.PHARM, M.PHARM
LAW: 3 YEAR LL.B, 5 YR B.A LL.B, 5 YR B.COM LL.B
DEGREE: B.COM | B.A, B.SC | B.ED, B.COM - BDA
MANAGEMENT: BCA, BBA, MBA
95139 53482 | 7625013637
R & D Centers | Excellent Placement | 4.4 Lac Avg. P.A CTC | Skill Lab | Campus Hostel
VKIT Campus: Gudimavu, Kumbalagodu, Off Mysore Road, Bengaluru - 560 074. Email ID: principal@vitb.ac.in Web: https://vitb.ac.in
JES Main Campus: Dr.Rajkumar Road, Next to Orion Mall, Rajajinagar II Stage, Bengaluru - 560 055. Email ID : admission@jes-edu.in Web : https://jes-edu.in

REAL ESTATE SELLING
House
Jeevanbimanagar
HOUSE FOR Sale LIC Colony(Brokers Excuse) 9666640302

BUILDERS ESSENTIAL
Water Proofing
LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUSINESS
Business to Business
Finance
REQUIRED 5 Lakhs Finance please contact: 7795063380.
Business Offers
Finance
MSME LOANS Available for Any Startup Companies,Any Existing Companies NOTE:Also one Approved Loan Available Contact-7204995189

JOB OPPORTUNITIES
Accounts & Finance
WANTED MALE/ Female Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

PERSONAL
Change of Name
I, PALANI, residing at U-95, 2nd Main, Swatantra Nagar, Sriramapura, Bangalore 560021, hereby declare that I have changed my name as PALANI SRINIVAS for all purposes vide affidavit dated 03-07-2025 sworn before Notary Manohar Jeerige, Bangalore.

DH Classifieds More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9845114560 | +91 9886213331 | +91 9731810277

‘ಪ್ರಾಜೆಕ್ಟ್ ಮೆಜೆಸ್ಟಿಕ್’ ಕನಸಿಗೆ ರೆಕ್ಕೆ

ತಾಂತ್ರಿಕ ಸಲಹೆಗಾರರ ನೇಮಕಕ್ಕೆ ನಿರ್ಧಾರ • ಬಸ್ ನಿಲ್ದಾಣಗಳ ಪುನರ್ ಅಭಿವೃದ್ಧಿ

• ಬಾಲಕೃಷ್ಣಪಿ.ಎಚ್.

ಮುಖ್ಯಾಂಶಗಳು

- ಡಿಪಿಆರ್ ಬಳಿಕ ಟೆಂಡರ್ ಆಹ್ವಾನ
- ಅಂತರ್ಜಾಲ ಸಂಪರ್ಕ, ಸ್ಮಾರ್ಟ್ ಟಿಕೆಟ್‌ಗೆ ಅವಕಾಶ
- ಅಂಗವಿಕಲರಿಗೆ ಅನುಕೂಲವಾಗುವ ವ್ಯವಸ್ಥೆ

ಬೆಂಗಳೂರು: ಬಸ್ ನಿಲ್ದಾಣಗಳ ಪುನರ್ ಅಭಿವೃದ್ಧಿ, ಸಾರಿಗೆ ಹಬ್ ಮತ್ತು ವಾಣಿಜ್ಯ ಸಂಕೀರ್ಣ ನಿರ್ಮಿಸುವ ‘ಪ್ರಾಜೆಕ್ಟ್ ಮೆಜೆಸ್ಟಿಕ್’ ಯೋಜನೆಗಾಗಿ ತಾಂತ್ರಿಕ ಸಲಹೆಗಾರರನ್ನು ನೇಮಿಸಿಕೊಳ್ಳಲು ಕೆಎಸ್‌ಆರ್‌ಟಿಸಿ ನಿರ್ಧರಿಸಿದೆ. ಅವರಿಂದ ಸಲಹೆ ಪಡೆದ ಬಳಿಕ ಯೋಜನೆಯ ನೀಲನಕ್ಷೆ ತಯಾರಿ, ಟೆಂಡರ್ ಪ್ರಕ್ರಿಯೆಗಳು ನಡೆಯಲಿವೆ.

ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ(ಪಿಪಿಪಿ) ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ‘ಪ್ರಾಜೆಕ್ಟ್ ಬೆಂಗಳೂರು’ ನಿರ್ಮಾಣಗೊಳ್ಳಲಿದ್ದು, ನಗರ ಸಾರಿಗೆ, ಅಂತರಜಿಲ್ಲಾ ಸಾರಿಗೆ, ಮೆಟ್ರೊ, ರೈಲು, ಉಪನಗರ ರೈಲುಗಳ ನಡುವೆ ಉತ್ತಮ ಸಂಪರ್ಕ ಕಲ್ಪಿಸುವ ಹಬ್ ಇದಾಗಲಿದೆ.

ಕೆಎಸ್‌ಆರ್‌ಟಿಸಿಗೆ ಸೇರಿದ 40 ಎಕರೆ ಜಮೀನು ಇಲ್ಲಿ ಇತ್ತು. ಅದರಲ್ಲಿ ಐದು ಎಕರೆಯನ್ನು ‘ನಮ್ಮ ಮೆಟ್ರೊ’ಗೆ ನೀಡಲಾಗಿದೆ. ಉಳಿದ 35 ಎಕರೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಬಿಎಂಟಿಸಿ ನಿಲ್ದಾಣ, ಕೆಎಸ್‌ಆರ್‌ಟಿಸಿ ಕಾರ್ಯಾಗಾರ, ಡಿಪೊಗಳಿವೆ. ಈ 35 ಎಕರೆಯಲ್ಲಿ ಹಬ್ ನಿರ್ಮಿಸಲು ಯೋಜಿಸಲಾಗಿದೆ.

ಪ್ರತಿದಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ 3,000 ಬಸ್‌ಗಳು ಬಂದು ಹೋಗುತ್ತವೆ. ಬಿಎಂಟಿಸಿ ಬಸ್ ನಿಲ್ದಾಣಕ್ಕೆ ಸುಮಾರು 10,000 ಬಸ್‌ಗಳು ಬಂದು ಹೋಗುತ್ತವೆ. ಅದಕ್ಕೆ ಸರಿಯಾಗಿ ನಿಲ್ದಾಣದ ಅಭಿವೃದ್ಧಿ, ಪಕ್ಕದಲ್ಲೇ ಇರುವ ಮೆಟ್ರೊ, ರೈಲು ನಿಲ್ದಾಣಗಳನ್ನು ಸುಲಭವಾಗಿ ಸಂಪರ್ಕಿಸುವ ರೀತಿಯಲ್ಲಿ ಯೋಜನೆ ಇರಲಿದೆ. ಸಂಪರ್ಕವೂ ಸುಲಭವಾಗುವಂತೆ ಮಾಡಲಾಗುವುದು ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ನೇಮಕವಾಗಲಿರುವ ತಾಂತ್ರಿಕ ಸಲಹೆಗಾರರು ಸ್ಥಳ ಪರಿಶೀಲನೆ, ಸಂಚಾರದ ಚಟುವಟಿಕೆ ವಿಶ್ಲೇಷಣೆ, ಮಾರುಕಟ್ಟೆ ಅಗತ್ಯದ ಮುನ್ಸೂಚನೆ, ಪರಿಸರ ಹಾಗೂ ಸಾಮಾಜಿಕ ಪರಿಣಾಮಗಳ ಅಧ್ಯಯನದೊಂದಿಗೆ ಕಾರ್ಯಸಾಧ್ಯತಾ ವರದಿಯನ್ನು (ಡಿಪಿಆರ್) ಸಿದ್ಧಪಡಿಸಲಿದ್ದಾರೆ. ವಿನ್ಯಾಸ, ಅಂದಾಜು ವೆಚ್ಚಗಳೆಲ್ಲ ಅದರಲ್ಲಿ ಇರಲಿವೆ ಎಂದು ಮಾಹಿತಿ ನೀಡಿದರು.

ಶಾಪಿಂಗ್ ಕಾಂಪ್ಲೆಕ್ಸ್, ಆಹಾರ ಮಳಿಗೆಗಳು, ಕಚೇರಿ ಪ್ರದೇಶ ಒಳಗೊಂಡಂತೆ ವಾಣಿಜ್ಯ ವ್ಯವಸ್ಥೆ ಇರಲಿವೆ. ಕೆಎಸ್‌ಆರ್‌ಟಿಸಿಯ ಮೂರು ಟರ್ಮಿನಲ್‌ಗಳಲ್ಲಿ ಅಂಗವಿಕಲರು, ವೃದ್ಧರಾದಿಯಾಗಿ ಎಲ್ಲರಿಗೂ ಓಡಾಡಲು ಅನುಕೂಲವಾಗುವ ವ್ಯವಸ್ಥೆಗಳು ಇರಲಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಳೆದ ಬಜೆಟ್‌ನಲ್ಲಿ ಈ ಯೋಜನೆಯನ್ನು ಪ್ರಸ್ತಾಪಿಸಿದ್ದರು. ಈ ಯೋಜನೆ ಕಾರ್ಯರೂಪಗೊಳಿಸಲು ಪ್ರಕ್ರಿಯೆಗಳು ಈಗ ಆರಂಭವಾಗಿವೆ.

ಮೆಜೆಸ್ಟಿಕ್‌ನಲ್ಲಿರುವ ಕೆಂಪೇಗೌಡ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ (ಸಾಂದರ್ಭಿಕ ಚಿತ್ರ)

ಪುನರ್ ನಿರ್ಮಾಣ ಅನಿವಾರ್ಯ

ರಾಮಲಿಂಗಾರೆಡ್ಡಿ

ಮೆಜೆಸ್ಟಿಕ್‌ನಲ್ಲಿ ಐವತ್ತು ವರ್ಷಗಳ ಹಿಂದೆ ನಿಲ್ದಾಣ ನಿರ್ಮಾಣವಾಗಿತ್ತು. ಈಗ ದಟ್ಟಣೆ ಹೆಚ್ಚಾಗಿದೆ. ಅದಕ್ಕೆ ತಕ್ಕಂತೆ ಮೇಲ್ದರ್ಜೆಗೆ ಏರಿಸುವುದು ಅನಿವಾರ್ಯ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

‘ಅದಕ್ಕಾಗಿ ತಾಂತ್ರಿಕ ಸಲಹೆಗಾರರನ್ನು ನೇಮಿಸಿಕೊಳ್ಳಲು ಟೆಂಡರ್ ಕರೆಯಲಾಗಿದೆ. ಮೆಜೆಸ್ಟಿಕ್‌ನಲ್ಲಿ ಏನೆಲ್ಲ ಇರಬೇಕು ಎಂಬುದನ್ನು ನಾವು ಅವರಿಗೆ ತಿಳಿಸುತ್ತೇವೆ. ಯಾವ ರೀತಿ ಇರಬೇಕು ಎಂಬುದರ ವಿನ್ಯಾಸ, ಸಲಹೆಗಳನ್ನು ಅವರು ನೀಡಲಿದ್ದಾರೆ. ಮೂರ್ನಾಲ್ಕು ತಿಂಗಳಲ್ಲಿ ವಿಸ್ತೃತ ಯೋಜನಾ ವರದಿಯನ್ನು ತಯಾರು ಮಾಡಲಾಗುವುದು. ಬಳಿಕ ಕಾಮಗಾರಿಗೆ ಸಂಬಂಧಿಸಿದ ಟೆಂಡರ್ ಕರೆಯಲಾಗುವುದು’ ಎಂದು ಅವರು ಮಾಹಿತಿ ನೀಡಿದರು.

ಲಂಡನ್: ಸಣ್ಣ ವಿಮಾನ ಪತನ

ಲಂಡನ್ (ಎಪಿ): ಇಲ್ಲಿಂದ 72 ಕಿ.ಮೀ ದೂರದಲ್ಲಿರುವ ‘ಲಂಡನ್ ಸೌತ್‌ಎಂಡ್’ ವಿಮಾನ ನಿಲ್ದಾಣದಲ್ಲಿ ಸಣ್ಣ ವಿಮಾನವೊಂದು ಭಾನುವಾರ ಅಪಘಾತಕ್ಕೀಡಾಗಿದೆ.

ವಿಮಾನ ಎಲ್ಲಿಗೆ ಹೊರಟಿತ್ತು, ಅದರಲ್ಲಿ ಎಷ್ಟು ಪ್ರಯಾಣಿಕರು ಮತ್ತು ಸಿಬ್ಬಂದಿ ಇದ್ದರು ಎಂಬುದರ ವಿವರಗಳು ತಕ್ಷಣಕ್ಕೆ ತಿಳಿದುಬಂದಿಲ್ಲ. ಅಪಘಾತ ಸಂಭವಿಸಿದ ಸ್ಥಳಕ್ಕೆ ತುರ್ತು ಸೇವಾ ತಂಡಗಳು ಧಾವಿಸಿ, ರಕ್ಷಣಾ ಕಾರ್ಯದಲ್ಲಿ ನಿರತವಾಗಿದ್ದವು.

ಅಪಘಾತಕ್ಕೀಡಾದ ವಿಮಾನವು ಸುಮಾರು 12 ಮೀಟರ್ (39 ಅಡಿ) ಉದ್ದವಿತ್ತು ಎಂದು ಮೂಲಗಳು ತಿಳಿಸಿವೆ.

ಪ್ರತ್ಯಕ್ಷದರ್ಶಿ ಜಾನ್ ಜಾನ್ಸನ್ ಅವರ ಪ್ರಕಾರ, ‘ವಿಮಾನವು ಮೊದಲು ತಲೆಕೆಳಗಾಗಿ ನೆಲಕ್ಕೆ ಅಪ್ಪಳಿಸಿತು. ಬಳಿಕ ಅಲ್ಲಿಂದ ದೊಡ್ಡ ಬೆಂಕಿಯ ಉಂಡೆ ಕಂಡುಬಂದಿತು’ ಎಂದಿದ್ದಾರೆ.

‘ವಿಮಾನವು ಟೇಕ್‌ಆಫ್ ಆದ ಮೂರರಿಂದ ನಾಲ್ಕು ಸೆಕೆಂಡುಗಳಲ್ಲಿ ಎಡ ಭಾಗಕ್ಕೆ ಬಾಗಿತು. ನಂತರ ಕೆಲ ಸೆಕೆಂಡುಗಳಲ್ಲಿಯೇ ತಲೆಕೆಳಗಾಗಿ ನೆಲಕ್ಕೆ ಅಪ್ಪಳಿಸಿತು’ ಎಂದು ಅವರು ವಿವರಿಸಿದ್ದಾರೆ.

ವಿಧಾನಸೌಧದ ಮುಂದೆ ಮಳೆ ನೀರಿನಲ್ಲಿ ಯುವತಿಯರ ಆಟ ಗಮನಸೆಳೆಯಿತು (ಎಡಚಿತ್ರ) ವಿಧಾನ ಸೌಧದ ಮುಂದೆ ಯುವಕನೊಬ್ಬ ಜಿಗಿದು ಸಂಭ್ರಮಿಸಿದ್ದು ಕಂಡು ಬಂತು ಚಿತ್ರ: ಕಿಶೋರ್ ಕುಮಾರ್ ಬೋಳಾರ್

ನಗರದ ಹಲವೆಡೆ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಭಾನುವಾರ ಸಂಜೆ ಬಿರುಸಿನ ಮಳೆ ಆಯಿತು. ಒಂದು ಕಡೆ ಮರ, ಎರಡು ಕಡೆ ಮರದ ರೆಂಬೆಗಳು ಮುರಿದು ಬಿದ್ದಿವೆ.

ಚಾಮರಾಜನಗರದ 7ನೇ ಅಡ್ಡ ರಸ್ತೆಯಲ್ಲಿ ಮರ ಬಿದ್ದು ಸಂಚಾರಕ್ಕೆ ತೊಡಕುಂಟಾಯಿತು. ಇಂದಿರಾನಗರ ಮತ್ತು ಜಯನಗರ ನಾಲ್ಕನೇ 1ಇ ಬ್ಲಾಕ್‌ನಲ್ಲಿ ಮರದ ಕೊಂಬೆ ರಸ್ತೆ ಮೇಲೆ ಬಿದ್ದಿದ್ದರಿಂದ ಕೆಲಹೊತ್ತು ರಸ್ತೆ ಬಂದ್ ಆಯಿತು.

ಮಣಿಪಾಲ್ ಸೆಂಟರ್ ಜಂಕ್ಷನ್ ಬಳಿ ನೀರು ನಿಂತಿದ್ದರಿಂದ ಕಬ್ಬನ್ ರಸ್ತೆ ಕಡೆಗೆ ಸಂಚರಿಸುವ ವಾಹನಗಳಿಗೆ ಅಡ್ಡಿಯಾಯಿತು. ಪ್ಯಾಲೆಸ್ ಕ್ರಾಸ್‌ನಿಂದ ಪಿ.ಜಿ. ಹಳ್ಳಿ ಕಡೆಗೆ ಹೋಗುವ ರಸ್ತೆ, ಕೆಳ ಸೇತುವೆಯಿಂದ ಜಯಮಹಲ್ ಕಡೆಗಿನ ರಸ್ತೆ, ಖೋಡೆ ವೃತ್ತದ ಕೆಳಸೇತುವೆ, ವಿಂಡ್ಸರ್ ಮ್ಯಾನರ್ ಬಳಿ ರಸ್ತೆಗಳಲ್ಲಿಯೇ ನೀರು ನಿಂತಿದ್ದರಿಂದ ವಾಹನಗಳು ನಿಧಾನಗತಿಯಲ್ಲಿ ಸಾಗಿದವು.

ಮಳೆ ಪ್ರಮಾಣ: ಎಚ್‌ಎಎಲ್ ವಿಮಾನ ನಿಲ್ದಾಣ 3.2 ಸೆಂ.ಮೀ., ಬಿಳೇಕಹಳ್ಳಿ 2.5 ಸೆಂ.ಮೀ., ಸಂಪಂಗಿರಾಮನಗರ 2.1 ಸೆಂ.ಮೀ., ಕಾಟನ್ ಪೇಟೆ 2 ಸೆಂ.ಮೀ., ಮಾರತ್‌ಹಳ್ಳಿ 1.6 ಸೆಂ.ಮೀ., ಹೆರೋಹಳ್ಳಿ 1.6 ಸೆಂ.ಮೀ., ಹಂಪಿನಗರ 1.6 ಸೆಂ.ಮೀ., ವನ್ನಾರ್‌ಪೇಟೆ 1.5 ಸೆಂ.ಮೀ., ಚಾಮರಾಜಪೇಟೆ 1.4 ಸೆಂ.ಮೀ., ಮಾರುತಿ ಮಂದಿರ 1.3 ಸೆಂ.ಮೀ., ಬೊಮ್ಮನಹಳ್ಳಿ 1.2 ಸೆಂ.ಮೀ., ದಯಾನಂದ ನಗರ 1.2 ಸೆಂ.ಮೀ., ನಾಗಪುರ 1.2 ಸೆಂ.ಮೀ., ಅರಕೆರೆ 1.1 ಸೆಂ.ಮೀ., ಕೊಟ್ಟಿಗೆಪಾಳ್ಯ 1.1 ಸೆಂ.ಮೀ., ವಿಶ್ವೇಶ್ವರಪುರ 1.1 ಸೆಂ.ಮೀ., ಹಗದೂರು 1 ಸೆಂ.ಮೀ., ರಾಜಾಜಿನಗರದಲ್ಲಿ 1 ಸೆಂ.ಮೀ. ಮಳೆ ದಾಖಲಾಗಿದೆ.

ರೈಲು: ಎಲ್ಲ ಕೋಚ್‌ಗಳಿಗೂ ಕ್ಯಾಮೆರಾ ಅಳವಡಿಕೆಗೆ ಆದೇಶ

ನವದೆಹಲಿ (ಪಿಟಿಐ): ಪ್ರಯಾಣಿಕರ ಸುರಕ್ಷತೆಯನ್ನು ಮತ್ತಷ್ಟು ಹೆಚ್ಚಿಸುವ ಉದ್ದೇಶದಿಂದ ರೈಲ್ವೆಯ ಎಲ್ಲ 74,000 ಬೋಗಿಗಳು ಮತ್ತು ಲೋಕೋಪೈಲಟ್‌ಗಳು ಇರುವಂತಹ 15,000 ಸ್ಥಳಗಳಲ್ಲಿ (ಲೋಕೋಮೋಟಿವ್) ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಆದೇಶಿಸಿದ್ದಾರೆ.

ರೈಲ್ವೆ ಪ್ರಯಾಣಿಕರ ಗೋಪ್ಯತೆ ಕಾಪಾಡಿಕೊಳ್ಳುವ ಉದ್ದೇಶದಿಂದ ಬೋಗಿಗಳ ಬಾಗಿಲು ಬಳಿಯ ಸಾಮಾನ್ಯ ಸಂಚಾರ ಪ್ರದೇಶದಲ್ಲಿ ಕ್ಯಾಮೆರಾಗಳನ್ನು ಅಳವಡಿಸಲಾಗುವುದು ಎಂದು ರೈಲ್ವೆ ಪ್ರಕಟಣೆ ತಿಳಿಸಿದೆ.

ಪ್ರತಿ ರೈಲ್ವೆ ಕೋಚ್‌ನಲ್ಲಿ ನಾಲ್ಕು ಉತ್ತಮ ಗುಣಮಟ್ಟದ ಸಿ.ಸಿ.ಟಿ.ವಿ ಕ್ಯಾಮೆರಾಗಳು (ಪ್ರತಿ ಪ್ರವೇಶ ದ್ವಾರದ ಬಳಿ ಎರಡು) ಹಾಗೂ ಪ್ರತಿ ‘ಲೋಕೋಮೋಟಿವ್’ಗಳಲ್ಲಿ ಅದೇ ರೀತಿಯ ಆರು ಕ್ಯಾಮೆರಾಗಳನ್ನು ಅಳವಡಿಸಲಾಗುವುದು. ಇದು ‘ಲೋಕೋಮೋಟಿವ್’ನ ಮುಂಭಾಗ, ಹಿಂಭಾಗ ಮತ್ತು ಎರಡೂ ಬದಿಗಳ ದೃಶ್ಯಗಳನ್ನು ಸೆರೆಹಿಡಿಯುತ್ತದೆ ಎಂದು ಅದು ಹೇಳಿದೆ.

ಪ್ರಯಾಣಿಕರ ಸುರಕ್ಷತೆಯನ್ನು ಸುಧಾರಿಸುವುದರ ಜತೆಗೆ ನಿಲ್ದಾಣಗಳು ಮತ್ತು ರೈಲುಗಳ ಸುತ್ತಮುತ್ತ ಕಿಡಿಗೇಡಿಗಳು ದುಷ್ಕೃತ್ಯ ನಡೆಸುವುದನ್ನು ತಡೆಯಲು ಈ ಕ್ರಮ ನೆರವಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ದಿನೇಶ್ ಗೂಳಿಗೌಡ ಅವರನ್ನು ಸನ್ಮಾನಿಸಲಾಯಿತು. ಸವಿಗಾನಲಹರಿ ಸುಗಮ ಸಂಗೀತ ಶಾಲೆಯ ಅಧ್ಯಕ್ಷ ಟಿ. ರಾಜಾರಾಮ್, ರಂಗಕರ್ಮಿ ಶ್ರೀನಿವಾಸಪ್ರಭು, ಎಚ್‌ಎಸ್ ವೆಂಕಟೇಶಮೂರ್ತಿ ಅವರ ಹಿರಿಯ ಪುತ್ರ ಎಚ್‌ವಿ. ಸಂಜಯ್ ಉಪಸ್ಥಿತರಿದ್ದರು

‘ಎಚ್‌ಎಸ್‌ವಿ ಹೆಸರಲ್ಲಿ ದತ್ತಿನಿಧಿ ಸ್ಥಾಪನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅವರು ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಕನ್ನಡ ಸೇವೆ ಮುಂದಿನ ಪೀಳಿಗೆಗೆ ದಾರಿ ದೀಪವಾಗಬೇಕು. ಅವರ ಹೆಸರು ಸಾಹಿತ್ಯ ಲೋಕದಲ್ಲಿ ಚಿರಸ್ಥಾಯಿಯಾಗಿ ಉಳಿಯಬೇಕು ಎಂಬ ಉದ್ದೇಶದಿಂದ ನನ್ನ ಒಂದು ತಿಂಗಳ ವೇತನದಲ್ಲಿ ಎಚ್‌ಎಸ್‌ವಿ ಹೆಸರಿನ ದತ್ತಿನಿಧಿ ಸ್ಥಾಪಿಸಲಾಗುವುದು’ ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಘೋಷಿಸಿದರು.

ಸವಿಗಾನಲಹರಿ ಸುಗಮ ಸಂಗೀತ ಶಾಲೆ ಭಾನುವಾರ ಆಯೋಜಿಸಿದ್ದ ಎಚ್.ಎಸ್. ವೆಂಕಟೇಶಮೂರ್ತಿ ಅವರಿಗೆ ಗೀತ ನಮನ ಮತ್ತು ನುಡಿ ನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸವಿಗಾನಲಹರಿ ಸುಗಮಸಂಗೀತ ಶಾಲೆ ಪ್ರತಿವರ್ಷ ಎಚ್‌ಎಸ್‌ವಿ ಅವರ ದತ್ತಿನಿಧಿಯ ಹೆಸರಿನಲ್ಲಿ ಕಾರ್ಯಕ್ರಮ ಆಯೋಜಿಸುವ ಮೂಲಕ ಯುವ ಸಾಹಿತಿಗಳು, ಗಾಯಕರು ಹಾಗೂ ಕಲಾವಿದರನ್ನು ಪ್ರೋತ್ಸಾಹಿಸಬೇಕು. ಎಚ್‌ಎಸ್‌ವಿ ಅವರು ಸಾಹಿತ್ಯ ಕ್ಷೇತ್ರದ ಜೀವನದಿಯಾಗಿದ್ದರು. ಎಚ್‌ಎಸ್‌ವಿ ಸಾಹಿತ್ಯದಲ್ಲಿ ಜಾನಪದದ ಮೆರಗು, ಹಳ್ಳಿಯ ಸೊಗಡಿದೆ’ ಎಂದು ಸ್ಮರಿಸಿದರು.

ಇದೇ ಸಂದರ್ಭದಲ್ಲಿ ಮಂಗಳಾ ರವಿ, ರಾಘವೇಂದ್ರ ಬೀಜಾಡಿ, ವರ್ಷಾ ಸುರೇಶ್, ವೆಂಕಟೇಶಮೂರ್ತಿ ಶಿರೂರ, ರವಿ ಕೃಷ್ಣಮೂರ್ತಿ, ತನ್ವಿ ಡಿ. ಗೌಡ ಮತ್ತು ಸವಿಗಾನಲಹರಿ ಸುಗಮಸಂಗೀತ ಶಾಲೆಯ ವಿದ್ಯಾರ್ಥಿಗಳು ಎಚ್.ಎಸ್. ವೆಂಕಟೇಶಮೂರ್ತಿ ಅವರ ವಿರಚಿತ ಗೀತೆಗಳ ಗಾಯನ ಪ್ರಸ್ತುತಪಡಿಸಿದರು.

‘ಮಾತಿನಿಂದ ದೂರ ಸರಿವುದು ಮೌನವಲ್ಲ’

ಬೆಂಗಳೂರು: ಮಾತಿನಿಂದ ದೂರ ಸರಿಯುವುದು ಮೌನವಲ್ಲ. ಎಷ್ಟು ಬೇಕೋ ಅಷ್ಟೇ ಮಾತನಾಡಿ ಸುಮ್ಮನಾಗುವುದು ಮೌನ. ಆಗ ಮಾತಿಗೂ, ಮೌನಕ್ಕೂ ಅರ್ಥ ಬರುತ್ತದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ವಿ. ಶ್ರೀಶಾನಂದ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಚಿಕೇನಕೊಪ್ಪದ ಚನ್ನವೀರ ಶರಣರ 30ನೇ ಪುಣ್ಯಸ್ಮರಣೋತ್ಸವದಲ್ಲಿ ಮಾತನಾಡಿದ ಅವರು, ಅಗತ್ಯಕ್ಕಿಂತ ಅಧಿಕ ಮಾತನಾಡುವುದನ್ನು ಮಾತು ಅನ್ನುವುದಿಲ್ಲ. ಹರಟೆ ಅದು. ಮಾತು ಮತ್ತು ಮೌನಕ್ಕೆ ಚನ್ನವೀರ ಶರಣರು ಗೌರವ ತಂದುಕೊಟ್ಟಿದ್ದರು ಎಂದು ನೆನಪು ಮಾಡಿಕೊಂಡರು.

ಫೌಂಡೇಷನ್ ಫಾರ್ ಇಂಡಿಯನ್ ಹಿಸ್ಟಾರಿಕಲ್ ಆ್ಯಂಡ್ ಕಲ್ಚರಲ್ ರಿಸರ್ಚ್ ನಗರದಲ್ಲಿ ಆಯೋಜಿಸಿದ್ದ ‘ಯುವ ಪುಸ್ತಕ ಸರಣಿ’ ಕಾರ್ಯಕ್ರಮದಲ್ಲಿ ಸುಧಾ ಮೂರ್ತಿ ಹಾಗೂ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪರಸ್ಪರ ಶುಭಾಶಯ ಹಂಚಿಕೊಂಡರು. ವಿಕ್ರಮ್ ಸಂಪತ್ ಭಾಗವಹಿಸಿದ್ದರು

ಪ್ರಜಾವಾಣಿ ಚಿತ್ರ

‘ಯುವ ಪುಸ್ತಕ ಸರಣಿ’ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಇತಿಹಾಸ ಮತ್ತು ಸಾಂಸ್ಕೃತಿಕ ಸಂಶೋಧನಾ ಪ್ರತಿಷ್ಠಾನ (ಎಫ್‌ಐಎಚ್‌ಸಿಆರ್) ಹಾಗೂ ಓಲಾ ಫೌಂಡೇಷನ್ ಆಶ್ರಯದಲ್ಲಿ ‘ಯುವ ಪುಸ್ತಕ ಸರಣಿ’ಗೆ ಹೆಬ್ಬಾಳದ ಕೋರ್ಟ್‌ಯಾರ್ಡ್ ಮ್ಯಾರಿಯಟ್‌ನಲ್ಲಿ ಶನಿವಾರ ಚಾಲನೆ ನೀಡಲಾಯಿತು.

ಪ್ರಾಚೀನ ನಾಗರಿಕತೆಗಳಿಂದ ಆರಂಭಿಸಿ ಮಧ್ಯಕಾಲೀನ ರಾಜವಂಶಗಳು, ನಾಯಕರು, ಹಾಗೂ ಸಾಂಸ್ಕೃತಿಕ ಘಟ್ಟಗಳವರೆಗೆ ವಿಷಯಗಳನ್ನು ಸುಂದರ ಚಿತ್ರಣದೊಂದಿಗೆ ಮಕ್ಕಳಿಗೆ ಇತಿಹಾಸವನ್ನು ತಿಳಿಸುವ ಸರಣಿ ಇದಾಗಿದೆ. ಪುಸ್ತಕಗಳು ಏಕಕಾಲದಲ್ಲಿ ಕನ್ನಡ, ಹಿಂದಿ, ತಮಿಳು, ತೆಲುಗು, ಮಲಯಾಳ, ಮರಾಠಿ ಹಾಗೂ ಆಂಗ್ಲದಲ್ಲಿ ಪ್ರಕಟವಾಗಿವೆ.

ಕಾರ್ಯಕ್ರಮದಲ್ಲಿ ರಾಜ್ಯಸಭೆ ಸದಸ್ಯೆ ಸುಧಾಮೂರ್ತಿ ಮಾತನಾಡಿ, ‘ಇತಿಹಾಸವೇ ನಮ್ಮ ಭಾಷೆ, ನಮ್ಮ ಸಂಸ್ಕೃತಿ. ಮಾತ್ರವಲ್ಲ ನಮ್ಮ ನಡವಳಿಕೆಯ ಬೆನ್ನೆಲುಬು. ಮಕ್ಕಳಿಗೆ ಇತಿಹಾಸವನ್ನು ಸರಳವಾಗಿ, ಕಥೆಗಳ ಮೂಲಕ ಕಲಿಸಲು ಇಂತಹ ಪುಸ್ತಕಗಳು ಬಹಳ ಅವಶ್ಯಕ’ ಎಂದು ಹೇಳಿದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ‘ಮಕ್ಕಳಲ್ಲಿ ಇತಿಹಾಸದ ಬಗ್ಗೆ ಕುತೂಹಲ ಬೆಳೆಸುವ ಇಂತಹ ಯೋಜನೆಗಳು, ದೇಶದ ಭವಿಷ್ಯವನ್ನು ಉತ್ತಮಗೊಳಿಸಲಿದೆ’ ಎಂದರು.

ಸದ್ಗುರು ಮಧುಸೂದನ್ ಸಾಯಿ, ಲೇಖಕ ವಿಕ್ರಮ್ ಸಂಪತ್ ಉಪಸ್ಥಿತರಿದ್ದರು.

ಬಾನು ಮುಷ್ತಾಕ್, ಶಶಿಕಾಂತಗೆ ಮಹಾಶೈವ ಧರ್ಮಪೀಠದ ಪ್ರಶಸ್ತಿ

ದೇವದುರ್ಗ (ರಾಯಚೂರು ಜಿಲ್ಲೆ): ಗಬ್ಬೂರಿನ ಮಹಾಶೈವ ಧರ್ಮ ಪೀಠದ 2025ನೇ ಸಾಲಿನ ಮಹಾತಪಸ್ವಿ 'ಶ್ರೀ ಕುಮಾರಸ್ವಾಮಿ ಸಾಹಿತ್ಯ ರತ್ನ' ಪ್ರಶಸ್ತಿಗೆ ಹಿರಿಯ ಕಥೆಗಾರ್ತಿ ಬಾನು ಮುಷ್ತಾಕ್ ಮತ್ತು ಬೀದರ್‌ನ 'ಪ್ರಜಾವಾಣಿ' ವರದಿಗಾರ ಶಶಿಕಾಂತ ಶೆಂಬೆಳ್ಳಿ ಅವರನ್ನು 'ಶ್ರೀಕುಮಾರ ಸ್ವಾಮಿ ಪತ್ರಿಕಾ ಭೂಷಣ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಮಹಾಶೈವ ಧರ್ಮ ಪೀಠದ ಅಧ್ಯಕ್ಷ ಮುಕ್ಕಣ್ಣ ಕರಿಗಾರ ತಿಳಿಸಿದ್ದಾರೆ.

ಬಾನು ಮುಷ್ತಾಕ್

ಶಶಿಕಾಂತ ಶೆಂಬೆಳ್ಳಿ

ಕುಮಾರಸ್ವಾಮಿ ಗುರುಗಳ ಜನ್ಮದಿನೋತ್ಸವ ಅಂಗವಾಗಿ ಆಗಸ್ಟ್ 9ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು. ಮಹಾತಪಸ್ವಿ ಕುಮಾರಸ್ವಾಮಿ ಸಾಹಿತ್ಯ ರತ್ನ ಪ್ರಶಸ್ತಿ ₹ 1 ಲಕ್ಷ ನಗದು, ಕುಮಾರಸ್ವಾಮಿ ಪತ್ರಿಕಾ ಭೂಷಣ ಪ್ರಶಸ್ತಿ ₹ 51 ಸಾವಿರ ನಗದು, ಸ್ಮರಣಿಕೆ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃಷಿ ಲಾಭಕ್ಕೆ 'ಬುದ್ಧಿಮತ್ತೆ'

ಒಂದನೇ ಪುಟದಿಂದ...

ರೈತರು ಆಗ ಎಲ್ಲೆಡೆ ವೆನಿಲಾ ಬೆಳೆಯಲು ಆರಂಭಿಸಿದರು. ಫಸಲು ಬರುವ ವೇಳೆಗೆ ಬೆಲೆ ಕುಸಿದಿತ್ತು. ಇದರಿಂದ ರಾಜ್ಯದ ರೈತರು ಭಾರಿ ನಷ್ಟ ಅನುಭವಿಸಿದ್ದರು. ನೆಟ್ಟಿದ್ದ ಎಲ್ಲ ಬಳ್ಳಿಗಳನ್ನು ಕಿತ್ತು ಹಾಕಿದ್ದರು. ಇಂಥ ಸಮಸ್ಯೆಗಳಿಗೆ ಸಂಪೂರ್ಣ ತಡೆ ಬೀಳಲಿದೆ. 'ದಿಢೀರ್ ಬೆಲೆ ಏರಿಕೆಯಾಗುವ ಬೆಳೆಗಳನ್ನು ರೈತರು ಸಮೂಹ ಸನ್ನಿಗೆ ಒಳಗಾದವರಂತೆ ಬೆಳೆಯಲು ಮುಂದಾಗುವುದನ್ನು ಕೃತಕ ಬುದ್ಧಿಮತ್ತೆ ಆಧಾರಿತ ಕೃಷಿ ಸೇವಾ ಕೇಂದ್ರಗಳು ತಡೆಯಲಿವೆ. ಇಲ್ಲವೇ, ದೀರ್ಘ ಸಮಯದವರೆಗೆ ಬೆಲೆ ಸ್ಥಿರತೆಯ ಮಾಹಿತಿ ಆಧಾರದಲ್ಲಿ ಬೆಳೆಗಳನ್ನು ಶಿಫಾರಸು ಮಾಡಲಿವೆ. ರಾಜ್ಯದಲ್ಲಿ ಅತಿ ಹೆಚ್ಚು ವಿಸ್ತರಿಸುತ್ತಿರುವ ಅಡಿಕೆ ಕ್ಷೇತ್ರದ ಭವಿಷ್ಯ, ಬೆಲೆ ಏರಿಳಿತ ಸೇರಿ ಎಲ್ಲ ಗೊಂದಲಗಳಿಗೂ ಈ ಕೇಂದ್ರ ಮಾರ್ಗ ತೋರಲಿವೆ' ಎನ್ನುತ್ತಾರೆ ಕೃಷಿ ತಜ್ಞ ಎಚ್‌.ಬಿ. ರಾಜಶೇಖರ್.

'ಬಿಲ್ಡರ್‌ಗಳ ಭೂಮಿ ಎಷ್ಟಿದೆ ಗೊತ್ತು'

ದೇವನಹಳ್ಳಿ ಬೆಳವಣಿಗೆ: ರೈತರ ಹೋರಾಟ ಕುರಿತು ಸಚಿವ ಎಂ.ಬಿ.ಪಾಟೀಲ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇವನಹಳ್ಳಿ ಸುತ್ತಮುತ್ತ ಯಾವ-ಯಾವ ಬಿಲ್ಡರ್‌ಗಳು ಎಷ್ಟೆಷ್ಟು ಭೂಮಿ ಖರೀದಿಸಿದ್ದಾರೆ, ಯಾರ ಜೊತೆ ಅವರು ಒಪ್ಪಂದ ಮಾಡಿಕೊಂಡಿದ್ದಾರೆ, ಯಾವ ರಾಜಕಾರಣಿಗಳ ಜಮೀನು ಎಷ್ಟಿದೆ ಎಂಬುದರ ಸಂಪೂರ್ಣ ಮಾಹಿತಿ ಇದೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಎಂ.ಬಿ. ಪಾಟೀಲ

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ರೈತರ ಹೆಸರಿನಲ್ಲಿನ ಹೋರಾಟದ ಹಿಂದೆ ಯಾರ ಕುಮ್ಮಕ್ಕು ಇದೆ ಎಂಬುದೂ ನಮಗೆ ಗೊತ್ತಿದೆ. ಸರ್ಕಾರವು ನಿಜವಾದ ರೈತರ ದನಿಗೆ ಬೆಲೆ ಕೊಡುತ್ತದೆಯೇ ವಿನಾ, ರೈತರ ಹೆಸರಿನಲ್ಲಿ ಏನೇನೋ ಮಾತನಾಡುತ್ತಿರುವವರಿಗಲ್ಲ' ಎಂದು ಹೇಳಿದರು.

'ಅಲ್ಲಿ ಕೆಲವರು ಭೂಸ್ವಾಧೀನ ಬೇಡವೆಂದು ಹೋರಾಟ ಮಾಡುತ್ತಿದ್ದಾರೆ. ಮತ್ತೆ ಕೆಲವರು 449 ಎಕರೆ ಜಮೀನನ್ನು ಬಿಟ್ಟುಕೊಡಲು ಸಿದ್ಧವಾಗಿದ್ದು, ಎಕರೆಗೆ ₹3.5 ಕೋಟಿ ಪರಿಹಾರ ಕೇಳುತ್ತಿದ್ದಾರೆ. ರೈತರಲ್ಲೇ ಈ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳಿವೆ. ಸರ್ಕಾರವು ಎಲ್ಲ ರೀತಿಯ ಪರಿಹಾರಗಳ ಸಾಧಕ– ಬಾಧಕಗಳನ್ನೂ ಪರಿಶೀಲಿಸುತ್ತಿದೆ' ಎಂದು ಮಾಹಿತಿ ನೀಡಿದರು.

'ಚನ್ನರಾಯಪಟ್ಟಣ ಹೋಬಳಿ ರೈತ ಹೋರಾಟ ಸಮಿತಿ ಹೆಸರಿನಲ್ಲಿ ಕೆಲವು ರೈತರು ಶನಿವಾರ ಮುಖ್ಯಮಂತ್ರಿಯನ್ನು ಭೇಟಿ ಮಾಡಿ, 449 ಎಕರೆಯನ್ನು ಸರ್ಕಾರಕ್ಕೆ ಕೊಡುವುದಾಗಿ ಹೇಳಿದ್ದಾರೆ. ಯೋಜನೆಗೆ ಸಂಬಂಧಿಸಿದಂತೆ ಮೊದಲು ಅಧಿಸೂಚನೆ ಹೊರಡಿಸಿದ್ದು ಇಷ್ಟೇ ಭೂಮಿಗೆ' ಎಂದು ತಿಳಿಸಿದರು.

'ಭೂಸ್ವಾಧೀನ ಬೇಡವೆಂದು ಕೆಲವು ಸಾಹಿತಿಗಳು, ಚಿಂತಕರು ನಮ್ಮ ಪಕ್ಷದ ಹೈಕಮಾಂಡ್‌ಗೆ ಪತ್ರ ಬರೆದಿದ್ದಾರೆ. ಅದನ್ನು ನಾನು ವಿರೋಧಿಸುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಹೋರಾಡುವ ಹಕ್ಕಿದೆ. ನಾವು ಎಲ್ಲ ಸಾಧ್ಯತೆಗಳನ್ನೂ ಪರಿಶೀಲಿಸುತ್ತಿದ್ದು, ಕಾನೂನು ತಜ್ಞರ ಅಭಿಪ್ರಾಯ ಪಡೆಯುತ್ತಿದ್ದೇವೆ' ಎಂದು ಸಚಿವ ಪಾಟೀಲ ವಿವರಿಸಿದರು.

1,777 ಎಕರೆ ಭೂಮಿ ಕೈಬಿಡಲು ಒತ್ತಾಯ

ಧಾರವಾಡ: 'ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿ 1,777 ಎಕರೆ ಭೂಸ್ವಾಧೀನ ಪ್ರಕ್ರಿಯೆ ಕೈಬಿಡಬೇಕು' ಎಂದು ಸಿಟಿಜನ್ ಫಾರ್ ಡೆಮಾಕ್ರಸಿ (ಸಿಎಫ್‌ಡಿ) ಮುಖ್ಯಸ್ಥ ಎಸ್.ಆರ್.ಹಿರೇಮಠ ಒತ್ತಾಯಿಸಿದರು.

ಎಸ್‌.ಆರ್. ಹಿರೇಮಠ

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಅವರು, 'ಭೂಸ್ವಾಧೀನ ವಿರೋಧಿಸಿ ನಡೆಯುತ್ತಿರುವ ಹೋರಾಟಕ್ಕೆ ಸಿಎಫ್‌ಡಿ ಹಾಗೂ ಇತರೆ ಸಮಾನ ಮನಸ್ಕ ಸಂಘಟನೆಗಳು ಬೆಂಬಲ ನೀಡುತ್ತವೆ' ಎಂದು ಹೇಳಿದರು.

'ಕಾನೂನಾತ್ಮಕ ಸಮಸ್ಯೆಗಳ ಕುರಿತು ಚರ್ಚಿಸಿ ಇದೇ 15ರಂದು ತೀರ್ಮಾನ ಪ್ರಕಟಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದು, ವಚನ ನೀಡಿದಂತೆ ಅವರು ನಡೆದುಕೊಳ್ಳುತ್ತಾರೆಂಬ ನಂಬಿಕೆ ಇದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಾಶ್ವತ ಕೃಷಿ ವಲಯ?

'ದೇವನಹಳ್ಳಿ ಸುತ್ತಲಿನ ಪರಿಸರದಲ್ಲಿ ಕೃಷಿ ಉಳಿಯಬೇಕು ಎನ್ನುವ ಕೂಗು ಎದ್ದಿದೆ. ಆ ಪರಿಸರವನ್ನು ಶಾಶ್ವತ ಕೃಷಿ ವಲಯ ಎಂದು ಘೋಷಿಸುವ ಬಗ್ಗೆಯೂ ಚಿಂತನೆ ನಡೆಯುತ್ತಿದೆ' ಎಂದು ಎಂ.ಬಿ.ಪಾಟೀಲ ಹೇಳಿದರು.

'ರಕ್ಷಣಾ ಮತ್ತು ವೈಮಾನಿಕ ಪಾರ್ಕ್ ಸ್ಥಾಪನೆಯೂ ರಾಜ್ಯದಲ್ಲಿ ಕೈಗಾರಿಕಾಭಿವೃದ್ಧಿಗೆ ಮಹತ್ವದ್ದಾಗಿದೆ. ಕೃಷಿ ಮತ್ತು ಕೈಗಾರಿಕೆ ಒಟ್ಟೊಟ್ಟಿಗೇ ಸಾಗಬೇಕು ಎಂಬುದು ನನ್ನ ಕಳಕಳಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಮಂಗಳವಾರ (ಜುಲೈ 15) ನಡೆಯಲಿರುವ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗುತ್ತದೆ' ಎಂದರು.

ಹಸಿರ ಸಿರಿಯಲಿ..

ಚಿತ್ರ: ತಾಜುದ್ದೀನ್ ಆಜಾದ್


ಕಲಬುರಗಿಯ ಹೊರವಲಯದಲ್ಲಿ ಭಾನುವಾರ ಹಸಿರ ಸಿರಿಯ ನಡುವೆ ಸ್ವಚ್ಛಂದವಾಗಿ ಹಾರುತ್ತಿದ್ದ ನವಿಲು ಕ್ಯಾಮೆರಾ ಕಣ್ಣಿಗೆ ಕಂಡದ್ದು ಹೀಗೆ...

ಪತ್ರಿಕೋದ್ಯಮಿ ಕೆ.ಬಿ.ಗಣಪತಿ ಇನ್ನಿಲ್ಲ

ಮೈಸೂರು: ನಗರದ ಪತ್ರಿಕೋದ್ಯಮಿ, 'ಮೈಸೂರು ಮಿತ್ರ'– 'ಸ್ಟಾರ್ ಆಫ್ ಮೈಸೂರು' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾಗಿದ್ದ ಕೆ.ಬಿ. ಗಣಪತಿ (85) ಅವರು ಇಲ್ಲಿನ ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯಲ್ಲಿ ಭಾನುವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು.

ಕೆ.ಬಿ. ಗಣಪತಿ

ಇಲ್ಲಿನ ಕೆ.ಸಿ. ಬಡಾವಣೆಯ ನಿವಾಸಿಯಾಗಿದ್ದ ಅವರಿಗೆ ಅವರಿಗೆ ಪತ್ನಿ ರಾಲಿ, ಪುತ್ರರಾದ ಪತ್ರಕರ್ತ ವಿಕ್ರಂ ಮುತ್ತಣ್ಣ, ಮಿಕ್ಕಿ ಬೋಪಣ್ಣ ಇದ್ದಾರೆ. ಚಾಮುಂಡಿಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು.

ಕೊಡಗಿನವರಾದ ಗಣಪತಿ ಅವರು ಬಿ.ಎ., ಬಿ.ಎಲ್. ಪದವಿ ಪಡೆದು ಹೈಕೋರ್ಟ್‌ನಲ್ಲಿ ವಕೀಲರಾಗಿ ವೃತ್ತಿಜೀವನ ಆರಂಭಿಸಿದ್ದರು. ನಂತರ ಮುಂಬೈನಲ್ಲಿ ಪತ್ರಿಕೋದ್ಯಮ ಡಿಪ್ಲೊಮಾ ಮಾಡಿ, ಅಲ್ಲಿಯೇ 'ಫ್ರೀ ಪ್ರೆಸ್ ಜನರಲ್', 'ಇಪಿಡಬ್ಲ್ಯೂ' ಹಾಗೂ 'ದಿ ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಗಳಲ್ಲಿ ಉಪಸಂಪಾದಕರಾಗಿ ಕಾರ್ಯನಿರ್ವಹಿಸಿದ್ದರು. 1978ರಲ್ಲಿ ಮೈಸೂರಿಗೆ ಮರಳಿದ್ದ ಅವರು, 'ಸ್ಟಾರ್ ಆಫ್ ಮೈಸೂರು' ಬಳಿಕ, 'ಮೈಸೂರು ಮಿತ್ರ' ಪತ್ರಿಕೆಗಳನ್ನು ಆರಂಭಿಸಿದರು.

ಅವರು, ರಾಜ್ಯ ಮಾಧ್ಯಮ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ, ಮೊಹರೆ ಹಣಮಂತರಾಯ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದರು. 2023ರಲ್ಲಿ ಮೈಸೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿ ಪುರಸ್ಕರಿಸಿತ್ತು.

ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ ಸಾಹಿತ್ಯ ಕೃಷಿ ಮಾಡಿದ್ದರು. 'ಆದರ್ಶವಾದಿ', 'ದ ಕ್ರಾಸ್ ಆ್ಯಂಡ್ ದ ಕೂರ್ಗ್ಸ್' ಕಾದಂಬರಿ, 'ಸ್ವಾರ್ಡ್ ಆಫ್ ಶಿವಾಜಿ', 'ಶಿವಾಜಿಯ ಖಡ್ಗ' ಜೀವನ ಚರಿತ್ರೆಗಳು. 'ಅಮೆರಿಕ– ಆ್ಯನ್ ಏರಿಯಾ ಆಫ್ ಲೈಟ್' ಪ್ರವಾಸ ಕಥನ, 'ಅಬ್ರಕಡಬ್ರಾ', 'ಗಾಂಧೀಸ್ ಎಪಿಸ್ಟಲ್ ಟು ಒಬಾಮಾ' ಲೇಖನಗಳ ಸಂಗ್ರಹ ಅವರ ಪ್ರಕಟಿತ ಕೃತಿಗಳು.

ಸುದ್ದಿ 2 ನಿಮಿಷ

ಒಕ್ಕಲಿಗ, ವೀರಶೈವರ ರೀತಿ ಮಾದರ ಮಹಾಸಭಾ: ಮುನಿಯಪ್ಪ

ಬೆಂಗಳೂರು: ಒಕ್ಕಲಿಗರ ಸಂಘ, ವೀರಶೈವ ಮಹಾಸಭಾ, ಕುರುಬರ ಸಂಘದ ರೀತಿ ಮಾದರ ಮಹಾಸಭಾ ಕಟ್ಟಲು ತೀರ್ಮಾನಿಸಿದ್ದು, 12 ವರ್ಷಗಳ ನಂತರ ಸದಸ್ಯತ್ವ ನೋಂದಣಿಗೆ ವೇಗ ನೀಡಲಾಗಿದೆ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ಕರ್ನಾಟಕ ಮಾದರ ಮಹಾಸಭಾ ಭಾನುವಾರ ಹಮ್ಮಿಕೊಂಡಿದ್ದ ಸದಸ್ಯತ್ವ ನೋಂದಣಿ ಅಭಿಯಾನ ಉದ್ಘಾಟಿಸಿ ಮಾತನಾಡಿದ ಅವರು, ಸಾಮಾನ್ಯ ಸದಸ್ಯತ್ವಕ್ಕೆ ₹500, ಆಜೀವ ಸದಸ್ಯತ್ವಕ್ಕೆ ₹25,000, ಪೋಷಕ ಸದಸ್ಯತ್ವಕ್ಕೆ ₹50,000, ಮಹಾಪೋಷಕ ಸದಸ್ಯತ್ವಕ್ಕೆ ₹1 ಲಕ್ಷ ನಿಗದಿ ಮಾಡಲಾಗಿದೆ. ರಾಜ್ಯ ಸಮಿತಿಗೆ ಚುನಾವಣೆ ಮೂಲಕ ಆಯ್ಕೆ ನಡೆಯಬೇಕು. ಉತ್ತಮ ಬುನಾದಿ ಹಾಕಲು ಎಲ್ಲ ಪದಾಧಿಕಾರಿಗಳು ಶ್ರಮಿಸಬೇಕು ಎಂದರು.

'ಎನ್. ರಾಚಯ್ಯ ನಮ್ಮ ಹೋರಾಟಕ್ಕೆ ಪ್ರೇರಣೆ. ಇಷ್ಟು ದಿನವಾದರೂ ಸಂಘ ಕಟ್ಟುವಲ್ಲಿ ವಿಫಲರಾಗಿದ್ದೇವೆ. ಪಕ್ಷಭೇದ ಮರೆತು ಸಂಘ ಕಟ್ಟಲು ಎಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಸಂಘಕ್ಕೆ ಶಾಶ್ವತ ನೆಲೆ ಕಲ್ಪಿಸಲು ನಿವೇಶನ ಒದಗಿಸಲು ಸಿಎಂಗೆ ಮನವಿ ಮಾಡಿದ್ದೇವೆ' ಎಂದರು.

ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ, ಮಾಜಿ ಸಚಿವ ಎಚ್. ಆಂಜನೇಯ, ಮಾಜಿ ಸಂಸದರಾದ ಎಲ್. ಹನುಮಂತಯ್ಯ, ಬಿ.ಎನ್. ಚಂದ್ರಪ್ಪ, ಮುಖಂಡರಾದ ತಿಮ್ಮಯ್ಯ, ಆರ್. ಧರ್ಮಸೇನ, ಡಾ.ಎಚ್. ನಟರಾಜ್, ಶಿವಪ್ಪ, ಪುರುಷೋತ್ತಮ್, ದೊಡ್ಡೇರಿ ವೆಂಕಟೇಶ್, ಕೋಗಿಲು ವೆಂಕಟೇಶ್, ರಾಮಕೃಷ್ಣ, ಮಾತಾಂಗ ಲೋಕೇಶ್ ಉಪಸ್ಥಿತರಿದ್ದರು.

'ಬ್ರಹ್ಮೋಸ್: 15 ದೇಶಗಳ ಬೇಡಿಕೆ'

ಲಖನೌ (ಪಿಟಿಐ): ಬ್ರಹ್ಮೋಸ್ ಕ್ಷಿಪಣಿಯು ಆಪರೇಷನ್ ಸಿಂಧೂರದಲ್ಲಿ ನಿರ್ಣಾಯಕ ಪಾತ್ರವಹಿಸಿದೆ ಎಂದು ರಕ್ಷಣಾ ಸಚಿವ ಭಾನುವಾರ ಹೇಳಿದರು.

ಈ ಕಾರ್ಯಾಚರಣೆ ಬಳಿಕ 14 ರಿಂದ 15 ದೇಶಗಳು ಬ್ರಹ್ಮೋಸ್ ಕ್ಷಿಪಣಿಗಾಗಿ ಬೇಡಿಕೆ ಇರಿಸಿವೆ ಎಂದು ತಿಳಿಸಿದ್ದಾರೆ.

'ಕೆಲವು ದಿನಗಳ ಹಿಂದೆ ಬ್ರಹ್ಮೋಸ್ ಪರೀಕ್ಷಾ ಕೇಂದ್ರವನ್ನು ಉದ್ಘಾಟಿಸಿದೆ. ಬ್ರಹ್ಮೋಸ್ ಕ್ಷಿಪಣಿಯನ್ನು ಈಗ ಲಖನೌನಿಂದಲೂ ರಫ್ತು ಮಾಡಲಾಗುವುದು. ಇದು ನಮ್ಮ ದೇಶವನ್ನು ರಕ್ಷಣಾ ವಲಯದಲ್ಲೂ ಸ್ವಾವಲಂಬಿಯಾಗಿ ಮಾಡುತ್ತದೆ ಮತ್ತು ಉದ್ಯೋಗ ಸಹ ಸೃಷ್ಟಿ ಮಾಡುತ್ತದೆ' ಎಂದು ರಾಜನಾಥ್ ಸಿಂಗ್ ಹೇಳಿದ್ದಾರೆ.

ಕಟ್ಟುನಿಟ್ಟಿನ ಕಾನೂನು ಸುವ್ಯವಸ್ಥೆ, ಮೂಲಸೌಕರ್ಯಗಳಿಂದಾಗಿ ಉತ್ತರ ಪ್ರದೇಶವು ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಆಕರ್ಷಿಸುತ್ತಿದೆ ಎಂದು ಅವರು ಪ್ರತಿಪಾದಿಸಿದ್ದಾರೆ. 'ಮೂಲಸೌಕರ್ಯದಲ್ಲಿ ಐತಿಹಾಸಿಕ ಬದಲಾವಣೆ ಆಗುತ್ತಿವೆ' ಎಂದು ಅವರು ಹೇಳಿದ್ದಾರೆ.

ಕಡಿಮೆ ಹಣದಲ್ಲಿಯೇ ಕಾರ್ಯಚಟುವಟಿಕೆಗಳನ್ನು ನಡೆಸಬೇಕಾದ ಸವಾಲು

ಅಕಾಡೆಮಿಗಳಿಗೆ ಹೆಚ್ಚಳವಾಗದ ಅನುದಾನ

• ವರುಣ ಹೆಗಡೆ

ಬೆಂಗಳೂರು: ನಾಡಿನ ಕಲೆ, ಸಾಹಿತ್ಯ, ಭಾಷೆಗಳ ಪೋಷಣೆಗೆ ಸ್ಥಾಪಿತವಾದ ಸಾಂಸ್ಕೃತಿಕ ಅಕಾಡೆಮಿಗಳು ಅನುದಾನದ ಕೊರತೆ ಎದುರಿಸುತ್ತಿದ್ದು, ಈ ವರ್ಷವೂ ಅನುದಾನ ಹೆಚ್ಚಳದ ಭರವಸೆ ಸಾಕಾರವಾಗಿಲ್ಲ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ 14 ಅಕಾಡೆಮಿಗಳು ಕಾರ್ಯನಿರ್ವಹಿಸುತ್ತಿವೆ. ನಾಡು–ನುಡಿ, ಸಾಹಿತ್ಯ, ಸಂಸ್ಕೃತಿಯ ಜತೆಗೆ, ಸಂಗೀತ–ನೃತ್ಯ, ಲಲಿತಕಲೆ, ಜಾನಪದ, ನಾಟಕ, ಯಕ್ಷಗಾನ, ಬಯಲಾಟ, ಶಿಲ್ಪಕಲೆ ಮೊದಲಾದ ಕಲಾ ಪ್ರಕಾರಗಳ ವೈವಿಧ್ಯಗಳನ್ನು ಉಳಿಸಿ, ಬೆಳೆಸುವ ಉದ್ದೇಶದಿಂದ ಅಕಾಡೆಮಿಗಳನ್ನು ಸ್ಥಾಪಿಸಲಾಗಿವೆ. ಇವುಗಳಿಗೆ ಅನುದಾನ ಹೆಚ್ಚಿಸುವ ಬಗ್ಗೆ ಭರವಸೆ ನೀಡಿದ್ದ ಕಾಂಗ್ರೆಸ್ ಸರ್ಕಾರ, ಈ ಬಾರಿಯೂ ಪ್ರಮುಖ ಅಕಾಡೆಮಿಗಳಿಗೆ ₹80 ಲಕ್ಷ ಹಾಗೂ ಭಾಷಾ ಅಕಾಡೆಮಿಗಳಿಗೆ ₹58 ಲಕ್ಷ ವಾರ್ಷಿಕ ಅನುದಾನ ಹಂಚಿಕೆ ಮಾಡಿದೆ.

14 ಅಕಾಡೆಮಿಗಳಿಗೆ ಒಟ್ಟಾರೆ ₹9.80 ಕೋಟಿ ನೀಡಿದ್ದು, ಕರ್ನಾಟಕ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಹಾಗೂ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಗೆ ಅತ್ಯಂತ ಕಡಿಮೆ ಅನುದಾನ (₹54 ಲಕ್ಷ) ಒದಗಿಸಲಾಗಿದೆ. ವಾರ್ಷಿಕ ಅನುದಾನದಲ್ಲಿ ಅರ್ಧದಷ್ಟು ಹಣ ಸಿಬ್ಬಂದಿ ವೇತನ ಸೇರಿ ವಿವಿಧ ಆಡಳಿತಾತ್ಮಕ ವೆಚ್ಚಕ್ಕೆ ಬಳಕೆಯಾಗಲಿದೆ. ಇದರಿಂದಾಗಿ ಅಕಾಡೆಮಿಗಳು ಈ ವರ್ಷವೂ ಪುಸ್ತಕ ಪ್ರಕಟಣೆ, ಕಾರ್ಯಾಗಾರ, ಶಿಬಿರ, ಪ್ರಶಸ್ತಿ ಪ್ರದಾನದಂತಹ ಚಟುವಟಿಕೆಗಳಿಗೆ ಸೀಮಿತಗೊಳ್ಳಬೇಕಿದ್ದು, ಹೊಸ ಹಾಗೂ ದೀರ್ಘಾವಧಿ ಯೋಜನೆಗಳಿಗೆ ಅನುದಾನ ಇಲ್ಲವಾಗಿದೆ.

ಕನ್ನಡ ಭವನ

ಕೋವಿಡ್ ವೇಳೆ ಕಡಿತ: ಕೋವಿಡ್ ವೇಳೆ ಸಾಂಸ್ಕೃತಿಕ ಚಟುವಟಿಕೆಗಳು ಸ್ತಬ್ಧವಾಗಿದ್ದ ಕಾರಣ, ಅಂದಿನ ಬಿಜೆಪಿ ಸರ್ಕಾರ ಅಕಾಡೆಮಿಗಳ ಅನುದಾನ ಕಡಿತ ಮಾಡಿತ್ತು. ಕೋವಿಡ್ ಪೂರ್ವದಲ್ಲಿ ಸಾಹಿತ್ಯ, ನಾಟಕ ಸೇರಿ ಪ್ರಮುಖ ಅಕಾಡೆಮಿಗಳಿಗೆ ₹1.5 ಕೋಟಿವರೆಗೂ ವಾರ್ಷಿಕ ಅನುದಾನ ನೀಡಲಾಗುತ್ತಿತ್ತು. 2022ರ ಅ.15ರಂದು ಅಕಾಡೆಮಿಗಳ ಹಿಂದಿನ ಕಾರ್ಯಕಾರಿ ಸಮಿತಿ ಅವಧಿ ಮುಕ್ತಾಯವಾಗಿತ್ತು. ಬಳಿಕ 15 ತಿಂಗಳು ಅಕಾಡೆಮಿಗಳಿಗೆ ಕಾರ್ಯಕಾರಿ ಸಮಿತಿ ಇರಲಿಲ್ಲ. ಇಲಾಖೆಯ ಜಂಟಿ ನಿರ್ದೇಶಕರೇ ಆಡಳಿತಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದರು.

'ಈಗ ನೀಡುತ್ತಿರುವ ಅನುದಾನದಲ್ಲಿ ದೀರ್ಘಾವಧಿ ಯೋಜನೆಗಳನ್ನು ರೂಪಿಸುವುದು ಕಷ್ಟಸಾಧ್ಯ. ವಾರ್ಷಿಕ ಕಾರ್ಯ ಚಟುವಟಿಕೆಗಳನ್ನು ಮಾತ್ರ ಮುಂದುವರಿಸಬೇಕಾಗಿದೆ. ಹೆಚ್ಚಿನ ಅನುದಾನ ದೊರೆತರೆ ವಿಶೇಷ ಯೋಜನೆ ಕಾರ್ಯಗತ ಮಾಡಬಹುದು' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಕಾಡೆಮಿ ಅಧ್ಯಕ್ಷರೊಬ್ಬರು ತಿಳಿಸಿದರು.

ಅಕಾಡೆಮಿಗಳಿಗೆ ನೀಡಲಾದ ಸಹಾಯಧನ

ವರ್ಷ	ಸಹಾಯಧನ
2018-19	₹ 12 ಕೋಟಿ
2019-20	₹ 8 ಕೋಟಿ
2020-21	₹ 7.50 ಕೋಟಿ
2021-22	₹ 7 ಕೋಟಿ
2022-23	₹ 7 ಕೋಟಿ
2023-24	₹ 9.80 ಕೋಟಿ
2024-25	₹ 9.80 ಕೋಟಿ
2025-26	₹ 9.80 ಕೋಟಿ

3 ವರ್ಷಗಳಿಂದ ಹೆಚ್ಚದ ಅನುದಾನ

ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ 2024ರ ಮಾರ್ಚ್‌ನಲ್ಲಿ ಹೊಸ ಕಾರ್ಯಕಾರಿ ಸಮಿತಿ ರಚಿಸಿ, ಆದೇಶ ಹೊರಡಿಸಿತ್ತು. ಅಕಾಡೆಮಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅನುದಾನ ಹೆಚ್ಚಿಸಬೇಕೆಂಬ ಆಗ್ರಹ ಸಾಂಸ್ಕೃತಿಕ ವಲಯದಲ್ಲಿ ವ್ಯಕ್ತವಾಗಿತ್ತು. ಹೆಚ್ಚಿನ ಅನುದಾನ ಒದಗಿಸುವುದಾಗಿ ಭರವಸೆ ನೀಡಿದ್ದ ಸರ್ಕಾರ, ಈ ವರ್ಷವೂ ಹಿಂದಿನ ವರ್ಷದಷ್ಟೇ ಅನುದಾನ ನೀಡಿದೆ. ಮೂರು ವರ್ಷಗಳಿಂದ ಅನುದಾನ ಹೆಚ್ಚಳವಾಗಿಲ್ಲ.

ಲಭ್ಯ ಅನುದಾನದ ಅನುಸಾರ ಅಕಾಡೆಮಿಗಳಿಗೆ ಸಹಾಯಧನ ಒದಗಿಸಲಾಗಿದೆ. ವಿಶೇಷ ಯೋಜನೆಗಳಿಗೆ ಅನುದಾನ ಅಗತ್ಯವಿದ್ದಲ್ಲಿ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗುವುದು
ಗಾಯಿತ್ರಿ ಕೆ.ಎಂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ

ಅನುದಾನ ಹೆಚ್ಚಿಸಿದಲ್ಲಿ ವಿವಿಧ ಕಾರ್ಯಯೋಜನೆಗಳನ್ನು ಸಾಕಾರ ಮಾಡಬಹುದು. ವಾರ್ಷಿಕ ಒಂದೂವರೆ ಕೋಟಿ ರೂಪಾಯಿ ಅನುದಾನವಾದರೂ ಅಗತ್ಯ
ಕೆ.ವಿ. ನಾಗರಾಜಮೂರ್ತಿ, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ

ಅನುದಾನ ನಿರೀಕ್ಷಿಸಿ ಬಂಜಾರ ವಿಶ್ವಕೋಶ, ವಿಶ್ವ ಸಮ್ಮೇಳನದಂತಹ ಯೋಜನೆ ನಡೆಸಲು ಕಾರ್ಯಯೋಜನೆ ರೂಪಿಸಿದ್ದೆವು
ಎ.ಆರ್. ಗೋವಿಂದಸ್ವಾಮಿ, ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ

ಅಧಿವೇಶನ: ಕಾಂಗ್ರೆಸ್ ಸಭೆ ನಾಳೆ

ನವದೆಹಲಿ (ಪಿಟಿಐ): ಮುಂಬರುವ ಸಂಸತ್ ಮುಂಗಾರು ಅಧಿವೇಶನ ಸಂಬಂಧ ಪಕ್ಷದ ಕಾರ್ಯತಂತ್ರವನ್ನು ಅಂತಿಮಗೊಳಿಸಲು ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿ ಸೋನಿಯಾ ಗಾಂಧಿ ಅವರು ಇದೇ 15ಕ್ಕೆ ಸಭೆ ನಡೆಸಲಿದ್ದಾರೆ.

ಇದು ವಿರೋಧ ಪಕ್ಷಗಳು ಹಾಗೂ ಸರ್ಕಾರದ ನಡುವೆ ಹಲವು ವಿಷಯಗಳಲ್ಲಿ ಸಂಘರ್ಷಕ್ಕೆ ಸಾಕ್ಷಿಯಾಗುವ ಸಾಧ್ಯತೆ ಇದೆ.

ಜನಪಥ ನಿವಾಸದಲ್ಲಿ ಸೋನಿಯಾ ಗಾಂಧಿ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಇತರರು ಪಾಲ್ಗೊಳ್ಳಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಬಿಹಾರದಲ್ಲಿ ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ಕುರಿತ ಚರ್ಚೆಗೆ ಕಾಂಗ್ರೆಸ್ ಒತ್ತಾಯಿಸುವ ಸಾಧ್ಯತೆ ಇದೆ.

ಸಿ.ಎಂ.ಗೆ ಅಗೌರವ ಆರೋಪ; ಜಟಾಪಟಿ

ಒಂದನೇ ಪುಟದಿಂದ...

'ಸಿ.ಎಂ ಅವರನ್ನು ಆಹ್ವಾನಿಸುವ ವಿಚಾರದಲ್ಲಿ ಶಿಷ್ಟಾಚಾರದ ಉಲ್ಲಂಘನೆ ಆಗಿಲ್ಲ. ಆಹ್ವಾನಪತ್ರದಲ್ಲಿ ಮೊದಲ ಹೆಸರು ಅವರದ್ದೇ ಇದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳೇ ಶಾಸಕರನ್ನು ಕಾರ್ಯಕ್ರಮಕ್ಕೆ ಕರೆದಿದ್ದಾರೆ. ಆಹ್ವಾನ ಪತ್ರ ಶುಕ್ರವಾರ ರಾತ್ರಿ ಅಂತಿಮಗೊಂಡಿದೆ. ನನಗೆ ಹಾಗೂ ಯಡಿಯೂರಪ್ಪನವರಿಗೆ ಶನಿವಾರ ಕೊಟ್ಟಿದ್ದಾರೆ' ಎಂದು ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ಅವರು ಪ್ರತಿಕ್ರಿಯಿಸಿದ್ದಾರೆ

ಕಾರ್ಯಕ್ರಮ ಮುಂದೂಡಿ: ಸಿ.ಎಂ ಪತ್ರ

ಒಂದನೇ ಪುಟದಿಂದ...

'ಇನ್ನು ಮುಂದೆ, ರಾಜ್ಯ ಮಟ್ಟದ ಕಾರ್ಯಕ್ರಮಗಳನ್ನು ಆಯೋಜಿಸುವ ಮುನ್ನ ರಾಜ್ಯ ಸರ್ಕಾರದ ಜತೆಗೆ ನಿಮ್ಮ ಸಚಿವಾಲಯವು ಸಮಾಲೋಚನೆ ನಡೆಸುವುದು ಸಮಂಜಸ. ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುವುದಕ್ಕೂ ಮುನ್ನ ರಾಜ್ಯ ಸರ್ಕಾರದ ಜತೆಗೆ ವ್ಯವಹರಿಸಿ ಎಂದು ನಿಮ್ಮ ಸಚಿವಾಲಯಕ್ಕೆ ನಿರ್ದೇಶನ ನೀಡಿ' ಎಂದು ಕೋರಿದ್ದಾರೆ.

'ಅದೇ ದಿನ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಹಲವು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡುವ ಕಾರ್ಯಕ್ರಮ ಇದೆ. ಅಲ್ಲಿ ಪಾಲ್ಗೊಳ್ಳುವುದು ಪೂರ್ವ ನಿಗದಿಯಾಗಿರುವುದರಿಂದ, ಸೇತುವೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗುತ್ತಿಲ್ಲ' ಎಂದಿದ್ದಾರೆ.

ಸ್ಥಳೀಯ ಜನಪ್ರತಿನಿಧಿಗಳು ಇರಲಿ, ಸಿಎಂ ಅವರನ್ನೇ ಕರೆಯದೆ ಅಗೌರವ ತೋರಿದ್ದಾರೆ. ವಿಷಯ ತಿಳಿದು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರೇ ಕರೆ ಮಾಡಿ ಆಹ್ವಾನಿಸಿದ್ದಾರೆ. ಜುಲೈ 14ರ ನಂತರ ಎಲ್ಲ ವಿಚಾರ ಮಾತನಾಡುವೆ
ಮಧು ಬಂಗಾರಪ್ಪ, ಜಿಲ್ಲಾ ಉಸ್ತುವಾರಿ ಸಚಿವ

ಶಿಷ್ಟಾಚಾರದನ್ವಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಸಿ.ಎಂ ಬಳಿಗೆ ತೆರಳಿ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದ್ದಾರೆ. ಕ್ಷೇತ್ರದ ಸಂಸದನಾಗಿ ನಾನೂ ಪತ್ರ ಬರೆದು ಆಹ್ವಾನಿಸಿದ್ದೇನೆ
ಬಿ.ವೈ.ರಾಘವೇಂದ್ರ, ಶಿವಮೊಗ್ಗ ಸಂಸದ

ನಮ್ಮ ಕುಟುಂಬದವರನ್ನು ಸಂಸದರೇ ಬಂದು ಕರೆದಿದ್ದಾರೆ. ಆಹ್ವಾನಪತ್ರದಲ್ಲಿ ರಾಮಪ್ಪ ಅವರ ಹೆಸರು ಹಾಕದ ವಿಚಾರ ಗೊತ್ತಿಲ್ಲ. ನಮ್ಮೂರಿನ ಕಾರ್ಯಕ್ರಮ ಪಾಲ್ಗೊಳ್ಳಲಿದ್ದೇವೆ
ಎಚ್‌.ಆರ್.ರವಿಕುಮಾರ್, ಸಿಗಂದೂರು ಧರ್ಮದರ್ಶಿ ಎಸ್.ರಾಮಪ್ಪ ಪುತ್ರ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ – ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಏಜೆನ್ಸಿಗಳಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009					
1	ಪೂರ್ವ–2	ಇಂಡೆಂಟ್ ನಂ: ಬೆಂಜಮಂ/2025–26/ಡಬ್ಲ್ಯೂಎಸ್/ವರ್ಕ್_ಇಂಡೆಂಟ್2327	₹ 4,93,700/- / ₹ 12,400/-	21.07.2025 ರ ಸಂಜೆ 4:00 ಗಂಟೆಗೆ	22.07.2025 ರ ಸಂಜೆ 4:00 ಗಂಟೆಗೆ
2	ಪೂರ್ವ–2	ಇಂಡೆಂಟ್ ನಂ: ಬೆಂಜಮಂ/2025–26/ಡಬ್ಲ್ಯೂಎಸ್/ವರ್ಕ್_ಇಂಡೆಂಟ್2328	₹ 4,58,900/- / ₹ 11,500/-	21.07.2025 ರ ಸಂಜೆ 4:00 ಗಂಟೆಗೆ	22.07.2025 ರ ಸಂಜೆ 4:00 ಗಂಟೆಗೆ
3	ಪೂರ್ವ–2	ಇಂಡೆಂಟ್ ನಂ: ಬೆಂಜಮಂ/2025–26/ಡಬ್ಲ್ಯೂಎಸ್/ವರ್ಕ್_ಇಂಡೆಂಟ್2329	₹ 7,19,700/- / ₹ 18,000/-	21.07.2025 ರ ಸಂಜೆ 4:00 ಗಂಟೆಗೆ	22.07.2025 ರ ಸಂಜೆ 4:00 ಗಂಟೆಗೆ
4	ಪೂರ್ವ–2	ಇಂಡೆಂಟ್ ನಂ: ಬೆಂಜಮಂ/2025–26/ಡಬ್ಲ್ಯೂಎಸ್/ವರ್ಕ್_ಇಂಡೆಂಟ್2330	₹ 7,29,100/- / ₹ 18,300/-	21.07.2025 ರ ಸಂಜೆ 4:00 ಗಂಟೆಗೆ	22.07.2025 ರ ಸಂಜೆ 4:00 ಗಂಟೆಗೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ–2)					
ಮುಖ್ಯ ಅಭಿಯಂತರರ ಕಛೇರಿ (ಯೋಜನೆ), 3ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009					
5	ಕೇಂದ್ರ ಉಗ್ರಾಣ	ಬೆಂಜಮಂ/ಕಾನಿಅ(ಕೇಂ.ಉ)/ಸಕಾನಿಅ/ಸಉಅ/ಕಿಅ/ಉಗ್ರಾಣ/280/2025–26 ದಿನಾಂಕ: 08.07.2025	₹ 72,94,799/- / ₹ 1,45,900/-	21.07.2025 ರ ಸಂಜೆ 4:00 ಗಂಟೆಯೊಳಗೆ	23.07.2025 ರ ಮಧ್ಯಾಹ್ನ 12:00 ಗಂಟೆಗೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ ಉಗ್ರಾಣ)					
ಮುಖ್ಯ ಅಭಿಯಂತರರ ಕಛೇರಿ (ತ್ಯಾನೀನಿ–ಪೂರ್ವ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009					
6	(ತ್ಯಾನೀನಿ–ಎಸ್‌ಟಿಪಿ) ಸಿವಿ	ಬೆಂಜಮಂ/ಕಾನಿಅ(ತ್ಯಾನೀನಿ–ಎಸ್‌ಟಿಪಿ)ಸಿವಿ/ಪಿಬಿ/177/2025–26 ದಿನಾಂಕ: 03.07.2025 (3ನೇ ಕರೆ)	₹ 11,69,391/- / ₹ 29,235/-	21.07.2025 ರ ಸಂಜೆ 4:00 ಗಂಟೆಯವರೆಗೆ	22.07.2025 ರ ಸಂಜೆ 5:00 ಗಂಟೆಯ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಎಸ್‌ಟಿಪಿ) ಸಿವಿ					

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/MIA/1763/2025-26

ಬಿಹಾರ: 'ವಿಶೇಷ ಸಮಗ್ರ ಪರಿಷ್ಕರಣೆ' ವೇಳೆ ವಿಚಾರ ಬಹಿರಂಗ

ಮತದಾರರ ಪಟ್ಟಿಯಲ್ಲಿ ಅಕ್ರಮ ವಲಸಿಗರು

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರದ ಮತದಾರರ ಪಟ್ಟಿಯಲ್ಲಿ ಬಾಂಗ್ಲಾದೇಶ, ಮ್ಯಾನ್ಮಾರ್ ಹಾಗೂ ನೇಪಾಳದ ಅಕ್ರಮ ವಲಸಿಗರ ಹೆಸರುಗಳಿರುವುದು ಪತ್ತೆಯಾಗಿದೆ. ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ನಡೆಸುತ್ತಿರುವ ಬೂತ್ ಮಟ್ಟದ ಅಧಿಕಾರಿಗಳು ಈ ವಿಚಾರವನ್ನು ಪತ್ತೆ ಮಾಡಿದ್ದಾರೆಂದು ಚುನಾವಣಾ ಆಯೋಗದ ಮೂಲಗಳು ಭಾನುವಾರ ತಿಳಿಸಿವೆ.

ಮತಪಟ್ಟಿಯಲ್ಲಿ ಸೇರ್ಪಡೆಯಾಗಿರುವ ಅಕ್ರಮ ವಲಸಿಗರ ಕುರಿತು ಆಗಸ್ಟ್ 1ರ ಬಳಿಕ ತನಿಖೆ ನಡೆಸಲಾಗುವುದು. ತನಿಖೆಯ ಬಳಿಕ ಮತಪಟ್ಟಿಯಿಂದ ಅವರ ಹೆಸರುಗಳನ್ನು ತೆಗೆದುಹಾಕಲು ನಿರ್ಧರಿಸಲಾಗಿದೆ. ಸೆಪ್ಟೆಂಬರ್ 30ಕ್ಕೆ ಮತದಾರರ ಅಂತಿಮ ಪಟ್ಟಿ ಬಿಡುಗಡೆಯಾಗಲಿದೆ.

ಪ್ರಸಕ್ತ ವರ್ಷದ ಜೂನ್ 24ರವರೆಗೆ ಮತದಾರ ಪಟ್ಟಿಗೆ ನೋಂದಾಯಿಸಿಕೊಂಡಿರುವವರಿಗೆ ನೀಡಲಾಗಿದ್ದ ಗಣತಿ ಅರ್ಜಿಯನ್ನು ವಾಪಸ್ ಪಡೆಯುವುದಕ್ಕಾಗಿ ಬೂತ್ ಮಟ್ಟದ ಅಧಿಕಾರಿಗಳು ಮನೆ–ಮನೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಬಾಂಗ್ಲಾ, ಮ್ಯಾನ್ಮಾರ್ ಮತ್ತು ನೇಪಾಳದ ವಲಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ಪತ್ತೆಯಾಗಿದೆ ಎಂದು ಆಯೋಗದ ಮೂಲಗಳು ಹೇಳಿವೆ.

ಚುನಾವಣಾ ಆಯೋಗವು ಸರ್ಕಾರದ ಕೈಗೊಂಬೆಯಾಗಿದೆ. ಚುನಾವಣಾ ಆಯುಕ್ತರು ಸರ್ಕಾರದ ಪರವಾಗಿ ಇರುವಲ್ಲಿ ಒಬ್ಬರನ್ನೊಬ್ಬರು ಮೀರಿಸುತ್ತಾರೆ
ಕಪಿಲ್ ಸಿಬಲ್, ಕಾಂಗ್ರೆಸ್ ಸಂಸದ

ಅಲ್ಲದೆ, ದೇಶದಾದ್ಯಂತ ಹಂತಹಂತವಾಗಿ ಆಯೋಗ ಈ ಮತದಾರರ ಪಟ್ಟಿ ಪರಿಶೀಲನೆ ನಡೆಸಲಿದೆ ಎಂದೂ ತಿಳಿದುಬಂದಿದೆ.

ವಿಪಕ್ಷಗಳ ಆಕ್ಷೇಪ: ಎಸ್‌ಐಆರ್‌ಗೆ ಪ್ರತಿಪಕ್ಷಗಳು ಆಕ್ಷೇಪ ವ್ಯಕ್ತ ಪಡಿಸಿವೆ. ಚುನಾವಣಾ ಆಯೋಗ ನಡೆಸುತ್ತಿರುವ ಪರಿಶೀಲನೆಯಿಂದ ಬಡವರು ಮತ್ತು ವಲಸೆ ಕಾರ್ಮಿಕರ ಹಕ್ಕು ಕಸಿದಂತಾಗುತ್ತದೆ. ಯಾವುದೇ ವ್ಯಕ್ತಿಯ ಪೌರತ್ವವನ್ನು ಪರಿಶೀಲಿಸಲು ಆಯೋಗಕ್ಕೆ ಅಧಿಕಾರವಿಲ್ಲ ಎಂದು ಆರೋಪಿಸಿವೆ.

ಮೋದಿಗೆ ಮತ ನೀಡಿದವರು ವಿದೇಶಿಗರೇ? : '2014, 2019, 2024ರ ಚುನಾವಣೆಗಳನ್ನು ನಾವು ಎದುರಿಸಿದ್ದೇವೆ. ಈ ಚುನಾವಣೆಗಳಲ್ಲಿ 3–4 ಲಕ್ಷ ಮತಗಳ ಅಂತರದಲ್ಲಿ ನಾವು ಸೋತಿದ್ದೇವೆ. ಹಾಗಾದರೆ ಈ ಎಲ್ಲಾ ವಿದೇಶಿಗರು ಆ ಸಮಯದಲ್ಲಿ ಪ್ರಧಾನಿ ಮೋದಿ ಅವರಿಗೆ ಮತ ನೀಡಿದ್ದರು ಎಂದು ಅರ್ಥವೇ?' ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಪ್ರಶ್ನಿಸಿದ್ದಾರೆ.

ದೇಶದಾದ್ಯಂತ ವಿಶೇಷ ಪರಿಷ್ಕರಣೆ

ಒಂದನೇ ಪುಟದಿಂದ...

ವಿದೇಶಗಳಿಂದ ಅಕ್ರಮವಾಗಿ ಬಂದಿರುವ ವಲಸಿಗರ ಜನ್ಮ ಸ್ಥಳವನ್ನು ಪರಿಶೀಲಿಸುವ ಮೂಲಕ, ಅವರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆಯುವುದು ಆಯೋಗದ ಉದ್ದೇಶವಾಗಿದೆ ಎಂದು ಅವರು ಹೇಳಿದ್ದಾರೆ.

ದೇಶದ ವಿವಿಧ ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳು, ತಮ್ಮ ರಾಜ್ಯಗಳಲ್ಲಿ ಈ ಹಿಂದೆ ಕೊನೆಯದಾಗಿ ನಡೆದ 'ವಿಶೇಷ ಸಮಗ್ರ ಪರಿಷ್ಕರಣೆ' ಬಳಿಕ ಪ್ರಕಟವಾದ ಮತದಾರರ ಪಟ್ಟಿಯನ್ನು ಪ್ರಕಟಿಸಲು ಆರಂಭಿಸಿದ್ದಾರೆ.

ಅದರಂತೆ, ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ 2008 ಮತ್ತು ಉತ್ತರಾಖಂಡದಲ್ಲಿ 2006ರಲ್ಲಿ ಎಸ್‌ಐಆರ್ ನಡೆದಿತ್ತು. ಆ ಬಳಿಕದ ಮತದಾರರ ಪಟ್ಟಿಯನ್ನು ಈ ರಾಜ್ಯಗಳ ಸಿಇಒ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಬಿಹಾರದಲ್ಲಿ ಕೊನೆಯ ಬಾರಿಗೆ 2003ರಲ್ಲಿ ಎಸ್‌ಐಆರ್ ನಡೆದಿತ್ತು. ಇತರ ಬಹುತೇಕ ರಾಜ್ಯಗಳಲ್ಲಿ 2002ರಿಂದ 2004ರ ಅವಧಿಯಲ್ಲಿ ವಿಶೇಷ ಪರಿಷ್ಕರಣಾ ಕಾರ್ಯ ನಡೆದಿವೆ ಎಂದು ಮೂಲಗಳು ತಿಳಿಸಿವೆ.

ಚುನಾವಣೆ ನಡೆಯುವ ರಾಜ್ಯಗಳು: ಪ್ರಸಕ್ತ ವರ್ಷ ಬಿಹಾರದಲ್ಲಿ ಚುನಾವಣೆ ನಡೆಯಲಿದ್ದು, 2026ರಲ್ಲಿ ಅಸ್ಸಾಂ, ಕೇರಳ, ಪುದುಚೇರಿ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿವೆ.

ಬಾಂಗ್ಲಾದೇಶ, ಮ್ಯಾನ್ಮಾರ್ ಸೇರಿದಂತೆ ಕೆಲ ವಿದೇಶಗಳ ಅಕ್ರಮ ವಲಸಿಗರು ವಿವಿಧ ರಾಜ್ಯಗಳಲ್ಲಿ ನೆಲಸಿರುವುದು ಪತ್ತೆಯಾದ ಬೆನ್ನಲ್ಲೇ ಆಯೋಗ ಮತದಾರರ ಪಟ್ಟಿ ಪರಿಷ್ಕರಣೆಗೆ ಮುಂದಾಗಿದೆ.

ಬಿಹಾರ: ಗುಂಡಿಕ್ಕಿ ಇಬ್ಬರ ಹತ್ಯೆ

ಪಟ್ನಾ/ಸಾರಣ್ (ಪಿಟಿಐ): ಬಿಹಾರದ ಪಟ್ನಾ ಮತ್ತು ಸಾರಣ್ ಜಿಲ್ಲೆಯಲ್ಲಿ ಭಾನುವಾರ ಸಂಭವಿಸಿದ ಪ್ರತ್ಯೇಕ ಘಟನೆಗಳಲ್ಲಿ, ವಕೀಲ ಮತ್ತು ಶಿಕ್ಷಕರೊಬ್ಬರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ.

ವಕೀಲ ಜೀತೇಂದ್ರ ಮಹ್ತೊ ಅವರನ್ನು ಅಪರಿಚಿತ ವ್ಯಕ್ತಿಯೊಬ್ಬ ಪಾಟ್ನಾದ ಸುಲ್ತಾನ್‌ಗಂಜ್‌ನ ಚಹಾ ಅಂಗಡಿ ಬಳಿ ಗುಂಡಿಕ್ಕಿ ಹತ್ಯೆ ಮಾಡಲಾಗಿದೆ.

'ಮೆಹ್ತೋ ಅವರನ್ನು ಅಪರಾಹ್ನ 2ಕ್ಕೆ ಗುಂಡಿಕ್ಕಲಾಗಿದೆ. ಮಾಹಿತಿ ಲಭ್ಯವಾದ ಕೂಡಲೆ ಸ್ಥಳಕ್ಕೆ ತೆರಳಿ ಅವರನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ತೀವ್ರ ಗಾಯಗೊಂಡಿದ್ದ ಅವರು, ಚಿಕಿತ್ಸೆಯ ವೇಳೆ ಮೃತಪಟ್ಟರು. ಘಟನೆಗೆ ಕಾರಣ ಏನು ಎಂದು ತಿಳಿದುಬಂದಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ಇನ್ನೊಂದು ಘಟನೆಯಲ್ಲಿ ಸಾರಣ್ ಜಿಲ್ಲೆಯ ಬಿಸಾಹಿ ಬಳಿ ಬೈಕ್‌ನಲ್ಲಿ ಬಂದಿದ್ದ ದುಷ್ಕರ್ಮಿಗಳು ಶಿಕ್ಷಕ ಸಂತೋಷ್ ರೈ ಅವರನ್ನು ಗುಂಡಿಕ್ಕಿ ಕೊಂದಿದ್ದಾರೆ. ಬೆಳಿಗ್ಗೆ 9.30ಕ್ಕೆ ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಶಿಕ್ಷಕ ರೈ ಮತ್ತು ಅವರ ಸ್ನೇಹಿತನ ಮೇಲೆ ಗುಂಡು ಹಾರಿಸಿದ್ದಾರೆ ಎಂದು ತಿಳಿಸಿದ್ದಾರೆ.

ಯಶಸ್ಸು ಪಡೆಯಲು ಯಾವುದೇ ರಹಸ್ಯ ಮಾರ್ಗಗಳಿಲ್ಲ. ಅದು, ಸಿದ್ಧತೆ, ಕಠಿಣ ಪರಿಶ್ರಮ ಮತ್ತು ಸೋಲಿನಿಂದ ನಾವು ಕಲಿಯುವ ಪಾಠದ ಫಲಿತಾಂಶ ಆಗಿರುತ್ತದೆ.
–ಕಾಲಿನ್ ಪೊವೆಲ್

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಭೂಗೋಳಶಾಸ್ತ್ರ

ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು

21) ಹಿಮಾಚಲ/ ಮಧ್ಯ ಹಿಮಾಲಯದ ಬಗ್ಗೆ ಬರೆಯಿರಿ

ಉತ್ತರ:– ಹಿಮಾಚಲ (ಮಧ್ಯ ಹಿಮಾಲಯ)ವು ಮಹಾ ಹಿಮಾಲಯ ಮತ್ತು ಶಿವಾಲಿಕ್ ಬೆಟ್ಟಗಳ ನಡುವೆ ಸುಮಾರು 3600 ಮೀಟರ್‌ಗಳಿಂದ 4500 ಮೀಟರ್‌ಗಳಷ್ಟು ಸರಾಸರಿ ಎತ್ತರವನ್ನು ಹೊಂದಿವೆ. ಇವು 60 ರಿಂದ 80 ಕಿ.ಮೀ ಅಗಲವಾಗಿವೆ. ಇಲ್ಲಿ ಅನೇಕ ಸಮಾನಾಂತರ ಪರ್ವತ ಶ್ರೇಣಿಗಳಿವೆ. ಉದಾಹರಣೆಗೆ ಪೀರ್‌ಪಂಜಾಲ, ಮಹಾಭಾರತ ಶ್ರೇಣಿ, ನಾಗತಿಬ್ಬ, ಮಸ್ಸೋರಿ ಇತ್ಯಾದಿ. ಕಂಗ್ರಾ, ಕುಲು ಇವು ಪ್ರಸಿದ್ಧ ಕಣಿವೆಗಳಾಗಿವೆ. ಶಿಮ್ಲಾ, ಮಸ್ಸೂರಿ, ನೈನಿತಾಲ್, ರಾಣಿಖೇಟ್, ಚಕ್ರಾತ ಮತ್ತು ಡಾರ್ಜಿಲಿಂಗ್ ಮೊದಲಾದ ಗಿರಿಧಾಮಗಳಿವೆ.

22) ಮಹಾ ಹಿಮಾಲಯ (ಹಿಮಾದ್ರಿ) ಕುರಿತು ಬರೆಯಿರಿ

ಉತ್ತರ: ಇದು ಹಿಮಾಲಯ ಪರ್ವತಗಳಲ್ಲಿ ಅತಿ ಎತ್ತರವಾದ ಹಾಗೂ ಮೊದಲು ನಿರ್ಮಿತಗೊಂಡಿರುವ ಸರಣಿಯಾಗಿದೆ. ಇದು ಸಂಪೂರ್ಣವಾಗಿ ಹಿಮದಿಂದ ಆವೃತವಾಗಿದೆ. ಆದುದರಿಂದ ಇದನ್ನು ಹಿಮಾದ್ರಿ ಎಂದು ಕರೆಯುತ್ತಾರೆ. ಸಮುದ್ರ ಮಟ್ಟದಿಂದ ಈ ಶ್ರೇಣಿಯು 6000 ಮೀಟರ್‌ದಿಂದ 8000 ಮೀಟರ್‌ಗಿಂತಲೂ ಹೆಚ್ಚು ಎತ್ತರವಾಗಿದೆ. ಹಿಮಾಲಯದಲ್ಲಿ ಅತ್ಯಂತ ಎತ್ತರವಾದ ಶಿಖರಗಳು ಇವೆ. ಪ್ರಪಂಚದಲ್ಲಿಯೇ ಅತ್ಯುನ್ನತ ಶಿಖರವಾದ ಮೌಂಟ್ ಎವರೆಸ್ಟ್ (8848 ಮೀ) ನೇಪಾಳ ಮತ್ತು ಟಿಬೆಟ್ ಮಧ್ಯದಲ್ಲಿದೆ. ಈ ಸರಣಿಯಲ್ಲಿರುವ ಇತರೆ ಮುಖ್ಯ ಶಿಖರಗಳೆಂದರೆ ಕಾಂಚನ ಗಂಗಾ, ಧವಳಗಿರಿ, ನಂದಾದೇವಿ ಗೌರಿಶಂಕರ. ಇವು ಅನೇಕ ಹಿಮನದಿಗಳನ್ನು ಹೊಂದಿವೆ. ಅವುಗಳಲ್ಲಿ ಗಂಗೋತ್ರಿ ಪ್ರಸಿದ್ಧವಾಗಿದ್ದು ಗಂಗಾ ನದಿಯ ಉಗಮ ಸ್ಥಾನವಾಗಿದೆ. ಕಾಶ್ಮೀರದ ಬುರ್ಜಿಲ್, ಜೋಜಿಲಾ, ಹಿಮಾಚಲ ಪ್ರದೇಶದ ಬಾರಾಲಾಚಲಾ, ಮುಂತಾದ ಕಣಿವೆ ಮಾರ್ಗಗಳು ಉತ್ತಮ ಸಂಚಾರ ಸೌಲಭ್ಯವನ್ನು ಒದಗಿಸಿರುವುದಲ್ಲದೆ, ಪ್ರವಾಸಿಗರಿಗೆ ಆಕರ್ಷಣೀಯ ಕೇಂದ್ರಗಳಾಗಿವೆ.

ಇಲ್ಲಿ ಮಹಾ ಹಿಮಾಲಯ ಸರಣಿಯ ಉತ್ತರಕ್ಕಿರುವ ಮಡಿಕೆ ಪರ್ವತಗಳನ್ನು ಹೊರ ಹಿಮಾಲಯವೆಂದು ಕರೆಯುತ್ತಾರೆ. ಇದರಲ್ಲಿ ಕಾರಾಕೋರಮ್ ಪರ್ವತ ಶ್ರೇಣಿ ಹಾಗೂ ಕೈಲಾಸ ಪರ್ವತಗಳಿವೆ. ಗಾಡ್ವಿನ್‌ಆಸ್ಟಿನ್ ಅಥವಾ K2 ಎಂಬುದು ಭಾರತದಲ್ಲಿ ಅತಿ ಎತ್ತರವಾದ (8,611 ಮೀ) ಶಿಖರವಾಗಿದೆ. 'ಲಡಾಖ್' ಪ್ರಸ್ಥಭೂಮಿಯೂ ಇದೇ ಪ್ರದೇಶದಲ್ಲಿ ಕಂಡು ಬರುತ್ತದೆ

23) ಸಟ್ಲೇಜ್ ಗಂಗಾ ಮೈದಾನಗಳೆಂದು ಯಾವುದನ್ನು ಕರೆಯುತ್ತಾರೆ?

ಉತ್ತರ:– ಉತ್ತರ ಭಾರತದ ಮಹಾ ಮೈದಾನವನ್ನು ಸಟ್ಲೇಜ್ ಗಂಗಾ ಮೈದಾನವೆಂದು ಕರೆಯುತ್ತಾರೆ

24) ಉತ್ತರ ಭಾರತದ ಮಹಾ ಮೈದಾನಗಳನ್ನು ಸಂಚಯನ ಮೈದಾನಗಳೆನ್ನಲು ಕಾರಣವೇನು?

ಉತ್ತರ:– ಉತ್ತರ ಭಾರತದ ಮಹಾ ಮೈದಾನವು ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿರುವುದರಿಂದ ಇವುಗಳನ್ನು ಸಂಚಯನ ಮೈದಾನಗಳೆನ್ನುವರು

25) ಉತ್ತರದ ಮಹಾ ಮೈದಾನಗಳ ವಿಸ್ತರಣೆಯ ಬಗ್ಗೆ ಬರೆಯಿರಿ.

ಉತ್ತರ:– ಈ ಮೈದಾನವು ಪಶ್ಚಿಮದಲ್ಲಿ ಸಿಂಧೂ ನದಿಯ ಮೈದಾನದಿಂದ ಪೂರ್ವದಲ್ಲಿ ಬ್ರಹ್ಮಪುತ್ರ ಕಣಿವೆಯ ತನಕ ವಿಸ್ತರಿಸಿದೆ, ಪಶ್ಚಿಮದಿಂದ ಪೂರ್ವಕ್ಕೆ ಸುಮಾರು 2400 ಕಿ.ಮೀ ಉದ್ದವಾಗಿರುವ ಈ ಮೈದಾನವು 70ರಿಂದ 500 ಕಿ.ಮೀ ಅಗಲವಾಗಿದೆ.

26) ಭಾರತದ ಭೂಸ್ವರೂಪಗಳಲ್ಲಿ ಅತಿದೊಡ್ಡದು ಯಾವುದು?

ಉತ್ತರ:– ಪರ್ಯಾಯ ಪ್ರಸ್ಥಭೂಮಿ

24) ಭಾರತದ ಭೂಸ್ವರೂಪಗಳಲ್ಲಿ ಅತಿಪುರಾತನವಾದದ್ದು ಯಾವುದು?

ಉತ್ತರ:– ಪರ್ಯಾಯ ಪ್ರಸ್ಥಭೂಮಿ

25) ಪರ್ಯಾಯ ಪ್ರಸ್ಥಭೂಮಿಯ ವಿಸ್ತಾರ ಎಷ್ಟು?

ಉತ್ತರ:– ಸುಮಾರು 16 ಲಕ್ಷ ಚ.ಕಿ.ಮೀ.

26) ದಖನ್ ಪ್ರಸ್ಥಭೂಮಿಯ ಉತ್ತರದಲ್ಲಿರುವ ಬೆಟ್ಟಗಳನ್ನು ಹೆಸರಿಸಿ

ಉತ್ತರ:– ಮಹಾದೇವ, ಮೈಕಲ್ ಶ್ರೇಣಿ, ಅಮರ ಕಂಟಕ ಬೆಟ್ಟಗಳು, ರಾಜಮಹಲ ಬೆಟ್ಟಗಳು

27) ದಕ್ಷಿಣ ಭಾರತದಲ್ಲಿ ಅತ್ಯುನ್ನದ ಪ್ರದೇಶ/ಅತ್ಯುನ್ನತ ಶಿಖರ ಯಾವುದು?

ಉತ್ತರ:– ಅಣ್ಣಾಮಲೈ ಶ್ರೇಣಿಯಲ್ಲಿರುವ ಆನೈಮುಡಿ ಶಿಖರ

28) ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು ಎಲ್ಲಿ ಸಂಧಿಸುತ್ತವೆ?

ಉತ್ತರ:– ನೀಲಗಿರಿ ಬೆಟ್ಟ

29) ಯಾವ ಮೈದಾನಗಳನ್ನು ಡೂನ್‌ಗಳೆಂದು ಕರೆಯುತ್ತಾರೆ?

ಉತ್ತರ:– ಹಿಮಾಲಯದಲ್ಲಿ ಸಮತಟ್ಟಾದ ಕಿರಿದಾದ ಸಮ್ಮತಟ್ಟಾದ ಮೈದಾನಗಳಿವೆ ಈ ಮೈದಾನಗಳನ್ನು ಡೂನ್‌ಗಳು ಎಂದು ಕರೆಯುವರು. ಉದಾ : ಡೆಹರಾಡೂನ್, ಕೋಟಾ, ಪಾಟ್ಲಿ ಚೌಕಾಂಬಾ, ಉದಾಂಪೂರ ಮತ್ತು ಕೋಟ್ಲಾಗಳು.

30) ಹಿಮಾಚಲ/ ಮಧ್ಯ ಹಿಮಾಲಯದಲ್ಲಿರುವ ಕಣಿವೆಗಳನ್ನು ಹೆಸರಿಸಿ

ಉತ್ತರ:– ಹಿಮಾಚಲ/ ಮಧ್ಯ ಹಿಮಾಲಯದಲ್ಲಿರುವ ಕಣಿವೆಗಳೆಂದರೆ ಕಂಗ್ರಾ, ಕುಲು ಕಣಿವೆಗಳಾಗಿವೆ.

31) ಹಿಮಾಚಲ/ ಮಧ್ಯ ಹಿಮಾಲಯದಲ್ಲಿರುವ ಗಿರಿಧಾಮಗಳನ್ನು ಹೆಸರಿಸಿ

ಉತ್ತರ:– ಶಿಮ್ಲಾ, ಮಸ್ಸೂರಿ, ನೈನಿತಾಲ್, ರಾಣಿಖೇಟ್, ಚಕ್ರಾತ ಮತ್ತು ಡಾರ್ಜಿಲಿಂಗ್ ಮೊದಲಾದ ಗಿರಿಧಾಮಗಳಿವೆ.

32) ಪ್ರಪಂಚದಲ್ಲಿಯೇ ಅತ್ಯುನ್ನತ ಶಿಖರವಾದ ಮೌಂಟ್ ಎವರೆಸ್ಟ್ ಹಿಮಾಲಯದ ಎಲ್ಲಿದೆ?

ಉತ್ತರ:– ಮಹಾಹಿಮಾಲಯ ಹಿಮಾದ್ರಿ

33) ಮೌಂಟ್ ಎವೆರೆಸ್ಟ್‌ನ ಎತ್ತರ ಎಷ್ಟು?

ಉತ್ತರ:– 8848 ಮೀ

34) ಮಹಾ ಹಿಮಾಲಯದಲ್ಲಿರುವ ಪ್ರಮುಖ ಶಿಖರಗಳನ್ನು ಹೆಸರಿಸಿ

ಉತ್ತರ:– ಕಾಂಚನ ಗಂಗಾ, ಧವಳಗಿರಿ, ನಂದಾದೇವಿ ಗೌರಿಶಂಕರ.

35) ಭಾರತದಲ್ಲಿರುವ ಅತಿಎತ್ತರವಾದ ಶಿಖರ ಯಾವುದು?

ಉತ್ತರ:– ಗಾಡ್ವಿನ್‌ಆಸ್ಟಿನ್ ಅಥವಾ K2

36) ಗಾಡ್ವಿನ್‌ಆಸ್ಟಿನ್ ಅಥವಾ K2 ಶಿಖರದ ಎತ್ತರ ಎಷ್ಟು?

ಉತ್ತರ:– 8,611ಮೀ.

37) ಬಬರ್ ಮಣ್ಣು ಎಲ್ಲಿ ನೋಡಬಹುದಾದಿದೆ?

ಉತ್ತರ:– ಹಿಮಾಲಯದ ತಪ್ಪಲಿನಲ್ಲಿ ನದಿಗಳು ಮೈದಾನವನ್ನು ಪ್ರವೇಶಿಸುವ ಕಡೆ ಅವುಗಳು ಹೊತ್ತು ತಂದ ದಪ್ಪ ಶಿಲಾ ಚೂರುಗಳನ್ನು ಸಂಚಯಿಸಿದೆ. ಇದನ್ನೆ ಬಬರ್ ಎಂದು ಕರೆಯುವರು. ಹೀಗಾಗಿ ಇಲ್ಲಿಯೇ ಬಬರ್ ಮಣ್ಣನ್ನು ನೋಡಬಹುದಾಗಿದೆ.

38) ಯಾವುದನ್ನು ಭಂಗರ್ ಮಣ್ಣು ಎಂದು ಕರೆಯುವರು?

ಉತ್ತರ:– ಪುರಾತನ ಕಾಲದಲ್ಲಿ ಸಂಚಯಿತವಾಗಿರುವ ಮೆಕ್ಕಲು ಮಣ್ಣಿನ ವಲಯವನ್ನು ಭಂಗರ್ ಎಂದು ಕರೆಯುವರು.

39) ಖದರ್ ಮಣ್ಣು ಯಾವುದನ್ನು ಎಂದು ಕರೆಯುವರು?

ಉತ್ತರ:– ಇತ್ತೀಚಿನ ಅವಧಿಯಲ್ಲಿ ಸಂಚಯಿತಗೊಂಡು ನಿರ್ಮಿತವಾಗಿರುವ ಮೆಕ್ಕಲು ಮಣ್ಣನ್ನು ಖದರ್ ಎಂದು ಕರೆಯುವರು

40) ರಾಧಾನಾಥ್ ಸಿಕ್ದರ್ ಯಾರು?

ಉತ್ತರ:– ಮೌಂಟ್ ಎವರೆಸ್ಟ್ ಪರ್ವತದ ಎತ್ತರವನ್ನು ಮೊದಲ ಬಾರಿಗೆ ನಿಖರವಾಗಿ ಗುರುತಿಸಿದ ಭಾರತೀಯ.

41) ಯಾಕೆ ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಪ್ರಾಮುಖ್ಯತೆಯನ್ನು ಪಡೆದಿದೆ ?

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

PHYSICS

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

Chapter – 1

ELECTRIC CHARGES AND FIELDS

Problem:-

(…….Contd)

Again, $q = \sigma \times 4\pi R^2$,

where, σ = surface charge density of the charge on the shell.

Substituting for q as above in the eqn (i) we get

$$E = \frac{1}{4\pi\epsilon_0}\frac{\sigma \times 4\pi R^2}{R^2}$$

$$(or)\ E = \frac{\sigma}{\epsilon_0} \quad ....(ii)$$

Hence, the electric field intensity E is maximum at the surface of the uniformly charged thin spherical shell.

Electric Field Intensity due to a uniformly charged thin spherical shell (hollow sphere)

(c) At a point inside the shell.

Let P be the point inside the shell at a distance r' (r' < R) from the centre of the shell.

Draw a Gaussian sphere of radius r' with O as the centre.

According to Gauss' theorem,

$$\oint_S \vec{E}.d\vec{S} = \frac{q}{\epsilon_0}$$

Here, Gaussian surface encloses no charge i.e.,

$$q = 0$$

$$\therefore \oint_S \vec{E}.d\vec{S} = 0 \quad (or) \quad E = 0$$

Hence, there is no electric field inside a uniformly charged thin spherical shell.

Variation of Electric field intensity(E) with distance(r) from the centre (O) of the charged spherical shell.



i) When r < R, then E = 0

ii) When, r = R,

$$E = \frac{1}{4\pi\epsilon_0}\frac{q}{R^2} = \frac{\sigma}{\epsilon_0} \text{(i.e. maximum value)}$$

iii) When r > R, $E = \frac{1}{4\pi\epsilon_0}\frac{q}{R^2}$ (or) $E \alpha \frac{1}{r^2}$

Thus, electric field intensity is zero inside the charged sphere. It is maximum at the surface of the sphere and then varies inversely with (distance) beyond the surface of the charged sphere.

Electric Field Intensity due to a uniformly charged solid sphere

Consider a non-conducting solid sphere of radius R on which positive charge q is uniformly distributed. Let ρ be the volume charged density (i.e., charge per unit volume) of the solid sphere.

$$\text{i.e., } \rho = \frac{\text{Charge on the solid sphere}}{\text{Volume of the solid sphere}} = \frac{q}{\frac{4}{3}\pi R^3}$$

a) At a point outside the solid sphere

Let P be a point outside the sphere at a distance r (r > R) from the centre of the sphere. Draw a **Gaussian surface** in the form of a sphere of radius r with O as the centre. The electric field intensity $\vec{E}$ is directed radially outwards (due to + ve charge).

According to Gauss' theorem,

$$\oint_S \vec{E}.d\vec{S} = \frac{q}{\epsilon_0} \ (or) \oint_S ES\cos\theta = \frac{q}{\epsilon_0}$$

Since $\vec{E}$ and $d\vec{S}$ are along the same direction, so $\theta = 0^0$

$$\therefore \oint_S E\,dS\cos 0^0 = \frac{q}{\epsilon_0} \ (or) \oint_S E\,dS = \frac{q}{\epsilon_0}.$$

Since E is same at all the points on the surface of Gaussian surface,

$$\therefore E\oint_S dS = \frac{q}{\epsilon_0} \quad ...(i)$$

Now, $\oint_S dS$ = Surface area of the Gaussian sphere

$$= 4\pi r^2$$

$$\therefore E \times 4\pi r^2 = \frac{q}{\epsilon_0} \ (or) \ E = \frac{1}{4\pi\epsilon_0}\frac{q}{r^2}$$

Thus, electric field intensity due to a charged solid sphere is such, as if whole of the charge were concentrated at the centre of the solid sphere.

b) At a point on the surface of the solid sphere

Here radius of Gaussian surface, r = R (i.e. radius of sphere)

$\therefore$ The eqn $E = \frac{1}{4\pi\epsilon_0}\frac{q}{r^2}$ becomes $E = \frac{1}{4\pi\epsilon_0}\frac{q}{R^2}$

c) At a point inside a solid sphere

Let P be the point inside a solid sphere at a distance r (r < R) from the centre O.

ತಂತ್ರಜ್ಞಾನದ ಮೋಹ ಆಧುನಿಕ ಮೂಢನಂಬಿಕೆ?!

ಬೋಧನೆಯಲ್ಲಿ ತಂತ್ರಜ್ಞಾನವನ್ನು ಅತಿಯಾಗಿ ಅವಲಂಬಿಸುವುದು ವಿದ್ಯಾರ್ಥಿಗಳ ಆಲೋಚನಾ ಸಾಮರ್ಥ್ಯವನ್ನು ಕಸಿದು ಅವರನ್ನು ಯಾಂತ್ರಿಕವಾಗಿಸುತ್ತಿದೆಯೇ?

• ವಿರಾಟ್ ಪದ್ಮನಾಭ

ಜ್ಞಾನ, ತಂತ್ರಜ್ಞಾನ ಮತ್ತು ಕಲಿಕೆ- ಈ ಮೂರೂ ಪದಗಳು ನೀತಿ ನಿರೂಪಕರು, ಶಿಕ್ಷಣ ತಜ್ಞರು ಹಾಗೂ ಬೋಧಕರಲ್ಲಷ್ಟೇ ಅಲ್ಲದೆ ವಿದ್ಯಾರ್ಥಿಗಳಲ್ಲೂ ದ್ವಂದ್ವ, ಗೊಂದಲವನ್ನು ಹುಟ್ಟಿಸುತ್ತಲೇ ಇವೆ. ವೃತ್ತಿಪರ ಮತ್ತು ವ್ಯಕ್ತಿಗತ ಬದುಕನ್ನು ಸಮೃದ್ಧಗೊಳಿಸಿಕೊಳ್ಳುವ ಶ್ರೇಷ್ಠ ಮಾರ್ಗವಾಗಿರುವ ಶಿಕ್ಷಣವು ತಂತ್ರಜ್ಞಾನದ ಕಡೆಗೇ ಹೆಚ್ಚು ವಾಲಿದಾಗ ಇಂಥದ್ದೊಂದು ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಆಗ ವಿದ್ಯಾರ್ಥಿಗಳನ್ನು ಮಾನವ ಸಂಪನ್ಮೂಲವನ್ನಾಗಿ ಪರಿವರ್ತಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶೈಕ್ಷಣಿಕ ಕಲಿಕಾ ಕ್ರಮಗಳು ಈಚಿನ ವರ್ಷಗಳಲ್ಲಿ ಆಮೂಲಾಗ್ರವಾಗಿ ಬದಲಾಗಿವೆ. ಸಾಂಪ್ರದಾಯಿಕ ತರಗತಿ ಬೋಧನೆಯ ಬದಲು ಸ್ಮಾರ್ಟ್ ಬೋರ್ಡ್, ಪವರ್ ಪಾಯಿಂಟ್ ಪ್ರೆಸೆಂಟೇಷನ್, ಲರ್ನಿಂಗ್ ನೋಟ್ಸ್, ಸೆಲ್ಫ್ ಲರ್ನಿಂಗ್ ಸಿಸ್ಟಮ್‌ನಂತಹ ಹಲವು ವಿಧಾನಗಳನ್ನು ಶಾಲಾ–ಕಾಲೇಜುಗಳು ಅನುಸರಿಸುತ್ತಿವೆ. ಆದರೆ, ಈ ಹಿಂದಿನ ಸಾಂಪ್ರದಾಯಿಕ ಬೋಧನೆಯ ವಿಧಾನದಲ್ಲಿ ಇದ್ದ ಅಂತಃಸತ್ವವನ್ನು ವಿಸ್ತರಿಸುವ ಪ್ರಯತ್ನಗಳು ಮಾತ್ರ ಕಾಣುವುದಿಲ್ಲ. ಯಾಂತ್ರಿಕತೆಯ ಅತಿಯಾದ ಅವಲಂಬನೆಯಿಂದ, ಹೊಸದಾಗಿ ಯೋಚಿಸುವ ಸಾಮರ್ಥ್ಯವನ್ನು ಸೃಜಿಸುವ ತರಗತಿ ಬೋಧನೆಯ ಶಕ್ತಿ ಕುಂದುತ್ತಿದೆ.

ತರಗತಿಯ ಬೋರ್ಡ್ ಸ್ಮಾರ್ಟ್ ಆಗಿ ಬದಲಾದಾಗ ಅಲ್ಲಿ ಮೂಡುವ ಅಕ್ಷರಗಳು, ಪರದೆಯ ಮುಖಾಂತರ ಅನಾವರಣಗೊಳ್ಳುವ ದೃಶ್ಯಗಳು, ಪೂರಕ ಟಿಪ್ಪಣಿಗಳ ಉಲ್ಲೇಖ ಎಲ್ಲವೂ ವಿಶೇಷ ಅನುಭವ ನೀಡುವುದಂತೂ ನಿಜ. ಪ್ರಾಥಮಿಕ ಶಾಲಾ ಹಂತದಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (ಡಿಪಿಇಪಿ) ಅನುಷ್ಠಾನಕ್ಕೆ ಬಂದಿದ್ದು ಈ ದೃಷ್ಟಿಯಿಂದಲೇ. ಕಲಿ-ನಲಿ ಪರಿಕಲ್ಪನೆಗೆ ಅನುಗುಣವಾಗಿ ತರಗತಿಗಳನ್ನು ಆಸಕ್ತಿದಾಯಕವಾಗಿಸುವ ಉದ್ದೇಶ ಈ ಯೋಜನೆಯ ಹಿಂದಿತ್ತು. ಆದರೆ ಈ ಕಾರಣಕ್ಕೆ ರಂಜನೀಯ ಅಂಶಗಳಿಗೇ ಹೆಚ್ಚು ಆದ್ಯತೆ ನೀಡುತ್ತಾ ಹೋದರೆ ಕಲಿಕೆ ಜಾಳುಜಾಳಾಗುತ್ತದೆ. ಎಲ್ಲವನ್ನೂ ದೃಶ್ಯದ ಮೂಲಕವೇ ನೆನಪಿಸಿಕೊಳ್ಳುವ ಮತ್ತು ಕಲಿಕಾ ಸಲಕರಣೆಗಳ ಮೂಲಕ ಅರ್ಥಕ್ಕೆ ದಕ್ಕಿಸಿಕೊಳ್ಳುವ ಉತ್ಸಾಹವು ಜ್ಞಾನಾರ್ಜನೆಯ ಹಾದಿಯನ್ನು ಸುಲಭವಾಗಿಸಬಹುದು. ಆದರೆ ಕಲಿಕೆಯ ಶಕ್ತಿಯನ್ನು ವೃದ್ಧಿಸುವುದಿಲ್ಲ. ರಚನಾತ್ಮಕ ಚಿಂತನೆಯ ಸಾಮರ್ಥ್ಯವನ್ನು ರೂಢಿಸುವುದಿಲ್ಲ.

ಈ ಸೂಕ್ಷ್ಮವನ್ನು ಅರಿಯದೇ ಬೋಧನೆಯ ಕ್ರಮಗಳನ್ನು ಅನುಸರಿಸಿದರೆ, ವಿದ್ಯಾರ್ಥಿಗಳು ಪರೀಕ್ಷೆ ಹತ್ತಿರವಾದಾಗ ಪವರ್ ಪಾಯಿಂಟ್ ಪ್ರೆಸೆಂಟೇಷನ್‌ನ ಸ್ಲೈಡ್‌ಗಳಲ್ಲಿರುವ ಬುಲೆಟ್ ಪಾಯಿಂಟ್‌ಗಳನ್ನಷ್ಟೇ ಉರು ಹೊಡೆದು ಯಾಂತ್ರಿಕವಾಗಿ ಉತ್ತರ ಬರೆಯುತ್ತಾರೆ. ಇದು ಸಂತೆಯ ಹೊತ್ತಿಗೆ ಮೂರು ಮೊಳ ನೇಯುವ ಕೆಲಸದಂತೆ ಆಗುತ್ತದೆ. ಈ ಉತ್ತರಪತ್ರಿಕೆಯಲ್ಲಿ ಗಂಧಗಾಳಿಯೇ ಇಲ್ಲ, ಬರೆದದ್ದೆಲ್ಲಾ ಟೊಳ್ಳು ಎಂದು ಮೌಲ್ಯಮಾಪಕರು ಗೊಣಗುವುದು ಇದೇ ಕಾರಣಕ್ಕೆ. ಸ್ಮಾರ್ಟ್ ಬೋರ್ಡ್, ವಿಡಿಯೊಗಳ ರೆಫರೆನ್ಸ್, ಚಿತ್ರವಿನ್ಯಾಸಗಳ ಬಳಕೆ, ನಿಜಜೀವನದ ವಿವರಗಳ ಉಲ್ಲೇಖ ಸೇರಿದಂತೆ ತಾಂತ್ರಿಕತೆಯನ್ನು ಕೇಂದ್ರೀಕರಿಸಿಕೊಂಡ ಹೊಸ ಪ್ರಯೋಗಗಳನ್ನು ನಡೆಸಿದ ಮೇಲೂ ಎಷ್ಟೋ ವಿದ್ಯಾರ್ಥಿಗಳ ಉತ್ತರ ಟೊಳ್ಳಾಗೇ ಇರುವುದು ಯಾಕೆಂದರೆ, ಅವರು ಪರೀಕ್ಷಾ ಕೊಠಡಿಗೆ ಬಂದ ನಂತರ ಯೋಚಿಸಲು ಆರಂಭಿಸಿರುತ್ತಾರೆ. ಅದಕ್ಕಿಂತ ಮುಂಚೆ ಪಾಯಿಂಟ್‌ಗಳನ್ನು ಉರು ಹೊಡೆದಿರುತ್ತಾರೆ ಅಷ್ಟೆ. ಅವುಗಳ ಬಗ್ಗೆ ಯೋಚಿಸಿರುವುದೇ ಇಲ್ಲ.

ವಿದ್ಯಾರ್ಥಿಗಳಲ್ಲಿ ಪಠ್ಯವಿಷಯದ ಪರಿಕಲ್ಪನೆಯನ್ನು ಬಹು ಆಯಾಮಗಳಲ್ಲಿ ಗಮನಿಸುವ ಒತ್ತಾಸೆಯನ್ನು ಮೂಡಿಸಬೇಕು. ಅದಕ್ಕೆ ಅನುಗುಣವಾಗಿ ತಾಂತ್ರಿಕ ಸಲಕರಣೆಗಳನ್ನು ಪೂರಕವಾಗಿಸಿಕೊಂಡು ತರಗತಿಯ ಚರ್ಚೆಯನ್ನು ಭಿನ್ನವಾಗಿಸಬೇಕು. ಇದರಿಂದ ತರಗತಿಯು ಆಸಕ್ತಿದಾಯಕವೂ ಆಗುತ್ತದೆ, ಹೊಸ ಚರ್ಚೆಗಳ ಹುಟ್ಟಿಗೂ ಕಾರಣವಾಗುತ್ತದೆ, ವಿದ್ಯಾರ್ಥಿಗಳ ಅರಿವಿನ ಸಾಮರ್ಥ್ಯವನ್ನೂ ವಿಸ್ತರಿಸುತ್ತದೆ.

ಲೇಖಕ: ಸಹಾಯಕ ಪ್ರಾಧ್ಯಾಪಕ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಎಸ್‌ಡಿಎಂ ಸ್ನಾತಕೋತ್ತರ ಕೇಂದ್ರ, ಉಜಿರೆ

ಪ್ರಶ್ನೆ ಹುಟ್ಟಲಿ

ತಂತ್ರಜ್ಞಾನವನ್ನು ಬಳಸಿ ತರಗತಿಯನ್ನು ನಿರ್ವಹಿಸುವಾಗ ಬೋಧಕರಿಗೆ ಇರುವಷ್ಟೇ ಎಚ್ಚರದ ಪ್ರಜ್ಞೆ ವಿದ್ಯಾರ್ಥಿಗಳಲ್ಲೂ ಇರಬೇಕು. ಹಾಗಿದ್ದಾಗ ಪ್ರಶ್ನೆಗಳು ಹುಟ್ಟುತ್ತವೆ. ಪ್ರಶ್ನೆಗಳನ್ನು ಕೇಳುತ್ತಾ ರಚನಾತ್ಮಕ ಚಿಂತನೆಯ ಶಕ್ತಿಯನ್ನು ರೂಪಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳಬೇಕು ಎಂಬ 'ಶೈಕ್ಷಣಿಕ ಹಸಿವು' ಶಿಕ್ಷಕರಲ್ಲೂ ಇರಬೇಕು. ಆಗ ಮಾತ್ರ ತಂತ್ರಜ್ಞಾನ ಆಧಾರಿತ ತರಗತಿಗಳು ಅತಿಹೆಚ್ಚು ಪರಿಣಾಮಕಾರಿ ಆಗಲು ಸಾಧ್ಯ.

ಓದುವುದೋ ನೋಡುವುದೋ?

ಸಮಾಧಾನ
ಡಾ. ಡಿ.ಎಂ.ಹೆಗಡೆ
ಸಮಾಲೋಚಕರು

• ಹದಿವಯಸ್ಸಿನ ನನ್ನ ಮಗ ಪುಸ್ತಕದ ಓದಿಗಿಂತ ಆನ್‌ಲೈನ್ ಪ್ರಪಂಚದಲ್ಲೇ ಹೆಚ್ಚು ಕಾಲ ಕಳೆಯುತ್ತಾನೆ. ಪುಸ್ತಕ ಓದಿದರಷ್ಟೇ ಜ್ಞಾನ ಸಂಪಾದಿಸಬಹುದು ಎಂಬುದೆಲ್ಲ ನಿಮ್ಮ ಕಾಲಕ್ಕಾಯಿತು, ಈಗ ಆನ್‌ಲೈನ್ ಮೂಲಕವೂ ಜ್ಞಾನ ಸಂಪಾದಿಸಬಹುದು ಎಂದು ವಾದಿಸುತ್ತಾನೆ. ಆದರೆ, ನೋಡಿದ್ದಕ್ಕಿಂತ ಓದಿದ್ದು ಮನಸ್ಸಿನಾಳಕ್ಕೆ ಚೆನ್ನಾಗಿ ಇಳಿಯುತ್ತದೆ ಎನ್ನುವುದು ನನ್ನ ಅನಿಸಿಕೆ. ಪುಸ್ತಕ ಓದಿನತ್ತ ಅವನ ಆಸಕ್ತಿ ಕೆರಳುವಂತೆ ಮಾಡುವುದು ಹೇಗೆ?

ಪವಿತ್ರಾ ಕೆ., ಕೊಪ್ಪಳ

ಇವತ್ತಿನ ಸಂದರ್ಭದಲ್ಲಿ ಉತ್ತರಿಸುವುದಕ್ಕೆ ಇದು ನಿಜಕ್ಕೂ ಕ್ಲಿಷ್ಟಕರವಾದ ಪ್ರಶ್ನೆ. ಕಾಲಚಕ್ರದಲ್ಲಿ ನಾವು ಬಹುತೇಕರು ಓದುವುದನ್ನು ಬಿಡುತ್ತಾ, ವಿಡಿಯೊಗಳನ್ನು ನೋಡುತ್ತಾ, ತಿಳಿದುಕೊಳ್ಳುತ್ತಾ, ತಿಳಿಸುತ್ತಾ ವ್ಯವಹರಿಸುವ ಕಾಲಘಟ್ಟಕ್ಕೆ ಬಂದಿದ್ದೇವೆ. ಪುಣ್ಯವಶಾತ್ ಇನ್ನೂ ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಓದುವುದು, ಬರೆಯುವುದನ್ನು ಕಲಿಸಲಾಗುತ್ತಿದೆ. ಹಾಗಾಗಿ, ಅಷ್ಟರಮಟ್ಟಿಗೆ ಅಕ್ಷರಗಳು ಉಳಿದುಕೊಂಡಿವೆ. ಮುಂದೆ ಇದರಲ್ಲಿಯೂ ಏನೇನು ಬದಲಾವಣೆಗಳು ಆಗುತ್ತವೆಯೋ ಕಾಲವೇ ಹೇಳಬೇಕು.

ಇರಲಿ, ನೀವು ಅದರ ಬಗ್ಗೆ ಅತಿಯಾಗಿ ವ್ಯಾಕುಲರಾಗಬೇಕಿಲ್ಲ. ಪಿಯುಸಿಯಲ್ಲಿ ಪುಸ್ತಕಗಳನ್ನು ಓದದೆಯೆ, ಬರೀ ಯೂಟ್ಯೂಬ್ ವಿಡಿಯೊ ಪಾಠಗಳನ್ನು ನೋಡಿಕೊಂಡು, ಕಾಲೇಜಿನ ಪಾಠಗಳನ್ನೂ ಆನ್‌ಲೈನ್‌ನಲ್ಲಿ ನೋಡಿಕೊಂಡು, ಪರೀಕ್ಷೆಯಲ್ಲಿ ಒಳ್ಳೆಯ ಅಂಕ ಗಳಿಸಿ ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್ ಕೋರ್ಸುಗಳಿಗೆ ಸೇರಿರುವ ಕೆಲವರು ನನಗೆ ಗೊತ್ತು!

ಇನ್ನು, ಒಬ್ಬೊಬ್ಬರ ಕಲಿಯುವ ಕ್ರಮ, ನೆನಪಿಟ್ಟುಕೊಳ್ಳುವ ರೀತಿ ಭಿನ್ನವಾಗಿರುತ್ತದೆ. ಕೆಲವರಿಗೆ ಓದಿದ್ದು ನೆನಪಿದ್ದರೆ, ಇನ್ನು ಕೆಲವರಿಗೆ ನೋಡಿದ್ದು, ಕೇಳಿದ್ದು ಮನಸ್ಸಿನಾಳಕ್ಕಿಳಿದು ಬಹಳ ಕಾಲ ನೆನಪಿರುತ್ತದೆ. ಪುಸ್ತಕ ಓದುವುದು, ವಿಡಿಯೊಗಳನ್ನು ನೋಡುವುದು ಎರಡೂ ಮಹತ್ವವಾದ ಕಲಿಯುವ ಮಾಧ್ಯಮಗಳು. ವ್ಯಕ್ತಿಗೆ ಯಾವುದು ಇಷ್ಟವೋ ಅದರ ಮೂಲಕ ಕಲಿಯುತ್ತಾನೆ. ಅದು ಅವನ ಇಚ್ಛೆಗೆ ಬಿಟ್ಟಿದ್ದು. ಓದುವುದರಿಂದ ಮನುಷ್ಯನ ವಿಚಾರಶೀಲತೆ ಚುರುಕಾಗುತ್ತದೆ ಹಾಗೂ ಕ್ರಿಯಾಶೀಲತೆ, ಕಾಲ್ಪನಿಕ ಶಕ್ತಿ ಜಾಸ್ತಿಯಾಗುತ್ತದೆ ಎನ್ನುವ ವಾದವಿದೆ. ಇಲ್ಲಿಯವರೆಗಂತೂ ಅದು ನಿಜವೇ ಆಗಿದೆ. ಈಗ ನಿಮ್ಮ ಮಗನಿಗೆ ಆನ್‌ಲೈನ್ ಪ್ರಪಂಚದಲ್ಲಿ ವಿಹರಿಸುವುದು ತಿಳಿದಿದೆ. ಅದರಿಂದ ಅವನ ಕಣ್ಣುಗಳಿಗೆ ಆಗಬಹುದಾದ ತೊಂದರೆಯ ಬಗ್ಗೆ ತಿಳಿಸಿ ಹೇಳೋಣ. ಮುಂದೆ ಅವನಲ್ಲಿಯೂ ಸಕಾರಾತ್ಮಕ ಬದಲಾವಣೆಗಳು ಬರಬಹುದು, ಕಾಯೋಣ. ಯಾವುದಕ್ಕೂ ಅವನ ಕಾರ್ಯಚಟುವಟಿಕೆಗಳ ಮೇಲೆ ಒಂದು ಕಣ್ಣಿಟ್ಟಿರಿ. ಅವನ ಗೆಳೆಯರ ಬಗ್ಗೆ ಕೂಡ. ಮಕ್ಕಳು ಸರಿದಾರಿಯಲ್ಲಿ ಮುಂದುವರಿಯುವಂತೆ ಮಾರ್ಗದರ್ಶನ ಮಾಡುವುದಷ್ಟೇ ಪಾಲಕರು ಹಾಗೂ ಹಿರಿಯರ ಕೆಲಸ.

'ತಾಳಕ್ಕೆ ತಕ್ಕಂತೆ ಕುಣಿಯಬೇಕು, ಕಾಲಕ್ಕೆ ತಕ್ಕಂತೆ ನಡೆಯಬೇಕು' ಎನ್ನುವ ರಾಜಣ್ಣನವರ ಮುತ್ತಿನಂತಹ ಮಾತನ್ನು ನೆನಪಿಟ್ಟುಕೊಂಡು, ನಿರಾಳವಾಗಿ ಬದುಕುವುದನ್ನು ನಾವು ರೂಢಿಸಿಕೊಳ್ಳಬೇಕು. ಶುಭವಾಗಲಿ.

ವಿದ್ಯಾರ್ಥಿ ವೇತನ ಕೈಪಿಡಿ

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಎಂಬಿಎ ವಿದ್ಯಾರ್ಥಿವೇತನ

ಅರ್ಹತೆ: ಭಾರತೀಯ ವಿದ್ಯಾರ್ಥಿಯಾಗಿರಬೇಕು. ಕುಟುಂಬದ ಗರಿಷ್ಠ ವಾರ್ಷಿಕ ಆದಾಯ ಮಿತಿ ₹ 6 ಲಕ್ಷ. ಅರ್ಜಿದಾರರು ತಮ್ಮ ಆಧಾರ್ ಸಂಖ್ಯೆಗೆ ಲಿಂಕ್ ಮಾಡಲಾದ ಮೊಬೈಲ್ ಸಂಖ್ಯೆಯನ್ನು ಹೊಂದಿರಬೇಕು. ಎರಡು ವರ್ಷಗಳ ಅಧ್ಯಯನಕ್ಕೆ ₹ 2 ಲಕ್ಷದ ನೆರವು (ವರ್ಷಕ್ಕೆ ಒಂದು ಲಕ್ಷ).

ಅರ್ಜಿ ಸಲ್ಲಿಸಲು ಕೊನೇ ದಿನ: 20-07-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಹೆಚ್ಚಿನ ಮಾಹಿತಿಗೆ: Short Url: www.b4s.in/praja/IFBMS6

'ಸ್ಟೆಮ್ ಸ್ಟಾರ್' ಆಗಬಯಸುವಿರಾ?

ವಿದ್ಯಾರ್ಥಿನಿಯರನ್ನು ಬೆಂಬಲಿಸಲು ಇನ್ಫೊಸಿಸ್ ಫೌಂಡೇಷನ್ ಕೈಗೊಂಡಿರುವ ಉಪಕ್ರಮ ಇದು. ಸ್ಟೆಮ್ (ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ) ವಿಭಾಗಗಳಲ್ಲಿ ಪದವಿ ಪಡೆಯಲು ಇಚ್ಛಿಸುವ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು.

ಅರ್ಹತೆ: 12ನೇ ತರಗತಿಯ ಪರೀಕ್ಷೆಯನ್ನು ಪೂರ್ಣಗೊಳಿಸಿರಬೇಕು. ಎನ್‌ಐಆರ್‌ಎಫ್ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಪದವಿಯ ಮೊದಲ ವರ್ಷಕ್ಕೆ ದಾಖಲಾದವರು, ಎರಡನೇ ವರ್ಷದ ಬಿ.ಆರ್ಕ್ ವಿದ್ಯಾರ್ಥಿಗಳು, ಐದು ವರ್ಷಗಳ ಇಂಟಿಗ್ರೇಟೆಡ್ ಕೋರ್ಸ್‌ಗಳಿಗೆ ದಾಖಲಾದವರು, ಎನ್‌ಐಆರ್‌ಎಫ್ ಶ್ರೇಯಾಂಕದಲ್ಲಿ ಪಟ್ಟಿ ಮಾಡದ ಸರ್ಕಾರಿ ಕಾಲೇಜುಗಳಲ್ಲಿ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕೋರ್ಸ್‌ಗಳನ್ನು ಮುಂದುವರಿಸಲು ಉದ್ದೇಶಿಸಿರುವವರೂ ಅರ್ಜಿ ಸಲ್ಲಿಸಬಹುದು. ಕುಟುಂಬದ ವಾರ್ಷಿಕ ಆದಾಯ ₹ 8 ಲಕ್ಷ ಮೀರಿರಬಾರದು.

ಆರ್ಥಿಕ ಸಹಾಯ: ವಾರ್ಷಿಕ ₹ 1 ಲಕ್ಷ.

ಅರ್ಜಿ ಸಲ್ಲಿಸಲು ಕೊನೇ ದಿನ: 15-09-2025. ಮಾಹಿತಿಗೆ: Short Url: www.b4s.in/praja/ISTS3

www.msec.ac.in
MS | ENGINEERING COLLEGE
ESTD: 2002
Navarathna Agrahara, Sadahalli PO, Near Bangalore International Airport, Bangalore 562 110
ACCREDITATION & RECOGNITION
NAAC ACCREDITED Govt. of India
UGC 2(F) STATUS Govt. of India
APPROVED BY AICTE Govt. of India
AFFILIATED TO VTU Govt. of Karnataka
ISO 9001-2008 Certified
INSTITUTION'S INNOVATION COUNCIL
Striving for Excellence™
At MSEC, we don't just educate - we nurture ambition, build confidence, and shape character. With world-class faculty, cutting-edge labs, and a campus that sparks innovation, there's no limit to what our students can achieve.
Join MSEC and build a future grounded in strength, guided by excellence.

ACADEMIC COURSES
Bachelor of Engineering (B.E.)
• Computer Science & Engg. (CSE)
• Computer Science (Cyber Security)
• Computer Science (Data Science)
• Information Science & Engg. (ISE)
• Artificial Intelligence & Machine Learning (AI & ML)
• Electronics & Communication Engg. (ECE)
• Mechanical Engg.
• Civil Engg.
P.G. Courses (M.Tech)
- CSE
- Machine Design
- VLSI & Embedded System
Ph.D Courses
• CSE / ECE / ME
MS Center for Advanced Studies
BBA, BCA, B.Com, MBA, MCA
MS PU College
PCMB, PCMC, CEBA
CET CODE - E 127
Upto 100% Scholarship for meritorious & deserving students
100% Placement Assistance
COMED-K CODE - E 076
For Admissions Contact: Principal Dr. N. Ranapratap Reddy
+91 95915 10211 / 93433 99909 / 93428 42666 / 080 4121 5454
M.S. Educational Trust: New BEL Road, Bangalore 560 054. | Email: admissions@msec.ac.in

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಬಹುಮಾನಗಳನ್ನು ಗಿಟ್ಟಿಸಿಕೊಂಡ ಮಾತ್ರಕ್ಕೆ ಮನುಷ್ಯ ಬಹುಮಾನ್ಯನಾಗಿ ಬಿಡುವುದಿಲ್ಲ.

–ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ಗುಜರಾತ್‌ನಲ್ಲಿ ಸೇತುವೆ ಕುಸಿತ ವ್ಯವಸ್ಥೆಯ ಕುಸಿತದ ಸಂಕೇತವೆ?

ಗುಜರಾತ್‌ನ ವಡೋದರಾದಲ್ಲಿ ಮಹಿಸಾಗರ ನದಿಗೆ ನಿರ್ಮಿಸಿದ್ದ, 40 ವರ್ಷಗಳಷ್ಟು ಹಳೆಯದಾದ ಸೇತುವೆ ಕುಸಿದುಬಿದ್ದು ಕನಿಷ್ಠ 18 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ದೇಶದ ಹಲವು ಕಡೆಗಳಿಂದ ವರದಿಯಾಗುತ್ತಿರುವ ಸೇತುವೆ ಕುಸಿತ ಘಟನೆಗಳಲ್ಲಿ ಇದು ಈಚಿನದು. ವಡೋದರಾದ ಸೇತುವೆಯ ಒಂದು ಭಾಗವು ಕುಸಿದು ನದಿಗೆ ಬಿದ್ದಾಗ ಅದರ ಮೇಲೆ ವಾಹನಗಳು ಇದ್ದವು. ಕೆಲವರಿಗೆ ಜೀವ ಉಳಿಸಿಕೊಳ್ಳಲು ಯಾವ ಅವಕಾಶವೂ ಸಿಗಲಿಲ್ಲ. ಈಚೆಗೆ ಕೆಲವು ವಾರಗಳಲ್ಲಿ ವರದಿಯಾಗಿರುವ ಸೇತುವೆ ಕುಸಿತದ ಘಟನೆಗಳಲ್ಲಿ ಇದು ಮೂರನೆಯದು. ಕಳೆದ ತಿಂಗಳು ಪುಣೆಯಲ್ಲಿ ತೂಗುಸೇತುವೆಯೊಂದು ಕುಸಿದು ನಾಲ್ಕು ಮಂದಿ ಮೃತಪಟ್ಟಿದ್ದರು. ಅಸ್ಸಾಂನಲ್ಲಿ ಮೂರು ವಾರಗಳ ಹಿಂದೆ ಆಗಷ್ಟೇ ದುರಸ್ತಿ ಆಗಿದ್ದ ಸೇತುವೆಯೊಂದು ಕುಸಿದು ಬಿದ್ದಿತ್ತು. ಬಿಹಾರದಲ್ಲಿ ಸೇತುವೆ ಕುಸಿತದ 12 ಪ್ರಕರಣಗಳು ಕಳೆದ ವರ್ಷ ವರದಿಯಾಗಿದ್ದವು. ಗುಜರಾತ್‌ನಲ್ಲಿ ಕೂಡ ಈಚಿನ ವರ್ಷಗಳಲ್ಲಿ ಸೇತುವೆ ಹಾಗೂ ಮೇಲ್ಸೇತುವೆ ಕುಸಿತದ ಹಲವು ಪ್ರಕರಣಗಳು ನಡೆದಿವೆ. ಮೋರ್ಬಿ ನದಿಗೆ ನಿರ್ಮಿಸಿದ್ದ ತೂಗುಸೇತುವೆಯೊಂದು 2022ರ ಅಕ್ಟೋಬರ್‌ನಲ್ಲಿ ಕುಸಿದು 140ಕ್ಕೂ ಹೆಚ್ಚು ಮಂದಿ ಜೀವ ಕಳೆದುಕೊಂಡರು. ಮೋರ್ಬಿ ಸೇತುವೆಯನ್ನು ರಿಪೇರಿ ಮಾಡಿ ಆಗಷ್ಟೇ ಬಳಕೆಗೆ ಮುಕ್ತಗೊಳಿಸಲಾಗಿತ್ತು.

ವಡೋದರಾ ಸೇತುವೆಯ ಸುರಕ್ಷತೆ ಬಗ್ಗೆ ಕೆಲವು ದೂರುಗಳು ಇವೆ. ಆ ದೂರುಗಳನ್ನು, ಸೇತುವೆಯನ್ನು ಬಳಸುವ ಜನರು ಹಾಗೂ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಮೇಲಧಿಕಾರಿಗಳ ಗಮನಕ್ಕೆ ತಂದಿದ್ದರು. ಕಳೆದ ವರ್ಷ ರಿಪೇರಿ ಮಾಡಲಾಗಿತ್ತು ಎಂದು ಜಿಲ್ಲಾಡಳಿತವು ಹೇಳಿದ್ದು, ಸೇತುವೆಯ ಕುಸಿತದ ಬಗ್ಗೆ ಗುಜರಾತ್ ಸರ್ಕಾರವು ತನಿಖೆಗೆ ಆದೇಶಿಸಿದೆ. ಹೊಸದಾಗಿ ನಿರ್ಮಾಣ ಆಗಿರುವ ಹಲವು ಸೇತುವೆಗಳ ಗುಣಮಟ್ಟವು ಕಳಪೆಯಾಗಿ ಇದೆ. ನಿರ್ಮಾಣ ಸಂದರ್ಭದಲ್ಲಿ ಕಳಪೆ ಗುಣಮಟ್ಟದ ಸರಕುಗಳನ್ನು ಬಳಸುವುದು ಹಾಗೂ ಪಾಲಿಸಬೇಕಿರುವ ಅತ್ಯುತ್ತಮ ಮಾನದಂಡಗಳನ್ನು ಪಾಲಿಸದೆ ಇರುವುದು ನಡೆದೇ ಇದೆ. ಗುತ್ತಿಗೆ ಪಡೆದವರು ಅಕ್ರಮವಾಗಿ ಲಾಭ ಮಾಡಿಕೊಳ್ಳುವುದರ ಮೇಲೆ ಕಣ್ಣಿಟ್ಟಿರುತ್ತಾರೆ; ಲಾಭದಲ್ಲಿ ಒಂದಿಷ್ಟು ಪಾಲನ್ನು ಅವರು ಅಧಿಕಾರಿಗಳಿಗೂ ರಾಜಕೀಯ ಮುಖಂಡರಿಗೂ ತಲುಪಿಸುವ ಪದ್ಧತಿ ಚಾಲ್ತಿಯಲ್ಲಿದೆ. ರಿಪೇರಿ ಕೆಲಸಗಳು ತೃಪ್ತಿಕರ ಮಟ್ಟದಲ್ಲಿ ಇರುವುದಿಲ್ಲ, ಅಲಂಕಾರಕ್ಕೆ ಎಂಬಂತೆ ಮಾತ್ರವೇ ಕೆಲಸಗಳು ನಡೆದಿರುತ್ತವೆ. ಹಿಂದೆ ನಡೆದ ದುರಂತಗಳಿಂದ ನಾವು ಯಾವ ಪಾಠವನ್ನೂ ಕಲಿತಿಲ್ಲ. ಸಾರ್ವಜನಿಕರ ಸುರಕ್ಷತೆ ಹಾಗೂ ಸಾರ್ವಜನಿಕ ಹಿತಕ್ಕಿಂತ ಹೆಚ್ಚಿನ ಮಹತ್ವವು ಕೆಲವೇ ಕೆಲವರು ಹಣಕಾಸಿನ ಲಾಭ ಮಾಡಿಕೊಳ್ಳುವುದಕ್ಕೆ ಸಿಗುತ್ತಿದೆ.

ವ್ಯವಸ್ಥೆಯಲ್ಲಿನ ನೈತಿಕ ಅಧಃಪತನದ ಸಂಕೇತದಂತೆ ಸೇತುವೆಗಳು ಕುಸಿಯುತ್ತಿವೆ. ಸೇತುವೆಗಳ ನಿರ್ವಹಣೆ ಹಾಗೂ ದುರಸ್ತಿ ಸರ್ಕಾರಗಳಿಗೆ ಆದ್ಯತೆಯ ಕೆಲಸ ಆಗಬೇಕು.

ದೇಶಕ್ಕೆ ಸ್ವಾತಂತ್ರ್ಯ ಸಿಗುವ ಮೊದಲು ನಿರ್ಮಾಣ ಆದ ಸರಿಸುಮಾರು 100ಕ್ಕೂ ಹೆಚ್ಚು ಸೇತುವೆಗಳು ಇಂದಿಗೂ ಬಳಕೆಯಲ್ಲಿ ಇವೆ ಎಂದು ಅಂದಾಜು ಮಾಡಲಾಗಿದೆ. ಈ ಸೇತುವೆಗಳ ಸುರಕ್ಷತೆ ಬಗ್ಗೆ ಕಳವಳ ವ್ಯಕ್ತವಾಗಿದೆ. ಅಷ್ಟೇ ಅಲ್ಲ, ಸ್ವಾತಂತ್ರ್ಯ ಬಂದ ನಂತರದಲ್ಲಿ ನಿರ್ಮಾಣವಾದ ಹಲವು ಸೇತುವೆಗಳ ಸುರಕ್ಷತೆ ಬಗ್ಗೆಯೂ ಪ್ರಶ್ನೆಗಳಿವೆ. ಸೇತುವೆಗಳ ಸುರಕ್ಷತೆ ವಿಚಾರವಾಗಿ ಸಂಬಂಧಪಟ್ಟ ಅಧಿಕಾರಿಗಳು ಹೆಚ್ಚಿನ ಲಕ್ಷ್ಯ ವಹಿಸಲ್ಲ. ಈಗ ವರದಿಯಾಗುತ್ತಿರುವ ಘಟನೆಗಳು ಅಧಿಕಾರಿಗಳಿಗೆ ಇಂತಹ ನಿರ್ಮಾಣಗಳನ್ನು ಕಾಲಕಾಲಕ್ಕೆ ಪರಿಶೀಲನೆ ನಡೆಸಲು, ಅವುಗಳ ರಚನೆಯು ಜನರ ಬಳಕೆಗೆ ಸುರಕ್ಷಿತವಾಗಿ ಇದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಲು ಒಂದು ಕಾರಣವಾಗಿ ಒದಗಿಬರಬೇಕು. ಅವುಗಳ ರಿಪೇರಿ ಹಾಗೂ ನಿರ್ವಹಣೆಯನ್ನು ಆದ್ಯತೆಯ ಕೆಲಸವನ್ನಾಗಿ ಕೈಗೆತ್ತಿಕೊಳ್ಳಬೇಕು. ಆದರೆ, ಸೇತುವೆಗಳು ಕುಸಿದಾಗ ಹೆಚ್ಚಿನ ಸಂದರ್ಭಗಳಲ್ಲಿ ಉತ್ತರದಾಯಿತ್ವ ನಿಗದಿ ಮಾಡುವ ಕೆಲಸ ಆಗುವುದಿಲ್ಲ. ಸೇತುವೆಗಳ ಕುಸಿತವು 'ಅಪಘಾತದ ಘಟನೆ'ಗಳಷ್ಟೇ ಅಲ್ಲ; ಅವು ನಿರ್ವಹಣೆಯ ಕೆಲಸವು ಬಹುಕಾಲದಿಂದ ಆಗದೆ ಇರುವುದರ ಫಲವೂ ಹೌದು. ವಡೋದರಾ ಸೇತುವೆಯು ಸುರಕ್ಷಿತವಾಗಿದೆ, 'ಪ್ರಮುಖ ಲೋಪಗಳು' ಅದರಲ್ಲಿ ಇಲ್ಲ ಎಂಬ ಪ್ರಮಾಣಪತ್ರ ನೀಡಿದ ಕೆಲವು ತಿಂಗಳಲ್ಲೇ ಅದು ಕುಸಿದಿದೆ. ಸುರಕ್ಷಿತವಾಗಿದೆ ಎಂಬ ಪ್ರಮಾಣ ಪತ್ರವೇ ಲೋಪಗಳಿಂದ ಕೂಡಿದ್ದರೆ ಜನರ ಜೀವವು ಅಪಾಯಕ್ಕೆ ಸಿಲುಕುತ್ತದೆ ಹಾಗೂ ನೂರಾರು ಕೋಟಿ ರೂಪಾಯಿ ನಷ್ಟ ಸಂಭವಿಸುತ್ತದೆ. ಆಗಿರುವ ತಪ್ಪುಗಳನ್ನು ತಿದ್ದಿಕೊಳ್ಳಬೇಕಿದೆ. ತಪ್ಪು ತಿದ್ದಿಕೊಳ್ಳುವುದಕ್ಕೆ ಇದು ಸರಿಯಾದ ಸಮಯ.

ಹಬ್ಬಿದಾ ಮಲೆ ಮಧ್ಯದೊಳಗೆ...

ವಿಶ್ಲೇಷಣೆ

ಸಂಜಯ್ ಗುಬ್ಬಿ

ಆ ದೃಶ್ಯ, ಬಾಲಿವುಡ್‌ನ 'ಶೋಲೆ' ಸಿನಿಮಾದಲ್ಲಿ ಪೊಲೀಸ್ ಅಧಿಕಾರಿ ಠಾಕೂರ್ ತನ್ನ ಮನೆಗೆ ರಜೆಯ ಮೇಲೆ ಬಂದಾಗ ಕಂಡ ಭೀಭತ್ಸ ದೃಶ್ಯದ ಹಾಗಿತ್ತು. ನೀರವ ಮೌನ. ಖಾಲಿಯಾಗಿ ತೂಗುತ್ತಿರುವ ಉಯ್ಯಾಲೆ ಮತ್ತು ಗಬ್ಬರ್ ಸಿಂಗ್‌ನಿಂದ ಹತ್ಯೆಯಾದ ಮಕ್ಕಳು. 'ಶೋಲೆ' ಸಿನಿಮಾದ ಸನ್ನಿವೇಶ ಮರುಕಳಿಸಿತೇ ಅನ್ನಿಸಿತು ನನಗೆ. ಇದ್ದುದು ಒಂದೇ ವ್ಯತ್ಯಾಸ: ಸಿನಿಮಾದಲ್ಲಿ ಬಲಿಯಾಗಿದ್ದುದು ಮಕ್ಕಳು; ಇಲ್ಲಿ ಹತ್ಯೆ ನಡೆದಿದ್ದುದು ತಾಯಿ ಹುಲಿ ಹಾಗೂ ಅದರ ಮರಿಗಳದು.

ಚಾಮರಾಜನಗರ ಜಿಲ್ಲೆಯ ರಾಮಾಪುರದಿಂದ ಕೊಪ್ಪಕ್ಕೆ ಹೋಗುವ ರಸ್ತೆಯ ಕೇವಲ ಮೂವತ್ತು ಮೀಟರ್ ಒಳಗೆ, ಒಂದು ವರ್ಷಕ್ಕೂ ಕಡಿಮೆ ವಯಸ್ಸಿನ ಎರಡು ಹುಲಿ ಮರಿಗಳ ಕಳೇಬರ ವಿದ್ದವು. ಅವುಗಳ ಉತ್ತರಕ್ಕೆ ಇನ್ನೊಂದು ಮರಿ, ಪೂರ್ವಕ್ಕೆ ಮತ್ತೊಂದು ಮರಿ. ಈಶಾನ್ಯದಲ್ಲಿ ಈ ನಾಲ್ಕೂ ಮರಿಗಳನ್ನು ಪೋಷಿಸುತ್ತಿದ್ದ ತಾಯಿಯ ಕಳೇಬರ. ಆ ತಾಯಿಯ ಕಳೇಬರ ಒಂದು ದೊಡ್ಡ ಸಮತಟ್ಟಾದ ಬಂಡೆಯ ಮೇಲಿತ್ತು. ಅಲ್ಲಿಂದ ಕೇವಲ ಹತ್ತು ಮೀಟರ್ ದೂರದಲ್ಲಿ ನೀರಿನ ಮೂರು ಪುಟ್ಟ ಮಡುಗಳು. ವಿಷಯುಕ್ತ ದನದ ಮಾಂಸವನ್ನು ತಿಂದ ತಾಯಿ ನಿರ್ಜಲೀಕರಣಗೊಂಡು, ಮಡುವಿನಲ್ಲಿ ನೀರು ಕುಡಿಯಲು ಬಂದು ಉಸಿರುಗಟ್ಟಿ ಅಲ್ಲಿಯೇ ಸತ್ತಿರಬಹುದು. ತನ್ನಷ್ಟೇ ಅಥವಾ ತನಗಿಂತ ಹೆಚ್ಚು ಕಷ್ಟಪಡುತ್ತಿದ್ದ ಮರಿಗಳಿಗೆ ಸಾಂತ್ವನ ಹೇಳುವಷ್ಟು ಅಥವಾ ಧೈರ್ಯ ತುಂಬುವಷ್ಟು ಸಮಯವನ್ನೂ ವಿಷ ಆ ತಾಯಿಗೆ ನೀಡಿದಂತಿರಲಿಲ್ಲ.

ನನ್ನ ದುರದೃಷ್ಟವೆಂದರೆ, ಕಣ್ಣೆದುರು ಜೀವ ಕಳೆದುಕೊಂಡು ಬಿದ್ದಿದ್ದ ತಾಯಿಯನ್ನು ಅದು ಪುಟ್ಟ ಮರಿಯಾಗಿದ್ದಾಗಿನಿಂದ ಗಮನಿಸಿದ್ದುದು. ಕ್ಯಾಮೆರಾ ಟ್ರ್ಯಾಪ್‌ಗಳಲ್ಲಿ ಸೆರೆಯಾಗಿ, ತನ್ನ ಜೀವನದ ಬಹುಮುಖ್ಯವಾದ ಭಾಗವನ್ನು ಅದು ನಮ್ಮ ಮುಂದೆ ಸಾಕಷ್ಟು ವರ್ಷಗಳ ಕಾಲ ತೆರೆದಿಟ್ಟಿತ್ತು; ಹುಲಿಗಳ ಸಂತತಿಗೆ ತಾನು ನೀಡಿದ ಮಹತ್ವದ ಕೊಡುಗೆಯನ್ನು ನಮಗೆ ಮನವರಿಕೆ ಮಾಡಿತ್ತು. ಈ ಗಮನಿಸುವಿಕೆಯಿಂದಾಗಿಯೇ, ನನಗೆ ಈ ಹುಲಿಯೊಂದಿಗೆ ಭಾವನಾತ್ಮಕ ಸಂಬಂಧ ಬೆಳೆದುಬಿಟ್ಟಿತ್ತು.

ನತದೃಷ್ಟ ಹುಲಿ, 2014ರ ನವೆಂಬರ್‌ನಲ್ಲಿ ಆರೆಂಟು ತಿಂಗಳ ಮರಿಯಾಗಿತ್ತು. ಮಲೆ ಮಹದೇಶ್ವರ ವನ್ಯಜೀವಿಧಾಮದ ಪಿ.ಜಿ. ಪಾಳ್ಯ ವಲಯದಲ್ಲಿ ಮೊದಲ ಬಾರಿಗೆ ಇದರ ಇರುವಿಕೆ, ಅದರ ಇಬ್ಬರು ಒಡಹುಟ್ಟಿದವರು ಮತ್ತು ತಾಯಿಯೊಡನೆ ನಮ್ಮ ಗಮನಕ್ಕೆ ಬಂದಿತ್ತು. ನಂತರ 2016, 2018, 2019 ಮತ್ತು 2022ರಲ್ಲಿ ನಿರಂತರವಾಗಿ ನಮ್ಮ ಕ್ಯಾಮೆರಾ ಟ್ರ್ಯಾಪ್‌ಗಳಲ್ಲಿ ಕಾಣಿಸಿಕೊಂಡಿತ್ತು. ತಾಯಿಯಿಂದ ಬೇರೆಯಾದ ಮೇಲೆ, ತಾನು ಹುಟ್ಟಿದ ಪ್ರದೇಶದ ಸುತ್ತಮುತ್ತಲೇ ತನ್ನ ವಸಾಹತು ಸ್ಥಾಪಿಸಿಕೊಂಡಿತ್ತು. ಇದರ ತಾಯಿ ತನ್ನ ಸರಹದ್ದಿನಲ್ಲೂ ಮಗಳಿಗೆ ಅವಕಾಶ ಮಾಡಿಕೊಟ್ಟಿತ್ತು. 2022ರಲ್ಲಂತೂ ತನ್ನ ಸುಮಾರು 2 ತಿಂಗಳು ವಯಸ್ಸಿನ ನಾಲ್ಕು ಮುದ್ದಾದ ಮರಿಗಳೊಡನೆ ದರ್ಶನ ನೀಡಿ, ತಾನು ತನ್ನ ಪ್ರಭೇದದ ಸಂರಕ್ಷಣೆಗೆ ನೀಡುತ್ತಿರುವ ಕೊಡುಗೆಯನ್ನು ಪ್ರಪಂಚಕ್ಕೆ ತೋರಿಸಿಕೊಟ್ಟಿತ್ತು. ಈ ತಾಯಿ ಹುಲಿ, ಜೂನ್ ಕೊನೆಯ ವಾರದಲ್ಲಿ ಕಳೇಬರವಾಗಿ ಸಿಕ್ಕಾಗ ಮತ್ತೆ 4 ಮರಿಗಳನ್ನು ಹೊಂದಿತ್ತು. 2014ರಲ್ಲಿ ಸುಮಾರು 6–8 ತಿಂಗಳ ಮರಿಯಾಗಿದ್ದುದು, ಕಳೇಬರವಾಗಿ ಸಿಕ್ಕಾಗ ಇದರ ಅಂದಾಜು ವಯಸ್ಸು 11ರಿಂದ 12 ವರ್ಷ.

ಹುಲಿಗಳು ಸುಮಾರು ಮೂರೂವರೆ ವರ್ಷಕ್ಕೆ ಸಂತಾನೋತ್ಪತ್ತಿಯ ವಯಸ್ಸಿಗೆ ಬರುತ್ತವೆ ಮತ್ತು ಮೂರರಿಂದ ಮೂರೂವರೆ ವರ್ಷಕ್ಕೊಮ್ಮೆ ಮರಿ ಹಾಕುತ್ತವೆ. ಒಂದು ಸೂಲಿಗೆ ಸರಾಸರಿ ಎರಡು ಅಥವಾ ನಾಲ್ಕು ಮರಿಗಳಿಗೆ ಜನ್ಮನೀಡುತ್ತವೆ. ಅಂದರೆ, ಈ ಹೆಣ್ಣು ಹುಲಿ ಕನಿಷ್ಠ ಮೂರು ಬಾರಿ ಮರಿಗಳನ್ನು ಹಾಕಿರಬೇಕು. ನಮಗೆ ತಿಳಿದಿರುವ ಹಾಗೆಯೇ ಇದಕ್ಕೆ ಎರಡು ಬಾರಿ ನಾಲ್ಕು ಮರಿಗಳಿದ್ದವು (2022ರಲ್ಲಿ ಮತ್ತು 2025ರಲ್ಲಿ). 2017 ಮತ್ತು 2019ರಲ್ಲಿ ನಮ್ಮ ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಸೆರೆಯಾದಾಗ ಸ್ತನ್ಯಗ್ರಂಥಿಗಳು ಉಬ್ಬಿದ್ದುದು ಆಗಲೂ ಇದಕ್ಕೆ ಮರಿಗಳಿದ್ದವು ಎಂಬುದನ್ನು ಸೂಚಿಸುತ್ತಿತ್ತು. ಈ ಮಾಹಿತಿಗಳ ಆಧಾರದ ಮೇಲೆ ನೋಡುವುದಾದರೆ, ತನ್ನ ಜೀವಿತಾವಧಿಯಲ್ಲಿ ಕನಿಷ್ಠವೆಂದರೂ 15 ಮರಿಗಳನ್ನಾದರೂ ಈ ತಾಯಿ ಹುಲಿ ಪ್ರಪಂಚಕ್ಕೆ ಕೊಡುಗೆ ನೀಡಿದೆ.

ತಾಯಿಯಾಗಿ ಈ ಹುಲಿ ಬಹಳ ಸಾಮರ್ಥ್ಯವುಳ್ಳ ಜೀವಿಯಾಗಿತ್ತು. ನೈಸರ್ಗಿಕ ಬಲಿಪ್ರಾಣಿಗಳ ಸಾಂದ್ರತೆ ಕಡಿಮೆಯಿರುವ ಪ್ರದೇಶದಲ್ಲಿ ಮರಿಗಳನ್ನು ಬಹು ಕಷ್ಟಪಟ್ಟು ಬೆಳೆಸಲು ಪ್ರಯತ್ನಿಸಿದೆ. ದುರದೃಷ್ಟವಶಾತ್, ಮುಂದಿನ ಮೂರ್ನಾಲ್ಕು ವರ್ಷಗಳಾದರೂ ಬದುಕಿ, ಇನ್ನೂ ಒಂದಾದರೂ ಸೂಲನ್ನು ಪ್ರಪಂಚಕ್ಕೆ ಕೊಡಬಹುದಾಗಿದ್ದ ಈ ಪ್ರೌಢ- ಅನುಭವಿ ತಾಯಿಯನ್ನು ಮಾನವಕುಲ ಬಲಿ ತೆಗೆದುಕೊಂಡು ಬಿಟ್ಟಿತು.

ತಾಯಿಯ ಕಥೆ ಹೀಗಾದರೆ, ಮರಿಗಳ ಸಾವು ಈ ಭೂಪ್ರದೇಶದ ಹುಲಿಗಳ ಸಂತತಿಯ ಭವಿಷ್ಯವನ್ನು ಚಿವುಟಿದೆ. 10–11 ತಿಂಗಳ ವಯಸ್ಸಿನ ನಾಲ್ಕು ಮರಿಗಳಲ್ಲಿ ಮೂರು ಹೆಣ್ಣು ಮರಿಗಳಿದ್ದವು. ಇವು, ಮುಂದಿನ ಎರಡು ವರ್ಷಗಳಲ್ಲಿ ಹೊಸ ಕುಟುಂಬಗಳನ್ನು ಪ್ರಾರಂಭಿಸುತ್ತಿದ್ದವು ಹಾಗೂ ತಮ್ಮದೇ ಮರಿಗಳನ್ನು ಹುಲಿಗಳ ಪ್ರಪಂಚಕ್ಕೆ ಪರಿಚಯಿಸುತ್ತಿದ್ದವು. ಹುಲಿಗಳ ಸೂಲಿನ ಸರಾಸರಿ ಗಾತ್ರವನ್ನೇ ಆಧಾರ ಆಗಿರಿಸಿಕೊಂಡರೆ, ಈ ಒಂದೊಂದು ಮರಿಯೂ ಮಹದೇಶ್ವರಬೆಟ್ಟ ಮತ್ತು ಅದರ ಸುತ್ತಮುತ್ತಲಿನ ಕಾಡುಗಳಿಗೆ ತಮ್ಮ ಜೀವಿತಾವಧಿಯಲ್ಲಿ 12ರಿಂದ 15 ಮರಿಗಳನ್ನು ಕೊಡುಗೆ ನೀಡುತ್ತಿದ್ದವು. ಮೂರು ಮರಿಗಳಿಂದ ಸುಮಾರು 36–45 ಸದೃಢ ಹುಲಿಗಳು ಈ ಸುಂದರ ಭೂಪ್ರದೇಶವನ್ನು ತಮ್ಮ ನೆಲೆಯನ್ನಾಗಿ ಮಾಡಿಕೊಳ್ಳುತ್ತಿದ್ದವು.

> ಪುಣ್ಯಕೋಟಿಯ ಕಥೆಯನ್ನು ಈಗ ಬದಲಿಸಬೇಕಾಗಿದೆ. ಹಬ್ಬಿದಾ ಮಲೆ ಮಧ್ಯದೊಳಗಿನ ವ್ಯಾಘ್ರಗಳಿಗೆ ಹಸಿವಿದೆಯೇ ಹೊರತು, ಸ್ವಾರ್ಥವಿಲ್ಲ. ಇತ್ತೀಚೆಗೆ ವಿಷಪ್ರಾಶನಕ್ಕೆ ತುತ್ತಾದ ಐದು ಹುಲಿಗಳು– ಮನುಷ್ಯರ ಸ್ವಾರ್ಥ, ಸಣ್ಣತನ ಹಾಗೂ ಕ್ರೌರ್ಯದ ಕಥೆ ಹೇಳುವಂತಿವೆ ಹಾಗೂ ಮನುಷ್ಯರ ಎದುರು ಹುಲಿಗಳೇ ಪುಣ್ಯಕೋಟಿಗಳಂತೆ ಕಾಣಿಸುತ್ತಿವೆ.

2013ರ ಮೇ ತಿಂಗಳಲ್ಲಿ, ಈ ಪ್ರದೇಶವನ್ನು ಮಲೆ ಮಹದೇಶ್ವರ ವನ್ಯಜೀವಿಧಾಮವೆಂದು ಘೋಷಿಸಿ, ಅಧಿಸೂಚನೆ ಹೊರಡಿಸಲಾಯಿತು. ವನ್ಯಜೀವಿಧಾಮ ಎಂದು ಘೋಷಣೆಯಾಗಿ ಹನ್ನೆರಡು ವರ್ಷಗಳ ನಂತರ ನಡೆದಿರುವ ಈ ದಾರುಣ ಘಟನೆ, ಸಮಾಜದ ಇಷ್ಟು ವರ್ಷಗಳ ಶ್ರಮವನ್ನು ಕನಿಷ್ಠ 10 ವರ್ಷ ಹಿಂದಕ್ಕೆ ದೂಕಿದೆ. ಇದಕ್ಕೆ ಯಾರನ್ನು ದೂರುವುದು:

ವನ್ಯಜೀವಿಗಳ ಸಂರಕ್ಷಣೆಗೆ ಆದ್ಯತೆ ನೀಡದೆ, ಅಗತ್ಯ ಅನುದಾನವನ್ನು ಸಮಯಕ್ಕೆ ಸರಿಯಾಗಿ ಕೊಡದ ಸರ್ಕಾರವನ್ನೇ? ಈ ವನ್ಯಜೀವಿಧಾಮದ ಕೇಂದ್ರಸ್ಥಾನ ಕೊಳ್ಳೇಗಾಲಕ್ಕೆ ಬರಲು ಹೆಚ್ಚು ಆಸಕ್ತಿ ತೋರದ ವಿಭಾಗ ಅಧಿಕಾರಿಗಳನ್ನೇ? ಕರ್ತವ್ಯದ ಸ್ಥಳಕ್ಕೆ ಬಂದರೂ, ವನ್ಯಜೀವಿ ಸಂರಕ್ಷಣೆ ಬಗ್ಗೆ ಹೆಚ್ಚು ಆಸಕ್ತಿ- ಬದ್ಧತೆಯಿಲ್ಲದೆ, ಕಾಡೇ ತಿರುಗದೆ, ಕೇವಲ ಗಣಕಯಂತ್ರದಲ್ಲೇ ತಮ್ಮ ವನ್ಯಜೀವಿ ಜ್ಞಾನವನ್ನು ಹಿರಿಯ ಅಧಿಕಾರಿಗಳು, ಮಾಧ್ಯಮದವರು ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರದರ್ಶಿಸುವ ಕೆಲವು ಅಧಿಕಾರಿಗಳನ್ನೇ? ಮುಂಚೂಣಿ ಸಿಬ್ಬಂದಿಯ ಸಂಬಳವನ್ನು ಬಿಡುಗಡೆ ಮಾಡದ ಅಧಿಕಾರಿಗಳನ್ನೇ? ಸಂರಕ್ಷಣೆಗೆ ಒತ್ತು ನೀಡದೆ, ರಸ್ತೆ, ಚೆಕ್ ಡ್ಯಾಂ, ಕಟ್ಟಡ ಕಟ್ಟುವ ಬಗ್ಗೆಯೇ ಹೆಚ್ಚು ಆಸಕ್ತಿ ತೋರುವ ಕೆಲವು ಅಧಿಕಾರಿಗಳನ್ನೇ? ಹೃದಯ ವಿದ್ರಾವಕ ಘಟನೆಯ ನಂತರವೂ, 'ಆಗಿದ್ದು ಆಗಿಹೋಯ್ತು, ನಮ್ಮವರನ್ನು ರಕ್ಷಿಸಬೇಕು' ಎಂಬ ಧೋರಣೆ ಹೊಂದಿರುವ ಅಧಿಕಾರಿ ವರ್ಗವನ್ನೇ? ಮಾನವ- ವನ್ಯಜೀವಿ ಸಂಘರ್ಷಕ್ಕೆ ಜಾನುವಾರು, ಬೆಳೆಗಳನ್ನು ಕಳೆದುಕೊಂಡು, ಸರ್ಕಾರದಿಂದ ಮಾರುಕಟ್ಟೆ ಆಧಾರಿತ ಪರಿಹಾರ ಸಕಾಲಕ್ಕೆ ಬಿಡುಗಡೆಯಾಗದೆ ಹತಾಶೆಯಿಂದ ಇಂಥ ಕೃತ್ಯಗಳಲ್ಲಿ ತೊಡಗಿಸಿಕೊಳ್ಳುವ ಜನರನ್ನೇ?

ದೂರಬಹುದಾದವರ ಪಟ್ಟಿ ಮತ್ತೂ ಬೆಳೆಯುತ್ತದೆ: ಕಾಡು ಹಾಗೂ ವನ್ಯಜೀವಿಗಳನ್ನು ಜನರೇ ಉಳಿಸುತ್ತಾರೆ ಹಾಗೂ ಅರಣ್ಯಾಧಿಕಾರಿಗಳು ಮತ್ತು ಸರ್ಕಾರದ್ದು ಪ್ರಯೋಜನವಿಲ್ಲದ ಸರ್ವಾಧಿಕಾರದ ವ್ಯವಸ್ಥೆ ಎಂದು ಕೆಲವು ಸ್ವಯಂಸೇವಾ ಸಂಸ್ಥೆಗಳು ದೂರುತ್ತವೆ. ಪ್ರಶಸ್ತಿಗಳು ಹಾಗೂ ಧನಸಹಾಯವನ್ನು ಪಡೆಯುವ ಇವರು, ಸಂದಿಗ್ಧ ಪರಿಸ್ಥಿತಿಗಳಲ್ಲಿ ನಾಪತ್ತೆ ಆಗಿಬಿಡುತ್ತಾರೆ. ಪ್ರತಿವರ್ಷವೂ ಒಂದೊಂದು ಪ್ರದೇಶ, ಒಂದೊಂದು ಹೊಸ ಜೀವಿಯ ಬಗ್ಗೆ ತಾವು ಸಂಶೋಧನೆ ನಡೆಸಬೇಕು ಎಂದು ಉತ್ಸಾಹ ತೋರಿಸುತ್ತ, ತಮಗೂ ವನ್ಯಜೀವಿಗಳ ಸಂರಕ್ಷಣೆಗೂ ಸಂಬಂಧವೇ ಇಲ್ಲ ಎಂದು ಹಾಸಿಗೆಯ ಕೆಳಗೆ ಬಚ್ಚಿಟ್ಟುಕೊಳ್ಳುವ ವನ್ಯಜೀವಿ ವಿಜ್ಞಾನಿಗಳೂ ಇದ್ದಾರೆ. ವೇದಿಕೆಗಳಲ್ಲಿ ಕಾಳಜಿ ವ್ಯಕ್ತಪಡಿಸಿ, ಸದನದಲ್ಲಿ ವನ್ಯಜೀವಿ ಸಂರಕ್ಷಣೆಯನ್ನು ತೀವ್ರವಾಗಿ ವಿರೋಧಿಸುವ ರಾಜಕಾರಣಿಗಳೂ ಇದ್ದಾರೆ. ಇವರಲ್ಲಿ ಯಾರನ್ನು ದೂರುವುದು?

ವಸ್ತುಸ್ಥಿತಿ ಆಧರಿಸಿ ಹೇಳುವುದಾದರೆ, ಹದಗೆಟ್ಟ ವ್ಯವಸ್ಥೆಯನ್ನು ಮಾತ್ರ ದೂರಿ ಪ್ರಯೋಜನವಿಲ್ಲ. ಈ ವ್ಯವಸ್ಥೆಯಲ್ಲೇ ಕೆಲಸ ಮಾಡಿ, ಅದರೊಳಗೆ ಆದಷ್ಟೂ ಸಕಾರಾತ್ಮಕ ಬದಲಾವಣೆಗಳನ್ನು ತರಲು ಪ್ರಯತ್ನಿಸುವುದೊಂದೇ ಈಗ ನಮಗುಳಿದಿರುವ ಆಯ್ಕೆ. ಸರ್ಕಾರದ ಕಡೆಯಿಂದ ಅನುದಾನ ತರಿಸಿಕೊಂಡು, ಮುಂಚೂಣಿ ಸಿಬ್ಬಂದಿಯನ್ನು ಇರುವ ಮಿತಿಗಳಲ್ಲೇ ಹುರಿದುಂಬಿಸುತ್ತ, ವನ್ಯಜೀವಿ ಸಂರಕ್ಷಣೆ ಮಾಡುವ ಅಧಿಕಾರಿಗಳು ನಮಗೆ ಬೇಕು. ವನ್ಯಜೀವಿಗಳು ಮತ್ತು ಸಾರ್ವಜನಿಕರ ಬಗ್ಗೆ ಕಳಕಳಿಯಿರುವ ವಿಭಾಗ ಮಟ್ಟದ ಅಧಿಕಾರಿ ಇದ್ದರೆ, ಎಲ್ಲ ಅಡೆತಡೆಗಳ ನಡುವೆಯೂ ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಯಾಗುತ್ತದೆ. ದಿಟ್ಟ ಮತ್ತು ದಕ್ಷ ಉಪ ಅರಣ್ಯ ಸಂರಕ್ಷಣಾಧಿಕಾರಿಯನ್ನು ನೇಮಿಸಿ, 'ನೀವು ನಿಮ್ಮ ಕರ್ತವ್ಯ ನಿರ್ವಹಿಸಿ, ನಾವು ಬೆಂಬಲಿಸುತ್ತೇವೆ' ಎಂದು ಹೇಳುವ ಹಿರಿಯ ಅಧಿಕಾರಿಗಳ ಉತ್ತೇಜನ ಮತ್ತು ಅಧಿಕಾರಿಗಳ ಬೆನ್ನಿಗೆ ನಿಂತು ತಮ್ಮ ಕೈಲಾದಷ್ಟು ಒತ್ತಾಸೆ ನೀಡುವ ವನ್ಯಜೀವಿ ಸಂಸ್ಥೆಗಳು ಸದ್ಯದ ಅಗತ್ಯ.

ಈಗಿನ ಅರಣ್ಯ ಸಚಿವರಿಗೆ ಎಲ್ಲವನ್ನೂ ಸೂಕ್ಷ್ಮವಾಗಿ ಅರ್ಥ ಮಾಡಿಕೊಳ್ಳುವ ಚಾಕಚಕ್ಯತೆಯಿದೆ, ನಿಸರ್ಗವನ್ನು ಉಳಿಸಬೇಕು ಎನ್ನುವ ಕಾಳಜಿಯಿದೆ. ಬಹುಮುಖ್ಯವಾಗಿ, ತಮ್ಮ ಇಲಾಖೆಗೆ ಮತ್ತು ಮಾಡಬಹುದಾದ ಉತ್ತಮ ಕಾರ್ಯಕ್ಕೆ ಬೇಕಾದ ರಾಜಕೀಯ ಬೆಂಬಲ ತರುವ ಹರಿತನವಿದೆ. ಸಚಿವರ ಪ್ರಯತ್ನಗಳಿಗೆ ಅವರ ರಾಜಕೀಯ ಸಹೋದ್ಯೋಗಿಗಳು ಮತ್ತು ಅಧಿಕಾರಿಗಳು ಬೆಂಬಲ ನೀಡಿದರೆ, ಐದು ಹುಲಿಗಳ ದುರ್ಮರಣದಂತಹ ಘಟನೆಗಳು ಪುನರಾವರ್ತನೆ ಆಗುವುದನ್ನು ತಡೆಯಬಹುದು.

ಹುಲಿ ಮಹದೇಶ್ವರಸ್ವಾಮಿಯ ವಾಹನ. ತಾಯಿ ಹುಲಿ ಮತ್ತು ಅದರ ಮರಿಗಳು ವಿಷಪ್ರಾಶನದಿಂದ ಸತ್ತ ಸ್ಥಳವೂ ಮಲೆ ಮಹದೇಶ್ವರ ಬೆಟ್ಟದ ಒಂದು ಭಾಗ. ಹುಲಿಗಳ ಮರಣೋತ್ತರ ಪರೀಕ್ಷೆ ಸಮಯದಲ್ಲಿ ಮುಗ್ಧರಂತೆ ಸ್ಥಳಕ್ಕೆ ಭೇಟಿ ನೀಡಿದ್ದ ಇಬ್ಬರು ಆರೋಪಿಗಳು, 'ಹಸು ಯಾರದೆನ್ನುವುದು ಹಾಗೂ ಹುಲಿಗಳು ಹೇಗೆ ಸತ್ತವೆನ್ನುವುದು ಆ ಮಾದೇಶನಿಗೆ ಗೊತ್ತು' ಎಂದು ಅಮಾಯಕರಂತೆ ಹೇಳಿಬಿಟ್ಟಿದ್ದರು. ನಮ್ಮ ಜಟಿಲ ಸಮಸ್ಯೆಗಳನ್ನು ಹೇಗಾದರೂ ಸರಿಪಡಿಸಿಕೊಂಡು, ಕಲುಷಿತ ವ್ಯವಸ್ಥೆ ಬದಲಾಗುತ್ತದೆ ಎಂದುಕೊಳ್ಳೋಣ. ಆದರೆ, ದೇವರ ಹೆಸರಿನಲ್ಲಿ ಆಣೆ ಮಾಡಿ, ಆ ದೇವರ ವಾಹನವನ್ನೇ ಕೊಲ್ಲುವವರು ಇರುವಾಗ, ನಿಸರ್ಗದ ಬಗ್ಗೆ ನಾವು ಹೊಂದಿದ್ದ ದೈವೀ ಧೋರಣೆ ಎಲ್ಲಿಗೆ ತಲುಪಿದೆಯೆಂದು ಊಹಿಸಬಹುದು.

ವಾಚಕರ ವಾಣಿ

ಉದ್ಯೋಗದ ಗ್ಯಾರಂಟಿ ಯಾವಾಗ?

ರಾಜ್ಯ ಸರ್ಕಾರ ಜನರಿಗಾಗಿ ಗ್ಯಾರಂಟಿಗಳನ್ನು ನೀಡಿದೆ. ಇದರಿಂದ ಜನರಿಗೂ ಅನುಕೂಲವಾಗಿದೆ. ಆದರೆ, ಯುವಜನಾಂಗದ ಶ್ರೇಯೋಭಿವೃದ್ಧಿ ಬಗ್ಗೆ ಆಳುವ ವರ್ಗ ತಲೆ ಕೆಡಿಸಿಕೊಂಡಿಲ್ಲ. ಅಧಿಕಾರದ ಗದ್ದುಗೆ ಏರುವುದಕ್ಕೂ ಮೊದಲು, ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 2 ಲಕ್ಷ ಹುದ್ದೆಗಳ ಭರ್ತಿಗೆ ಕ್ರಮವಹಿಸುವುದಾಗಿ ಕಾಂಗ್ರೆಸ್ ಭರವಸೆ ನೀಡಿತ್ತು. ಅಧಿಕಾರಕ್ಕೆ ಬಂದ ಬಳಿಕ ಮಾತು ಮರೆತಿರುವಂತಿದೆ. ನಿರುದ್ಯೋಗಿಗಳಾಗಿರುವ ಯುವಜನರ ಪಾಡು ಹೇಳತೀರದು. ಮುಖ್ಯಮಂತ್ರಿ ಅವರು ಗ್ಯಾರಂಟಿಗಳಿಗೆ ಸಂಪನ್ಮೂಲ ಕ್ರೋಡೀಕರಿಸುವುದಕ್ಕಷ್ಟೇ ಸೀಮಿತರಾಗಬಾರದು. ಖಾಲಿ ಇರುವ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಬೇಕು.

ಸಾಗರ್ ದ್ರಾವಿಡ್, ಹಿರಿಯೂರು

ಶಿಕ್ಷಣ ರಂಗದಲ್ಲಿ ರಾಜಕೀಯ

ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಅತಿಥಿ ಶಿಕ್ಷಕರು ಮತ್ತು ಉಪನ್ಯಾಸಕರ ಹುದ್ದೆಗೆ ನೇಮಕ ಮಾಡಿಕೊಳ್ಳುವಲ್ಲಿ ನಡೆಯುತ್ತಿರುವ ಲಾಬಿಯು ನಮ್ಮನ್ನು ವಿಚಲಿತಗೊಳಿಸುವಂತಿದೆ. ಬಹುಪಾಲು ಶಾಲೆ- ಕಾಲೇಜಿನ ಮುಖ್ಯ ಶಿಕ್ಷಕರು ಮತ್ತು ಪ್ರಾಂಶುಪಾಲರು ಆಯ್ಕೆಯ ಮಾನದಂಡವನ್ನು ಗಾಳಿಗೆ ತೂರಿದ್ದಾರೆ. ವೈಯಕ್ತಿಕ ಆದ್ಯತೆ ಮೇರೆಗೆ ಅಥವಾ ರಾಜಕೀಯ ನಾಯಕರ ಶಿಫಾರಸ್ಸಿಗೆ ಕಟ್ಟುಬಿದ್ದಿದ್ದಾರೆ. ಇದರಿಂದ ನಾಲ್ಕಾರು ವರ್ಷಗಳಿಂದ ಅತಿಥಿ ಶಿಕ್ಷಕ, ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಾ ಬದುಕು ಕಟ್ಟಿಕೊಂಡವರು ಬೀದಿಗೆ ಬೀಳುವಂತಾಗಿದೆ.

ವೆಂಕಟೇಗೌಡ ಎಸ್.ವಿ., ತುಮಕೂರು

ಢೋಂಗಿತನದ ಪ್ರಾಣಿ ಪ್ರೀತಿ

ನಾಯಿ ಪ್ರೀತಿ ಮತ್ತು ಜನರ ಬಗೆಗಿನ ಜವಾಬ್ದಾರಿಯ ನಡುವೆ ಬಿಬಿಎಂಪಿ ಆದ್ಯತೆ ಯಾವುದಾಗಬೇಕಿತ್ತು? ಎಂಬುದನ್ನು ಸಂಪಾದಕೀಯವು ಮನಗಾಣಿಸಿದೆ (ಪ್ರ.ವಾ., ಜುಲೈ 12). ಸ್ವಾಮಿ ವಿವೇಕಾನಂದರ ಜೀವಿತಾವಧಿಯಲ್ಲಿ ನಡೆದ ಪ್ರಸಂಗ ಹೀಗಿದೆ: ಭೀಕರ ಕ್ಷಾಮದಿಂದಾಗಿ ಗೋವುಗಳು ಸಂಕಟದಲ್ಲಿವೆ. ಅವುಗಳ ಉಳಿವಿಗೆ ಬೆಂಬಲ ನೀಡಬೇಕು ಎಂದು ಗೋಶಾಲೆ ನಡೆಸುತ್ತಿದ್ದ ವ್ಯಕ್ತಿಯೊಬ್ಬ, ವಿವೇಕಾನಂದರನ್ನು ಕೋರಿದ. ಅವರು ಆ ವ್ಯಕ್ತಿಯ ಕೆಲಸವನ್ನು ಪ್ರಶಂಸಿಸಿ, ಕ್ಷಾಮಕ್ಕೆ ತತ್ತರಿಸಿರುವ ಜನರ ಬಗ್ಗೆ ನಿಮ್ಮ ಕಾರ್ಯಯೋಜನೆ ಏನೆಂದು ಕೇಳಿದರು. ಅದಕ್ಕೆ ಆತ, ಜನರು ತಮ್ಮ ಕರ್ಮವನ್ನು ಅನುಭವಿಸುತ್ತಿರುವರೆಂದು ನುಡಿದ. ಆ ಮಾತಿಗೆ ಕೆರಳಿದ ವಿವೇಕಾನಂದರು, 'ಜನರು ಅವರ ಕರ್ಮ ಅನುಭವಿಸುವಂತಾದರೆ ಗೋವುಗಳು ಕೂಡ ಅವುಗಳ ಕರ್ಮ ಅನುಭವಿಸಲಿ. ಅವುಗಳಿಗೆ ನಮ್ಮ ಬೆಂಬಲವೇಕೆ' ಎಂದು ನಿಷ್ಠುರವಾಗಿ ಹೇಳಿ, ಆತನನ್ನು ಸಾಗ ಹಾಕಿದರಂತೆ.

ಸಹಮಾನವರಿಗೆ ಮಿಡಿಯದ ಮನಸ್ಸು ಪ್ರಾಣಿಗಳಿಗೆ ಮಿಡಿಯುವುದರಲ್ಲಿ ಢೋಂಗಿತನವಿದೆ ಎಂಬುದು ವಿವೇಕಾನಂದರ ನುಡಿ. ಸಹಮಾನವರನ್ನು ಉಪೇಕ್ಷಿಸಿದ ಪ್ರಾಣಿ ಪ್ರೀತಿಯಲ್ಲಿ ಮನುಷ್ಯತ್ವ ಕೊಂಚವೂ ಇರದು; ಬದಲು ಆತ್ಮವಂಚನೆ ಮಡುಗಟ್ಟಿರುತ್ತದೆ. ಪ್ರಜಾಪ್ರಭುತ್ವದ ಸಂಸ್ಥೆಗೆ ಆದ್ಯತೆ ಮತ್ತು ಆಷಾಢಭೂತಿತನದ ನಡುವೆ ವ್ಯತ್ಯಾಸ ಬೇಡವೇ?

ದೊಡ್ಡಿಶೇಖರ್, ಆನೇಕಲ್

ಮುಳುವಾದ 'ಬಿಎಲ್‌ಒ' ಜವಾಬ್ದಾರಿ

ಸರ್ಕಾರಿ ಶಾಲೆಗಳಿಗೆ ದಾಖಲಾಗುವ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಮಕ್ಕಳಿಗೆ ಕಲಿಸುವ ಬಗ್ಗೆ ತರಬೇತಿ ಪಡೆದುಕೊಂಡು ಸಿಇಟಿ ಪರೀಕ್ಷೆಯಲ್ಲಿ ಆಯ್ಕೆಯಾಗಿ ಬಂದ ಶಿಕ್ಷಕರು, ಇಲಾಖೆಯೇತರ ಕೆಲಸಗಳ ಜವಾಬ್ದಾರಿಯನ್ನೂ ಹೊರಬೇಕಿದೆ. ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಒ) ಕೆಲಸದಿಂದ ಹೈರಾಣಾಗಿದ್ದಾರೆ. ಇಬ್ಬರೇ ಶಿಕ್ಷಕರು ಮತ್ತು ಏಕೋಪಾಧ್ಯಾಯ ಶಾಲೆಯಲ್ಲಂತೂ ಮತದಾರರ ಪಟ್ಟಿ ಪರಿಷ್ಕರಣೆ ಹಾಗೂ ಚುನಾವಣೆ ಘೋಷಣೆ ಆದಾಗಿನಿಂದ ಮುಗಿಯುವವರೆಗಿನ ಕೆಲಸಗಳ ಭಾರದಿಂದ ಶಿಕ್ಷಕರು ಮುಕ್ತವಾಗಿ ತರಗತಿ ನಿರ್ವಹಣೆಯನ್ನು ಮಾಡದಂತಾಗಿದೆ. ಮಕ್ಕಳಿಗೆ ಮುಕ್ತವಾಗಿ ಕಲಿಸಲು ಶಿಕ್ಷಕರಿಗೆ ಅವಕಾಶ ನೀಡದಿದ್ದರೆ, ಮುಂದೊಂದು ದಿನ ಸರ್ಕಾರಿ ಶಾಲೆಗಳು ಸ್ಮಾರಕಗಳಂತೆ ಕಾಣಿಸುವ ಸನ್ನಿವೇಶ ದೂರದಲ್ಲಿಲ್ಲ.

ಹರೀಶ್ ಜಿ.ಆರ್., ದಾವಣಗೆರೆ

ರೈತರಿಗೆ ನಿರ್ಗತಿಕರಾಗುವ ಭಯ

ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ ರೈತರು ರಕ್ಷಣಾ ಮತ್ತು ವೈಮಾನಿಕ ಪಾರ್ಕ್ ನಿರ್ಮಾಣಕ್ಕೆ 449 ಎಕರೆ ಜಮೀನು ಬಿಟ್ಟುಕೊಡಲು ಸಿದ್ಧವಿದ್ದು, ಪ್ರತಿ ಎಕರೆಗೆ ₹3.50 ಕೋಟಿ ಪರಿಹಾರ ನೀಡಬೇಕೆಂದು ಸರ್ಕಾರಕ್ಕೆ ಬೇಡಿಕೆ ಇಟ್ಟಿರುವ ಸುದ್ದಿ ಓದಿ ದಿಗಿಲಾಯಿತು (ಪ್ರ.ವಾ., ಜುಲೈ 13). ಇದರ ಹಿಂದೆ ರೈತರಿಗೆ ಆಮಿಷ ತೋರಿಸಿ ಭೂಮಿ ಕಸಿಯುವ ಭೂಮಾಫಿಯಾದ ಹುನ್ನಾರ ಇದೆ. ಭೂಮಿ ಕಳೆದುಕೊಂಡರೆ ರೈತರು ನಿರ್ಗತಿಕರಾಗುವುದರಲ್ಲಿ ಅನುಮಾನವಿಲ್ಲ.

ಎಚ್.ಆರ್. ಪ್ರಕಾಶ್, ಮಂಡ್ಯ

ಧುರೀಣರಿಗೆ ಋಜುತ್ವ ಬೇಕು

1935ರ ಭಾರತೀಯ ಕೌನ್ಸಿಲ್ ಕಾಯ್ದೆ ಪ್ರಕಾರ ಸರ್ಕಾರ ರಚಿಸಿದ ಅಂದಿನ ಕಾಂಗ್ರೆಸ್ ಸಚಿವರು, ತಮಗೆ ನಿಯಮ ಪ್ರಕಾರ ಬಳಸಬಹುದಿದ್ದ ಮೊದಲನೇ ದರ್ಜೆ ರೈಲಿನ ಬೋಗಿಯ ಬದಲು ತೃತೀಯ ದರ್ಜೆಯ ಬೋಗಿಯಲ್ಲಿ ಪ್ರಯಾಣಿಸುತ್ತಿದ್ದರು. ಸ್ವಯಂ ಪ್ರೇರಣೆಯಿಂದ ತಮ್ಮ ಸಂಬಳ ಕಡಿಮೆ ಮಾಡಿಕೊಂಡಿದ್ದರು. ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ದೆಹಲಿಯ ಕರ್ನಾಟಕ ಭವನದಲ್ಲಿ ನಿದ್ದೆ ಬರಲಿಲ್ಲ ಎಂಬ ಕಾರಣಕ್ಕೆ ಐಷಾರಾಮಿ ಕೊಠಡಿಯನ್ನು (ಸ್ವೀಟ್ಸ್ ರೂಮ್) ಉಪ ಮುಖ್ಯಮಂತ್ರಿಗೆ ಬಿಟ್ಟುಕೊಟ್ಟಿದ್ದಾರೆ. ಐಷಾರಾಮಿ ಕಾರು, ಜೀರೊ ಟ್ರಾಫಿಕ್ ಇತ್ಯಾದಿ ಸೌಲಭ್ಯಗಳು ವರ್ತಮಾನದ ರಾಜಕಾರಣದ ಭಾಗವಾಗಿವೆ. ರಾಜಕಾರಣಿಗಳು ಸರಳತೆ ಮೈಗೂಡಿಸಿಕೊಂಡು ಮತದಾರರಿಗೆ ಮಾದರಿಯಾಗಬೇಕು.

ಪ್ರಶಾಂತ್ ಕೆ.ಸಿ., ಚಾಮರಾಜನಗರ

ಜಾಲತಾಣ

ಕನ್ನಡದ ಹಿತ ಕಾಪಾಡಿ

ಕನ್ನಡದ ಹಿತಾಸಕ್ತಿ ವಿರೋಧಿಸುವ ಎಲ್ಲರೂ ಕನ್ನಡ ದ್ರೋಹಿಗಳೇ. ಅವರು ಕನ್ನಡೇತರರೇ ಆಗಿರಲಿ; ಕನ್ನಡಿಗರೇ ಆಗಿರಲಿ.

ಗಣೇಶ್ ಚೇತನ್, ಸಾಮಾಜಿಕ ಜಾಲತಾಣದ ಇನ್‌ಫ್ಲುಯೆನ್ಸರ್, 'ಎಕ್ಸ್'ನಿಂದ

ಕಿಡಿನುಡಿ

ದೇಶದ ವಾರ್ಷಿಕ ತೆರಿಗೆ ಸಂಗ್ರಹದ ಬೇಡಿಕೆ ₹45 ಲಕ್ಷ ಕೋಟಿ. ಇದರಲ್ಲಿ ಶೇ 20ರಷ್ಟು ಗುರಿ ಸಾಧಿಸಲು ಕೇಂದ್ರಕ್ಕೆ ಸಾಧ್ಯವಾಗಿಲ್ಲ. ಬಂಡವಾಳ ಶಾಹಿಗಳ ₹16.5 ಲಕ್ಷ ಕೋಟಿ ಸಾಲವನ್ನು ರೈಟ್ ಆಫ್ ಹೆಸರಿನಲ್ಲಿ ಮನ್ನಾ ಮಾಡಲಾಗಿದೆ. ಸಣ್ಣ ವ್ಯಾಪಾರಿಗಳು, ರೈತರ ಸಾಲವನ್ನು ಮನ್ನಾ ಮಾಡುತ್ತಿಲ್ಲ. ಬೆಣ್ಣೆ ದೋಸೆಯ ಹೋಟೆಲ್‌ಗಳಿಗೂ ಈಗ ಜಿಎಸ್‌ಟಿ ನೋಟಿಸ್ ನೀಡಲಾಗಿದೆ.

ಸಂತೋಷ್ ಲಾಡ್, ಕಾರ್ಮಿಕ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 14-7-2000

• **ಮಕ್ಕಳ ಪ್ರಜ್ಞೆ ತಪ್ಪಿಸಿದ ಮೆಹಂದಿ**

ನಮಕ್ಕಲ್, ಜುಲೈ 13 (ಯುಎನ್‌ಐ)– ಕುಮಾರಪಾಳ್ಯಂ ಎಂಬಲ್ಲಿ ಶಾಲೆಯ ಮಕ್ಕಳ ಕೈ ಮೇಲೆ ಮೆಹಂದಿಯಲ್ಲಿ ಚಿತ್ತಾರ ಬಿಡಿಸಿದ ಅಪರಿಚಿತ ವ್ಯಕ್ತಿಗಾಗಿ ಪೊಲೀಸರು ಹುಡುಕುತ್ತಿದ್ದಾರೆ.

ಅವನು ಚಿತ್ರ ಬಿಡಿಸಿದ ನಂತರ ಅದನ್ನು ಮೂಸಿ ನೋಡಲು ಮಕ್ಕಳಿಗೆ ಹೇಳಿದಾಗ, ಅವರಲ್ಲಿ 30 ಮಂದಿ ಪ್ರಜ್ಞೆ ತಪ್ಪಿದರು. ಆಗ ಇತರರು ಕಿರುಚಿಕೊಂಡಾಗ ಅವನು ಅಲ್ಲಿಂದ ಪರಾರಿಯಾದ.

• **ಕರಾವಳಿ, ಮಲೆನಾಡಿನಲ್ಲಿ ಮಳೆಯ ರುದ್ರ ನರ್ತನ**

ಬೆಂಗಳೂರು, ಜುಲೈ 13– ರಾಜ್ಯದ ಕರಾವಳಿ ಮತ್ತು ಮಲೆನಾಡಿನ ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಇಂದೂ ಮುಂದುವರಿದಿದ್ದು, ನದಿಗಳು ತುಂಬಿ ಪ್ರವಾಹ ಉಂಟಾಗಿದೆ. ಕೊಡಗು ಜಿಲ್ಲೆಯ ಹಲವೆಡೆ ಕಾವೇರಿ ಅಪಾಯದ ಮಟ್ಟವನ್ನು ಮೀರಿದ್ದು, ಹತ್ತಾರು ಗ್ರಾಮಗಳು ಜಲಾವೃತವಾಗಿವೆ.

ಕಡೂರು– ಮಂಗಳೂರು ಹೆದ್ದಾರಿಯ ಚಾರ್ಮಾಡಿ ಘಟ್ಟದಲ್ಲಿ ಇಂದು ಬೆಳಗ್ಗಿನ ಜಾವ ಭಾರೀ ಮಳೆಯಿಂದಾಗಿ ಅನೇಕ ಭಾಗಗಳಲ್ಲಿ ಭೂಕುಸಿತ ಉಂಟಾಗಿ ರಸ್ತೆ ಸಂಚಾರ ಸ್ಥಗಿತಗೊಂಡಿದೆ.

ಗಂಜಿ ಕೇಂದ್ರ: ಕೊಡಗಿನ ಕರಡಿಗೋಡು ಬಳಿ ಕಾವೇರಿ ಅಪಾಯದ ಮಟ್ಟದಲ್ಲಿ ಹರಿಯುತ್ತಿದ್ದು, ಎಂಟು ಮನೆಗಳನ್ನು ತೆರವು ಮಾಡಿಸಿ 35 ಮಂದಿಗೆ ಗಂಜಿ ಕೇಂದ್ರದಲ್ಲಿ ಆಶ್ರಯ ಕಲ್ಪಿಸಲಾಗಿದೆ.

75 ವರ್ಷಗಳ ಹಿಂದೆ

ಶುಕ್ರವಾರ, 14-7-1950

• **ಮೈಸೂರಿನಲ್ಲಿ ಮಹಾ ಚುನಾವಣೆ**

ಬೆಂಗಳೂರು, ಜುಲೈ 13– ಸುಮಾರು 40 ಲಕ್ಷ ಮತದಾರರನ್ನು ಪಟ್ಟಿಗೆ ಸೇರಿಸಲು 10 ಸಾವಿರ ಮಂದಿ 4 ಗಂಟೆಗಳಿಗಿಂತ ಹೆಚ್ಚಿನ ಕೆಲಸ ಮಾಡಿದ್ದಾರೆ. ಮತದಾರರ ಪಟ್ಟಿ ತಯಾರಿಸಲು ಸುಮಾರು 15 ಲಾರಿಗಳ ತುಂಬ ಅಥವಾ 40 ಟನ್ ಪೇಪರ್ ಬೇಕಾಗಬಹುದು. ಪಟ್ಟಿಯನ್ನು ಹರಡಿದಲ್ಲಿ 2 ಸಾವಿರ ಮೈಲಿಗಿಂತ ಉದ್ದವಿರುವುದು. ಮೈಸೂರಿನ ಸೆನ್ಸಸ್ ಕಮಿಷನರ್ ಜೆ.ಬಿ. ಮಲ್ಲಾರಾಧ್ಯರು ಇಂದು ನಮ್ಮ ಪ್ರತಿನಿಧಿಗಿತ್ತ ಭೇಟಿಯಲ್ಲಿ ಈ ವಿಷಯಗಳನ್ನು ತಿಳಿಸಿದರು.

• **ನಿರಾಶ್ರಿತ ಮಹಿಳೆಗೆ ತ್ರಿವಳಿ ಮಕ್ಕಳು**

ಸಿಲ್‌ಚಾರ್ (ಅಸ್ಸಾಂ), ಜುಲೈ 13– ಜಿಲ್ಲೆಯ ಆಸ್ಪತ್ರೆಯೊಂದರಲ್ಲಿ ನಿರಾಶ್ರಿತ ಮಹಿಳೆಯೊಬ್ಬರು ಕಳೆದ ಶನಿವಾರ ತ್ರಿವಳಿ ಮಕ್ಕಳನ್ನು ಹಡೆದರೆಂದು ತಿಳಿದುಬಂದಿದೆ. ಅವುಗಳಲ್ಲಿ ಎರಡು ಗಂಡು ಮಕ್ಕಳು. ತಾಯಿ ಮತ್ತು ಶಿಶುಗಳು ಆರೋಗ್ಯದಿಂದಿದ್ದಾರೆ.

ಚುರುಮುರಿ

ಭೋಜನ ಭಾಗ್ಯ

• ಸುಮಂಗಲಾ

ಬೆಕ್ಕಣ್ಣ ಸುದ್ದಿ ಓದುತ್ತ ಕಣ್ಣು ಕೆಂಪು ಮಾಡಿತು.

'ನೋಡಿಲ್ಲಿ... ಬಿಬಿಎಂಪಿಯವರು ಬೀದಿ ನಾಯಿಗಳಿಗೆ ಬಾಡೂಟದ ಭೋಜನ ಭಾಗ್ಯ ಕರುಣಿಸ್ತಾರಂತೆ. ವರ್ಷಕ್ಕೆ ₹2.88 ಕೋಟಿ ರೊಕ್ಕ ಖರ್ಚು ಮಾಡೋ ಪ್ಲಾನ್ ಹಾಕ್ಯಾರೆ' ಎಂದು ಸಿಟ್ಟಿನಿಂದ ಗುರುಗುಟ್ಟಿತು.

'ಅದ್ರಾಗೆ ಬಿಬಿಎಂಪಿಯವರಿಂದ ಹಿಡಿದು, ಅಡುಗೆ ಮಾಡೋವ್ರು, ನಾಯಿಗಳಿಗೆ ಆ ಊಟ ಹಾಕೋವ್ರು ಎಲ್ಲಾರೂ ಅವರವರ ಪಾಲು ಮಡಿಕ್ಕೆಂಡು, ಇನ್ನು ಪಾಪದ ನಾಯಿಗಳಿಗೆ ಎಷ್ಟು ಸಿಗತೈತೋ ದೇವರಿಗೇ ಗೊತ್ತು' ಎಂದೆ.

'ಮೊದಲು ನಾಯಿಗಳನ್ನ ಹಿಡಿದು ಮರಿಗಳಾಗದಿದ್ದಂತೆ ಆಪರೇಷನ್ ಮಾಡೂದು ಬಿಟ್ಟು, ಅವಕ್ಕೆ ಛಲೋತ್ನಾಗಿ ಊಟ ಹಾಕೋ ಯೋಜನೆ ಮಾಡ್ಯಾರಲ್ಲ, ಬಿಬಿಎಂಪಿಗೆ ಶಭಾಸ್ ಅನ್ನಬಕು!'

'ಸಾಲಿ ಹುಡುಗರ ಮಧ್ಯಾಹ್ನದ ಬಿಸಿಯೂಟಕ್ಕೆ ರೊಕ್ಕ ಇಲ್ಲ ಅಂತಾರೆ. ಬಿಬಿಎಂಪಿದು ಹಳೇ ಸಾಲಗಳೇ ಕೊಟ್ಟಿಗಟ್ಟಲೆ ಐತಂತೆ. ಅಂತಾದ್ರಲ್ಲಿ ಇಂತಾದಕ್ಕೆಲ್ಲ ಎಲ್ಲಿಂದ ರೊಕ್ಕ ತರತಾರೆ ಅಂತ!'

'ನೀವು ಅದೀರಲ್ಲ... ತೆರಿಗೆ ತುಂಬೋ ಶ್ರೀಸಾಮಾನ್ಯರು!' ಬೆಕ್ಕಣ್ಣ ನನ್ನ ಮೂತಿಗೆ ತಿವಿಯಿತು.

'ಈ ಬೀದಿ ನಾಯಿಗಳು ಮಂದಿಗೆ ಕಚ್ಚೂದು ಬಿಟ್ಟರೆ ಬ್ಯಾರೆ ಕೆಲಸ ಮಾಡಂಗಿಲ್ಲ. ಯಾವತ್ತಾರೆ ಬೀದಿ ಬೆಕ್ಕುಗಳು ಮಂದಿಗೆ ಕಚ್ಚಿ, ಗಾಯ ಮಾಡಿದ್ದನ್ನು ಓದೀಯೇನು? ಬೀದಿ ನಾಯಿಗಳಿಗಲ್ಲ, ಬೀದಿ ಬೆಕ್ಕುಗಳಿಗೆ ಭೋಜನ ಭಾಗ್ಯ ಕೊಡಬಕು' ಬೆಕ್ಕಣ್ಣ ವಾದಿಸಿತು.

'ಖರೇ ಹೇಳಿದಿ. ನೀವು ಬೀದಿ ಬೆಕ್ಕುಗಳು ಇಲಿ– ಹೆಗ್ಗಣ ಹಿಡಿಯೂ ಕೆಲಸನಾದ್ರೂ ಮಾಡತೀರಿ... ಬೀದಿ ನಾಯಿಗಳು ಉಂಡಾಡಿ ಗುಂಡಗಳು' ಎಂದು ನಾನೂ ಬೈದೆ.

'ನಾವು ಮೋರಿವಳಗೆ, ಅಲ್ಲಿ ಇಲ್ಲಿ ಅಡಿಕ್ಕೆಂಡಿರೋ ಇಲಿ, ಹೆಗ್ಗಣ ಹಿಡಿತೀವಿ ಖರೇ. ಆದರೆ ಬಿಬಿಎಂಪಿಯ ಎಲ್ಲಾ ಇಲಾಖೆವಳಗೆ ಎರಡು ಕಾಲಿನ ಹೆಗ್ಗಣಗಳು ತುಂಬ್ಯಾವಲ್ಲ, ಅವ್ರನ್ನ ಹಿಡಿಯಾಕೆ ಯಾರಿಗೂ ಆಗಂಗಿಲ್ಲ ಬಿಡು!' ಎಂದು ಬೆಕ್ಕಣ್ಣ ತಲೆ ಚಚ್ಚಿಕೊಂಡಿತು. ನಾನೂ ತಲೆ ಚಚ್ಚಿಕೊಂಡೆ.

ಸಂಗತ

ಗ್ರಾಮೀಣ ಮಕ್ಕಳಿಗೆ 'ಕಲೆ' ಬೇಡವೆ?

ಮಕ್ಕಳ ಸಂಖ್ಯೆ ಕಡಿಮೆ ಎನ್ನುವ ಕಾರಣದಿಂದಾಗಿ 'ವಿಶೇಷ ಶಿಕ್ಷಕ'ರ ವರ್ಗಾವಣೆ ಸರಿಯಲ್ಲ. ಇದರಿಂದ ಗ್ರಾಮೀಣ ಮಕ್ಕಳ ಕಲಾಸಕ್ತಿಯನ್ನು ಚಿವುಟಿದಂತಾಗುತ್ತದೆ.

• ರಾಜಕುಮಾರ ಕುಲಕರ್ಣಿ

ಸರ್ಕಾರಿ ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ವಿಶೇಷ ಶಿಕ್ಷಕರನ್ನು 240ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳಿಗೆ ಸಾಮೂಹಿಕವಾಗಿ ವರ್ಗಾವಣೆ ಮಾಡಲು ಮುಂದಾಗಿರುವ ವಿಷಯ ಓದಿ ಖೇದವೆನಿಸಿತು (ಪ್ರ.ವಾ., ಜುಲೈ 12). ಚಿತ್ರಕಲೆ, ಸಂಗೀತ, ನಾಟಕ ಮತ್ತು ನೃತ್ಯದಂತಹ ಸೃಜನಶೀಲ ಕಲೆಗಳ ಕುರಿತು ಸಮಾಜದಲ್ಲಿ ಅವಗಣನೆ ಇರುವ ಸನ್ನಿವೇಶದಲ್ಲಿ, ವಿಶೇಷ ಶಿಕ್ಷಕರ ಸಾಮೂಹಿಕ ವರ್ಗಾವಣೆಗೆ ಶಿಕ್ಷಣ ಇಲಾಖೆ ಮುಂದಾಗಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ.

ಸರ್ಕಾರಿ ಪ್ರೌಢಶಾಲೆಗಳಲ್ಲಿ ಸಂಗೀತ, ನಾಟಕ, ನೃತ್ಯ ಮತ್ತು ಚಿತ್ರಕಲೆ ಬಗ್ಗೆ ಬೋಧಿಸುವವರನ್ನು ವಿಶೇಷ ಶಿಕ್ಷಕರೆಂದು ಕರೆಯಲಾಗುತ್ತದೆ. ಪ್ರಸ್ತುತ, 240ಕ್ಕೂ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಶೇಷ ಶಿಕ್ಷಕರನ್ನು 'ಹೆಚ್ಚುವರಿ ಶಿಕ್ಷಕ'ರ ಪಟ್ಟಿಗೆ ಸೇರಿಸಿರುವ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಅವರ ವರ್ಗಾವಣೆಗೆ ಮುಂದಾಗಿದೆ.

ಗ್ರಾಮೀಣ ಪ್ರದೇಶಗಳ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿದೆ. ಗುಣಾತ್ಮಕ ಶಿಕ್ಷಣದ ಹಂಬಲದಲ್ಲಿ ಪಾಲಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುತ್ತಿದ್ದಾರೆ. ವಾಸ್ತವ ಹೀಗಿರುವಾಗ, ಗ್ರಾಮೀಣ ಸರ್ಕಾರಿ ಪ್ರೌಢಶಾಲೆಗಳಲ್ಲಿ ಇನ್ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳ ದಾಖಲಾತಿಯನ್ನು ನಿರೀಕ್ಷಿಸುವುದು ಸರಿಯಲ್ಲ. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಎನ್ನುವ ಕಾರಣದಿಂದ, ಅಲ್ಲಿನ ವಿಶೇಷ ಶಿಕ್ಷಕರನ್ನು ವರ್ಗಾವಣೆ ಮಾಡುವುದೂ ಸರಿಯಾದ ಕ್ರಮವಲ್ಲ. ಚಿತ್ರಕಲೆ, ಸಂಗೀತ, ನಾಟಕದಂತಹ ಕಲೆಗಳಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳ ಪ್ರತಿಭೆಯನ್ನು ಮೊಳಕೆಯಲ್ಲೇ ಚಿವುಟಿ ಹಾಕುವುದು ಯಾವ ನ್ಯಾಯ? ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳಿರುವಲ್ಲಿ ಪ್ರತಿಭೆಗೆ ಬರ ಎನ್ನುವ ಅತಾರ್ಕಿಕ ನಿಲುವು ತಳೆಯುವುದಾದರೂ ಹೇಗೆ ಸಾಧ್ಯ?

ಮಗುವಿನ ಸರ್ವಾಂಗೀಣ ಬೆಳವಣಿಗೆಯಲ್ಲಿ ಗಣಿತ, ವಿಜ್ಞಾನದಂತಹ ಜ್ಞಾನಶಿಸ್ತುಗಳ ಜೊತೆಗೆ ಭಾಷೆ, ಚಿತ್ರಕಲೆ, ನಾಟಕ, ನೃತ್ಯ, ಸಂಗೀತ ಮತ್ತು ಸಾಹಿತ್ಯಕ್ಕೆ ಮುಖ್ಯವಾದ ಸ್ಥಾನವಿದೆ. ಕೆಲವು ವಿದ್ಯಾರ್ಥಿಗಳು ಭಾಷೆ ಮತ್ತು ಇತರ ಜ್ಞಾನಶಿಸ್ತುಗಳ ವಿಷಯಗಳ ಕಲಿಕೆಯಲ್ಲಿ ಹಿಂದಿದ್ದರೂ, ಚಿತ್ರಕಲೆ, ನಾಟಕ ಮತ್ತು ಸಂಗೀತದ ಕಲಿಕೆಯಲ್ಲಿ ಹೆಚ್ಚಿನ ಪ್ರತಿಭೆ ಉಳ್ಳವರಾಗಿರಬಹುದು. ವಿಶೇಷ ಶಿಕ್ಷಕರನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸಿ ವರ್ಗಾವಣೆ ಮಾಡುವುದರಿಂದ ವಿವಿಧ ಕಲೆಗಳಲ್ಲಿ ಆಸಕ್ತಿಯುಳ್ಳ ಮಕ್ಕಳಿಗೆ ಅನ್ಯಾಯ ಮಾಡಿದಂತಾಗುತ್ತದೆ.



ವಿಶೇಷ ಶಿಕ್ಷಕರ ವರ್ಗಾವಣೆಯಿಂದ ಗ್ರಾಮೀಣ ಮತ್ತು ನಗರ ಪ್ರದೇಶಗಳ ಸರ್ಕಾರಿ ಪ್ರೌಢಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ವಿಷಯದಲ್ಲಿ ಸರ್ಕಾರವೇ ತಾರತಮ್ಯ ಮಾಡಿದಂತಾಗುತ್ತದೆ. ವಿದ್ಯಾರ್ಥಿಗಳ ಸಂಖ್ಯೆಯನ್ನು ಮಾನದಂಡ ಆಗಿಟ್ಟುಕೊಂಡರೆ, ಆಗ ವಿಶೇಷ ಶಿಕ್ಷಕರು ಗ್ರಾಮೀಣ ಶಾಲೆಗಳಿಂದ ನಗರ ಶಾಲೆಗಳಿಗೆ ವರ್ಗಾವಣೆಗೊಳ್ಳುವರು. ಹೀಗಾದಾಗ, ಗ್ರಾಮೀಣ ಶಾಲೆಗಳಲ್ಲಿ ಓದುತ್ತಿರುವ ಚಿತ್ರಕಲೆ ಮತ್ತು ಸಂಗೀತದಲ್ಲಿ ಆಸಕ್ತಿಯುಳ್ಳ ಮಕ್ಕಳು ಸೃಜನಾತ್ಮಕ ಶಿಕ್ಷಣದಿಂದ ವಂಚಿತರಾಗುತ್ತಾರೆ. ಸರ್ಕಾರವೇ ಗ್ರಾಮೀಣ ಮಕ್ಕಳ ಅವಕಾಶವನ್ನು ಕಸಿದುಕೊಂಡಂತಾಗುತ್ತದೆ. ಪರೀಕ್ಷೆ, ಅಂಕಗಳಿಕೆ, ಸಿಇಟಿ– ನೀಟ್‌ಗೆ ಆದ್ಯತೆ ನೀಡುತ್ತ, ಮಕ್ಕಳನ್ನು ಯಂತ್ರಗಳಂತೆ ರೂಪಿಸಲಾಗುತ್ತಿದೆ; ಅವರನ್ನು ಕಲಾಪ್ರಕಾರಗಳಿಂದ ದೂರವಾಗಿಸಲಾಗುತ್ತಿದೆ. ಖಾಸಗಿ ಶಾಲೆಗಳಲ್ಲಿ ಗಣಿತ, ವಿಜ್ಞಾನದಂತಹ ವಿಷಯಗಳಿಗೆ ಹೆಚ್ಚು ಮಹತ್ವ ನೀಡಿ, ಭಾಷೆ ಮತ್ತಿತರ ವಿಷಯಗಳನ್ನು ಕಾಟಾಚಾರಕ್ಕೆನ್ನುವಂತೆ ಕಲಿಸಲಾಗುತ್ತಿದೆ. ಖಾಸಗಿ ಶಾಲೆಗಳಲ್ಲಿನ ವಿಶೇಷ ಶಿಕ್ಷಕರ ಪ್ರತಿಭೆ ವರ್ಷದ ಕೊನೆಗೆ ವಾರ್ಷಿಕ ಸ್ನೇಹ ಸಮ್ಮೇಳನಕ್ಕೆ ಮಾತ್ರ ಸೀಮಿತವಾಗುತ್ತಿದೆ. ಶಾಲೆಯ ಮಧ್ಯಂತರ ಬಿಡುವಿನ ವೇಳೆಯಲ್ಲಿ ವಿದ್ಯಾರ್ಥಿಗಳನ್ನು ದೈಹಿಕ ಕಸರತ್ತಿಗೆ ಒಳಪಡಿಸುವ ಕ್ರೀಡಾ ಚಟುವಟಿಕೆಗಳಿಗೂ ಆದ್ಯತೆ ಇಲ್ಲದಂತಾಗಿದೆ. ಈ ಎಲ್ಲದಕ್ಕೂ ಪಾಲಕರ ಒತ್ತಾಸೆ ಇರುವುದು ಇಂದಿನ ಶಿಕ್ಷಣ ವ್ಯವಸ್ಥೆಯ ದುರಂತಗಳಲ್ಲೊಂದು. ಸರ್ಕಾರಿ ಶಾಲೆಗಳಲ್ಲಾದರೂ ಚಿತ್ರಕಲೆ ಮತ್ತು ಸಂಗೀತದಂತಹ ಕಲೆಗಳ ಅಧ್ಯಯನಕ್ಕೆ ಆದ್ಯತೆ ನೀಡಲಾಗುತ್ತಿದೆ ಎನ್ನುವ ಭರವಸೆ ಇತ್ತು. ಶಿಕ್ಷಣ ಇಲಾಖೆಯ ಧೋರಣೆಯಿಂದಾಗಿ ಈಗ ಆ ಭರವಸೆಯೂ ಇಲ್ಲವಾಗಿದೆ.

ವಿಶೇಷ ಶಿಕ್ಷಕರು ಶಾಲೆಗಳಲ್ಲಿ ಚಿತ್ರಕಲೆ, ಸಂಗೀತ, ನಾಟಕ, ನೃತ್ಯದ ಮೂಲಕ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಕಲಾತ್ಮಕ ಕೌಶಲ ಮತ್ತು ಜೀವನ ಕೌಶಲಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುವರು. ಈ ಪ್ರಕಾರದ ಶಿಕ್ಷಣ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯವನ್ನು ಸುಧಾರಿಸುವುದರ ಜೊತೆಗೆ, ಅವರ ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಸೃಜನಶೀಲ ಕಲೆಗಳು ವಿದ್ಯಾರ್ಥಿಗಳಿಗೆ ಒತ್ತಡ ನಿರ್ವಹಣೆ, ಸಹಕಾರ ಮತ್ತು ಸ್ವಯಂ ಅಭಿವ್ಯಕ್ತಿಯ ಕೌಶಲಗಳನ್ನು ಕಲಿಸುತ್ತವೆ. ಚಿತ್ರಕಲೆ, ಸಂಗೀತ, ನೃತ್ಯದಲ್ಲಿ ಪರಿಣತಿ ಹೊಂದಿದವರು ಸರ್ಕಾರಿ ಉದ್ಯೋಗವನ್ನು ಅವಲಂಬಿಸದೆ, ಸ್ವಯಂ ಉದ್ಯೋಗವನ್ನು ಕಂಡುಕೊಳ್ಳಬಹುದು.

ವಿಶೇಷ ಶಿಕ್ಷಕರನ್ನು ವರ್ಗಾಯಿಸುವ ಕುರಿತು ಶಿಕ್ಷಣ ತಜ್ಞರು, ಪ್ರಜ್ಞಾವಂತರು ಧ್ವನಿ ಎತ್ತಬೇಕು. ಶಿಕ್ಷಣ ಇಲಾಖೆ ತನ್ನ ನಿರ್ಧಾರದಿಂದ ಹಿಂದೆ ಸರಿದು ಸರ್ಕಾರಿ ಶಾಲೆಗಳಲ್ಲಿನ ಮಕ್ಕಳಿಗೆ ಸೃಜನಶೀಲ ಶಿಕ್ಷಣ ದೊರೆಯುವಂತಾಗಬೇಕು. ಆ ಮೂಲಕ, ಶಿಕ್ಷಣದಿಂದ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆ ಎನ್ನುವ ಹೇಳಿಕೆ ಕಾರ್ಯರೂಪಕ್ಕೆ ಬರಲಿ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಭಾರತವು ‘ಜಾಗತಿಕ ಚಿತ್ರಹಿಂಸೆ ಸೂಚ್ಯಂಕ 2025’ರಲ್ಲಿ ‘ಹೆಚ್ಚು ಅಪಾಯಕಾರಿ’ ದೇಶಗಳ ಪಟ್ಟಿಯಲ್ಲಿದೆ. ಸೂಚ್ಯಂಕದಲ್ಲಿ 26 ದೇಶಗಳಲ್ಲಿನ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲಾಗಿದ್ದು, ಭಾರತವು ಹೊಂಡುರಾಸ್, ಬೆಲರೂಸ್, ಕೊಲಂಬಿಯಾ, ಟರ್ಕಿ, ಟ್ಯುನೀಷಿಯಾಗಳ ಸಾಲಿನಲ್ಲಿದೆ. ದೇಶದಲ್ಲಿ ಚಿತ್ರಹಿಂಸೆಯು ವ್ಯಾಪಕವಾಗಿರುವುದಷ್ಟೆ ಅಲ್ಲದೇ, ವ್ಯವಸ್ಥೆಯ ಭಾಗವೇ ಆಗಿದೆ. ಅದರಲ್ಲೂ ದಲಿತರು, ಆದಿವಾಸಿಗಳು, ಮುಸ್ಲಿಮರು, ಲಿಂಗತ್ವ ಅಲ್ಪಸಂಖ್ಯಾತರು ಮತ್ತು ವಲಸೆ ಕಾರ್ಮಿಕರು ಚಿತ್ರಹಿಂಸೆಗೆ ಹೆಚ್ಚು ಗುರಿಯಾಗುತ್ತಿದ್ದಾರೆ. ಸಂತ್ರಸ್ತರು ಮತ್ತು ಅವರ ರಕ್ಷಣೆಗೆ ನಿಲ್ಲುವವರ ವಿರುದ್ಧ ಪ್ರತೀಕಾರಕ್ಕೆ ಮುಂದಾಗುತ್ತಿರುವ ಪ್ರವೃತ್ತಿ ಇದೆ ಎಂದು ವರದಿ ಹೇಳಿದೆ

ಜಾಗತಿಕ ಚಿತ್ರಹಿಂಸೆ ಸೂಚ್ಯಂಕ; ‘ಹೆಚ್ಚು ಅಪಾಯಕಾರಿ’ ಪಟ್ಟಿಯಲ್ಲಿ ಭಾರತ

ಚಿತ್ರಹಿಂಸೆ: ಇಲ್ಲಿ ವ್ಯವಸ್ಥೆಯ ಭಾಗ

ಪ್ರಜಾವಾಣಿ ವಾರ್ತೆ

ವಿಶ್ವ ಚಿತ್ರಹಿಂಸೆ ವಿರೋಧಿ ಸಂಘಟನೆ (World Organization Against Torture–OMCT) ಮೊಟ್ಟಮೊದಲ ಬಾರಿಗೆ ಜಾಗತಿಕ ಚಿತ್ರಹಿಂಸೆ ಸೂಚ್ಯಂಕವನ್ನು ಸಿದ್ಧಪಡಿಸಿದೆ. ಅಂತರರಾಷ್ಟ್ರೀಯ ಮಾನವ ಹಕ್ಕುಗಳನ್ನು ಆಧರಿಸಿ ಏಳು ಮಾನದಂಡಗಳ ಆಧಾರವಾಗಿ ಚಿತ್ರಹಿಂಸೆ ಮತ್ತು ಕಿರುಕುಳವನ್ನು ಅಳೆಯಲಾಗಿದೆ. ಭಾರತವು ಜಾಗತಿಕ ಚಿತ್ರಹಿಂಸೆ ಸೂಚ್ಯಂಕ 2025ರಲ್ಲಿ ‘ಹೆಚ್ಚು ಅಪಾಯಕಾರಿ’ (High risk) ದೇಶಗಳ ಪಟ್ಟಿಯಲ್ಲಿದೆ. ತಮಿಳುನಾಡಿನ ‘ಪೀಪಲ್ಸ್ ವಾಚ್’ ಸಂಸ್ಥೆಯ ಸಹಭಾಗಿತ್ವದೊಂದಿಗೆ, 2023–24ರ ದತ್ತಾಂಶ ಆಧರಿಸಿ ಈ ಅಧ್ಯಯನ ನಡೆಸಲಾಗಿದೆ.

ಕಾನೂನು ಜಾರಿ ಕಾರ್ಯಾಚರಣೆಗಳನ್ನು ನಡೆಸುವಾಗ ಮತ್ತು ತನಿಖೆ ಮಾಡುವಾಗ ಪೊಲೀಸರು ಹಾಗೂ ಭದ್ರತಾ ಪಡೆಗಳು ಆರೋಪಿಗಳಿಗೆ ವ್ಯಾಪಕ ಚಿತ್ರಹಿಂಸೆ ನೀಡುತ್ತಿದ್ದು, ತೀವ್ರ ಹಲ್ಲೆ, ಒತ್ತಾಯಪೂರ್ವಕ ತಪ್ಪೊಪ್ಪಿಗೆ, ಕಸ್ಟಡಿ ಸಾವುಗಳು ಹೆಚ್ಚಾಗಿವೆ ಎಂದು ವರದಿ ಉಲ್ಲೇಖಿಸಿದೆ. ಅದರಲ್ಲೂ ದಲಿತರು, ಮುಸ್ಲಿಮರು, ಆದಿವಾಸಿಗಳಂಥ ಅಂಚಿನ ಸಮುದಾಯದವರು ಹೆಚ್ಚು ಚಿತ್ರಹಿಂಸೆಗೆ ಗುರಿಯಾಗುತ್ತಿದ್ದಾರೆ. ನಿದರ್ಶನಕ್ಕೆ, ಪಶ್ಚಿಮ ಬಂಗಾಳದ ಬಾಂಗ್ಲಾದೇಶದ ಗಡಿಯಲ್ಲಿ ಅಲ್ಲಿನ ನಿವಾಸಿಗಳನ್ನು ಕಸ್ಟಡಿಗಳಲ್ಲಿ, ಎನ್‌ಕೌಂಟರ್‌ಗಳಲ್ಲಿ ಹತ್ಯೆ ಮಾಡಲಾಗಿದ್ದು, ಅವರನ್ನು ನ್ಯಾಯಾಲಯದ ವಿಚಾರಣೆಯ ಹಕ್ಕಿನಿಂದ ವಂಚಿತರನ್ನಾಗಿಸಲಾಗಿದೆ. ಕೇಂದ್ರ ಗೃಹ ಸಚಿವಾಲಯ ಮತ್ತು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಂಕಿಅಂಶಗಳ ಪ್ರಕಾರ, 2022 ಮತ್ತು 2023ರ ನಡುವೆ ಅಲ್ಲಿ ಕಸ್ಟಡಿ ಸಾವುಗಳ ಸಂಖ್ಯೆಯಲ್ಲಿ ಶೇ 300ರಷ್ಟು ಹೆಚ್ಚಳವಾಗಿದೆ ಎಂದು ವರದಿ ಹೇಳಿದೆ.

> **ಭಾರತದಲ್ಲಿ ಚಿತ್ರಹಿಂಸೆಯು ಶಿಕ್ಷಾರ್ಹ ಅಪರಾಧ ಎಂದು ಹೇಳುವ ರಾಷ್ಟ್ರೀಯ ಶಾಸನವೇ ಇಲ್ಲ. ಚಿತ್ರಹಿಂಸೆಗೆ ಸಂಬಂಧಿಸಿದ ವಿಶ್ವ ಸಂಸ್ಥೆಯ ನಿಯಮಗಳು ಮತ್ತು ಶಿಷ್ಟಾಚಾರಗಳಿಗೆ (ಯುಎನ್‌ಸಿಎಟಿ) ಅಧಿಕೃತ ಮಾನ್ಯತೆ ಇಲ್ಲ. ದೇಶದಲ್ಲಿ ಚಿತ್ರಹಿಂಸೆಯನ್ನು ನಿವಾರಿಸುವ ಅಥವಾ ತಡೆಗಟ್ಟುವ ವ್ಯವಸ್ಥೆ ತರುವ ದಿಸೆಯಲ್ಲಿ ರಾಜಕೀಯ ಬದ್ಧತೆಯೇ ವ್ಯಕ್ತವಾಗಿಲ್ಲ ಎಂದು ವರದಿ ತಿಳಿಸಿದೆ**

ಗಡಿ ಭದ್ರತಾ ಪಡೆಗಳು, ಪೊಲೀಸರು ಕಾನೂನಿನ ಭಯ ಇಲ್ಲದೇ ಜನರ ಮೇಲೆ ದೌರ್ಜನ್ಯ ಎಸಗುತ್ತಿದ್ದಾರೆ; ಅಂಥ ಸಿಬ್ಬಂದಿ, ಪೊಲೀಸರಿಗೆ ಬಡ್ತಿ ನೀಡಲಾಗಿದೆ. ಮಾನವ ಹಕ್ಕು ಹೋರಾಟಗಾರರನ್ನು ಮನಬಂದಂತೆ ಬಂಧಿಸಲಾಗಿದೆ. ಭಾರತದ ರಾಜಕೀಯ ಸ್ಥಿತಿಗತಿ ಮತ್ತು ಸಾಂಸ್ಥಿಕ ರಚನೆಗಳೂ ಅದಕ್ಕೆ ಇಂಬುನೀಡಿವೆ. ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಗೆ (ಯುಎಪಿಎ) 2019ರಲ್ಲಿ ತಿದ್ದುಪಡಿ ಮಾಡಲಾಗಿದ್ದು, ಭಿನ್ನಮತವನ್ನು ಹತ್ತಿಕ್ಕುವುದಕ್ಕಾಗಿ ಸಾಮಾಜಿಕ ಕಾರ್ಯಕರ್ತರನ್ನು ಭಯೋತ್ಪಾದಕರೆಂದು ಲೇಪನ ಹಚ್ಚಿದ ಪ್ರಕರಣಗಳೂ ನಡೆದಿವೆ ಎಂದು ವರದಿ ಉಲ್ಲೇಖಿಸಿದೆ.

41	75.8%	31.4%	3
ಭಾರತದಲ್ಲಿ ಪ್ರತಿ 1 ಲಕ್ಷ ಜನಸಂಖ್ಯೆಗೆ ಜೈಲಿನಲ್ಲಿರುವ ಕೈದಿಗಳ ಸಂಖ್ಯೆ	ದೇಶದ ಜೈಲಿನಲ್ಲಿರುವ ಕೈದಿಗಳ ಪೈಕಿ ಕಸ್ಟಡಿಯಲ್ಲಿರುವವರು/ ವಿಚಾರಣಾಧೀನ ಕೈದಿಗಳ ಪ್ರಮಾಣ	ಜೈಲುಗಳ ಸಾಮರ್ಥ್ಯಕ್ಕಿಂತಲೂ ಹೆಚ್ಚು ಇರುವ ಕೈದಿಗಳ ಪ್ರಮಾಣ	ಪ್ರತಿ ಒಂದು ಲಕ್ಷ ಜನರಲ್ಲಿ ಹತ್ಯೆಗೀಡಾಗುತ್ತಿರುವವರು

ಐದು ವಲಯ, 26 ದೇಶ, ಐದು ವಿಭಾಗ

ವಿಶ್ವ ಚಿತ್ರಹಿಂಸೆ ವಿರೋಧಿ ಸಂಘಟನೆಯು ಜಗತ್ತಿನ ಐದು ವಲಯಗಳ 26 ದೇಶಗಳಲ್ಲಿ ದತ್ತಾಂಶಗಳನ್ನು ಸಂಗ್ರಹಿಸಿ ಈ ಸೂಚ್ಯಂಕ ವರದಿ ಸಿದ್ಧಪಡಿಸಿದೆ. ಇದು ಮೊದಲ ವರ್ಷದ ಸೂಚ್ಯಂಕವಾಗಿದ್ದು, ಮುಂದಿನ ವರ್ಷಗಳಲ್ಲಿ ಇದರ ವ್ಯಾಪ್ತಿಯನ್ನು ಇನ್ನಷ್ಟು ದೇಶಗಳಿಗೆ ವಿಸ್ತರಿಸಲಾಗುವುದು ಎಂದು ಸಂಘಟನೆ ಹೇಳಿದೆ. 26 ರಾಷ್ಟ್ರಗಳಲ್ಲಿರುವ 80 ಪಾಲುದಾರರ ಮೂಲಕ 2023 ಮತ್ತು 2024ರ ದತ್ತಾಂಶಗಳನ್ನು ಅದು ಸಂಗ್ರಹಿಸಿದೆ.

ಆಫ್ರಿಕಾ ವಲಯದ ಐದು, ಪಶ್ಚಿಮ ಏಷ್ಯಾ ಮತ್ತು ಉತ್ತರ ಆಫ್ರಿಕಾದ ಮೂರು, ಏಷ್ಯಾ ಮತ್ತು ಪೆಸಿಫಿಕ್ ವಲಯದ ಐದು, ಯೂರೋಪ್ ಮತ್ತು ಮಧ್ಯ ಏಷ್ಯಾದ ಎಂಟು ಹಾಗೂ ಅಮೆರಿಕ ವಲಯದ ಐದು ರಾಷ್ಟ್ರಗಳನ್ನು ಈ ಸೂಚ್ಯಂಕ ಒಳಗೊಂಡಿದೆ.

ಆರು ರಾಷ್ಟ್ರಗಳು ಅತ್ಯಂತ ಹೆಚ್ಚು ಅಪಾಯಕಾರಿ ರಾಷ್ಟ್ರಗಳ ಪಟ್ಟಿಯಲ್ಲಿದ್ದರೆ, ಭಾರತ ಸೇರಿದಂತೆ 13 ರಾಷ್ಟ್ರಗಳು ಹೆಚ್ಚು ಅಪಾಯಕಾರಿ ಸೂಚ್ಯಂಕ ಹೊಂದಿವೆ. ನಾಲ್ಕು ದೇಶಗಳು ಗಣನೀಯ ಪ್ರಮಾಣದ ಅಪಾಯಕಾರಿ ಮತ್ತು ಮೂರು ರಾಷ್ಟ್ರಗಳು ಮಧ್ಯಮ ಮಟ್ಟದ ಅಪಾಯಕಾರಿ ಸೂಚ್ಯಂಕ ಪಡೆದಿವೆ.

ಯಾವ ರಾಷ್ಟ್ರಕ್ಕೆ, ಯಾವ ಸೂಚ್ಯಂಕ?

ಆಫ್ರಿಕಾ ವಲಯ
- ಟೊಗೊ (ಗಣನೀಯ ಮಟ್ಟದಲ್ಲಿ ಅಪಾಯಕಾರಿ)
- ನೈಜೀರಿಯಾ (ಹೆಚ್ಚು ಅಪಾಯಕಾರಿ)
- ಕ್ಯಾಮರೂನ್ (ಹೆಚ್ಚು ಅಪಾಯಕಾರಿ)
- ಇಥಿಯೋಪಿಯಾ (ಅತ್ಯಂತ ಹೆಚ್ಚು ಅಪಾಯಕಾರಿ)
- ಕಾಂಗೊ (ಹೆಚ್ಚು ಅಪಾಯಕಾರಿ)

ಪಶ್ಚಿಮ ಏಷ್ಯಾ ಮತ್ತು ಉತ್ತರ ಆಫ್ರಿಕಾ
- ಟ್ಯುನೀಷಿಯಾ (ಹೆಚ್ಚು ಅಪಾಯಕಾರಿ)
- ಲಿಬಿಯಾ (ಅತ್ಯಂತ ಹೆಚ್ಚು ಅಪಾಯಕಾರಿ)
- ಬಹರೇನ್ (ಅತ್ಯಂತ ಹೆಚ್ಚು ಅಪಾಯಕಾರಿ)

ಏಷ್ಯಾ ಮತ್ತು ಪೆಸಿಫಿಕ್
- ಭಾರತ (ಹೆಚ್ಚು ಅಪಾಯಕಾರಿ)
- ಇಂಡೊನೇಷ್ಯಾ (ಹೆಚ್ಚು ಅಪಾಯಕಾರಿ)
- ಮಲೇಷ್ಯಾ (ಹೆಚ್ಚು ಅಪಾಯಕಾರಿ)
- ಪಾಕಿಸ್ತಾನ (ಹೆಚ್ಚು ಅಪಾಯಕಾರಿ)
- ಫಿಲಿಪ್ಪೀನ್ಸ್ (ಹೆಚ್ಚು ಅಪಾಯಕಾರಿ)

ಯೂರೋಪ್ ಮತ್ತು ಮಧ್ಯ ಏಷ್ಯಾ
- ಬೆಲರೂಸ್ (ಅತ್ಯಂತ ಹೆಚ್ಚು ಅಪಾಯಕಾರಿ)
- ಹಂಗರಿ (ಗಣನೀಯ ಮಟ್ಟದಲ್ಲಿ ಅಪಾಯಕಾರಿ)
- ಇಟಲಿ (ಮಧ್ಯಮ ಮಟ್ಟದಲ್ಲಿ ಅಪಾಯಕಾರಿ)
- ಕಿರ್ಗಿಸ್ತಾನ್ (ಗಣನೀಯ ಪ್ರಮಾಣದ ಅಪಾಯಕಾರಿ)
- ಮಲ್ಡೋವಾ (ಮಧ್ಯಮ ಮಟ್ಟದಲ್ಲಿ ಅಪಾಯಕಾರಿ)
- ರಷ್ಯಾ (ಅತ್ಯಂತ ಹೆಚ್ಚು ಅಪಾಯಕಾರಿ)
- ಸ್ಪೇನ್ (ಮಧ್ಯಮ ಮಟ್ಟದಲ್ಲಿ ಅಪಾಯಕಾರಿ)
- ಟರ್ಕಿ (ಹೆಚ್ಚು ಅಪಾಯಕಾರಿ)

ಅಮೆರಿಕ
- ಅರ್ಜೆಂಟೀನಾ (ಗಣನೀಯ ಮಟ್ಟದಲ್ಲಿ ಅಪಾಯಕಾರಿ)
- ಕೊಲಂಬಿಯಾ (ಹೆಚ್ಚು ಅಪಾಯಕಾರಿ)
- ಎಲ್ ಸಾಲ್ವಡಾರ್ (ಅತ್ಯಂತ ಹೆಚ್ಚು ಅಪಾಯಕಾರಿ)
- ಹೊಂಡುರಾಸ್ (ಹೆಚ್ಚು ಅಪಾಯಕಾರಿ)
- ಮೆಕ್ಸಿಕೊ (ಹೆಚ್ಚು ಅಪಾಯಕಾರಿ)

2023ರಲ್ಲಿ 2,400 ಕಸ್ಟಡಿ ಸಾವುಗಳು ವರದಿಯಾಗಿದ್ದರೆ, 2024ರಲ್ಲಿ 2,739 ಕಸ್ಟಡಿ ಸಾವುಗಳು ವರದಿಯಾಗಿವೆ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಹೇಳಿದೆ. 2022ರಲ್ಲಿ 1,995 ಮಂದಿ ಕೈದಿಗಳು ಸಾವಿಗೀಡಾಗಿದ್ದರೆ, 159 ಮಂದಿ ಅಸ್ವಾಭಾವಿಕ ಸಾವು ಕಂಡಿದ್ದರು. 2018ರಿಂದ ಕನಿಷ್ಠ ಎಂದರೂ 61 ಮಾನವ ಹಕ್ಕುಗಳ ಹೋರಾಟಗಾರರನ್ನು ಯುಎಪಿಎ ಅಡಿ ಬಂಧಿಸಲಾಗಿತ್ತು. ತೀವ್ರವಾದ ಅಂಗವೈಕಲ್ಯ ಇದ್ದಾಗಲೂ ಪ್ರೊ.ಜಿ.ಎನ್.ಸಾಯಿಬಾಬಾ ಅವರನ್ನು ಬಂಧಿಸಿ, ದೀರ್ಘಕಾಲ ಜೈಲಿನಲ್ಲಿಡಲಾಗಿತ್ತು. ಜಾತಿ ದೌರ್ಜನ್ಯ ಪ್ರಕರಣವನ್ನು ವರದಿ ಮಾಡುವ ವೇಳೆ ಪತ್ರಕರ್ತ ಸಿದ್ದೀಕ್ ಕಪ್ಪನ್ ಅವರನ್ನು ಬಂಧಿಸಿ, ಎರಡು ವರ್ಷ ಜೈಲಿನಲ್ಲಿಡಲಾಗಿತ್ತು.

ಚಿತ್ರಹಿಂಸೆಗೆ ಗುರಿಯಾದ ಸಂತ್ರಸ್ತರ ಹಕ್ಕುಗಳು ಸೀಮಿತವಾಗಿವೆ. ಚಿತ್ರಹಿಂಸೆಯನ್ನು ವ್ಯಾಖ್ಯಾನಿಸುವ ಪ್ರತ್ಯೇಕ ನಿಯಮ ಇಲ್ಲವಾಗಿದ್ದು, ಅವರ ದೂರುಗಳನ್ನು ಆಲಿಸುವ, ಪುನರ್ವಸತಿ ಕಲ್ಪಿಸುವ ವ್ಯವಸ್ಥೆ ಇಲ್ಲ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಅಸ್ತಿತ್ವದಲ್ಲಿದ್ದರೂ ಅದಕ್ಕೆ ಅಗತ್ಯವಾದಷ್ಟು ಸ್ವಾತಂತ್ರ್ಯವಿಲ್ಲದೆ, ಸಂತ್ರಸ್ತರ ಬೇಡಿಕೆಗಳಿಗೆ ಕಿವಿಗೊಡದೆ ಅದು ಟೀಕೆಗೆ ಗುರಿಯಾಗಿದೆ ಎಂದು ವರದಿ ವಿವರಿಸಿದೆ.

ಮಾನದಂಡಗಳು

1. ರಾಜಕೀಯ ಬದ್ಧತೆ
2. ಪೊಲೀಸ್ ದೌರ್ಜನ್ಯ ಮತ್ತು ಸಾಂಸ್ಥಿಕ ಹಿಂಸೆಯನ್ನು ಅಂತ್ಯಗೊಳಿಸುವುದು
3. ಬಂಧನದಲ್ಲಿರುವವರಿಗೆ ಚಿತ್ರಹಿಂಸೆಯಿಂದ ಮುಕ್ತಿ
4. ಚಿತ್ರಹಿಂಸೆ ನೀಡುವವರಿಗೆ ಶಿಕ್ಷೆಯಿಂದ ವಿನಾಯಿತಿ ನೀಡದೇ ಇರುವುದು
5. ಸಂತ್ರಸ್ತರ ಹಕ್ಕುಗಳು
6. ಸರ್ವರಿಗೂ ರಕ್ಷಣೆ
7. ನಾಗರಿಕ ಪಾಲ್ಗೊಳ್ಳುವಿಕೆ ಮತ್ತು ಸಮರ್ಥನೆಯ ಹಕ್ಕು

ಶಿಫಾರಸುಗಳು

- ಚಿತ್ರಹಿಂಸೆ ವಿರುದ್ಧದ ವಿಶ್ವಸಂಸ್ಥೆಯ ನಿರ್ಣಯಗಳು, ಅದರ ಶಿಷ್ಟಾಚಾರ ಮತ್ತು ಅಪಹರಣದಿಂದ ಜನರನ್ನು ರಕ್ಷಿಸುವುದಕ್ಕೆ ಸಂಬಂಧಿಸಿದ ನಿರ್ಣಯಗಳನ್ನು ಅನುಷ್ಠಾನಗೊಳಿಸಬೇಕು
- ತನಿಖೆಯ ವೇಳೆ ಪರಿಣಾಮಕಾರಿಯಾಗಿ ವಿಚಾರಣೆ, ಮಾಹಿತಿ ಕಲೆಹಾಕುವುದಕ್ಕೆ ಸಂಬಂಧಿಸಿದ ಮೆಂಡಿಸ್ ನಿಯಮಗಳನ್ನು ಜಾರಿಗೆ ತರಬೇಕು. ಭಾರಿ ಪ್ರಮಾಣದಲ್ಲಿ ಸೇರಿರುವ ಜನರನ್ನು ನಿರ್ವಹಿಸಲು ಕಾನೂನು ಜಾರಿ ಮತ್ತು ಭದ್ರತಾ ಪಡೆಗಳಿಗೆ ಅಗತ್ಯ ತರಬೇತಿ ನೀಡಬೇಕು
- ಮಾನವ ಹಕ್ಕುಗಳ ಪರವಾಗಿ ಇರುವವರ ವಿರುದ್ಧ ಭಯೋತ್ಪದನಾ ನಿಗ್ರಹ, ರಾಷ್ಟ್ರೀಯ ಭದ್ರತೆ ಮತ್ತು ಮುನ್ನೆಚ್ಚರಿಕೆ ಕ್ರಮವಾಗಿ ವಶಕ್ಕೆ ಪಡೆಯುವ ಕಾನೂನುಗಳನ್ನು ದುರ್ಬಳಕೆ ಮಾಡುವುದನ್ನು ಕೊನೆಗಾಣಿಸಬೇಕು
- ಇಸ್ತಾಂಬುಲ್ ಮತ್ತು ಮಿನ್ನಸೋಟಾ ಶಿಷ್ಟಾಚಾರಕ್ಕೆ ಅನುಗುಣವಾಗಿ, ಬಿಎನ್‌ಎಸ್ ಸೆಕ್ಷನ್ 192 (2)ರ ಅಡಿಯಲ್ಲಿ ಪೊಲೀಸ್ ವಶದಲ್ಲಿ ಅಥವಾ ನ್ಯಾಯಾಂಗ ಬಂಧನದಲ್ಲಿ ಆದ ಸಾವುಗಳ ಬಗ್ಗೆ ಮ್ಯಾಜಿಸ್ಟ್ರೇಟ್ ನೇತೃತ್ವದಲ್ಲಿ ಸಮಗ್ರ ತನಿಖೆ ನಡೆಸಬೇಕು. ಶವಪರೀಕ್ಷೆ ಮಾಡುವುದಕ್ಕೂ ಮೊದಲು ಮೃತದೇಹವನ್ನು ವೀಕ್ಷಿಸಲು ಅವಕಾಶ ಇರುವ ಕುಟುಂಬಸ್ಥರ ಹಕ್ಕನ್ನು ಎತ್ತಿಹಿಡಿಯುವುದು ಮತ್ತು ಮರಣೋತ್ತರ ಪರೀಕ್ಷೆ ನಡೆಸಿದ ದಿನವೇ ಪರೀಕ್ಷಾ ವರದಿ ಮತ್ತು ಅದರ ವಿಡಿಯೊ ರೆಕಾರ್ಡಿಂಗ್ ನೀಡುವುದನ್ನು ಖಾತರಿ ಪಡಿಸಬೇಕು
- ಮಾನ್ಯತೆಗೆ ಸಂಬಂಧಿಸಿದ ರಾಷ್ಟ್ರೀಯ ಮಾನವ ಹಕ್ಕುಗಳ ಸಂಸ್ಥೆಗಳ ಜಾಗತಿಕ ಒಕ್ಕೂಟದ ಉಪಸಮಿತಿಯ ಶಿಫಾರಸುಗಳಿಗೆ ಪೂರಕವಾಗಿ 2019ರ ಮಾನವ ಹಕ್ಕುಗಳ ರಕ್ಷಣಾ ಕಾಯ್ದೆಗೆ ತಿದ್ದುಪಡಿ ತರಬೇಕು. ಆ ಮೂಲಕ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ತನ್ನ ಸ್ವಾತಂತ್ರ್ಯ, ಸ್ವಾಯತ್ತೆ ಮತ್ತು ಪರಿಣಾಮಕಾರಿಯಾಗಿ ತನಿಖೆ ನಡೆಸುವ ಹಕ್ಕುಗಳನ್ನು ಖಾತರಿ ಪಡಿಸಿಕೊಳ್ಳಬೇಕು

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಜೊತೆಗೆ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಸ್‌ಎಫ್‌ಸಿ ಕೋಡ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಅಥವಾ ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **ಶೈಕ್ಷಣಿಕ ನೆರವಿಗೆ ಅರ್ಜಿ** ಎಂದು ಸ್ಪಷ್ಟವಾಗಿ ಬರೆದಿರಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ನೀಡಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್‌ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ರಾಷ್ಟ್ರೀಯ

ಗುರುಪೂಜೆ ಸಮರ್ಥಿಸಿಕೊಂಡ ಕೇರಳ ರಾಜ್ಯಪಾಲ ಆರ್ಲೇಕರ್

ತಿರುವನಂತಪುರ (ಪಿಟಿಐ): ಶಾಲೆಗಳಲ್ಲಿ ‘ಗುರುಪೂಜೆ’ ಆಚರಣೆಯನ್ನು ಸಮರ್ಥಿಸಿಕೊಂಡಿರುವ ಕೇರಳ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಆರ್ಲೇಕರ್, ‘ಶಿಕ್ಷಕರ ಪಾದಕ್ಕೆ ಹೂವುಗಳನ್ನು ಸಮರ್ಪಿಸುವುದು ಭಾರತೀಯ ಸಂಸ್ಕೃತಿಯ ಭಾಗ’ ಎಂದು ಪ್ರತಿಪಾದಿಸಿದ್ದಾರೆ.

ಬಲರಾಮಪುರದಲ್ಲಿ ಬಾಲ ಗೋಕುಲಂ ಸಂಸ್ಥೆಯು ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಗುರು ಪೂಜೆ’ಗೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಜನರು ಯಾವ ಸಂಸ್ಕೃತಿಯಿಂದ ಬಂದವರು ಎಂಬುದು ನನಗೆ ಅರ್ಥವಾಗುತ್ತಿಲ್ಲ’ ಎಂದು ಪ್ರಶ್ನಿಸಿದ್ದಾರೆ.

ರಾಜ್ಯದ ಎರಡು ಸಿಬಿಎಸ್‌ಇ ಶಾಲೆಗಳಲ್ಲಿ ಇತ್ತೀಚೆಗೆ ನಡೆದ ‘ಪಾದಪೂಜೆ’ ಕಾರ್ಯಕ್ರಮವನ್ನು ಎಲ್‌ಡಿಎಫ್ ಸರ್ಕಾರವು ಟೀಕಿಸಿತ್ತು.

ವಿದ್ಯಾರ್ಥಿಗಳಿಂದ ನಿವೃತ್ತ ಶಿಕ್ಷಕರ ಪಾದ ತೊಳೆಸಿರುವ ವರದಿಯು ಆಘಾತ ತಂದಿದೆ. ಇದು ಖಂಡನೀಯ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾದದ್ದು ಎಂದು ಶಿಕ್ಷಣ ಸಚಿವ ವಿ.ಶಿವನ್‌ಕುಟ್ಟಿ ಶನಿವಾರ ದೂರಿದ್ದರು.

ಈ ಶಾಲೆಗಳ ಆಡಳಿತ ಮಂಡಳಿಗೆ ನೋಟಿಸ್ ನೀಡಿ ವಿವರಣೆ ಪಡೆಯುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ದೇಶಕರಿಗೆ ಸೂಚಿಸಲಾಗಿದೆ. ಶಿಕ್ಷಣ ಹಕ್ಕು ಕಾಯ್ದೆ ಹಾಗೂ ಅದಕ್ಕೆ ಸಂಬಂಧಿಸಿದ ನಿಯಮಗಳನ್ನು ಉಲ್ಲಂಘಿಸುವ ಯಾವುದೇ ಪಠ್ಯಕ್ರಮದ ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳಲು ಶಿಕ್ಷಣ ಇಲಾಖೆಗೆ ಅಧಿಕಾರವಿದೆ ಎಂದು ವಿ.ಶಿವನ್‌ಕುಟ್ಟಿ ಹೇಳಿದ್ದಾರೆ.

> **ಗುಲಾಮ ಮನಸ್ಥಿತಿಯನ್ನು ಉತ್ತೇಜಿಸುವ ಯಾವುದೇ ಆಚರಣೆಗಳು ಸ್ವೀಕಾರಾರ್ಹವಲ್ಲ. ಶಿಕ್ಷಣವು ಜ್ಞಾನ ಹಾಗೂ ಸ್ವಯಂ ಅರಿವು ನೀಡಬೇಕು.**
> **ವಿ.ಶಿವನ್‌ಕುಟ್ಟಿ,** ಶಿಕ್ಷಣ ಸಚಿವ

ನಿಫಾ ಸೋಂಕಿಗೆ ಮತ್ತೊಂದು ಬಲಿ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ನಿಫಾ ವೈರಾಣು ಸೋಂಕಿಗೆ ಒಳಗಾಗಿದ್ದ 57 ವರ್ಷದ ವ್ಯಕ್ತಿಯೊಬ್ಬರು ಪಾಲಕ್ಕಾಡ್‌ನ ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ಮೃತಪಟ್ಟಿದ್ದಾರೆ.

ರಾಜ್ಯದಲ್ಲಿ ಇತ್ತೀಚೆಗೆ ಎರಡು ಪ್ರಕರಣಗಳು ವರದಿಯಾಗಿತ್ತು. ಪಾಲಕ್ಕಾಡ್‌ನ 38 ವರ್ಷದ ಮಹಿಳೆಯೊಬ್ಬರು ಚಿಕಿತ್ಸೆ ಪಡೆಯುತ್ತಿದ್ದಾರೆ. 18 ವರ್ಷದ ವಿದ್ಯಾರ್ಥಿನಿ ಕೋಯಿಕ್ಕೋಡ್‌ನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವೇಳೆ ಕೊನೆಯುಸಿರೆಳೆದಿದ್ದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮೃಗಾಲಯವೊಂದರಲ್ಲಿ ಗೊರಿಲ್ಲಾವು ಮಗುವೊಂದನ್ನು ಅದರ ತಾಯಿಗೆ ಹಸ್ತಾಂತರಿಸುತ್ತಿರುವ ವಿಡಿಯೊ ತುಣುಕೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹಂಚಿಕೊಳ್ಳಲಾಗುತ್ತಿದೆ. ‘ಬ್ರಾಂಕ್ಸ್ ಮೃಗಾಲಯದಲ್ಲಿ ಗೊರಿಲ್ಲಾ ಇದ್ದ ಪ್ರದೇಶದಲ್ಲಿ ಓಡಾಡುತ್ತಿದ್ದ ಮಗುವನ್ನು ಗೊರಿಲ್ಲಾವೊಂದು ಎತ್ತಿ ತಾಯಿಗೆ ಹಸ್ತಾಂತರಿಸಿತು. ಇಲ್ಲದಿದ್ದರೆ, ಅಲ್ಲಿನ ಪರಿಸ್ಥಿತಿ ತೀರಾ ಹದಗೆಡುತ್ತಿತ್ತು’ ಎಂದು ಪೋಸ್ಟ್‌ನಲ್ಲಿ ಹೇಳಲಾಗಿದೆ. ಆದರೆ, ಇದು ಸುಳ್ಳು. ಅದು ನಿಜವಾದ ವಿಡಿಯೊವಲ್ಲ.

ವಿಡಿಯೊದ ಕೀ ಫ್ರೇಮ್ ಒಂದನ್ನು ರಿವರ್ಸ್ ಇಮೇಜ್ ವಿಧಾನದಲ್ಲಿ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ ಎಐ ವಿಡಿಯೊಸ್ (@AI-Videos-Arg) ಎಂಬ ಯೂಟ್ಯೂಬ್ ಚಾನೆಲ್‌ನಲ್ಲಿ ಇದೇ ವಿಡಿಯೊ ಪ್ರಕಟವಾಗಿರುವುದು ಕಂಡು ಬಂತು. ಆ ಚಾನೆಲ್‌ನಲ್ಲಿನ ಇತರ ವಿಡಿಯೊಗಳನ್ನು ಪರಿಶೀಲನೆಗೆ ಒಳಪಡಿಸಿದಾಗ, ಅದರಲ್ಲಿನ ಬಹುತೇಕ ವಿಡಿಯೊಗಳು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದಿಂದ ಸೃಷ್ಟಿಸಿದ ವಿಡಿಯೊಗಳು ಎಂಬುದು ಕಂಡು ಬಂತು. ವಿಡಿಯೊವನ್ನು ಎಐ ಪತ್ತೆ ಹಚ್ಚುವ ಹೈವ್ ಮಾಡರೇಷನ್ ಟೂಲ್‌ನಲ್ಲಿ ಹಾಕಿದಾಗ, ಅದು ಎಐ ವಿಡಿಯೊ ಎಂಬುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಹಾರಿದರೆ ಏರುತ್ತೀರಿ, ನೆಗೆದರೆ ಬೀಳುತ್ತೀರಿ

ನುಡಿ ಬೆಳಗು

ದಾದಾಪೀರ್ ನವಿಲೇಹಾಳ್

ನಮ್ಮ ನೆಲದ ಕಥನ ಪರಂಪರೆ ಬಹುಮುಖಿಯಾಗಿದೆ. ರಾಜ-ರಾಣಿ, ದೇವತೆ-ರಾಕ್ಷಸ, ಪ್ರಾಣಿ-ಪಕ್ಷಿ ಕಥೆಗಳೆಲ್ಲ ರಂಜನೆ ಮಾತ್ರವಲ್ಲದೆ ಮನುಷ್ಯ ಸಮಾಜದ ವಿವೇಕವನ್ನು ಚೂಪುಗೊಳಿಸಿವೆ. ಕೆಲವು ಕತೆಗಳು ಆಯಾ ಕಾಲದ ಮನೋಧರ್ಮಕ್ಕೆ ಅನುಗುಣವಾಗಿ ಹೇಳಬೇಕಾದದ್ದನ್ನು ಹೇಳಿ ಮುಗಿಸಿಬಿಟ್ಟಿವೆ. ಅವುಗಳಿಂದ ನಾವೆಷ್ಟು ಕಲಿತಿದ್ದೇವೆ, ನಮ್ಮ ನಡವಳಿಕೆಗಳನ್ನು ಎಷ್ಟರಮಟ್ಟಿಗೆ ತಿದ್ದಿಕೊಂಡಿದ್ದೇವೆ ಅಂತ ನಮ್ಮ ನಮ್ಮ ಎದೆಯನ್ನು ಮುಟ್ಟಿ ನೋಡಿಕೊಳ್ಳಬೇಕಾಗಿದೆ. ಇನ್ನೂ ಕೆಲವು ಕತೆಗಳನ್ನು ವ್ಯಕ್ತಿತ್ವ ನಿರ್ಮಾಣದ ದೃಷ್ಟಿಯಿಂದ ಅವು ನಿಂತಲ್ಲಿಂದ ಬೆಳೆಸುವ ಅಗತ್ಯವಿದೆ.

ಒಂದು ಕಾಡಿನ ದೊಡ್ಡ ಮರವೊಂದರಲ್ಲಿ ಗುಬ್ಬಿ ಗೂಡು ಕಟ್ಟಿಕೊಂಡಿತ್ತು. ಅದೊಂದು ದಿನ ಸಾಯಂಕಾಲವಾಗುತ್ತಿದ್ದಂತೆಯೇ ಬಿರುಗಾಳಿ ಬೀಸಿ ದೈತ್ಯ ಮಳೆ ಸುರಿಯಲಾರಂಭಿಸಿತು. ಗೂಡಿನಲ್ಲಿದ್ದ ಮರಿಗುಬ್ಬಿಯನ್ನು ನೆನೆದು ತಾಯಿ ಗುಬ್ಬಿ ತಾನೂ ವೇಗವಾಗಿ ಹಾರಿ ಬಂದು ಗೂಡು ಸೇರಿಕೊಂಡಿತು. ಮರಿಗುಬ್ಬಿಯನ್ನು ರೆಕ್ಕೆಯಲ್ಲಿ ಬೆಚ್ಚಗೆ ಬಚ್ಚಿಟ್ಟುಕೊಂಡಿತು. ಕೆಲ ಹೊತ್ತಿನಲ್ಲಿ ಹೊರಗಡೆಯಿಂದ ಯಾರೋ ಗಡಗಡ ನಡುಗುವ ಸದ್ದು ಕೇಳಿಸಿತು. ತಾಯಿ ಗುಬ್ಬಿ ಗೂಡಿನಿಂದ ಇಣುಕಿ ನೋಡಿತು. ಮೂರು ದಡೂತಿ ಮಂಗಗಳು ಮಳೆಯಲ್ಲಿ ತೊಪ್ಪನೆ ತೊಯ್ದು ನಡುಗುವುದನ್ನು ಕಂಡ ಗುಬ್ಬಿ ಕನಿಕರದಿಂದ ಒಂದು ಮಾತು ಹೇಳಿತು. ‘ನಾನು ಸಣ್ಣ ಗುಬ್ಬಿ ಆಗಿದ್ದರೂ ಎಂಥ ಬಿರುಗಾಳಿ ಮಳೆಗೂ ಅಲ್ಲಾಡದಂತಹ ಗೂಡು ಕಟ್ಟಿಕೊಂಡು ಬೆಚ್ಚಗಿದ್ದೇನೆ. ನೀವೂ ಒಂದು ಒಳ್ಳೆಯ ಗೂಡು ಕಟ್ಟಿಕೊಂಡಿದ್ದರೆ ಹೀಗೆ ನಡುಗುವುದು ತಪ್ಪುತ್ತಿತ್ತು’. ಗುಬ್ಬಿಯ ಮಾತನ್ನು ಕೇಳಿ ಕೋಪಗೊಂಡು ನಡುಗುತ್ತಲೇ ಮರ ಹತ್ತಿದ ಮೂರೂ ಮಂಗಗಳು ಗುಬ್ಬಿ ಗೂಡನ್ನು ಕಿತ್ತು ಬಿಟ್ಟವು.

‘ಅವಿವೇಕಿಗಳಿಗೆ ಬುದ್ಧಿ ಮಾತು ಹೇಳಬಾರದು’ ಅಂತ ನೀತಿ ಹೇಳಿ ಕತೆ ಅಲ್ಲಿಗೆ ಮುಗಿಯುತ್ತದೆ.

ನಿಜ, ನಮ್ಮ ಬದುಕಿನಲ್ಲಿ ಕೆಲವೊಮ್ಮೆ ಸಹವಾಸಿಗಳೇ ನಾವು ನಡೆಯುವ ಹಾದಿಯಲ್ಲಿ ಮುಳ್ಳುಕಲ್ಲುಗಳಾಗಿ ನಮ್ಮ ನೆಮ್ಮದಿಗೆ ಅಡ್ಡಿಯಾಗುತ್ತಾರೆ. ಕಲ್ಲುಮುಳ್ಳುಗಳೊಂದಿಗೆ ಸೆಣಸಾಡುವುದು ವಿವೇಕವಲ್ಲ. ಜೀವನದುದ್ದಕ್ಕೂ ಎದುರಾಗುವ ಅವುಗಳನ್ನು ಪಕ್ಕಕ್ಕೆ ಸರಿಸುತ್ತಲೇ ಮುಂದೆ ಸಾಗಬೇಕಾಗುತ್ತದೆ. ಅಂದುಕೊಂಡ ಗುರಿಯನ್ನು ತಲುಪಬೇಕಾದರೆ ನಮಗಾದ ಗಾಯಗಳೇ ನಮ್ಮ ಹೆಜ್ಜೆಗಳು ಇನ್ನಷ್ಟು ದೃಢವಾಗಲು ಪ್ರೇರಣೆಯಾಗಬೇಕು. ನಮ್ಮ ವಿವೇಕ ಮತ್ತು ಬುದ್ಧಿಮಾತುಗಳು ನಿಷ್ಪ್ರಯೋಜಕವೆಂದು ಭಾವಿಸಬೇಕಾಗಿಲ್ಲ. ನ್ಯಾಯದ ನಿಷ್ಠುರ ಹಾದಿ ಕಠಿಣವಾಗಿದ್ದರೂ ಅಲ್ಲಿನ ಪ್ರತಿ ಹೆಜ್ಜೆ ಆತ್ಯಂತಿಕ ಸುಖದತ್ತ ಕರೆದೊಯ್ಯುತ್ತದೆ. ಧೃತಿಗೆಡದ ನಿರಂತರ ಪ್ರಯತ್ನಶೀಲತೆ ನಮ್ಮನ್ನು ಸೋಲು ಮತ್ತು ಅವಮಾನಗಳಿಂದ ರಕ್ಷಿಸುತ್ತದೆ, ನಮ್ಮ ಸಾಮರ್ಥ್ಯದ ಮೇಲೆ ಭರವಸೆ ಹುಟ್ಟಿಸುತ್ತದೆ. ನಮ್ಮ ಬೌದ್ಧಿಕ ತಿಳಿವಳಿಕೆಯು ವಿಸ್ತಾರವಾದಷ್ಟೂ ಗೆಲುವು ನಮ್ಮನ್ನು ಹಿಂಬಾಲಿಸುತ್ತದೆ.

ಗೂಡು ಕಳೆದುಕೊಂಡ ತಾಯಿ ಗುಬ್ಬಿ ಮರಿಯೊಂದಿಗೆ ಇನ್ನಷ್ಟು ಮೇಲೆ ಹಾರುತ್ತಾ ಮಂಗಗಳಿಗೆ ಹೇಳುತ್ತದೆ: ‘ನನಗೆ ರೆಕ್ಕೆಗಳಿವೆ. ನಾನು ರೆಕ್ಕೆ ಬಡಿದಷ್ಟೂ ಮೇಲೇರುತ್ತೇನೆ. ನನ್ನ ಕೊಕ್ಕು ಮತ್ತು ಕಾಲುಗಳಲ್ಲಿ ಬಲವಿದೆ, ನಾನು ಮತ್ತೆ ಗೂಡು ಕಟ್ಟುತ್ತೇನೆ. ನೀವು ಎಷ್ಟು ಗೂಡುಗಳನ್ನು ಕಿತ್ತು ಹಾಕಬಲ್ಲಿರಿ? ನೀವು ನೆಗೆಯಬಲ್ಲಿರಿ ಅಷ್ಟೇ. ನೆಗೆದಷ್ಟೂ ಕೆಳಕ್ಕೆ ಬೀಳುತ್ತೀರಿ. ನೀವು ನೆಗೆಯುವ ಎತ್ತರಕ್ಕಿಂತ ನಾನು ಹಾರುವ ಎತ್ತರ ದೊಡ್ಡದು. ಕಿತ್ತು ಹಾಕುವ ನಿಮ್ಮ ಪ್ರಯತ್ನದಲ್ಲಿ ನೀವು ಸೋಲುತ್ತಲೇ ಇರುತ್ತೀರಿ.’

ಇದು ಕತೆಯನ್ನು ಬೆಳೆಸುವ ರೀತಿ. ನೊಂದವರು ಕೊಡಬೇಕಾದ ಉತ್ತರ. ಕಟ್ಟುವ ಕಲೆ ಕೆಡವಿ ಕೊಲ್ಲುವ ಕುಬ್ಜತೆಗೆ ಎಂದೆಂದೂ ಒಲಿಯುವುದಿಲ್ಲ. ಕಡಿದಷ್ಟೂ ಹಲವು ಚಿಗುರುಗಳಾಗಿ ಅಗಲಕ್ಕೆ ಹರಡಿ ನೆರಳಾಗುವ ಬೇರಿನ ಬಲ ಇದು. ನಮ್ಮ ಅಂತಃಶಕ್ತಿಯನ್ನು ಜಾಗೃತಗೊಳಿಸಿಕೊಳ್ಳಬೇಕಾದ ಬಗೆ. ನಮ್ಮ ನೆಲಮೂಲದ ಸಾಂಸ್ಕೃತಿಕ ನೆಲೆಗಟ್ಟು. ನಾವೆಲ್ಲ ವ್ಯಕ್ತಿಗಳಾಗಿ, ಸಮುದಾಯವಾಗಿ ತಳೆಯಬೇಕಾದ ನಿಲವು. ❖

ಪದಬಂಧ 6103

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪೊಳ್ಳು ಹರಟೆಯಿದು (4)
3.ಉತ್ತ ನೆಲವನ್ನು ಮಟ್ಟ ಮಾಡುವ ಸಾಧನ (3)
5.ವಿನಾಯಕ ಇಲ್ಲಿಯೇ ಪ್ರತ್ಯಕ್ಷ! (3)
7.ತಿರುಗಿ ಲಾಗ ಹಾಕಿದಾಗ ಆಗಿರುವ ಗದ್ದಲ! (3)
8.ಲೋಹದ ಹಕ್ಕಿಯಲ್ಲಿನ ಪಯಣ (5)
11.ಮುಳ್ಳುಗಳ ನಡುವೆ ಅರಳುವ ಹೂ (3)
12.ಆನೆಯ ಮರಿಯಿದು (3)
15.ಹೆಣ್ಣು ಜಿಂಕೆ ಇಲ್ಲಿದೆ (3)
16.ಕೊನೆಗೆ ದನವನ್ನಿಟ್ಟು ತುಂಡು ಮಾಡುವಿಕೆ! (4)

ಮೇಲಿಂದ ಕೆಳಕ್ಕೆ
1.ಯೋಗವಿದ್ದರೂ ಇದು ಅಗಲಿಕೆಯೇ! (3)
2.ಹದಿನೈದು ದಿನಗಳ ಅವಧಿ (2)
3.ಕೆಲಸಕ್ಕೆ ಬಾರದ ಮಾತಾಡುವಿಕೆ (3)
4.ನಸುನಗೆಯಿಂದ ಮಾಡಿರುವ ಜೋಡಣೆ (3)
6.ಚಿಗುರು ಇಲ್ಲಿ ಕಾಣುತ್ತಿದೆ (3)
7.ಆಕಾಶವನ್ನು ಮುಟ್ಟುವಂಥಾ ಕಟ್ಟಡ (5)
9.ಸೊಂಟದಿಂದ ಪ್ರಾರಂಭವಾದ ಕಂಪನ (3)
10.ಹುರುಪು ಹೀಗೆ ಬಂದಿದೆ (3)
11.ರಾಣಿ ಹಿಡಿದಿರುವ ಢಾಲು (3)
13.ವನದ ಕೊನೆಗಿರುವ ಮನೆ (3)
14.ಸಂಸಾರ ಬಂಧನಕ್ಕೊಳಗಾದವನು (2)



6102ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಿಸಿಲ್ಗುದುರೆ 3.ನಿರ್ಯಾತ 5.ಗದ್ದೆ 6.ನದಿ 8.ಹಜಾರ 9.ಕಾಮನಬಿಲ್ಲು 10.ಅಂಟುಕ 12.ರಿಪು 14.ಅಂಕ 15.ಕವುದಿ 16.ವಿಷಪ್ರಾಶನ

ಮೇಲಿಂದ ಕೆಳಕ್ಕೆ:
1.ಬಿಚ್ಚುಗತ್ತಿ 2.ದುಗನ 4.ತಲಾಂತರ 7.ದಿವಾನಗಿರಿ 8.ಹಲ್ಲು 9.ಕಾಕ 10.ಅಂಗಾರಕ 11.ಸಂಕಲನ 13.ಪುರುಷ

ಸುಡೊಕು 6487

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7	9			3		8	1
				8		2		9
8	1		2	6		7	3	
	8					1		5
	9	2	8	1	5		6	
5						8		
9		7	5					6
	5				2		4	
4	3		6		1			2

6486 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

14 ಜುಲೈ 2025, ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಚತುರ್ಥಿ ಗಂ. 24-00 **ನಕ್ಷತ್ರ:** ಧನಿಷ್ಠ ಗಂ. 06-49 **ಯೋಗ:** ಆಯುಷ್ಮಾನ್ ಗಂ. 16-14 **ಕರಣ:** ಬವ ಗಂ. 12-34, ಮಿಥುನ ಮಾಸದ 30 ನೇ ದಿನ. **ಮಳೆ ನಕ್ಷತ್ರ:** ಪುನರ್ವಸು 3 ನೇ ಪಾದ. **ರಾಹುಕಾಲ:** ಬೆಳಿಗ್ಗೆ 07-30–09-00 **ಸೂರ್ಯೋದಯ:** 06-15 **ಸೂರ್ಯಾಸ್ತ:** 06-58, **ಮುಸ್ಲಿಂ ದಿನಾಂಕ:** 18 ಮೊಹರಮ್, **ದಿನ ವಿಶೇಷ:** ಸಂಕಷ್ಟಹರ ಚತುರ್ಥಿ (ಚ. ಉ ರಾತ್ರಿ 09-42), **ಅದೃಷ್ಟ ಸಂಖ್ಯೆ:** 4, 6

ಮೇಷ: ಕಾನೂನಾತ್ಮಕ ಹೋರಾಟ ಅಥವಾ ಕೋರ್ಟು ವ್ಯವಹಾರಗಳ ಓಡಾಟಕ್ಕೆ ಮುಕ್ತಾಯ ಸಿಗಲಿದೆ. ಗೃಹೋಪಯೋಗಿ ವಸ್ತುಗಳನ್ನು ಕೊಳ್ಳುವ ಬಗ್ಗೆ ಚರ್ಚಿಸುವಿರಿ. ವೃತ್ತಿರಂಗದಲ್ಲಿ ಅದೃಷ್ಟ ಪಾಲಿಗಿರುವುದು.

ವೃಷಭ: ರಾಜಕೀಯವಾಗಿ ಪ್ರಬಲಗೊಳ್ಳುವ ಅವಕಾಶಗಳು ಹೆಚ್ಚಲಿವೆ. ಸಾಮಾಜಿಕ ವಲಯದಲ್ಲಿ ವರ್ಚಸ್ಸು ಬೆಳೆಯಲಿದೆ. ಧಾರ್ಮಿಕ ಕೆಲಸಗಳನ್ನು ಮಾಡಿಸುವಿರಿ. ಆಫೀಸಿನ ಆಗು ಹೋಗುಗಳ ಬಗ್ಗೆ ಗಮನವಿಟ್ಟುಕೊಳ್ಳಿ.

ಮಿಥುನ: ಬಟ್ಟೆಯ ವ್ಯಾಪಾರ ನಡೆಸುವವರು ಉದ್ಯೋಗದಲ್ಲಿ ಬಂಡವಾಳ ಹೂಡುವಂಥ ಕೆಲಸವನ್ನು ಮಾಡುವುದು ಸಮಂಜಸವಲ್ಲ. ಮುಖ್ಯ ಕೆಲಸವೊಂದು ದಿನದ ಅಂತ್ಯದ ವೇಳೆಗೆ ನೆರವೇರುವುದು.

ಕರ್ಕಾಟಕ: ಹೊಸ ವಾಹನ ಕೊಳ್ಳುವ ಸಂಭವವಿದೆ. ಜನರ ಭಾವನೆಗಳಿಗೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬೇಕೆಂಬುದು ಚೆನ್ನಾಗಿ ತಿಳಿದಿದೆ. ಸುಖ ಶಾಂತಿ ಹಾಗೂ ನೆಮ್ಮದಿಗಾಗಿ ಮನೆಯಲ್ಲಿ ಚಂಡಿಕಾ ಪಾರಾಯಣ ಮಾಡಿಸಿ.

ಸಿಂಹ: ಬಹುದಿನದ ನಂತರದಲ್ಲಿ ಷೇರುಪೇಟೆಯಿಂದ ಲಾಭ ಗಳಿಸುವಿರಿ. ಮಕ್ಕಳಿಂದ ಅಹಿತ ಕಾರ್ಯಗಳು ಸಂಭವಿಸಬಹುದು. ಅಕ್ಕಪಕ್ಕದವರ ಎದುರು ಗೌರವಕ್ಕೆ ಚ್ಯುತಿ ಬಂದಂತೆ ಆಗಲಿದೆ.

ಕನ್ಯಾ: ಸುಪ್ತವಾಗಿ ಅಡಗಿರುವ ಪ್ರತಿಭೆ, ಕೌಶಲಗಳನ್ನು ಹೊರ ತೆಗೆಯಲು ಹೊಸದನ್ನು ಕಲಿಯಲು ಮುಂದಾಗುವಂತಾಗಲಿದೆ. ನೂತನವಾಗಿ ಆರಂಭಿಸಿದ ವ್ಯವಹಾರದಲ್ಲಿನ ನಷ್ಟ ಸುಧಾರಿಸಿಕೊಂಡು ಹೋಗುವ ಧೈರ್ಯ ಬೆಳೆಸಿಕೊಳ್ಳಿ.

ತುಲಾ: ವಾಗ್ದಾನಗಳನ್ನು ಮಾಡುವಾಗ ಯೋಚಿಸಿ, ಉಳಿಸಿಕೊಳ್ಳಲು ಕಷ್ಟವಾಗುವಂಥ ಮಾತುಗಳನ್ನು ಕೊಡದಿರಿ. ಕುಟುಂಬದಲ್ಲಿ ಸೌಖ್ಯವಿದ್ದು ಮನರಂಜನೆ ಪಡೆಯುವಿರಿ.

ವೃಶ್ಚಿಕ: ಕಾನೂನು ಸಮಸ್ಯೆಗಳೆಲ್ಲಾ ಸುಸೂತ್ರವಾಗಿ ಬಗೆಹರಿಯಲಿವೆ. ಪರಿಚಯವಾದರೂ ಪರೀಕ್ಷಿಸದೇ ನಂಬಬೇಡಿ. ಲೋಹವಸ್ತುಗಳ ವ್ಯಾಪಾರಿಗಳಿಗೆ ಸಂಪಾದನೆ ಹೆಚ್ಚಳವಾಗಲಿದೆ.

ಧನು: ಮಕ್ಕಳ ಆಟೋಪಚಾರಗಳನ್ನು ನೋಡಿದ ನಿಮಗೆ ಬಾಲ್ಯವು ಅತಿಯಾಗಿ ಕಾಡಲಿದೆ. ಬಹಳ ದಿನಗಳ ನಂತರ ಕ್ರೀಡೆಗಳಲ್ಲಿ ಸಮಯ ಕಳೆಯುವಿರಿ. ನಾಗ ದೇವರ ಆರಾಧನೆ ಶುಭವನ್ನು ಉಂಟುಮಾಡುತ್ತದೆ.

ಮಕರ: ಆಕ್ರೋಶಗಳನ್ನು ವ್ಯಕ್ತಪಡಿಸಲು ಅದಕ್ಕೆ ಕಾರಣರಲ್ಲದ ವ್ಯಕ್ತಿಗಳನ್ನು ಆರಿಸಿಕೊಳ್ಳಬೇಡಿ. ಶಿಕ್ಷಣವನ್ನು ಮುಗಿಸಿರುವ ಉದ್ಯೋಗಾಭಿಲಾಷಿಗಳು ಉತ್ತಮ ವಿಚಾರ ಕೇಳುವಿರಿ. ಮುಖ್ಯ ವ್ಯಕ್ತಿಗಳ ಭೇಟಿಯ ಸಾಧ್ಯತೆ ಇದೆ.

ಕುಂಭ: ಉತ್ತಮ ವ್ಯವಹಾರಗಳ ಫಲದಿಂದ ಕೈಬಿಟ್ಟ ಹಳೆಯ ಆಸ್ತಿಯು ನಿಮ್ಮ ಕೈಸೇರುವ ಯೋಗವಿದೆ. ಖರ್ಚು ವೆಚ್ಚಗಳ ಮೇಲೆ ಗಮನವಿದ್ದರೆ ಒಳ್ಳೆಯದು. ಸರಕು ಸಾಗಾಟದಿಂದ ಉತ್ತಮ ಲಾಭ ಪಡೆಯುವಿರಿ.

ಮೀನ: ಕ್ಷಿಪ್ರ ನಿರ್ಧಾರಗಳನ್ನು ತೆಗೆದುಕೊಳ್ಳಬಲ್ಲ ನೀವು ಮತ್ತೊಮ್ಮೆ ಮರುಪರಿಶೀಲಿಸಲು ಹೋಗಿ ದಾರಿ ತಪ್ಪಬೇಡಿ. ಖರ್ಚು ಕಡಿಮೆ ಗಳಿಕೆ ಹೆಚ್ಚಿರುವುದರಿಂದ ಸಂಪಾದನೆಯ ಹೆಚ್ಚಿನದ್ದನ್ನು ಉಳಿಸಬಹುದು.

ಗುಂಡಣ್ಣ



14 ತಿಂಗಳ ಕನಿಷ್ಠಕ್ಕೆ ಇಳಿದ ರೊಬಸ್ಟಾ ಕಾಫಿ ದರ

ಬ್ರೆಜಿಲ್‌ನಲ್ಲಿ ಕೊಯ್ಲು ಚುರುಕು ಕಾಫಿ ಧಾರಣೆಯಲ್ಲಿ ಇಳಿಕೆ

● ರವಿ ಕೆಳಂಗಡಿ

ಕಳಸ (ಚಿಕ್ಕಮಗಳೂರು): ಬ್ರೆಜಿಲ್‌ನಲ್ಲಿ ಕಾಫಿ ಕೊಯ್ಲು ಶುರುವಾದ ನಂತರ ಮಾರುಕಟ್ಟೆಗೆ ಕಾಫಿ ಆವಕ ಹೆಚ್ಚಾಗಿದ್ದು, ಧಾರಣೆ ದಿನೇ ದಿನೇ ಕುಸಿಯುತ್ತಿದೆ.

ಶುಕ್ರವಾರ ಲಂಡನ್ ಮಾರುಕಟ್ಟೆಯಲ್ಲಿ ರೊಬಸ್ಟಾ ಕಾಫಿ ಟನ್ ಒಂದಕ್ಕೆ 3,170 ಡಾಲರ್ ಬೆಲೆ ಇತ್ತು. ಇದು 14 ತಿಂಗಳ ಕನಿಷ್ಠ. ಅರೇಬಿಕಾ ಕಾಫಿ ಪೌಂಡ್ ಒಂದಕ್ಕೆ 286 ಸೆಂಟ್ಸ್ ಮಟ್ಟಕ್ಕೆ ಕುಸಿದಿದೆ. ಇದು 8 ತಿಂಗಳ ಕನಿಷ್ಠ. ದೇಶಿ ಮಾರುಕಟ್ಟೆಯಲ್ಲಿ ಕಾಫಿ ಧಾರಣೆ ಶೇ 30ರಷ್ಟು ಕುಸಿದಿದೆ.

ಜಗತ್ತಿನಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಕಾಫಿ ಬೆಳೆಯುವ ಬ್ರೆಜಿಲ್ ದೇಶದಲ್ಲಿ ಕಾಫಿ ಕೊಯ್ಲು ಚುರುಕಾಗಿದೆ. ಶೇ 70ರಷ್ಟು ಕೊಯ್ಲು ಮುಗಿದಿದೆ.

ವಿಯೆಟ್ನಾಂ ದೇಶದಲ್ಲಿ ಈ ಸಾಲಿನ ರೊಬಸ್ಟಾ ಬೆಳೆ ಪ್ರಮಾಣ ಹೆಚ್ಚಬಹುದು ಎಂಬ ನಿರೀಕ್ಷೆಯೂ ಲಂಡನ್ ಮಾರುಕಟ್ಟೆಯಲ್ಲಿ ರೊಬಸ್ಟಾ ಬೆಲೆ ಇಳಿಕೆಗೆ ಕಾರಣವಾಗಿದೆ.

ರೊಬಸ್ಟಾ ಕಾಫಿ

ಯುಎಸ್‌ಡಿಎ ಸಂಸ್ಥೆ ತನ್ನ 2025- 26ನೇ ಸಾಲಿನ ಕಾಫಿ ಫಸಲಿನ ಅಂದಾಜನ್ನು ಪ್ರಕಟಿಸಿದೆ. ಅದರ ಪ್ರಕಾರ ಜಾಗತಿಕ ಕಾಫಿ ಉತ್ಪಾದನೆ ಮುಂದಿನ ಸಾಲಿಗೆ ಶೇ 2.5ರಷ್ಟು ಹೆಚ್ಚಿ 1.78 ಕೋಟಿ ಚೀಲ ತಲುಪಬಹುದು. ಈ ಪೈಕಿ ಅರೇಬಿಕಾ ಶೇ 1.7 ಕಡಿಮೆಯಾದರೆ ರೊಬಸ್ಟಾ ಶೇ 7ರಷ್ಟು ಹೆಚ್ಚಬಹುದು ಎಂದು ಆ ಸಂಸ್ಥೆ ಅಂದಾಜಿಸಿದೆ.

ಕುಸಿಯುತ್ತಿರುವ ಕಾಫಿ ಬೆಲೆಯ ಬಗ್ಗೆ ಬೆಳೆಗಾರ ಮತ್ತು ಮಾರುಕಟ್ಟೆ ವಿಶ್ಲೇಷಕ ಗೌತಹಳ್ಳಿ ಕರಣ್, 'ಜಾಗತಿಕ ಅರೇಬಿಕಾ ಫಸಲಿನ ಆಧಾರದ ಮೇಲೆ ರೊಬಸ್ಟಾ ಬೆಲೆ ಏರುಪೇರು ಆಗಬಹುದು. ಅರೇಬಿಕಾ ಫಸಲು ನಿರೀಕ್ಷೆಗಿಂತ ಕಡಿಮೆಯಾದರೆ ಮುಂದಿನ ದಿನಗಳಲ್ಲಿ ರೊಬಸ್ಟಾ ಧಾರಣೆ ಹೆಚ್ಚಬಹುದು' ಎಂಬ ಆಶಾಭಾವನೆ ವ್ಯಕ್ತಪಡಿಸಿದರು.

ಕಾಫಿ ಉದ್ಯಮದ ಜಾಗತಿಕ ಸಂಸ್ಥೆ ವೋಲ್‌ಕೆಫೇ ಕೂಡ 2025- 26ನೇ ಸಾಲಿನಲ್ಲಿ ಅರೇಬಿಕಾ ಕಾಫಿ ಉತ್ಪಾದನೆ 90 ಲಕ್ಷ ಚೀಲದಷ್ಟು ಕಡಿಮೆ ಆಗಬಹುದು ಎಂದು ಅಂದಾಜಿಸಿದೆ.

ಇತ್ತ ಬಹುತೇಕ ಬೆಳೆಗಾರರು ಗರಿಷ್ಠ ಧಾರಣೆಯ ನಿರೀಕ್ಷೆಯಿಂದ ಕಾಫಿ ದಾಸ್ತಾನು ಮಾಡಿದ್ದರು. ಇದೀಗ ಶೇ 30ರಷ್ಟು ದರ ಕುಸಿದಿದ್ದು, ಬೆಳೆಗಾರರು ಕಂಗಾಲಾಗಿದ್ದಾರೆ. ಮಳೆಯಿಂದಾಗಿ ಈ ಬಾರಿ ಫಸಲು ಕೂಡ ನೆಲಕಚ್ಚುತ್ತಿದೆ. ಇದು ಕೂಡ ಬೆಳೆಗಾರರಿಗೆ ತಲೆ ನೋವು ತಂದಿದೆ.

ಚಿಟಿಕೆ ಸುದ್ದಿ

ರಷ್ಯಾದಿಂದ ಕಚ್ಚಾ ತೈಲ ಆಮದು 11 ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): ಭಾರತವು ರಷ್ಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವು ಜೂನ್‌ನಲ್ಲಿ 11 ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ ಎಂದು ಜಾಗತಿಕ ವ್ಯಾಪಾರ ವಿಶ್ಲೇಷಕ ಸಂಸ್ಥೆ ಕೆಪ್ಲೆರ್ ಭಾನುವಾರ ತಿಳಿಸಿದೆ.

ಭಾರತ ಪ್ರತಿ ದಿನ 20.8 ಲಕ್ಷ ಬ್ಯಾರೆಲ್‌ನಷ್ಟು ಕಚ್ಚಾ ತೈಲವನ್ನು ರಷ್ಯಾದಿಂದ ಆಮದು ಮಾಡಿಕೊಂಡಿದೆ. ಇರಾಕ್‌ನಿಂದ 8.93 ಲಕ್ಷ ಬ್ಯಾರೆಲ್, ಸೌದಿ ಅರೇಬಿಯಾ 5.81 ಲಕ್ಷ ಬ್ಯಾರೆಲ್, ಯುಎಇ 4.90 ಲಕ್ಷ ಬ್ಯಾರೆಲ್ ಮತ್ತು ಅಮೆರಿಕದಿಂದ ಪ್ರತಿ ದಿನ 3.03 ಲಕ್ಷ ಬ್ಯಾರೆಲ್ ಆಮದು ಮಾಡಿಕೊಂಡಿದೆ.

ರಷ್ಯಾದಿಂದ ಜೂನ್‌ನಲ್ಲಿ ಆಮದು ಮಾಡಿಕೊಂಡ ಇಂಧನದ ಮೌಲ್ಯ ₹45,170 ಕೋಟಿ. ಈ ಪೈಕಿ ಕಚ್ಚಾ ತೈಲ ಆಮದು ಪಾಲು ಶೇ 80ರಷ್ಟಿದ್ದು, ₹36,136 ಕೋಟಿಯಾಗಿದೆ.

ಪ್ರಸಕ್ತ ವರ್ಷದ ಜನವರಿಯಿಂದ ಜೂನ್‌ವರೆಗೆ ರಷ್ಯಾ ದೇಶವು, ಭಾರತದ ಅಗ್ರ ಕಚ್ಚಾ ತೈಲ ಪೂರೈಕೆ ರಾಷ್ಟ್ರವಾಗಿದೆ. ಆಮದು ಪ್ರಮಾಣ ಪ್ರತಿ ದಿನ 16.7 ಲಕ್ಷ ಬ್ಯಾರೆಲ್ ಆಗಿದೆ ಎಂದು ತಿಳಿಸಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹580	100 ಕ್ಕೆ	₹590
12 ಕ್ಕೆ	₹80		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹325-542
ದ್ವಿತಳಿ (ಬಿ.ವಿ)	₹390-659

ಮರ್ಸಿಡಿಸ್ ಬೆಂಜ್ ಕಾರಿನ ಬೆಲೆ ಸೆಪ್ಟೆಂಬರ್‌ನಲ್ಲಿ ಹೆಚ್ಚಳ

ನವದೆಹಲಿ (ಪಿಟಿಐ): ಐಷಾರಾಮಿ ಕಾರು ತಯಾರಿಕಾ ಕಂಪನಿ ಮರ್ಸಿಡಿಸ್ ಬೆಂಜ್ ಇಂಡಿಯಾ, ತನ್ನ ವಾಹನಗಳ ಬೆಲೆಯನ್ನು ಸೆಪ್ಟೆಂಬರ್‌ನಿಂದ ಶೇ 1ರಿಂದ ಶೇ 1.5ರಷ್ಟು ಹೆಚ್ಚಳ ಮಾಡಲು ಯೋಜಿಸಿದೆ.

ಕಂಪನಿಯು ಪ್ರಸಕ್ತ ವರ್ಷದ ಜನವರಿ ಮತ್ತು ಜುಲೈನಲ್ಲಿ ದರ ಹೆಚ್ಚಳ ಮಾಡಿದೆ. ಇದೀಗ ಮೂರನೇ ಬಾರಿ ದರ ಹೆಚ್ಚಳಕ್ಕೆ ಮುಂದಾಗಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಯುರೊ ಎದುರು ರೂಪಾಯಿ ಮೌಲ್ಯ ಇಳಿಕೆ ಆಗುತ್ತಿದೆ. ಹೀಗಾಗಿ ದರ ಹೆಚ್ಚಳದ ನಿರ್ಧಾರ ಕೈಗೊಳ್ಳಲಾಗುತ್ತಿದೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸಂತೋಷ್ ಅಯ್ಯರ್ ಹೇಳಿದ್ದಾರೆ.

ಕೆಟ್ಟ ಹೂಡಿಕೆಗಳಿಂದ ಪಾರಾಗುವುದು ಹೇಗೆ?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ರಮೇಶ್ ಕೆಲ ವರ್ಷಗಳ ಹಿಂದೆ ಹೂಡಿಕೆ ಮಾಡಲು ಆರಂಭಿಸಿದರು. ಪರಿಚಯದವರೊಬ್ಬರು ಹೇಳಿದ್ದಕ್ಕೆ ಅವರು ಮೊದಲು ಯೂಲಿಪ್ (ಯೂನಿಟ್ ಲಿಂಕ್ಡ್ ಇನ್ಶೂರೆನ್ಸ್) ಪಾಲಿಸಿಯೊಂದರಲ್ಲಿ ಹಣ ತೊಡಗಿಸಿದರು. ನಂತರ ಬ್ಯಾಂಕ್ ಸಿಬ್ಬಂದಿಯೊಬ್ಬರ ಸಲಹೆ ಪಡೆದು ಎಂಡೋಮೆಂಟ್ ಪಾಲಿಸಿ ಮತ್ತು ಎಫ್.ಡಿ.ಯಲ್ಲಿ ಹೂಡಿಕೆ ಮಾಡಿದರು. ಸ್ನೇಹಿತರೊಬ್ಬರು ಡಿಜಿಟಲ್ ಗೋಲ್ಡ್ ಬಗ್ಗೆ ತಿಳಿಸಿದರು ಎಂದು ಅದರಲ್ಲೂ ಹಣ ಹಾಕಿದರು. ಆಕರ್ಷಕ ಜಾಹಿರಾತು ನೋಡಿದ ಬಳಿಕ ಕ್ರಿಪ್ಟೊ ಕರೆನ್ಸಿಯಲ್ಲೂ ಹಣ ಹಾಕುವುದಕ್ಕೆ ರಮೇಶ್ ಹಿಂಜರಿಯಲಿಲ್ಲ.

ಯಾವುದೋ ಇನ್‌ಸ್ಟಾಗ್ರಾಂ ಸಲಹೆ ನೋಡಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗೂ ಒಂದಷ್ಟು ದುಡ್ಡನ್ನು ಅವರು ತೊಡಗಿಸಿದರು. ಅವೆಲ್ಲವನ್ನೂ ಮಾಡಿದ ಒಂದಷ್ಟು ವರ್ಷಗಳು ಕಳೆದಿವೆ. ಕೆಲವು ಹೂಡಿಕೆಗಳು ಅಲ್ಪ ಗಳಿಕೆ ತಂದು ಕೊಟ್ಟಿವೆ, ಕೆಲವು ಯಾವುದೇ ಗಳಿಕೆ ಕಾಣದೆ ಅಲ್ಲೇ ಇವೆ. ಕೆಲವು ಹೂಡಿಕೆಗಳನ್ನು ಯಾವ ಉದ್ದೇಶಕ್ಕೆ ಮಾಡಲಾಗಿದೆ ಎಂಬುದೇ ರಮೇಶ್‌ಗೆ ಗೊತ್ತಿಲ್ಲ. ಇದು ರಮೇಶ್ ಒಬ್ಬರ ಕಥೆ ಅಲ್ಲ. ಹೂಡಿಕೆ ಮಾಡುವಾಗ ಹಲವರು ಲೆಕ್ಕಾಚಾರವಿಲ್ಲದೆ ಹೂಡಿಕೆಗೆ ಮುಂದಾಗುತ್ತಾರೆ. ಆ ಹೂಡಿಕೆ ಸರಿಯಿಲ್ಲ ಎಂದು ತಿಳಿಯುವಷ್ಟರಲ್ಲಿ ಕಾಲ ಮಿಂಚಿ ಹೋಗಿರುತ್ತದೆ.

ಮಾರುಕಟ್ಟೆಯಲ್ಲಿ ಸಾವಿರಾರು ಹೂಡಿಕೆ ಉತ್ಪನ್ನಗಳಿರುವಾಗ ಸರಿಯಾದ ಹೂಡಿಕೆ ಆಯ್ಕೆ ದೊಡ್ಡ ಸವಾಲು. ಯಾವುದೇ ಹೂಡಿಕೆ ಮಾಡುವ ಮುನ್ನ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾಗುತ್ತದೆ. ಹೂಡಿಕೆ ಆಯ್ಕೆ ಮಾಡುವಾಗ ಅದು ಹೇಗೆ ಹಣ ಗಳಿಸುತ್ತದೆ, ದುಡ್ಡನ್ನು ಯಾವುದರ ಮೇಲೆ ತೊಡಗಿಸುತ್ತದೆ ಎನ್ನುವುದನ್ನು ಮೊದಲು ಖಾತರಿಪಡಿಸಿಕೊಳ್ಳಿ. ಬಹುಪಾಲು ಹೂಡಿಕೆಗಳು ಷೇರು ಮಾರುಕಟ್ಟೆ, ಡೆಟ್ ಹೂಡಿಕೆ (ಎಫ್.ಡಿ, ಬಾಂಡ್ ಇತ್ಯಾದಿ) ಚಿನ್ನ, ರಿಯಲ್ ಎಸ್ಟೇಟ್‌ನಂತಹ ಉತ್ಪನ್ನಗಳ ಮೇಲೆ ಹಣ ತೊಡಗಿಸುತ್ತವೆ. ಷೇರು ಮಾರುಕಟ್ಟೆಗಳಲ್ಲಿ ಅಲ್ಪಾವಧಿಗೆ ಹೂಡಿಕೆ ಮಾಡಿದಾಗ ರಿಸ್ಕ್ ಇರುತ್ತದೆ. ಆದರೆ ದೀರ್ಘಾವಧಿಗೆ ಹೂಡಿಕೆ ಮಾಡಿದಾಗ ಗಳಿಕೆಯ ಸಾಧ್ಯತೆ ಹೆಚ್ಚಿರುತ್ತದೆ. ಡೆಟ್ ಹೂಡಿಕೆಗಳಲ್ಲಿ ಹೂಡಿಕೆ ರಿಸ್ಕ್ ಹೆಚ್ಚಿರುವುದಿಲ್ಲ, ಆದರೆ ಗಳಿಕೆ ಕಡಿಮೆ ಇರುತ್ತದೆ. ಯಾವ ಹೂಡಿಕೆ ಹೇಗೆ ದುಡ್ಡು ಗಳಿಸುತ್ತದೆ ಎನ್ನುವುದನ್ನು ತಿಳಿದಾಗ ಅತಿಯಾದ ಲಾಭದ ಆಸೆಗೆ ಸಿಲುಕುವ ಪ್ರಮೇಯ ಎದುರಾಗದು. ಯಾರಾದರೂ ನಿಮಗೆ ಅತಿಯಾದ ಲಾಭದ ಆಸೆ ತೋರಿಸಿದರೆ ಅದನ್ನು ನಂಬಬೇಡಿ. ಆ ಹೂಡಿಕೆ ಯಾವುದು, ಅದರಲ್ಲಿ ಹಣ ಹೇಗೆ ಬೆಳೆಯುತ್ತದೆ, ನಿಮ್ಮ ದುಡ್ಡನ್ನು ಎಲ್ಲಿ ತೊಡಗಿಸಲಾಗುತ್ತದೆ ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳಿ. ಇದರಿಂದ ಮೋಸ ಹೋಗುವುದು ತಪ್ಪುತ್ತದೆ.

ರಿಸ್ಕ್ ಎಷ್ಟು?: 'ನೀವೇನು ಮಾಡುತ್ತಿದ್ದೀರಿ ಎಂಬುದು ಗೊತ್ತಿಲ್ಲದಿದ್ದರೆ ಅಲ್ಲಿ ರಿಸ್ಕ್ ಇರುತ್ತದೆ' ಎಂದು ಹೂಡಿಕೆ ತಜ್ಞ ವಾರನ್ ಬಫೆಟ್ ಹೇಳುತ್ತಾರೆ. ಯಾವುದೇ ಹೂಡಿಕೆಗೆ ಮುನ್ನ ಅದು ಹೇಗೆ ಹಣ ಗಳಿಸುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳುವ ಜೊತೆಗೆ ಅದರಲ್ಲಿರುವ ರಿಸ್ಕ್ ಅನ್ನು ನೀವು ನಿಭಾಯಿಸಲು ಸಾಧ್ಯವೇ ಎಂದು ನಿಮಗೆ ನೀವೇ ಕೇಳಿಕೊಳ್ಳಿ. ರಿಸ್ಕ್ ಅಂದರೆ ಬಂಡವಾಳದ ಮೊತ್ತವನ್ನು ಕಳೆದುಕೊಳ್ಳುವ ಸಾಧ್ಯತೆ ಎಷ್ಟಿದೆ ಎಂದು ಅಂದಾಜು ಮಾಡುವುದು. ಷೇರು ಮಾರುಕಟ್ಟೆಯಲ್ಲಿ ಏರಿಳಿತದ ರಿಸ್ಕ್ ಇರುತ್ತದೆ. ಇಲ್ಲಿ ಅಲ್ಪಾವಧಿಯಲ್ಲಿ ಬಂಡವಾಳ ನಷ್ಟದ ಸಾಧ್ಯತೆ ಇಲ್ಲದಿಲ್ಲ. ನಿಶ್ಚಿತ ಠೇವಣಿ, ಅಂಚೆ ಕಚೇರಿಯ ವಿವಿಧ ಹೂಡಿಕೆಗಳು, ಸರ್ಕಾರಿ ಬಾಂಡ್‌ಗಳು, ಲಿಕ್ವಿಡ್ ಮ್ಯೂಚುವಲ್ ಫಂಡ್‌ಗಳಂತಹ ಡೆಟ್ ಹೂಡಿಕೆಗಳಲ್ಲಿ ರಿಸ್ಕ್ ಕಡಿಮೆ. ಆದರೆ ಇಲ್ಲಿ ಹಣದುಬ್ಬರ ಮೀರಿ ಉತ್ತಮ ಗಳಿಕೆ ಕಾಣಲು ಸಾಧ್ಯವಿಲ್ಲ. ಯಾವ ಹೂಡಿಕೆ ಉತ್ಪನ್ನವು ಕಾನೂನಿನ ನಿಯಂತ್ರಣಕ್ಕೆ ಒಳಪಟ್ಟಿಲ್ಲವೋ ಅಂಥವುಗಳಲ್ಲಿ ನಷ್ಟದ ಸಾಧ್ಯತೆ ಹೆಚ್ಚು, ಅವುಗಳಿಂದ ದೂರವಿರಿ.

ಎಷ್ಟು ಗಳಿಸಬಹುದು?: ಹೂಡಿಕೆ ಮಾಡುವಾಗ ಅದರಲ್ಲಿನ ಗಳಿಕೆಯ ಅಂದಾಜು ಮಾಡುವುದು ಮುಖ್ಯ. ಆದರೆ ಯಾವುದೇ ಹೂಡಿಕೆಯಲ್ಲಿ ಗಳಿಕೆ ಎಷ್ಟು ಎಂದು ಕೇಳುವ ಮೊದಲು ಆ ಹೂಡಿಕೆ ಷೇರು ಮಾರುಕಟ್ಟೆ ಆಧಾರಿತವೋ ಅಥವಾ ಹೂಡಿಕೆ ಮೇಲೆ ನಿಖರವಾದ ಗಳಿಕೆ ತಂದುಕೊಡುವಂಥದ್ದೋ ಎನ್ನುವುದನ್ನು ಅಂದಾಜು ಮಾಡಿಕೊಳ್ಳಬೇಕಾಗುತ್ತದೆ. ಹೂಡಿಕೆಯ ಹಂತದಲ್ಲಿ ತೆರಿಗೆ ಅನ್ವಯಿಸುವುದೋ, ನಗದೀಕರಣದ ವೇಳೆ ತೆರಿಗೆ ಕಟ್ಟಬೇಕಾಗಿ ಬರುತ್ತದೋ ಎಂಬ ಸ್ಪಷ್ಟತೆ ಬೇಕಾಗುತ್ತದೆ. ಕೆಲ ಹೂಡಿಕೆಗಳಲ್ಲಿ ಗೋಪ್ಯ ಶುಲ್ಕಗಳಿರುತ್ತವೆ, ಮಾರಾಟ ಪ್ರತಿನಿಧಿಗಳು ಹೂಡಿಕೆ ವೇಳೆ ಅವುಗಳ ಬಗ್ಗೆ ಪ್ರಸ್ತಾಪ ಮಾಡುವುದೇ ಇಲ್ಲ.

ಷೇರು ಮಾರುಕಟ್ಟೆಯಲ್ಲಿ ಹಣ ತೊಡಗಿಸುವ ಮ್ಯೂಚುವಲ್ ಫಂಡ್ ಹೂಡಿಕೆಗಳು ವಾರ್ಷಿಕ ಸರಾಸರಿ ಶೇ 12ರಷ್ಟು ಗಳಿಕೆ ಕೊಟ್ಟಿವೆ ಎಂದು ದತ್ತಾಂಶ ಹೇಳುತ್ತದೆ. ಆದರೂ ಮಾರುಕಟ್ಟೆ ಆಧಾರಿತ ಈಕ್ವಿಟಿ ಹೂಡಿಕೆಗಳಲ್ಲಿ ಇಂತಿಷ್ಟು ಬಂದೇ ಬರುತ್ತದೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ರಿಸ್ಕ್ ಬೇಡ ಎನ್ನುವ ಕಾರಣಕ್ಕೆ ಹಲವರು ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡುತ್ತಾರೆ. ಆದರೆ ನಿಶ್ಚಿತ ಠೇವಣಿಗಳ ಹೂಡಿಕೆಗಳ ಮೇಲಿನ ಗಳಿಕೆಗೆ ನಿಮ್ಮ ತೆರಿಗೆ ಸ್ಲ್ಯಾಬ್‌ಗೆ ತಕ್ಕಂತೆ ತೆರಿಗೆ ಕಟ್ಟಬೇಕಾಗುತ್ತದೆ. ಉದಾಹರಣೆಗೆ ನೀವು 30 ಪರ್ಸೆಂಟ್ ತೆರಿಗೆ ಸ್ಲ್ಯಾಬ್‌ನಲ್ಲಿದ್ದು ನಿಶ್ಚಿತ ಠೇವಣಿ ಬಡ್ಡಿ ದರ ಶೇ 7ರಷ್ಟಿದ್ದರೆ ತೆರಿಗೆಯ ನಂತರ ನಿಮಗೆ ಸಿಗುವ ಗಳಿಕೆ ಶೇ 4.9ರಷ್ಟು ಮಾತ್ರ. ಇನ್ನು ಯೂಲಿಪ್ ಪಾಲಿಸಿಗಳಲ್ಲಿ ಹೂಡಿಕೆ ಮಾಡಿದಾಗ ಆರಂಭಿಕ ಕೆಲ ವರ್ಷಗಳ ಕಂತು ಗೋಪ್ಯ ಶುಲ್ಕಗಳಿಗೇ ಹೋಗುತ್ತದೆ. ಆದ್ದರಿಂದ ಹೂಡಿಕೆಗಳನ್ನು ಆಯ್ಕೆ ಮಾಡಿಕೊಳ್ಳುವಾಗ ವಾಸ್ತವಿಕ ಲಾಭ ಗಳಿಕೆಯ ಅಂದಾಜು ಮಾಡುವುದು ಬಹಳ ಮುಖ್ಯ.

ಗುರಿಗಳಿಗೆ ತಕ್ಕಂತೆ ಇದೆಯೇ?: 25 ವರ್ಷ ವಯಸ್ಸಿನ ವ್ಯಕ್ತಿ ದೀರ್ಘಾವಧಿಯಲ್ಲಿ ದೊಡ್ಡ ಮೊತ್ತದ ಹಣ ಗಳಿಸಲು 5 ವರ್ಷದ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿದರೆ ಹಣ ಸುರಕ್ಷಿತವಾಗಿರುತ್ತದೆ. ಆದರೆ ಆ ಮೊತ್ತ ಹಣದುಬ್ಬರ ಪ್ರಮಾಣ ಮೀರಿ ಲಾಭ ತಂದುಕೊಡುವುದಿಲ್ಲ. ಹಾಗೆಯೇ 60 ವರ್ಷದ ವ್ಯಕ್ತಿ ಹೆಚ್ಚು ಲಾಭ ಗಳಿಸುವ ಉದ್ದೇಶದೊಂದಿಗೆ ನಿವೃತ್ತಿಯ ಹಣವನ್ನು (ರಿಟೈರ್‌ಮೆಂಟ್ ಫಂಡ್) ಷೇರು ಮಾರುಕಟ್ಟೆಯಲ್ಲಿ ಅಥವಾ ಕ್ರಿಪ್ಟೊ ಕರೆನ್ಸಿ ಮೇಲೆ ಹೂಡಿಕೆ ಮಾಡಿ ಪ್ರತಿ ತಿಂಗಳು ನಿಶ್ಚಿತ ಆದಾಯ ನಿರೀಕ್ಷಿಸುವುದು ಸರಿಯಾದ ಆಲೋಚನೆ ಅಲ್ಲ. ಯಾವುದೇ ಹೂಡಿಕೆಯನ್ನು ಪರಿಗಣಿಸುವಾಗ ಅದು ನಿಮ್ಮ ಗುರಿಗಳಿಗೆ ಪೂರಕವಾಗಿದೆಯೇ, ಅದರಲ್ಲಿರುವ ರಿಸ್ಕ್ ತೆಗೆದುಕೊಳ್ಳಲು ನೀವು ಸಿದ್ಧವಿರುವಿರೇ ಎನ್ನುವ ಪ್ರಶ್ನೆಗಳನ್ನು ಕೇಳಿಕೊಂಡು ಮುಂದುವರಿಯಬೇಕು.

ದುಡ್ಡು ಬೇಕಾದಾಗ ಪಡೆಯುವುದು ಸುಲಭವೇ?

ಯಾವುದೇ ಹೂಡಿಕೆ ಮಾಡುವ ಮುನ್ನ ನಗದೀಕರಣದ ಸಾಧ್ಯತೆ ಎಷ್ಟಿದೆ ಎನ್ನುವುದನ್ನು ನೋಡಿಕೊಳ್ಳಬೇಕು. ನಗದೀಕರಣ ಅಂದರೆ ಬೇಕಾದಾಗ ಹೂಡಿಕೆ ಮೊತ್ತವನ್ನು ಸುಲಭವಾಗಿ ಹಿಂಪಡೆಯಬಹುದೇ ಎಂಬ ಅಂಶ. ಮ್ಯೂಚುವಲ್ ಫಂಡ್, ಷೇರು, ಇಟಿಎಫ್ ಖರೀದಿ ಮತ್ತು ಮಾರಾಟ ಸುಲಭ. ಆದರೆ ಪಿಪಿಎಫ್, ಎನ್‌ಪಿಎಸ್, ಎನ್‌ಎಸ್‌ಸಿ, ಕಿಸಾನ್ ವಿಕಾಸ್ ಪತ್ರದಂತಹ (ಕೆವಿಪಿ) ಹೂಡಿಕೆಗಳಲ್ಲಿ ನಗದೀಕರಣ ಸುಲಭವಲ್ಲ. ಈ ಹೂಡಿಕೆಗಳಲ್ಲಿ ನಿರ್ದಿಷ್ಟ ವರ್ಷಗಳವರೆಗೆ ಹಣ ಹಿಂಪಡೆಯಲು ನಿರ್ಬಂಧ ಇರುತ್ತದೆ. ರಿಯಲ್ ಎಸ್ಟೇಟ್ ಆಸ್ತಿಯನ್ನು ತಕ್ಷಣಕ್ಕೆ ಮಾರಾಟ ಮಾಡಿ ನಗದೀಕರಣ ಮಾಡಲು ಸಾಧ್ಯವಿಲ್ಲ. ರಿಯಲ್ ಎಸ್ಟೇಟ್ ಆಸ್ತಿ ಮಾರಾಟಕ್ಕೆ ಕೆಲ ತಿಂಗಳಿಂದ ವರ್ಷಗಳೇ ಬೇಕಾಗಬಹುದು. ಹೂಡಿಕೆಯಲ್ಲಿ ಲಾಕ್‌-ಇನ್ ಅವಧಿ ಇರುವುದು ಕೆಟ್ಟದ್ದಲ್ಲ. ಆದರೆ ಅಲ್ಪಾವಧಿಯಲ್ಲಿ ಬೇಕಿರುವ ಮೊತ್ತವನ್ನು ಇಂತಹ ಹೂಡಿಕೆಗಳಲ್ಲಿ ತೊಡಗಿಸಬಾರದು.

'ದಲೈ ಲಾಮಾ ಉತ್ತರಾಧಿಕಾರಿ ಭಾರತದೊಂದಿಗಿನ ಸಂಬಂಧಕ್ಕೆ ಮುಳ್ಳು'

ಆಯ್ಕೆಯೂ ಆಂತರಿಕ ವಿಚಾರ; ಭಾರತಕ್ಕೆ ಚೀನಾ ಎಚ್ಚರಿಕೆ

ನವದೆಹಲಿ (ರಾಯಿಟರ್ಸ್): 'ಟಿಬೆಟ್‌ನ ಬೌದ್ಧರ ಆಧ್ಯಾತ್ಮಿಕ ಗುರು ದಲೈ ಲಾಮಾ ಅವರ ಉತ್ತರಾಧಿಕಾರಿ ಆಯ್ಕೆ ವಿಚಾರವು ಭಾರತ ಹಾಗೂ ಚೀನಾ ಸಂಬಂಧಕ್ಕೆ ಮುಳ್ಳಾಗಲಿದೆ' ಎಂದು ಚೀನಾವು ಎಚ್ಚರಿಸಿದೆ.

2020ರಲ್ಲಿ ಗಾಲ್ವಾನ್ ಕಣಿವೆಯಲ್ಲಿ ಚೀನಾ ಪಡೆಗಳ ಜೊತೆ ಭಾರತದ ಸೇನೆಯು ಸಂಘರ್ಷ ನಡೆದ ಬಳಿಕ ಇದೇ ಮೊದಲ ಬಾರಿಗೆ ಚೀನಾಕ್ಕೆ ತೆರಳಲಿರುವ ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಪ್ರವಾಸಕ್ಕೂ ಮುನ್ನ ಆಕ್ಷೇಪ ವ್ಯಕ್ತಪಡಿಸಿದೆ.

'ದಲೈಲಾಮಾ ಉತ್ತರಾಧಿಕಾರಿ ಆಯ್ಕೆಯಲ್ಲಿ ತನ್ನ ಪಾತ್ರವಿಲ್ಲ. ಆದರೆ, ಆಯ್ಕೆಗೆ ತಮ್ಮ ದೇಶದ ನಾಯಕರ ಒಪ್ಪಿಗೆ ಅಗತ್ಯ' ಎಂದು ಚೀನಾವು ಪುನರಾವರ್ತಿಸಿದೆ.

ದಲೈ ಲಾಮಾ

ಯು ಜಿಂಗ್

ದಲೈಲಾಮಾ ಅವರು ಇತ್ತೀಚೆಗೆ 90ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಭಾರತದ ಸಚಿವರು ಪಾಲ್ಗೊಂಡಿದ್ದರು. ಇದಕ್ಕೂ ಚೀನಾ ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು.

'ವಿದೇಶಾಂಗ ನೀತಿಯ ವೃತ್ತಿಪರರಾಗಿ ಕ್ಸಿಜಾಂಗ್ ಸೂಕ್ಷ್ಮತೆಯ ವಿಚಾರದಲ್ಲಿ ಸಂಪೂರ್ಣ ಅರಿವು ಹೊಂದಿರಬೇಕು. ಲಾಮಾ ಅವರ ಉತ್ತರಾಧಿಕಾರಿ ಆಯ್ಕೆ ವಿಚಾರವು ಚೀನಾದ ಆಂತರಿಕ ವಿಚಾರವಾಗಿದೆ' ಎಂದು ಭಾರತದಲ್ಲಿರುವ ಚೀನಾ ರಾಯಭಾರ ಕಚೇರಿಯ ವಕ್ತಾರೆ ಯು ಜಿಂಗ್ ಅವರು 'ಎಕ್ಸ್‌'ನಲ್ಲಿ ತಿಳಿಸಿದ್ದಾರೆ.

ಟಿಬೆಟ್ ಪ್ರಾಂತ್ಯವನ್ನು ಚೀನಾವು 'ಕ್ಸಿಜಾಂಗ್' ಎಂದೇ ಕರೆಯುತ್ತದೆ. ಜಿಂಗ್ ಅವರು ಯಾರನ್ನೂ ಕೂಡ ಬೊಟ್ಟುಮಾಡಿ ಆರೋಪಿಸಿಲ್ಲ.

ಜುಲೈ 15ರಂದು ಉತ್ತರ ಚೀನಾದ ತಿಯಾನ್‌ಜಿನ್‌ನಲ್ಲಿ ನಡೆಯಲಿರುವ ಶಾಂಘೈ ಸಹಕಾರ ಸಂಸ್ಥೆಯ ಪ್ರಾದೇಶಿಕ ಭದ್ರತಾ ಸಭೆಯಲ್ಲಿ ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಭಾಗವಹಿಸಲಿದ್ದಾರೆ. ಈ ವೇಳೆ ಎರಡು ರಾಷ್ಟ್ರಗಳ ನಡುವೆ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ.

ತೆರಿಗೆ ಮರುಪಾವತಿ ಹೆಚ್ಚಳ

'ವ್ಯವಸ್ಥೆಯಲ್ಲಿನ ಸುಧಾರಣೆಗಳಿಂದಾಗಿ ಈ ಹೆಚ್ಚಳ, ತೆರಿಗೆ ವಿವರ ಸಲ್ಲಿಸುವಿಕೆ ಜಿಗಿತ'

ನವದೆಹಲಿ (ಪಿಟಿಐ): ಆದಾಯ ತೆರಿಗೆ ಮರುಪಾವತಿಗಳ ಮೊತ್ತವು ಕಳೆದ 11 ವರ್ಷಗಳ ಅವಧಿಯಲ್ಲಿ ಶೇಕಡ 474ರಷ್ಟು ಹೆಚ್ಚಳ ಕಂಡು, 2024–25ರಲ್ಲಿ ₹4.77 ಲಕ್ಷ ಕೋಟಿಗೆ ತಲುಪಿದೆ. ಇದೇ ಅವಧಿಯಲ್ಲಿ ಒಟ್ಟು ತೆರಿಗೆ ಸಂಗ್ರಹ ಪ್ರಮಾಣವು ಶೇ 274ರಷ್ಟು ಮಾತ್ರ ಹೆಚ್ಚಾಗಿದೆ.

ಆದಾಯ ತೆರಿಗೆ ರೂಪದಲ್ಲಿ ಕಡಿತ ಮಾಡಿಕೊಂಡ ಮೊತ್ತದ ಮರುಪಾವತಿಗೆ 2013ರಲ್ಲಿ ಸರಾಸರಿ 93 ದಿನಗಳು ಬೇಕಾಗುತ್ತಿದ್ದವು. ಆದರೆ ಇದು 2024ರಲ್ಲಿ 17 ದಿನಗಳಿಗೆ ಇಳಿಕೆ ಕಂಡಿದೆ ಎಂದು ಮೂಲಗಳು ಹೇಳಿವೆ.

ಯುಪಿಎ ಆಡಳಿತ ಅವಧಿಯ ಕೊನೆಯ ವರ್ಷವಾದ 2013–14ರಲ್ಲಿ ಆದಾಯ ತೆರಿಗೆ ಇಲಾಖೆ ಮಾಡಿದ ಮರುಪಾವತಿಗಳ ಮೊತ್ತವು ₹83 ಸಾವಿರ ಕೋಟಿ ಆಗಿತ್ತು. ಆದರೆ 2025–26ನೆಯ ಹಣಕಾಸು ವರ್ಷದ ಅಂತ್ಯಕ್ಕೆ ಈ ಮೊತ್ತವು ₹4.77 ಲಕ್ಷ ಕೋಟಿಗೆ ಹೆಚ್ಚಿದೆ.



2024–25ರಲ್ಲಿ ಒಟ್ಟು ತೆರಿಗೆ ಸಂಗ್ರಹವು ₹27.03 ಲಕ್ಷ ಕೋಟಿ ಆಗಿದೆ. ಇದು 2013–14ರಲ್ಲಿ ₹7.22 ಲಕ್ಷ ಕೋಟಿ ಆಗಿತ್ತು. 2013ರ ನಂತರದಲ್ಲಿ ಆದಾಯ ತೆರಿಗೆ ವಿವರ ಸಲ್ಲಿಕೆಯಲ್ಲಿ ಶೇ 133ರಷ್ಟು ಹೆಚ್ಚಳ ಆಗಿದೆ. 2013ರಲ್ಲಿ ಒಟ್ಟು 3.8 ಕೋಟಿ ಆದಾಯ ತೆರಿಗೆ ವಿವರಗಳು ಸಲ್ಲಿಕೆಯಾಗಿದ್ದವು. ಇದು 2024ರಲ್ಲಿ 8.89 ಕೋಟಿಗೆ ಹೆಚ್ಚಿದೆ.

ತೆರಿಗೆ ಆಡಳಿತ ವ್ಯವಸ್ಥೆಯಲ್ಲಿ ತಂದ ಸುಧಾರಣೆಗಳ ಕಾರಣದಿಂದಾಗಿ ಆದಾಯ ತೆರಿಗೆ ಮರುಪಾವತಿ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ, ಮರುಪಾವತಿಗೆ ತೆಗೆದುಕೊಳ್ಳುವ ಅವಧಿಯು ಕಡಿಮೆ ಆಗಿದೆ ಎಂದು ಮೂಲಗಳು ವಿವರಿಸಿವೆ. ಅದರಲ್ಲೂ ಮುಖ್ಯವಾಗಿ, ಸಂಪೂರ್ಣವಾಗಿ ಆನ್‌ಲೈನ್ ಮೂಲಕ ತೆರಿಗೆ ವಿವರ ಸಲ್ಲಿಕೆ, ಡಿಜಿಟಲ್ ವ್ಯವಸ್ಥೆಯ ಮೂಲಕವೇ ತೆರಿಗೆ ವಿಚಾರಗಳನ್ನು ಇತ್ಯರ್ಥಪಡಿಸುವ ಸೌಲಭ್ಯ ಜಾರಿಗೆ ತಂದಿದ್ದರಿಂದಾಗಿ ಆದಾಯ ತೆರಿಗೆ ವಿವರ ಸಲ್ಲಿಸುವುದು ಹೆಚ್ಚು ನಿಖರವಾಗಿದೆ ಎಂದು ವಿವರಿಸಿವೆ.

ಮರುಪಾವತಿ ಪ್ರಕ್ರಿಯೆಯನ್ನು ಸ್ವಯಂಚಾಲಿತ ಆಗಿಸಲಾಗಿದೆ, ತೆರಿಗೆ ಪಾವತಿದಾರರು ಸಮಸ್ಯೆಗಳನ್ನು ಆನ್‌ಲೈನ್ ಮೂಲಕವೇ ದಾಖಲಿಸಲು ವ್ಯವಸ್ಥೆ ಮಾಡಲಾಗಿದೆ. ಇದು ಕೂಡ ತೆರಿಗೆ ಪಾವತಿದಾರರಿಗೆ ಕೆಲಸವನ್ನು ಸುಗಮಗೊಳಿಸಿದೆ.

ತೆರಿಗೆ ರೂಪದಲ್ಲಿ ಸಂಗ್ರಹಿಸಿದ ಒಟ್ಟು ಮೊತ್ತದಲ್ಲಿ ಮರುಪಾವತಿ ಆಗುವ ಮೊತ್ತವು 2013–14ರಿಂದ 2024–25ರವರೆಗಿನ ಅವಧಿಯಲ್ಲಿ ಶೇ 17.6ರಷ್ಟು ಹೆಚ್ಚಾಗಿದೆ. ಮರುಪಾವತಿ ಮೊತ್ತದಲ್ಲಿನ ಈ ಹೆಚ್ಚಳವು, ಜನರು ತೆರಿಗೆ ವ್ಯವಸ್ಥೆಯಲ್ಲಿ ಸ್ವಯಂಪ್ರೇರಣೆಯಿಂದ ಭಾಗಿಯಾಗುತ್ತಿರುವುದನ್ನು ಹೇಳುತ್ತಿದೆ ಎಂದು ಮೂಲಗಳು ತಿಳಿಸಿವೆ.

Together We Can
ಕೆನರಾ ಬ್ಯಾಂಕ್
Canara Bank
A Government of India Undertaking

ಸುಧಾ, ಮಯೂರ ಓದಿರಿ

ಶೃಂಗ್ಲಾ, ನಿಕಮ್ ಸೇರಿ ನಾಲ್ವರು ರಾಜ್ಯಸಭೆಗೆ

ಒಂದನೇ ಪುಟದಿಂದ...

ಸಂಸತ್ ಮುಂಗಾರು ಅಧಿವೇಶ ಆರಂಭಗೊಳ್ಳುವುದಕ್ಕೂ ಒಂದು ವಾರ ಮುಂಚೆ ಈ ಪ್ರಕ್ರಿಯೆ ನಡೆದಿದೆ. ಈ ಸಂಸದರು, ನಾಮನಿರ್ದೇಶನಗೊಂಡ ಆರು ತಿಂಗಳ ಒಳಗಾಗಿ ಯಾವುದಾದರೂ ಪಕ್ಷಕ್ಕೆ ಸೇರಬಹುದಾಗಿದೆ.

ಮೋದಿ ಪ್ರತಿಕ್ರಿಯೆ: ರಾಜ್ಯಸಭೆಗೆ ನಾಮನಿರ್ದೇಶನಗೊಂಡಿರುವ ನಾಲ್ವರ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಕ್ರಿಯಿಸಿ, 'ಎಕ್ಸ್‌'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಶೃಂಗ್ಲಾ ಅವರು ಸಂಸತ್ ಕಾರ್ಯಕಲಾಪಗಳಿಗೆ ಮತ್ತಷ್ಟು ಮೆರುಗು ತರಲಿದ್ದರೆ, ನಿಕಮ್ ಅವರು ಸಾಂವಿಧಾನಿಕ ಮೌಲ್ಯಗಳನ್ನು ಬಲಪಡಿಸಲು ಶ್ರಮಿಸಿದವರು. ಸಾಮಾನ್ಯ ಪ್ರಜೆಗಳನ್ನು ಕೂಡ ಘನತೆಯಿಂದ ನೋಡಬೇಕು ಎಂಬುದನ್ನು ಖಾತ್ರಿಪಡಿಸುವುದಕ್ಕಾಗಿಯೂ ನಿಕಮ್ ಹೋರಾಡಿದ್ದಾರೆ' ಎಂದು ಹೇಳಿದ್ದಾರೆ.

'ಶಿಕ್ಷಣ, ಸಾಹಿತ್ಯ, ಇತಿಹಾಸ, ರಾಜಕೀಯ ವಿಜ್ಞಾನ ಕ್ಷೇತ್ರಕ್ಕೆ ಮೀನಾಕ್ಷಿ ಜೈನ್ ಅವರ ಕೊಡುಗೆ ಅನನ್ಯ. ಸದಾನಂದನ್ ಅವರು ಧೈರ್ಯ ಹಾಗೂ ಅನ್ಯಾಯಕ್ಕೆ ತಲೆಬಾಗುವುದಿಲ್ಲ ಎಂಬುದರ ಪ್ರತೀಕದಂತಿದ್ದಾರೆ. ರಾಷ್ಟ್ರದ ಪ್ರಗತಿಗಾಗಿ ಅವರು ಹೊಂದಿರುವ ಬದ್ಧತೆಯು ಹಿಂಸೆ ಮತ್ತು ಬೆದರಿಕೆಯಿಂದ ಕುಗ್ಗಿಲ್ಲ' ಎಂದು ಬರೆದುಕೊಂಡಿದ್ದಾರೆ.

ವಿದೇಶಾಂಗ ಪರಿಣತಗೆ ಮಣೆ

ಹರ್ಷವರ್ಧನ ಶೃಂಗ್ಲಾ ಅವರು ವಿದೇಶಾಂಗ ವ್ಯವಹಾರಗಳ ಕ್ಷೇತ್ರದಲ್ಲಿ ಹೊಂದಿರುವ ಪರಿಣತಿ ಅಗಾಧ. ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಕಗೊಳ್ಳುವುದಕ್ಕೂ ಮುನ್ನ ಅವರು ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿದ್ದರು. 2023ರಲ್ಲಿ ಭಾರತ ಜಿ–20 ಅಧ್ಯಕ್ಷ ಸ್ಥಾನದಲ್ಲಿದ್ದ ವೇಳೆ, ಶೃಂಗ್ಲಾ ಅವರು ಮುಖ್ಯ ಸಮನ್ವಯಕಾರರಾಗಿದ್ದರು.

ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಗೆ ಪ್ರತಿಯಾಗಿ ನಡೆಸಿದ ಕಾರ್ಯಾಚರಣೆ ಕುರಿತು ವಿಶ್ವದ ಪ್ರಮುಖ ರಾಷ್ಟ್ರಗಳಿಗೆ ಭಾರತದ ನಿಲುವು ಮನವರಿಕೆ ಮಾಡಿಕೊಡಲು ತೆರಳಿದ್ದ ನಿಯೋಗವೊಂದರ ಸದಸ್ಯರಾಗಿಯೂ ಶೃಂಗ್ಲಾ ಕಾರ್ಯನಿರ್ವಹಿಸಿದ್ದಾರೆ.

ತಮ್ಮ ನೇತೃತ್ವದ 'ಡಾರ್ಜಿಲಿಂಗ್ ವೆಲ್‌ಫೇರ್ ಸೊಸೈಟಿ'ಯಡಿ 2023, 2024ರಲ್ಲಿ ಪಶ್ಚಿಮ ಬಂಗಾಳದ ವಿವಿಧೆಡೆ ಹಮ್ಮಿಕೊಂಡ ಕಾರ್ಯಕ್ರಮಗಳಲ್ಲಿ ಅವರು ಪಾಲ್ಗೊಂಡಿದ್ದರು. ಇದು, ಅವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಸೂಚನೆ ಎಂದೇ ಹೇಳಲಾಗುತ್ತಿತ್ತು.

ಕಾನೂನು ತಜ್ಞ ನಿಕಮ್

ಸರ್ಕಾರಿ ವಕೀಲರಾಗಿದ್ದ ಉಜ್ವಲ್ ನಿಕಮ್ ಹಲವಾರು ಮಹತ್ವದ ಪ್ರಕರಣಗಳಲ್ಲಿ ವಾದ ಮಂಡಿಸಿ ಗಮನ ಸೆಳೆದಿದ್ದಾರೆ. 2008ರಲ್ಲಿ ಮುಂಬೈ ಮೇಲಿನ ಉಗ್ರರ ದಾಳಿ ಪ್ರಕರಣದಲ್ಲಿ ವಾದ ಮಂಡಿಸಿದ್ದರು.

ಸಿನಿಮಾ ನಿರ್ಮಾಪಕ ಗುಲ್ಷನ್ ಕುಮಾರ್, ಬಿಜೆಪಿ ನಾಯಕ ಪ್ರಮೋದ್ ಮಹಾಜನ್ ಕೊಲೆ ಪ್ರಕರಣದಲ್ಲಿಯೂ ಅವರು ವಕಾಲತ್ತು ವಹಿಸಿದ್ದರು. 1993ರಲ್ಲಿ ಮುಂಬೈನಲ್ಲಿ ಸಂಭವಿಸಿದ್ದ ಸರಣಿ ಬಾಂಬ್ ಸ್ಫೋಟ ಪ್ರಕರಣ, 2003ರಲ್ಲಿ ಗೇಟ್‌ವೇ ಆಫ್ ಇಂಡಿಯಾ ಬಳಿ ಬಾಂಬ್ ಸ್ಫೋಟ ಪ್ರಕರಣದಲ್ಲಿಯೂ ವಾದ ಮಂಡಿಸಿದ್ದರು.

ಮಹಾರಾಷ್ಟ್ರ ವಿಧಾನಸಭೆಗೆ ಕಳೆದ ವರ್ಷ ನಡೆದ ಚುನಾವಣೆಯಲ್ಲಿ, ಮುಂಬೈ ಉತ್ತರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ನಿಕಮ್, ಕಾಂಗ್ರೆಸ್ ಅಭ್ಯರ್ಥಿ ವರ್ಷಾ ಗಾಯಕ್ವಾಡ್ ವಿರುದ್ಧ ಪರಾಭವಗೊಂಡರು. ಅವರು 2016ರಲ್ಲಿ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಶಿಕ್ಷಕ ವೃತ್ತಿಯಿಂದ ರಾಜ್ಯಸಭೆಗೆ

ಶಿಕ್ಷಕರಾಗಿ ವೃತ್ತಿ ಆರಂಭಿಸಿ, ನಂತರ ರಾಜಕೀಯ ಪ್ರವೇಶಿಸಿರುವ ಸಿ.ಸದಾನಂದನ್, ಕೇರಳ ಬಿಜೆಪಿಯ ಪ್ರಮುಖ ನಾಯಕ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ನಾಯಕರು ಸ್ಥಾಪಿಸಿರುವ 'ಭಾರತೀಯ ವಿಚಾರ ಕೇಂದ್ರಂ' ನಡಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.

1994ರಲ್ಲಿ ಸಿಪಿಎಂ ಕಾರ್ಯಕರ್ತರು ನಡೆಸಿದ ಹಲ್ಲೆಯಲ್ಲಿ ಸದಾನಂದನ್ ಅವರು ಎರಡೂ ಕಾಲುಗಳನ್ನು ಕಳೆದುಕೊಂಡಿದ್ದಾರೆ.

ಶಿಕ್ಷಣ ತಜ್ಞೆಗೆ ಅವಕಾಶ

ಡಾ.ಮೀನಾಕ್ಷಿ ಜೈನ್, ದೆಹಲಿಯ ಗಾರ್ಗಿ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಧಾನಿ ಮೋದಿ ನೇತೃತ್ವದ ಸರ್ಕಾರ 2014ರಲ್ಲಿ ಅವರನ್ನು ಭಾರತೀಯ ಇತಿಹಾಸ ಸಂಶೋಧನಾ ಪರಿಷತ್ತಿಗೆ (ಐಸಿಎಚ್‌ಆರ್) ನಾಮನಿರ್ದೇಶನ ಮಾಡಿತ್ತು.

ಟೈಮ್ಸ್ ಆಫ್ ಇಂಡಿಯಾ ದೈನಿಕದ ಮಾಜಿ ಸಂಪಾದಕ ಗಿರಿಲಾಲ್ ಜೈನ್ ಅವರ ಪುತ್ರಿಯಾದ ಮೀನಾಕ್ಷಿ, ರಾಜಕೀಯ ವಿಜ್ಞಾನಿ ಆಗಿಯೂ ಖ್ಯಾತರು. ಅವರಿಗೆ 2020ರಲ್ಲಿ ಪದ್ಮಶ್ರೀ ಪ್ರಶಸ್ತಿ ಸಂದಿದೆ.

ವೇದಾಂತ: ಬಿಜೆಪಿಗೆ ದೇಣಿಗೆ ನಾಲ್ಕು ಪಟ್ಟು ಹೆಚ್ಚಳ

ನವದೆಹಲಿ (ಪಿಟಿಐ): ಉದ್ಯಮಿ ಅನಿಲ್ ಅಗರ್ವಾಲ್ ಒಡೆತನದ ಗಣಿಗಾರಿಕೆ ಕಂಪನಿ ವೇದಾಂತ ಲಿಮಿಟೆಡ್ 2024–25ರ ಆರ್ಥಿಕ ವರ್ಷದಲ್ಲಿ ಭಾರತೀಯ ಜನತಾ ಪಕ್ಷಕ್ಕೆ (ಬಿಜೆಪಿ) ₹97 ಕೋಟಿ ದೇಣಿಗೆ ನೀಡಿದೆ.

2023–24ರಲ್ಲಿ ಕಂಪನಿಯು ಬಿಜೆಪಿಗೆ ₹26 ಕೋಟಿ ದೇಣಿಗೆ ನೀಡಿತ್ತು. ಇದಕ್ಕೆ ಹೋಲಿಸಿದರೆ ದೇಣಿಗೆಯಲ್ಲಿ ನಾಲ್ಕು ಪಟ್ಟು ಹೆಚ್ಚಳವಾಗಿದೆ ಎಂದು ಕಂಪನಿಯ ವಾರ್ಷಿಕ ವರದಿ ತಿಳಿಸಿದೆ.

ಬಿಜು ಜನತಾದಳಕ್ಕೆ ₹25 ಕೋಟಿ, ಜಾರ್ಖಂಡ್ ಮುಕ್ತಿ ಮೋರ್ಚಾಗೆ ₹20 ಕೋಟಿ, ಕಾಂಗ್ರೆಸ್‌ಗೆ ₹10 ಕೋಟಿ ದೇಣಿಗೆ ನೀಡಿದೆ. ವೇದಾಂತ ಕಂಪನಿ, ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವ ಅತಿದೊಡ್ಡ ಕಂಪನಿಗಳಲ್ಲಿ ಒಂದಾಗಿದೆ.

'ಮಹತ್ವಾಕಾಂಕ್ಷೆಯೇ ಮೈವೆತ್ತ ಭಾರತ..'

ನವದೆಹಲಿ (ಪಿಟಿಐ): 'ಅಂತರಿಕ್ಷದಿಂದ ಕಣ್ಣು ಹಾಯಿಸಿದಾಗ, ಭಾರತವು ಮಹತ್ವಾಕಾಂಕ್ಷೆಯೇ ಮೈವೆತ್ತಿದಂತೆ ಕಾಣುತ್ತದೆ. ಯಾವುದೇ ಅಂಜಿಕೆ ಇಲ್ಲದ; ಆತ್ಮವಿಶ್ವಾಸ ಹಾಗೂ ಹೆಮ್ಮೆಯಿಂದ ಬೀಗುವ ದೇಶವಾಗಿ ಗಮನ ಸೆಳೆಯುತ್ತದೆ' ಎಂದು ಗಗನಯಾನಿ ಶುಭಾಂಶು ಶುಕ್ಲಾ ಭಾನುವಾರ ಹೇಳಿದ್ದಾರೆ.

ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ 'ಆಕ್ಸಿಯಂ–4' ಬಾಹ್ಯಾಕಾಶ ಕಾರ್ಯಕ್ರಮದ ಗಗನಯಾನಿಗಳಿಗೆ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದ್ದಾರೆ.

ಶುಭಾಂಶು ಶುಕ್ಲಾ ಸೇರಿ ನಾಲ್ವರು ಗಗನಯಾನಿಗಳು ಭೂಮಿಯತ್ತ ಸೋಮವಾರ ಮರುಪ್ರಯಾಣ ಕೈಗೊಳ್ಳಲಿದ್ದಾರೆ. ಕ್ಯಾಲಿಫೋರ್ನಿಯಾ ಕರಾವಳಿಯಲ್ಲಿ ಮಂಗಳವಾರ ಇಳಿಯುವ ಸಾಧ್ಯತೆ ಇದೆ.

ಶುಭಾಂಶು ಶುಕ್ಲಾ

'ಈ ಅಂತರಿಕ್ಷ ಯಾನ ನನ್ನಲ್ಲಿ ಅಲೌಕಿಕ ಭಾವನೆ ಮೂಡಿಸುತ್ತಿದೆ. ನನ್ನ ಪಾಲಿಗೆ ಇದೊಂದು ಅದ್ಭುತ ಪಯಣ. ನಾನು ಅಪಾರ ನೆನಪುಗಳು ಹಾಗೂ ಕಲಿಕೆಯೊಂದಿಗೆ ಭೂಮಿಯತ್ತ ಮರು ಪಯಣ ಆರಂಭಿಸುತ್ತಿದ್ದೇನೆ. ಇವುಗಳನ್ನು ನನ್ನ ದೇಶವಾಸಿಗಳೊಂದಿಗೆ ಹಂಚಿಕೊಳ್ಳಲು ಉತ್ಸುಕನಾಗಿರುವೆ' ಎಂದು ಶುಕ್ಲಾ ಹೇಳಿದ್ದಾರೆ.

ಮಂಗಳ ಗ್ರಹದ ಶಿಲೆ ಮಾರಾಟ 17ರಂದು

ಮೌಲ್ಯ ₹17 ಕೋಟಿಯಿಂದ ₹34 ಕೋಟಿಗೆ ಹರಾಜು ಸಾಧ್ಯತೆ

ನ್ಯೂಯಾರ್ಕ್ (ಎಪಿ): 25 ಕೆ.ಜಿ ತೂಕದ (54 ಪೌಂಡ್) ಶಿಲೆಯೊಂದನ್ನು ನ್ಯೂಯಾರ್ಕ್‌ನಲ್ಲಿ ಇದೇ ಬುಧವಾರ ಹರಾಜು ಹಾಕಲಾಗುತ್ತದೆ. ಈ ಶಿಲೆಯ ಬೆಲೆ ₹17 ಕೋಟಿಯಿಂದ ₹34 ಕೋಟಿಯಷ್ಟು ಆಗಲಿದೆ (2ರಿಂದ 4 ಮಿಲಿಯನ್ ಡಾಲರ್) ಎಂದು ಅಂದಾಜಿಸಲಾಗಿದೆ...

ಈ ಶಿಲೆಗೆ ಇಷ್ಟೊಂದು ಬೆಲೆ ಏಕೆ ಎಂದು ಅಚ್ಚರಿಯಾಗುತ್ತಿದೆಯೇ? ಇದು ಭೂಮಿ ಮೇಲೆ ಈ ವರೆಗೆ ಕಂಡುಬಂದಿರುವ ಮಂಗಳ ಗ್ರಹದ ಶಿಲೆಯ ಅತ್ಯಂತ ದೊಡ್ಡ ತುಣುಕಾಗಿದೆ. ಈ ಕಾರಣಕ್ಕೆ ಈ ಶಿಲೆಗೆ ಅಷ್ಟೊಂದು ಬೆಲೆ.

ಇದನ್ನು ಉಲ್ಕಾಶಿಲೆ ಎಂದೂ ಕರೆಯಲಾಗುತ್ತದೆ. ವಿಶ್ವದ ದೊಡ್ಡ ಹರಾಜು ಸಂಸ್ಥೆ ಸೊದೆಬಿ, 'ಪ್ರಾಕೃತಿಕ ಇತಿಹಾಸ' ಧ್ಯೇಯವಾಕ್ಯದಡಿ ಈ ಶಿಲೆಯನ್ನು ಹರಾಜು ಹಾಕುತ್ತಿದೆ. ಮಂಗಳನ ಅಂಗಳದ ಈ ಶಿಲೆಗೆ 'ಎನ್‌ಡಬ್ಲುಎ 16788' ಎಂದು ಹೆಸರಿಡಲಾಗಿದೆ.

ಜೊತೆಗೆ, ಡೈನೊಸಾರ್‌ನ ಮರಿ 'ಸೆರಾಟೊಸಾರಸ್'ನ ಅಸ್ಥಿಪಂಜರವನ್ನು ಕೂಡ ಹರಾಜು ಹಾಕಲಾಗುತ್ತದೆ. ಈ ಅಸ್ಥಿಪಂಜರವು 6 ಅಡಿಗಿಂತ ಎತ್ತರ ಇದ್ದು, 11 ಅಡಿಯಷ್ಟು ಉದ್ದ ಇದೆ.

ಈ ಮೊದಲು, ರೋಮ್‌ನಲ್ಲಿರುವ ಇಟಲಿಯ ಬಾಹ್ಯಾಕಾಶ ಸಂಸ್ಥೆಯಲ್ಲಿ ಈ ಶಿಲೆಯನ್ನು ಪ್ರದರ್ಶನಕ್ಕೆ ಇಡಲಾಗಿತ್ತು. ಈ ಶಿಲೆಯ ಮಾಲೀಕತ್ವ ಯಾರದು ಎಂಬ ಮಾಹಿತಿಯನ್ನು ಸೊದೆಬಿ ಬಹಿರಂಗಪಡಿಸಿಲ್ಲ.

'ಯಾವಾಗ ಈ ಶಿಲೆಯು ಭೂಮಿ ಮೇಲೆ ಬಿದ್ದಿದೆ ಎಂಬುದು ಖಚಿತಪಟ್ಟಿಲ್ಲ. ಆದರೆ, ಇತ್ತೀಚಿನ ವರ್ಷಗಳಲ್ಲಿ ಬಿದ್ದಿರುವ ಸಾಧ್ಯತೆಯೇ ಹೆಚ್ಚು' ಎಂದು ಸೊದೆಬಿ ಹೇಳಿದೆ.

'ಎನ್‌ಡಬ್ಲುಎ 16788' ಕುರಿತ ವಿವರಗಳು

- ಬೃಹತ್ ಕ್ಷುದ್ರಗ್ರಹವೊಂದು ಭೂಮಿಯತ್ತ ಬರುವ ವೇಳೆ ಮಂಗಳ ಗ್ರಹಕ್ಕೆ ಡಿಕ್ಕಿ ಹೊಡೆದಿದೆ. ಈ ವೇಳೆ, ಈ ಉಲ್ಕಾಶಿಲೆಯು 14 ಕೋಟಿ ಮೈಲು ದೂರ ಕ್ರಮಿಸಿದ ಬಳಿಕ ನೈಜರ್ ದೇಶದ ಸಹರಾ ಮರಭೂಮಿಯಲ್ಲಿ ಬಿದ್ದಿದೆ. ಉಲ್ಕೆಗಳ ಕುರಿತು ಅಧ್ಯಯನ ಮಾಡುವವರು 2023ರ ನವೆಂಬರ್‌ನಲ್ಲಿ ಇದನ್ನು ಪತ್ತೆ ಹಚ್ಚಿದ್ದಾರೆ
- ಈ ಶಿಲೆಯು ಕೆಂಪು, ಬೂದು ಹಾಗೂ ಕಂದು ಬಣ್ಣ ಹೊಂದಿದೆ. ಭೂಮಿ ಮೇಲೆ ಈ ವರೆಗೆ ಕಂಡುಬಂದಿರುವ ಮಂಗಳ ಗ್ರಹದ ಬೃಹತ್ ಶಿಲೆಗಿಂತ ಇದು ಶೇ 70ರಷ್ಟು ದೊಡ್ಡದಿದೆ
- ಇದರ ಉದ್ದ 15 ಇಂಚು ಇದ್ದು, ಅಗಲ 11 ಹಾಗೂ ಎತ್ತರ 6 ಇಂಚು ಇದೆ
- ಭೂಮಿಯಲ್ಲಿ ಈ ವರೆಗೆ 77 ಸಾವಿರಕ್ಕೂ ಅಧಿಕ ಉಲ್ಕಾಶಿಲೆಗಳು ಪತ್ತೆಯಾಗಿವೆ. ಈ ಪೈಕಿ ಮಂಗಳ ಗ್ರಹದ ಶಿಲೆಗಳ ಸಂಖ್ಯೆ ಕೇವಲ 400
- ಇದು ಗಾಜಿನಂತಹ ಮೇಲ್ಮೈ ಹೊಂದಿದೆ. ಭೂಮಿಗೆ ಅಪ್ಪಳಿಸುವ ವೇಳೆ, ಅಧಿಕ ಉಷ್ಣತೆಯಿಂದಾಗಿ ದಹನಗೊಂಡಿರುವುದು ಇಂತಹ ಮೇಲ್ಮೈಗೆ ಕಾರಣವಾಗಿರುವ ಸಾಧ್ಯತೆ ಇದೆ ಎಂಬುದು ವಿಜ್ಞಾನಿಗಳ ವಿಶ್ಲೇಷಣೆ

ಈ ಶಿಲೆಯ ಚಿಕ್ಕ ತುಂಡೊಂದನ್ನು ವಿಶೇಷ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. 1976ರಲ್ಲಿ ಮಂಗಳ ಗ್ರಹದಲ್ಲಿ ಇಳಿದಿದ್ದ ವೈಕಿಂಗ್ ಗಗನನೌಕೆ ಕಳುಹಿಸಿದ್ದ ದತ್ತಾಂಶಗಳನ್ನು ಬಳಸಿ, ಇದರ ರಾಸಾಯನಿಕ ಸಂರಚನೆಯ ವೈಜ್ಞಾನಿಕ ವಿಶ್ಲೇಷಣೆ ನಡೆಸಿದಾಗ, ಇದು ಮಂಗಳ ಗ್ರಹದ ಶಿಲೆ ಎಂಬುದು ದೃಢಪಟ್ಟಿತು

ಕ್ಯಾಸಂಡ್ರ ಹ್ಯಾಟನ್,
ಸೊದೆಬಿಯ ವಿಜ್ಞಾನ ಮತ್ತು ಪ್ರಾಕೃತಿಕ ಇತಿಹಾಸ ವಿಭಾಗದ ಉಪಾಧ್ಯಕ್ಷ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001.

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ14,000-18,000. 8951315839, 7022770052

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ, TVS,ಹಿಮಾಲಯಾ, ಬ್ರಿಟಾನಿಯಾಗಳಿಗೆ SSLC, PUC, Degree, ITI, Diplomaದವರು.18,000/-ದಿಂದ 86,000/-. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Hotel

ಪುರುಷ ಸಹಾಯಕರು ತಕ್ಷಣ ಬೇಕಾಗಿದ್ದಾರೆ. ರಾಮನಗರ ಬಳಿಯಿರುವ ರೆಸಾರ್ಟ್‌ಗೆ ಊಟ, ವಸತಿಯೊಂದಿಗೆ ಉತ್ತಮ ಸಂಬಳ. ಸಂಪರ್ಕಿಸಿ: 9945935638

Wanted

ಬ್ಯಾಂಕಿಂಗ್ ಫೀಲ್ಡ್ ಗೆ ಮಾರ್ಕೆಟಿಂಗ್ ಏಜಂಟ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ 7337492769, 8197534032

ಪ್ರವಾಸ

Travel

ರಿಯಾಯಿತಿ ದರದಲ್ಲಿ 8/13/21 ದಿನಗಳ ಕಾಶಿ,ಗಯಾ ಪ್ರಯಾಗ್ ರಾಜ್ ಅಯೋಧ್ಯ ಪುರಿಜಗನ್ನಾಥ್ ಭುವನೇಶ್ವರ್ ಆಗ್ರಾ,ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯಮುನೋತ್ರಿ, ದೆಹಲಿ ಸೆಪ್ಟೆಂಬರ್ ಅಕ್ಟೋಬರ್ ತಿಂಗಳ ಪ್ರವಾಸಕ್ಕಾಗಿ ಜುಲೈ ತಿಂಗಳ 31ರ ಒಳಗೆ ಪೂರ್ತಿ ದರ ಪಾವತಿಸಿದವರಿಗೆ ಟ್ರಾನ್ಸ್ಪೋರ್ಟೇಶನಲ್ಲಿ 10% ರಿಯಾಯಿತಿ ಕೊಡಲಾಗುವುದು ಸಂಪರ್ಕಿಸಿ: ಶ್ರೀಸುಧಾ ಟ್ರಾವೆಲ್ಸ್ 8088826815 9019301300

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
www.dhclassifieds.com
@500/-* PER SQCM
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

'ಮೋಡ ಕವಿದ ವಾತಾವರಣ'ದಲ್ಲಿ ಸುನಿ

ಸಾತ್ವಿಕಾ

ನಿರ್ದೇಶಕ ಸಿಂಪಲ್ ಸುನಿ ಬಳಿ ಸಾಲು ಸಾಲು ಸಿನಿಮಾಗಳಿವೆ. ಸ್ಯಾಂಡಲ್‌ವುಡ್‌ನಲ್ಲಿ ಸದ್ಯ ಬಿಡುವಿಲ್ಲದ ನಿರ್ದೇಶಕ ಎನಿಸಿಕೊಂಡಿರುವ ಇವರು 'ಮೋಡ ಕವಿದ ವಾತಾವರಣ' ಎಂಬ ಮತ್ತೊಂದು ಸಿನಿಮಾ ಘೋಷಿಸಿದ್ದಾರೆ. ತಮ್ಮೊಂದಿಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದ ಶೀಲಮ್ ಎಂಬ ಹೊಸ ಹುಡುಗನನ್ನು ಈ ಚಿತ್ರದ ಮೂಲಕ ನಾಯಕನಾಗಿ ಪರಿಚಯಿಸುತ್ತಿದ್ದಾರೆ.

'ಒಂದು ಸರಳ ಪ್ರೇಮಕಥೆ' ನನ್ನ ಬದುಕಿಗೆ ಮತ್ತೊಮ್ಮೆ ತಿರುವು ನೀಡಿದ ಸಿನಿಮಾ. ಇದರ ಯಶಸ್ಸು ನನ್ನ ಜೀವನಕ್ಕೆ ಹೊಸ ಉತ್ಸಾಹ ನೀಡಿದೆ. ಇದಾದ ಬಳಿಕ ಕೈಗೆತ್ತಿಕೊಂಡಿರುವ ಸಿನಿಮಾವೇ 'ಮೋಡ ಕವಿದ ವಾತಾವರಣ'. ಈಗಾಗಲೇ ಚಿತ್ರೀಕರಣ ಮುಗಿದಿದೆ. ರೀ-ರೆಕಾರ್ಡಿಂಗ್ ಕೆಲಸಗಳೆಲ್ಲ ಬಹುತೇಕ ಮುಗಿದು ಚಿತ್ರ ಬಿಡುಗಡೆಗೆ ಸಿದ್ಧತೆ ನಡೆಸಿದ್ದೇವೆ. ಸೈಂಟಿಫಿಕ್ ಫಿಕ್ಷನ್ ಪ್ರೇಮಕಥಾಹಂದರವನ್ನು ಹೊಂದಿರುವ ಚಿತ್ರ. ಇದರ ನಾಯಕ ನಮ್ಮ ಮನೆ ಮಗ. ಶೀಲಮ್ ನನ್ನ ಸಹೋದರನಿದ್ದಂತೆ' ಎಂದರು ಸುನಿ.

ಸಿಂಪಲ್ ಸುನಿ

ಸಾತ್ವಿಕಾ ಚಿತ್ರದ ನಾಯಕಿ. 'ಇದು ನನ್ನ ಡ್ರೀಮ್ ಪ್ರಾಜೆಕ್ಟ್. ಸುನಿ ಸರ್ ಜತೆ ಕೆಲಸ ಮಾಡಬೇಕೆಂದು ಕೇಳಿಕೊಂಡಿದ್ದೆ. ಅವರ ಬಳಿ ಕಲಿಯುವುದು ತುಂಬ ಇದೆ. ಈ ಜರ್ನಿಯಲ್ಲಿ ಬಹಳಷ್ಟು ಕಲಿತಿದ್ದೇನೆ' ಎಂದರು ಸಾತ್ವಿಕಾ.

'ಒಂದು ಸರಳ ಪ್ರೇಮಕಥೆ' ಸಿನಿಮಾ ನಿರ್ಮಾಣ ಮಾಡಿದ್ದ ರಾಮ್ ಮೂವೀಸ್ ಈ ಸಿನಿಮಾ ನಿರ್ಮಾಣ ಮಾಡಿದೆ. ಸಂತೋಷ್ ರೈ ಪಾತಾಜೆ ಛಾಯಾಚಿತ್ರಗ್ರಹಣ, ಜೂಡಾ ಸ್ಯಾಂಡಿ ಹಾಗೂ ಜೇಡ್ ಸಂಗೀತ ನಿರ್ದೇಶನ ಹಾಗೂ ಆದಿತ್ಯ ಕಶ್ಯಪ್ ಸಂಕಲನ ಸಿನಿಮಾಗಿದೆ.

'ಪೆದ್ದಿ'ಯಲ್ಲಿ ಹೀಗಿದ್ದಾರೆ ಶಿವಣ್ಣ


ಶಿವರಾಜ್‌ಕುಮಾರ್

ರಾಮ್ ಚರಣ್ ನಟನೆಯ 'ಪೆದ್ದಿ' ಚಿತ್ರದಲ್ಲಿ ಗೌರ್ ನಾಯ್ಡು ಆಗಿ ಶಿವರಾಜ್‌ಕುಮಾರ್ ಕಾಣಿಸಿಕೊಂಡಿದ್ದಾರೆ. ಅವರ ಪಾತ್ರ ಪರಿಚಯಿಸುವ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಬುಚ್ಚಿಬಾಬು ಸನಾ ನಿರ್ದೇಶನದ ಈ ಚಿತ್ರ ಕ್ರೀಡೆಯೊಂದಿಗೆ ಆ್ಯಕ್ಷನ್ ಡ್ರಾಮಾ ಕಥಾಹಂದರ ಹೊಂದಿದೆ. ರಾಮ್ ಚರಣ್‌ಗೆ ಜಾನ್ವಿ ಕಪೂರ್ ನಾಯಕಿಯಾಗಿ ನಟಿಸಿದ್ದಾರೆ. ಜಗಪತಿ ಬಾಬು ಮತ್ತು ದಿವೇಂದು ಶರ್ಮಾ ಪ್ರಮುಖ ಪಾತ್ರಗಳಲ್ಲಿದ್ದಾರೆ.

ಶಿವರಾಜ್‌ಕುಮಾರ್ ಉಗ್ರ ನೋಟ, ದಪ್ಪ ಮೀಸೆಯೊಂದಿಗೆ ರಗಡ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇದೊಂದು ಪವರ್ ಫುಲ್ ಪಾತ್ರ ಎಂದಿದೆ ಚಿತ್ರತಂಡ.

ಮೈತ್ರಿ ಮೂವೀ ಮೇಕರ್ಸ್ ಮತ್ತು ಸುಕುಮಾರ್ ರೈಟಿಂಗ್ಸ್ ಬಂಡವಾಳ ಹೂಡಿವೆ. ಈ ಚಿತ್ರಕ್ಕೆ ಎ.ಆರ್.ರೆಹಮಾನ್ ಸಂಗೀತ ನೀಡುತ್ತಿದ್ದು, ಆರ್.ರತ್ನವೇಲು ಛಾಯಾಚಿತ್ರಗ್ರಹಣವಿದೆ. ಸದ್ಯ ಚಿತ್ರೀಕರಣ ಭರದಿಂದ ಸಾಗಿದ್ದು, ಮಾರ್ಚ್ 27, 2026ರಂದು ಹಲವು ಭಾಷೆಗಳಲ್ಲಿ ಸಿನಿಮಾ ತೆರೆ ಕಾಣಲಿದೆ.

ನಾಲ್ಕು ಭಾಷೆಗಳಲ್ಲಿ ರಾಜನಿವಾಸ

ಯುವ ನಟ ರಾಘವ ನಾಯಕ್ ಹಾಗೂ ಕಿರುತೆರೆ ನಟಿ ಕೃತಿಕಾ ಜೋಡಿಯಾಗಿ ನಟಿಸಿರುವ 'ರಾಜನಿವಾಸ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಮಿಥುನ್ ನಿರ್ದೇಶನದ ಚಿತ್ರ ಕನ್ನಡ ಸೇರಿದಂತೆ ನಾಲ್ಕು ಭಾಷೆಗಳಲ್ಲಿ ತೆರೆಗೆ ಬರಲು ಸಿದ್ಧವಾಗಿದೆ.

ಟ್ರೇಲರ್ ಬಿಡುಗಡೆ ಮಾಡಿ ಮಾತನಾಡಿದ ಕ.ರ.ವೇ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ, 'ಕನ್ನಡ ಚಿತ್ರರಂಗದ ಇಂದಿನ ಪರಿಸ್ಥಿತಿ ಬಗ್ಗೆ ಕೇಳಿದಾಗ ಬಹಳ ಬೇಸರವಾಗುತ್ತದೆ. ಚಿತ್ರರಂಗದ ಹಿರಿಯರೊಡನೆ ನಾನು ಇಲ್ಲಿನ ವಿಷಯಗಳನ್ನು ಮಾತನಾಡುತ್ತಿರುತ್ತೇನೆ. ಹಿಂದೆ ರಾಜ್‌ಕುಮಾರ್ ಅವರ ಜತೆಗೆ ಚಿತ್ರರಂಗದ ಪರವಾಗಿ ಸಾಕಷ್ಟು ಹೋರಾಟಗಳಲ್ಲಿ ಭಾಗಿಯಾಗಿದ್ದೆ. ಕನ್ನಡ ಚಿತ್ರರಂಗಕ್ಕಾಗಿ ದುಡಿದಿರುವ ಹಲವು ಹಿರಿಯ ಕಲಾವಿದರು ಹಾಗೂ ತಂತ್ರಜ್ಞರು ಇದ್ದಾರೆ. ಅವರಿಗೆ ಇಂದು ಹೆಚ್ಚು ಅವಕಾಶಗಳು ಸಿಗುತ್ತಿಲ್ಲ. ಕನ್ನಡ ಸಿನಿಮಾಗಳು ಹೆಚ್ಚು ಯಶಸ್ಸು ಕಂಡು, ಎಲ್ಲರಿಗೂ ಅವಕಾಶ ಹೆಚ್ಚಬೇಕು' ಎಂದರು.

ಶ್ರೀನಗರ ಕಿಟ್ಟಿ ವಿಶೇಷ ಪಾತ್ರದಲ್ಲಿ ನಟಿಸಿದ್ದಾರೆ. 'ಚಿತ್ರದ ಟ್ರೇಲರ್ ನೋಡಿದಾಗ ಕೆಲವರಿಗೆ 'ಕಾಂತಾರ' ಚಿತ್ರ ನೆನಪಾಗಬಹುದು. ಆದರೆ ಇದು ಆ ಚಿತ್ರಕ್ಕೂ ಮೊದಲೇ ಆರಂಭವಾದ ಸಿನಿಮಾ. 'ಕಾಂತಾರ' ಚಿತ್ರವನ್ನು ನೋಡಿದ ನಂತರ ನಮ್ಮ ಚಿತ್ರದಲ್ಲಿ ಸಾಕಷ್ಟು ಬದಲಾವಣೆ ಮಾಡಿದ್ದೇವೆ' ಎಂದರು ನಿರ್ದೇಶಕರು.

ಆಂಜನಪ್ಪ ಬಂಡವಾಳ ಹೂಡಿದ್ದಾರೆ. ನೀನಾಸಂ ಅಶ್ವತ್, ಯಮುನ ಶ್ರೀನಿಧಿ, ಸಹನಾ ಮುಂತಾದವರು ಚಿತ್ರದಲ್ಲಿದ್ದಾರೆ. ವಿಜಯ್ ಯಾರ್ಡ್ಲಿ ಸಂಗೀತ ನಿರ್ದೇಶನ, ರಮೇಶ್ ರಾಜ್ ಛಾಯಾಚಿತ್ರಗ್ರಹಣ, ಆಕಾಶ್ ಸಂಕಲನ ಚಿತ್ರಕ್ಕಿದೆ.

ಕೃತಿಕಾ, ರಾಘವ್ ನಾಯಕ್

ಆರು ಚಿತ್ರಗಳ ಘೋಷಣೆ

ಅರ್ಧದಷ್ಟು ಚಿತ್ರರಂಗ ಅಲ್ಲಿತ್ತು. ಕೆಲವಷ್ಟು ಚಿತ್ರತಂಡಗಳು ತಮ್ಮ ಹೊಸ ಸಿನಿಮಾ ಪ್ರಾರಂಭದ ಸಂಭ್ರಮದಲ್ಲಿದ್ದರು. ಇವಕ್ಕೆಲ್ಲ ವೇದಿಕೆಯಾಗಿದ್ದು ಅಮೃತ ಸಿನಿ ಕ್ರಾಫ್ಟ್ ನಿರ್ಮಾಣ ಸಂಸ್ಥೆ ಪ್ರಾರಂಭ ಸಮಾರಂಭ. ವಿಜಯ್ ಟಾಟಾ ಒಡೆತನದ ಈ ಸಂಸ್ಥೆ ಆರು ಹೊಸ ಸಿನಿಮಾಗಳ ಘೋಷಣೆಯೊಂದಿಗೆ ಸ್ಯಾಂಡಲ್‌ವುಡ್‌ಗೆ ಕಾಲಿಟ್ಟಿದೆ. ನಟ ರವಿಚಂದ್ರನ್, ಶ್ರೀಮುರಳಿ, ಶರಣ್, ಹಂಸಲೇಖ, ನಿರ್ದೇಶಕರಾದ ನಾಗತಿಹಳ್ಳಿ ಚಂದ್ರಶೇಖರ್, ಶಶಾಂಕ್ ಸೇರಿದಂತೆ ಹಲವು ಗಣ್ಯರು ಹೊಸ ಸಿನಿಮಾಗಳ ನಿರ್ದೇಶಕರು ಮತ್ತು ತಂಡದ ಹೆಸರನ್ನು ಘೋಷಿಸಿ ಶುಭ ಹಾರೈಸಿದರು.

ಕೃಷ್ಣ ಅಜಯ್ ರಾವ್ ನಾಯಕ ಮತ್ತು ನಿರ್ದೇಶಕರಾಗಿರುವ ಸಿನಿಮಾ ಈ ಸಂಸ್ಥೆಯಿಂದ ಮೊದಲು ಸೆಟ್ಟೇರಲಿದೆ. ಬಳಿಕ ಡಿ.ಎಸ್.ಪಿ ವರ್ಮ ನಿರ್ದೇಶನದಲ್ಲಿ ವಿನಯ್ ರಾಜ್‌ಕುಮಾರ್ ನಟನೆಯ ಸಿನಿಮಾ ಪ್ರಾರಂಭಗೊಳ್ಳಲಿದೆ. ಸಿಂಪಲ್ ಸುನಿ ನಿರ್ದೇಶನದಲ್ಲಿ ಒಂದು ಚಿತ್ರ ಘೋಷಣೆಗೊಂಡಿದೆ. ನಟ ವಿಕ್ರಂ ರವಿಚಂದ್ರನ್‌ಗೆ ರಿಷಬ್ ಆರ್ಯ ಚಿತ್ರವೊಂದನ್ನು ನಿರ್ದೇಶಿಸುತ್ತಿದ್ದಾರೆ. ಪ್ರಶಾಂತ್ ಸಿದ್ಧಿ ಕೂಡ ನಿರ್ದೇಶಕರಾಗುತ್ತಿದ್ದು, ವಿಕಿ ವರುಣ್ ಚಿತ್ರದ ನಾಯಕ. ಮಂಜು ಸ್ವರಾಜ್ ನಿರ್ದೇಶನದ ಸಿನಿಮಾವನ್ನೂ ಸಂಸ್ಥೆ ಘೋಷಿಸಿದೆ.

ಸಮಾರಂಭದಲ್ಲಿ ಚಿತ್ರರಂಗದ ಗಣ್ಯರು

'ನಮ್ಮ ಚಿತ್ರೋದ್ಯಮದಲ್ಲಿ ಉತ್ತಮ ಚಿತ್ರಗಳು ನಿರಂತರವಾಗಿ ಬರುತ್ತಿವೆ. ಎಲ್ಲೋ ಕೆಲವೊಮ್ಮೆ ಚಿತ್ರಗಳು ಸೋತಿರಬಹುದು. ಗೆಲುವಿನ ಹುಮ್ಮಸ್ಸಿನಲ್ಲಿ ನಾವು ಸಾಗಬೇಕು. ಇವತ್ತು ವಿಜಯ್ ಟಾಟಾ ಒಟ್ಟಿಗೆ ಆರು ಚಿತ್ರಗಳನ್ನು ನಿರ್ಮಾಣ ಮಾಡುತ್ತಿದ್ದು, ಇದು ಚಿತ್ರರಂಗಕ್ಕೆ ಒಳ್ಳೆಯ ಬೆಳವಣಿಗೆ. ಇವತ್ತಿನ ಹೊಸ ಪೀಳಿಗೆಯ ನಿರ್ದೇಶಕರು, ನಟರು ಆಸಕ್ತಿಯಿಂದ ಕೆಲಸ ಮಾಡಿ. ಚಿತ್ರೀಕರಣ ಪ್ರಾರಂಭವಾದ ಆರು ತಿಂಗಳಲ್ಲಿ ಚಿತ್ರವನ್ನು ಪೂರ್ಣಗೊಳಿಸಬೇಕು. ನಿರ್ಮಾಣ ಸಂಸ್ಥೆ ಸಾಲು ಸಾಲು ಚಿತ್ರಗಳನ್ನು ಮಾಡುವಂತಾಗಬೇಕು' ಎಂದರು ರವಿಚಂದ್ರನ್.

'ಕನ್ನಡ ಚಿತ್ರರಂಗಕ್ಕೆ ಹೊಸ ಚೈತನ್ಯ ನೀಡುವ ನಿಟ್ಟಿನಲ್ಲಿ ನಾವು ಇಷ್ಟೂ ಸಿನಿಮಾಗಳನ್ನು ಒಟ್ಟಿಗೆ ಘೋಷಿಸಿದ್ದೇವೆ. ಇದರ ಜತೆಗೆ ಅರ್ಧಕ್ಕೆ ನಿಂತಿರುವ ಕೆಲ ಸಿನಿಮಾಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸುತ್ತೇವೆ. ಒಂದಷ್ಟು ಸಿನಿಮಾ ಬಿಡುಗಡೆಗೂ ನಾವು ಸಹಾಯ ಮಾಡುತ್ತೇವೆ. ಪ್ರತಿ ವಾರ ನಮ್ಮ ಸಂಸ್ಥೆಯಿಂದ ಒಂದು ಸಿನಿಮಾ ತೆರೆಗೆ ತರುವ ಆಲೋಚನೆ ಇದೆ. ಹಂತಹಂತವಾಗಿ ಈ ಬಗ್ಗೆ ವಿವರ ನೀಡುತ್ತೇನೆ' ಎಂದರು ವಿಜಯ್ ಟಾಟಾ.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಭಾನುವಾರ ನಡೆದ ಎಸ್ ಪೂನಾವಾಲಾ ಬೇಸಿಗೆ ಡರ್ಬಿಯಲ್ಲಿ ಗುರಿಯತ್ತ ಮುನ್ನುಗ್ಗಿದ ಫಿನ್‌ಬಾಸ್ (ಎಡಚಿತ್ರ). ಬೆಂಗಳೂರು ಬೇಸಿಗೆ ಡರ್ಬಿ ವೀಕ್ಷಿಸಲು ಸೇರಿದ್ದ ರೇಸ್ ಅಭಿಮಾನಿಗಳು ಪ್ರಜಾವಾಣಿ ಚಿತ್ರಗಳು: ರಂಜು ಪಿ

ಜವಾರೆ ಎಸ್. ಪೂನಾವಾಲಾ ಬೆಂಗಳೂರು ಬೇಸಿಗೆ ಡರ್ಬಿ

ಫಿನ್‌ಬಾಸ್‌ಗೆ ಡರ್ಬಿ ಕಿರೀಟ

• ಡಿ.ರವಿಕುಮಾರ್

ಬೆಂಗಳೂರು: ಪೆಸಿ ಶ್ರಾಫ್ ತರಬೇತಿಯಲ್ಲಿ ಪಳಗಿರುವ 'ಫಿನ್‌ಬಾಸ್' ಕುದುರೆಯು ಭಾನುವಾರ ನಡೆದ 'ಜವಾರೆ ಎಸ್. ಪೂನಾವಾಲಾ ಬೆಂಗಳೂರು ಬೇಸಿಗೆ ಡರ್ಬಿ' ಗೆದ್ದುಕೊಂಡಿತು. ಈ ವಿಜಯದೊಂದಿಗೆ ತನ್ನ ಮಾಲೀಕರಿಗೆ ಸುಮಾರು ₹1.22 ಕೋಟಿ ಬಹುಮಾನ ಮತ್ತು ₹3 ಲಕ್ಷದ ಮೌಲ್ಯದ ಆಕರ್ಷಕ ಟ್ರೋಫಿ ದೊರಕಿಸಿಕೊಟ್ಟಿತು.

ಬೆಂಗಳೂರು ಟರ್ಫ್ ಕ್ಲಬ್ ಆವರಣದಲ್ಲಿ ನಡೆದ ಪ್ರತಿಷ್ಠಿತ ಬೇಸಿಗೆ ಡರ್ಬಿ, ರೇಸ್‌ಪ್ರಿಯರಿಗೆ ರಸದೌತಣ ಉಣಬಡಿಸಿತು. ಡರ್ಬಿ ದಿನದಲ್ಲಿ ನಡೆದ ಎಂಟು ರೇಸ್‌ಗಳನ್ನೂ ನೋಡಿ ಸಂಭ್ರಮಿಸಿದರು.

ಹದಿನಾರು ಸ್ಪರ್ಧಿಗಳು ಭಾಗವಹಿಸಿದ್ದ ಡರ್ಬಿಯಲ್ಲಿ ಫಿನ್‌ಬಾಸ್ 'ಫೇವರಿಟ್' ಆಗಿತ್ತು. ರೇಸ್‌ನ ಯಾವುದೇ ಕ್ಷಣದಲ್ಲೂ ತನ್ನ ಬೆಂಬಲಿಗರಿಗೆ ಮೂರು ವರ್ಷದ ಹೆಣ್ಣು ಕುದುರೆ ಆತಂಕ ಉಂಟು ಮಾಡಲಿಲ್ಲ. ಆರಂಭದಲ್ಲಿ ಹತ್ತನೇ ಸ್ಥಾನದಲ್ಲಿದ್ದರೂ, ಕ್ರಮೇಣವಾಗಿ ತನ್ನ ಸ್ಥಾನವನ್ನು ಉತ್ತಮಗೊಳಿಸುತ್ತಲೇ ಸಾಗಿತು.

ಕೊನೆಯ 500 ಮೀಟರ್ಸ್ ತಿರುವಿನ ಮೊದಲೇ ಎರಡನೇ ಸ್ಥಾನದಲ್ಲಿ ಓಡುತ್ತಿದ್ದ ಪ್ರೋಕೊಫಿವ್ ಮುನ್ನುಗ್ಗಿ ಲೀಡ್ ಪಡೆಯಿತು. ಅದೇ ಕ್ಷಣದಲ್ಲಿ ಆರನೇ ಸ್ಥಾನದಲ್ಲಿದ್ದ ಫಿನ್‌ಬಾಸ್ ತನ್ನ ವೇಗವನ್ನು ಇಮ್ಮಡಿಗೊಳಿಸಿ ಮುನ್ನೆಲೆಗೆ ಬಂದಿತು. 200 ಮೀಟರ್ಸ್ ದೂರದ ತನಕ ಪ್ರೋಕೊಫಿವ್ ಲೀಡ್ ಬಿಟ್ಟುಕೊಡದೆ ಹೋರಾಟ ನಡೆಸಿತು. ಆದರೆ, ಆತ್ಮವಿಶ್ವಾಸದಿಂದ ಸವಾರಿ ಮಾಡಿದ ಟ್ರೆವರ್ ಪಟೇಲ್ ಕೊನೆಯ 150 ಮೀಟರ್ಸ್ ಇರುವಂತೆಯೆ ಫಿನ್‌ಬಾಸ್ ಅನ್ನು ಮುನ್ನುಗ್ಗಿಸಿ ಡರ್ಬಿಯನ್ನು ಮೂರೂವರೆ ಲೆಂಗ್ತ್‌ಗಳಿಂದ ಗೆಲ್ಲುವಂತೆ ನೋಡಿಕೊಂಡರು.

ಪ್ರೋಕೊಫಿವ್ ಎರಡನೇ ಸ್ಥಾನಕ್ಕೆ ತೃಪ್ತಿಪಡಬೇಕಾಯಿತು. ಮಿರಾಕಲ್ ಸ್ಟಾರ್ ಕೊನೆಯ ಘಳಿಗೆಯಲ್ಲಿ ಉತ್ತಮವಾಗಿ ಓಡಿ ಬಂದು ರೆಡ್ ಬಿಷಪ್ ಅನ್ನು ನಾಲ್ಕನೇ ಸ್ಥಾನಕ್ಕೆ ತಳ್ಳಿ ಮೂರನೇ ಸ್ಥಾನ ಪಡೆಯಿತು. 2000 ಮೀಟರ್ಸ್ ದೂರದ ಡರ್ಬಿ ಗೆಲ್ಲಲು ಫಿನ್‌ಬಾಸ್ 2 ನಿಮಿಷ 03.28 ಸೆಕೆಂಡ್ಸ್ ತೆಗೆದುಕೊಂಡಿತು. 9000ಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದ ರೇಸ್‌ಪ್ರಿಯರು ರೋಚಕ ಕ್ಷಣಗಳನ್ನು ಕಣ್ತುಂಬಿಕೊಂಡರು.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಭಾನುವಾರ ಜವಾರೆ ಎಸ್. ಪೂನಾವಾಲಾ ಬೆಂಗಳೂರು ಬೇಸಿಗೆ ಡರ್ಬಿ ಗೆದ್ದ ಫಿನ್‌ಬಾಸ್ ಕುದುರೆ ಮಾಲೀಕರಾದ ಖುಷ್ರೂ ಎನ್. ಧುಂಜಿಭಾಯ್ ಮತ್ತು ಅನಸೂಯಾ ಅವರಿಗೆ ಡರ್ಬಿ ಪ್ರಾಯೋಜಕರಾದ ಜವಾರೆ ಎಸ್. ಪೂನಾವಾಲಾ ದಂಪತಿ ಪ್ರಶಸ್ತಿ ಪ್ರದಾನ ಮಾಡಿದರು. (ಎಡದಿಂದ) ಅನಿತಾ ಜೆ ಕ್ಯಾಪ್ಟನ್, ದೆಹಲಿ ರೇಸ್ ಕ್ಲಬ್ ಅಧ್ಯಕ್ಷರಾದ ಜೆ.ಎಸ್. ಬೇಡಿ, ಬಿಟಿಸಿ ವ್ಯವಸ್ಥಾಪಕ ಸಮಿತಿ ಸದಸ್ಯ ಹರೀಶ್ ನಾಯಕ್, ಬಿಟಿಸಿ ಸ್ಟೀವರ್ಡ್ ಸಿ.ಮಹೇಶ್ ಮೇದಪ್ಪ, ಬಿಟಿಸಿ ವ್ಯವಸ್ಥಾಪಕ ಸಮಿತಿ ಸದಸ್ಯ ಸಿ.ಎ.ಪ್ರಶಾಂತ್, ಬಿಟಿಸಿ ಅಧ್ಯಕ್ಷ ಹಾಗೂ ಹಿರಿಯ ಸ್ಟೀವರ್ಡ್ ಆರ್. ಮಂಜುನಾಥ್ ರಮೇಶ್, ಸಿಮೋನ್ ಪೂನಾವಾಲಾ ಚಿತ್ರದಲ್ಲಿದ್ದಾರೆ

ಅಗ್ರ ಆರು ಸ್ಥಾನ ಗಳಿಸಿದ ಕುದುರೆಗಳು

ಸ್ಥಾನ	ಕುದುರೆ	ಟ್ರೈನರ್	ಜಾಕಿ	ತೂಕ (ಕೆ.ಜಿ)	ಸಮಯ	ಬಹುಮಾನ (₹)
1	ಫಿನ್‌ಬಾಸ್	ಪೆಸಿ ಶ್ರಾಫ್	ಟ್ರೆವರ್ ಪಟೇಲ್	54.5	2ನಿ. 3.28ಸೆ	1.22 ಕೋಟಿ
2	ಪ್ರೊಕೊಫಿವ್	ಪ್ರಸನ್ನ ಕುಮಾರ್	ಸೂರಜ್ ನರೇಡು	56	2ನಿ. 3.86 ಸೆ	40.83 ಲಕ್ಷ
3	ಮಿರಾಕಲ್ ಸ್ಟಾರ್	ಪದ್ಮನಾಭನ್	ನೀರಜ್ ರಾವಲ್	54.5	2ನಿ. 4.18ಸೆ	20.41 ಲಕ್ಷ
4	ರೆಡ್ ಬಿಷಪ್	ಪೆಸಿ ಶ್ರಾಫ್	ಎ.ಸಂದೇಶ್	56	2ನಿ. 4.26ಸೆ	10.20 ಲಕ್ಷ
5	ಮೂನ್ ಸ್ಟಾರ್	ಅರವಿಂದ್ ಗಣಪತಿ	ವಿವೇಕ್ ಜಿ	54.5	2ನಿ. 4.45ಸೆ	6.12 ಲಕ್ಷ
6	ಸಾವರಿನ್ ಕಿಂಗ್	ಆಧಿರಾಜ್‌ಸಿಂಗ್ ಜೋಧ	ಆಂಟೋನಿ ರಾಜ್	56	2ನಿ. 5.29ಸೆ	4.09 ಲಕ್ಷ

ತೀವ್ರಗಾಮಿಗಳಾಗಿ ಕೈದಿಗಳು: ಕ್ರಮಕ್ಕೆ ಸೂಚನೆ

ತುರ್ತು ಕ್ರಮಕ್ಕೆ ಕೇಂದ್ರ ಗೃಹ ಸಚಿವಾಲಯ ಸೂಚನೆ, ಮಾರ್ಗಸೂಚಿಗಳ ಬಿಡುಗಡೆ

ನವದೆಹಲಿ (ಪಿಟಿಐ): ದೇಶದ ಕಾರಾಗೃಹಗಳಲ್ಲಿ ಕೈದಿಗಳನ್ನು ತೀವ್ರಗಾಮಿಗಳನ್ನಾಗಿ ಮಾಡುತ್ತಿರುವುದು ಗಂಭೀರ ಸವಾಲಾಗುತ್ತಿದೆ. ಇದಕ್ಕೆ ಕಡಿವಾಣ ಹಾಕುವ ಜೊತೆಗೆ ಕಾನೂನು ಸುವ್ಯವಸ್ಥೆ ಹಾಗೂ ಆಂತರಿಕ ಭದ್ರತೆ ಖಾತ್ರಿಪಡಿಸಲು ತುರ್ತು ಕ್ರಮ ತೆಗೆದುಕೊಳ್ಳಬೇಕು ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ.



ಈ ಕುರಿತು ಸಚಿವಾಲಯವು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿದ್ದು, ಕೈಗೊಳ್ಳಬೇಕಾದ ಕ್ರಮಗಳನ್ನು ವಿವರಿಸಿದೆ.

'ಜೈಲುಗಳಲ್ಲಿನ ಕೈದಿಗಳು ಸಮಾಜದಿಂದ ದೂರವಾಗಿರುತ್ತಾರೆ. ಅವರ ಚಲನವಲನಗಳ ಮೇಲೆ ಕಣ್ಣಿಡುವುದು ಅಗತ್ಯ. ಈ ವಿಚಾರದಲ್ಲಿ ತೋರುವ ನಿರ್ಲಕ್ಷ್ಯ ಭಾರಿ ಅಪಾಯಗಳಿಗೆ ದಾರಿ ಮಾಡಿಕೊಡಬಹುದು. ಹೀಗಾಗಿ, ಸೆರೆವಾಸದಲ್ಲಿರುವವರನ್ನು ಮೂಲಭೂತವಾದಿಗಳನ್ನಾಗಿ ಮಾಡುತ್ತಿರುವುದು ಅಪಾಯಕಾರಿ' ಎಂದು ಸಚಿವಾಲಯ ಹೇಳಿದೆ.

ಕೈಗೊಳ್ಳಬೇಕಾದ ಕ್ರಮಗಳು

- ಕೈದಿಗಳು ತೋರುವ ವರ್ತನೆ, ಅನುಸರಿಸುವ ಸಿದ್ಧಾಂತಗಳ ಆಧಾರದಲ್ಲಿ ಅವರನ್ನು ಗುರುತಿಸುವುದಕ್ಕಾಗಿ ತಂತ್ರಗಳನ್ನು ಅಭಿವೃದ್ಧಿಪಡಿಸಬೇಕು
- ಜೈಲಿನಲ್ಲಿರಿಸಿದ ದಿನ ಹಾಗೂ ನಂತರದ ಅವಧಿಯಲ್ಲಿ ಕೈದಿಗಳ ಕುರಿತು ನಿಯಮಿತವಾಗಿ ಮೌಲ್ಯಮಾಪನ ನಡೆಸಬೇಕು. ಇದಕ್ಕಾಗಿ ಗುಪ್ತಚರ ಸಂಸ್ಥೆ ಸೇರಿ ವಿವಿಧ ಸಂಸ್ಥೆಗಳ ನೆರವು ಪಡೆಯಬೇಕು
- ಇತರ ಕೈದಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆಯನ್ನು ಗ್ರಹಿಸಿ, ಕಡಿವಾಣ ಹಾಕಲು ಕ್ರಮ ಕೈಗೊಳ್ಳಬೇಕು
- ಮೂಲಭೂತವಾದ ಸಿದ್ಧಾಂತ ಪ್ರಚುರಪಡಿಸುವ ಒಲವು ಹೊಂದಿರುವ, ಅಪಾಯಕಾರಿ ಎನಿಸುವ ಕೈದಿಗಳನ್ನು ಪ್ರತ್ಯೇಕವಾಗಿ ಇರಿಸಬೇಕು
- ಉಗ್ರರು ಹಾಗೂ ಮೂಲಭೂತವಾದದಿಂದ ಆಕರ್ಷಿತರಾಗಿರುವ ಕೈದಿಗಳನ್ನಿರಿಸುವುದಕ್ಕಾಗಿ ಅಧಿಕ ಭದ್ರತೆ ಇರುವ ಜೈಲು ಸಂಕೀರ್ಣಗಳನ್ನು ನಿರ್ಮಿಸಲು ಪರಿಶೀಲಿಸಬೇಕು. ಇಂಥವರ ಮೇಲೆ ಕಣ್ಗಾವಲಿರಿಸಬೇಕು
- ಕೈದಿಗಳು ತಮ್ಮ ಕುಟುಂಬದ ಸದಸ್ಯರೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಳ್ಳುವುದನ್ನು ಪ್ರೋತ್ಸಾಹಿಸಬೇಕು. ಇದು, ಅವರಲ್ಲಿ ಭಾವನಾತ್ಮಕ ಸ್ಥಿರತೆ ಕಾಪಾಡಲು ನೆರವಾಗಲಿದೆ

ಪತ್ರದಲ್ಲಿನ ಪ್ರಮುಖ ಅಂಶಗಳು

- ಕೈದಿಗಳಲ್ಲಿ ಸಾಮಾನ್ಯವಾಗಿ ಪರಕೀಯ ಭಾವನೆ ಮನೆ ಮಾಡಿರುತ್ತದೆ. ಇದು ಅವರನ್ನು ಮೂಲಭೂತವಾದದ ಸಂಕಥನಗಳತ್ತ ಆಕರ್ಷಿಸುತ್ತದೆ. ಅವರಲ್ಲಿ ಹಿಂಸಾತ್ಮಕ ವರ್ತನೆ, ಸಮಾಜ ವಿರೋಧಿ ಪ್ರವೃತ್ತಿ ಬೆಳೆಯುವಂತೆ ಮಾಡುತ್ತದೆ
- ಕೆಲ ಪ್ರಕರಣಗಳಲ್ಲಿ, ಕೈದಿಗಳು ಇತರ ಕೈದಿಗಳ ಮೇಲೆ ಅಥವಾ ಜೈಲು ಸಿಬ್ಬಂದಿ ಮೇಲೆ ಹಲ್ಲೆ ಮಾಡುವುದಕ್ಕೆ ಮೂಲಭೂತವಾದ ಪ್ರಚೋದನೆ ನೀಡಬಹುದು
- ಕೈದಿಗಳನ್ನು ಮೂಲಭೂತವಾದಿಗಳನ್ನಾಗಿ ಮಾಡುವುದು ಹೆಚ್ಚುತ್ತಿರುವುದು ಹಲವು ಕ್ರಿಮಿನಲ್ ಚಟುವಟಿಕೆಗಳಿಗೂ ಕಾರಣವಾಗಲಿದೆ

'ಭಾರತೀಯರಿಂದ ಅಧಿಕ ಉಪ್ಪು ಸೇವನೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯರಲ್ಲಿ ಉಪ್ಪು ತಿನ್ನುವುದು ಹೆಚ್ಚುತ್ತಿದೆ. ಹೀಗಾಗಿ, ತಮಗೆ ಅರಿವಿಲ್ಲದಂತೆಯೇ ಅವರು ಹಲವು ರೋಗಗಳಿಗೆ ಒಳಗಾಗುತ್ತಿದ್ದಾರೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನ (ಐಸಿಎಂಆರ್) ಅಧ್ಯಯನ ಹೇಳುತ್ತದೆ.

ಅಗತ್ಯಕ್ಕಿಂತ ಹೆಚ್ಚು ಉಪ್ಪು ತಿನ್ನುವುದರಿಂದ ಅಧಿಕ ರಕ್ತದೊತ್ತಡ, ಪಾರ್ಶ್ವವಾಯು, ಹೃದ್ರೋಗ, ಮೂತ್ರಪಿಂಡ ತೊಂದರೆಗಳು ಕಾಣಿಸಿಕೊಳ್ಳುವ ಅಪಾಯ ಹೆಚ್ಚಿದೆ ಎಂದು ಐಸಿಎಂಆರ್‌ನ ರಾಷ್ಟ್ರೀಯ ಸಾಂಕ್ರಾಮಿಕ ರೋಗವಿಜ್ಞಾನ ಸಂಸ್ಥೆ (ಎನ್‌ಐಇ) ವಿಜ್ಞಾನಿಗಳು ಎಚ್ಚರಿಸಿದ್ದಾರೆ.

ವಿವಿಧ ಆರೋಗ್ಯ ಸಮಸ್ಯೆಗಳು ಬಾರದಂತೆ ತಡೆಯುವ ಸಂಬಂಧ ಉಪ್ಪು ಸೇವನೆ ಕಡಿಮೆಗೊಳಿಸುವುದು ಹೇಗೆ ಎಂಬ ಬಗ್ಗೆ ವಿಜ್ಞಾನಿಗಳು ಅಧ್ಯಯನ ಕೈಗೊಂಡಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆ ಶಿಫಾರಸಿನಂತೆ, ಒಬ್ಬ ವ್ಯಕ್ತಿ ದಿನಕ್ಕೆ 5 ಗ್ರಾಮ್‌ಗಿಂತ ಕಡಿಮೆ ಉಪ್ಪು ಸೇವಿಸಬೇಕು.

ದೇಶದ ನಗರ ಪ್ರದೇಶ ನಿವಾಸಿಗಳು ದಿನಕ್ಕೆ 9.2 ಗ್ರಾಂ ಉಪ್ಪು ತಿಂದರೆ, ಗ್ರಾಮೀಣ ಭಾಗದಲ್ಲಿ ಇದರ ಪ್ರಮಾಣ 5.6 ಗ್ರಾಂ.

ಸೋಡಿಯಂ ಬದಲಾಗಿ ಪೊಟ್ಯಾಶಿಯಂ ಅಥವಾ ಮ್ಯಾಗ್ನೇಶಿಯಂ ಅಂಶವಿರುವ ಲವಣಗಳ ಬಳಕೆಯೇ ಇದಕ್ಕೆ ಪರ್ಯಾಯ ಎಂದು ಎನ್‌ಐಇ ಹಿರಿಯ ವಿಜ್ಞಾನಿ ಡಾ.ಶರಣ್ ಮುರಳಿ ಹೇಳುತ್ತಾರೆ.

ಸಂಗಾರೆಡ್ಡಿ: ಗಾಳಿಯಲ್ಲಿ ಗುಂಡು ಹಾರಿಸಿದ ಶಾಸಕನ ಗನ್‌ಮ್ಯಾನ್

ಹೈದರಾಬಾದ್ (ಪಿಟಿಐ): ಬಿಆರ್‌ಎಸ್ ಶಾಸಕಿ ಕವಿತಾ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ತೆಲಂಗಾಣ ಜಾಗೃತಿ ಸದಸ್ಯರು ಅಮಾನತುಗೊಂಡಿರುವ ಕಾಂಗ್ರೆಸ್ ವಿಧಾನ ಪರಿಷತ್ ಸದಸ್ಯ ಟೀನ್‌ಮಾರ್ ಮಲ್ಲಣ್ಣ ಅವರ ಕಚೇರಿಗೆ ಭಾನುವಾರ ಮುತ್ತಿಗೆ ಹಾಕಿದ್ದಾಗ ಅವರ ಗನ್‌ಮ್ಯಾನ್ ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ.

'ಪ್ರತಿಭಟನಕಾರರು ಪೀಠೋಪಕರಣಗಳಿಗೆ ಹಾನಿ ಮಾಡಿ, ಕೆಲ ನೌಕರರ ಮೇಲೆ ಹಲ್ಲೆ ನಡೆಸಿದ್ದಾರೆ. ಆತ್ಮ ರಕ್ಷಣೆಗಾಗಿ ಗನ್‌ಮ್ಯಾನ್ ಗಾಳಿಯಲ್ಲಿ ಗುಂಡುಹಾರಿಸುವಂತೆ ಪ್ರಚೋದಿಸಿದ್ದಾರೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 'ಕವಿತಾ ಬೆಂಬಲಿಗರು ಗನ್‌ಮ್ಯಾನ್‌ನ ಕೈಯಿಂದ ಪಿಸ್ತೂಲ್ ಕಸಿದುಕೊಂಡು ಗುಂಡು ಹಾರಿಸಲು ಯತ್ನಿಸಿದ್ದಾರೆ. ಕೊಲೆ ಯತ್ನಕ್ಕೆ ಪ್ರಚೋದನೆ ನೀಡಿದ ಕವಿತಾ ಅವರನ್ನು ಶಾಸಕ ಸ್ಥಾನದಿಂದ ವಜಾಗೊಳಿಸಬೇಕು' ಎಂದು ಮಲ್ಲಣ್ಣ ಆಗ್ರಹಿಸಿದ್ದಾರೆ. ಮಲ್ಲಣ್ಣ ವಿರುದ್ಧ ಕ್ರಮಕೈಗೊಳ್ಳುವಂತೆ ಕವಿತಾ ಅವರು ಸಭಾಪತಿ ಗುತಾ ಸುಖೇಂದರ್ ರೆಡ್ಡಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

18 ವ್ಯಾಗನ್‌ಗಳು ಬೆಂಕಿಗಾಹುತಿ • ಬೆಂಗಳೂರು, ಮುಂಬೈಗೆ ರೈಲು ಸಂಚಾರ ವ್ಯತ್ಯಯ

ತಮಿಳುನಾಡು: ಗೂಡ್ಸ್ ರೈಲಿಗೆ ಬೆಂಕಿ

ಚೆನ್ನೈ (ಪಿಟಿಐ): ತಮಿಳುನಾಡಿನ ತಿರುವಳ್ಳೂರಿನಲ್ಲಿ ಡಿಸೇಲ್ ಸಾಗಿಸುತ್ತಿದ್ದ ಗೂಡ್ಸ್ ರೈಲಿಗೆ ಭಾನುವಾರ ಬೆಳಿಗ್ಗೆ 5.30ಕ್ಕೆ ಬೆಂಕಿ ಹತ್ತಿಕೊಂಡಿದೆ.

ಯಾವುದೇ ಪ್ರಾಣ ಹಾನಿ ಆಗಿರುವ ಬಗ್ಗೆ ವರದಿಯಾಗಿಲ್ಲ. ಬೆಂಗಳೂರು, ಮೈಸೂರು, ಸೇಲಂ, ಕೊಯಮತ್ತೂರು ಮತ್ತು ಮುಂಬೈ ಸೇರಿದಂತೆ ಹಲವು ಪ್ರಮುಖ ನಗರಗಳನ್ನು ಸಂಪರ್ಕಿಸುವ ಚೆನ್ನೈ– ಅರಕ್ಕೋಣಂ ಮಾರ್ಗದಲ್ಲಿ ರೈಲು ಸಂಚಾರ ವ್ಯತ್ಯಯವಾಗಿತ್ತು.

ಹೀಗಾಗಿ, ರೈಲ್ವೆ ಮಾರ್ಗದಲ್ಲಿ ಸಿಲುಕಿಕೊಂಡಿದ್ದ ಪ್ರಯಾಣಿಕರನ್ನು ಕರೆದೊಯ್ಯಲು ರಾಜ್ಯ ಸಾರಿಗೆ ಸಂಸ್ಥೆ ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಲಾಗಿತ್ತು.

ಚೆನ್ನೈ ಹಾರ್ಬರ್‌ನಿಂದ ವಲಜಾಹ್ ರೋಡ್‌ಗೆ ಈ ರೈಲು ತೆರಳುತ್ತಿತ್ತು. ತಿರುವಳ್ಳೂರು ರೈಲು ನಿಲ್ದಾಣವನ್ನು ದಾಟಿದ ಬಳಿಕ ಈ ಅವಘಡ ಸಂಭವಿಸಿದೆ. ಮೂರನೇ ಬೋಗಿಯಲ್ಲಿ ಬೆಂಕಿ ಕಾಣಿಸಿಕೊಂಡ ತಕ್ಷಣ ಲೋಕೊಪೈಲಟ್ ರೈಲನ್ನು ನಿಲ್ಲಿಸಿದರು. ಬಳಿಕ ವಿದ್ಯುತ್ ಸಂಪರ್ಕ ಸ್ಥಗಿತಗೊಳಿಸಲಾಯಿತು ಎಂದು ದಕ್ಷಿಣ ರೈಲ್ವೆಯ ಅಧಿಕೃತ ಪ್ರಕಟಣೆ ತಿಳಿಸಿದೆ.

ರೈಲಿನ ವ್ಯಾಗನ್‌ಗಳು ಬೆಂಕಿಗಾಹುತಿಯಾಗಿರುವುದು ಪಿಟಿಐ ಚಿತ್ರ

ಹಲವು ವ್ಯಾಗನ್‌ಗಳು ಹಳಿ ತಪ್ಪಿದ್ದವು ಮತ್ತು 18 ವ್ಯಾಗನ್‌ಗಳು ಸುಟ್ಟು ಕರಕಲಾಗಿವೆ. ಸುರಕ್ಷಿತವಾಗಿರುವ 30 ವ್ಯಾಗನ್‌ಗಳನ್ನು ಸ್ಥಳಾಂತರಗೊಳಿಸಲಾಗಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ. ಬೆಂಕಿ ಅವಘಡಕ್ಕೆ ನಿಖರವಾದ ಕಾರಣ ತಿಳಿದುಬಂದಿಲ್ಲ. ವ್ಯಾಗನ್‌ಗೆ ಹತ್ತಿಕೊಂಡಿದ್ದ ಬೆಂಕಿಯನ್ನು ನಂದಿಸಲು ಅಗ್ನಿಶಾಮಕ ಸಿಬ್ಬಂದಿ ಸುಮಾರು 11 ಗಂಟೆ ಕಾರ್ಯಾಚರಣೆ ನಡೆಸಿದರು. ಘಟನೆ ನಡೆದ ಪ್ರದೇಶದಲ್ಲಿ ವಾಸಿಸುತ್ತಿದ್ದ ನೂರಾರು ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಯಿತು. ಚೆನ್ನೈ ಸಮೀಪದ ಮನಾಲಿಯಲ್ಲಿನ ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನಿಂದ ವಲಜಾಹ್ ರಸ್ತೆಗೆ 27 ಸಾವಿರ ಲೀಟರ್ ಡಿಸೇಲ್ ಸಾಗಿಸಲಾಗುತ್ತಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

12 ರೈಲುಗಳ ಸಂಚಾರ ರದ್ದುಗೊಳಿಸಲಾಗಿದೆ ಮತ್ತು ಹಲವು ರೈಲುಗಳ ಮಾರ್ಗ ಬದಲಾವಣೆ ಮಾಡಲಾಗಿದೆ. ಇದರಿಂದಾಗಿ ಚೆನ್ನೈನಿಂದ ಬೆಂಗಳೂರು, ಮೈಸೂರು, ಸೇಲಂ, ಕೊಯಮತ್ತೂರು, ತಿರುಪತಿಗೆ ಹೊರಟಿದ್ದ ಸಾವಿರಾರು ಪ್ರಯಾಣಿಕರಿಗೆ ತೊಂದರೆ ಆಯಿತು

ಕುತೂಹಲದ ಘಟ್ಟದಲ್ಲಿ ಲಾರ್ಡ್ಸ್ ಟೆಸ್ಟ್

ನಾಲ್ಕನೇ ದಿನ 193 ರನ್ ಗುರಿ ಎದುರಿಸಿದ ಭಾರತ ತಂಡಕ್ಕೆ ಆರಂಭಿಕ ಆಘಾತ

• ಸಿಡ್ನಿ ಕಿರಣ್

ಲಂಡನ್: ಶನಿವಾರ ಸಂಜೆಯೇ ಹೊತ್ತಿಸಿದ್ದ ಕಿಡಿ ಭಾನುವಾರ ಪ್ರಖರ ರೂಪ ತಳೆಯಿತು. ಯುವ ಉತ್ಸಾಹಿ ಭಾರತ ತಂಡ ಲಾರ್ಡ್ಸ್ ಟೆಸ್ಟ್‌ನಲ್ಲಿ ಆಕ್ರಮಣಕಾರಿಯಾಗಿ ಆಡಿ ದಿನದ ಎರಡು ಅವಧಿಗಳಲ್ಲಿ ಇಂಗ್ಲೆಂಡ್ ತಂಡದ ಒತ್ತಡ ಹೇರಿತು. ಆದರೆ ಕೊನೆಯ ಒಂದು ಗಂಟೆಯ ಆಟದಲ್ಲಿ ಇಂಗ್ಲೆಂಡ್ ಕೂಡ ಎದಿರೇಟು ನೀಡಿದೆ. ಮೂರನೇ ಟೆಸ್ಟ್ ಪಂದ್ಯ ಈಗ ರೋಚಕ ಸ್ಥಿತಿಗೆ ತಲುಪಿದೆ.

ಭಾರತ ತಂಡಕ್ಕೆ ಮೂರನೇ ದಿನವಾದ ಶನಿವಾರ ಆರು ನಿಮಿಷ ಬೌಲಿಂಗ್ ಮಾಡುವ ಅವಕಾಶ ದೊರಕಿತ್ತು. ಆದರೆ ಆಗಲೇ ನಾಟಕೀಯ ಬೆಳವಣಿಗೆ ನಡೆಯಿತು. ಇಂಗ್ಲೆಂಡ್ ಆರಂಭ ಆಟಗಾರ ಜಾಕ್ ಕ್ರಾಲಿ ಕಾಲ ಹರಣ ತಂತ್ರಕ್ಕೆ ಮುಂದಾ ದರು. ಭಾರತ ಇನ್ನೊಂದು ಓವರ್ ಮಾಡುವುದನ್ನು ತಡೆಯುವ ಉದ್ದೇಶ ಅದರ ಹಿಂದಿತ್ತು. ನಾಯಕ ಶುಭಮನ್ ಗಿಲ್ 'ಬಹಿರಂಗ'ವಾಗಿಯೇ ಅಸಮಾಧಾನ ಪ್ರದರ್ಶಿಸಿದರು. ಡಕೆಟ್ ಮಧ್ಯಪ್ರವೇಶಿಸಿದರು. ಭಾರತದ ಆಟಗಾರರೂ ಒಗ್ಗಟ್ಟಾದಾಗ ಅಂಪೈರ್‌ಗಳು ಕಾವೇರುತ್ತಿದ್ದ ಪರಿಸ್ಥಿತಿ ತಿಳಿಗೊಳಿಸಿದರು. ಹೀಗಾಗಿ 'ಕ್ರಿಕೆಟ್‌ನ ತವರು' ಲಾರ್ಡ್ಸ್‌ನಲ್ಲಿ 'ಸೂಪರ್ ಸಂಡೇ' ನಿರೀಕ್ಷಿಸಲಾಗಿತ್ತು. ಅದಕ್ಕೆ ತಕ್ಕಂತೆ ಪ್ರೇಕ್ಷಕರೂ ಕಿಕ್ಕಿರಿದಿದ್ದು ಅವರಿಗೆ 'ಕಾಸಿಗೆ ತಕ್ಕ ಕಜ್ಜಾಯ' ದೊರೆಯಿತು.

ಶನಿವಾರ ಸಂಜೆಯ 'ಆಕ್ರಮಣ'ವನ್ನು ಭಾರತ ಭಾನುವಾರವೂ ಮುಂದುವರಿಸಿತು. ಅಮೋಘ ಬೌಲಿಂಗ್ ಜೊತೆ ಆಕ್ರಮಣದ ಮನೋಭಾವವನ್ನೂ ಪ್ರದರ್ಶಿಸಿದ್ದು ಬೌಲರ್‌ಗಳ ಮುಖಗಳಲ್ಲಿ ವ್ಯಕ್ತವಾಗುತಿತ್ತು. ಬೂಮ್ರಾ ಬೆಂಕಿಯುಂಡೆಗಳನ್ನು ಎಸೆದರು. ಅವರ ದಾಳಿಯಿಂದ ಕ್ರಾಲಿ ತಡಕಾಡಿದರು. 2–3 ಸಲ ಚೆಂಡು ಅವರ ಗ್ಲೋವ್ಸ್‌ಗೆ ಬಡಿಯಿತು. ಮೊಹಮ್ಮದ್ ಸಿರಾಜ್ (31ಕ್ಕೆ2) ತಾವೇನೂ ಕಡಿಮೆಯಿಲ್ಲ ಎನ್ನುವಂತೆ ಕಾವೇರಿಸಿದರು. ಇನ್ನೊಬ್ಬ ವೇಗಿ ನಿತೀಶ್ ಕುಮಾರ್ ಅವರೂ ಸೇರಿಕೊಂಡರು. ಇಂಗ್ಲೆಂಡ್ ಇದರಿಂದ ಚೇತರಿಸಿಕೊಳ್ಳುವ ಸೂಚನೆ ತೋರುತ್ತಿದ್ದಂತೆ ಸ್ಪಿನ್ನರ್ ವಾಷಿಂಗ್ಟನ್ ಸುಂದರ್ (22ಕ್ಕೆ4) ಅವರೂ ಅಮೋಘ ಸ್ಪೆಲ್ ಮೂಲಕ ಹೊಡೆತ ನೀಡಿದರು. ಟೆಸ್ಟ್ ಕ್ರಿಕೆಟ್ ರೋಚಕತೆಗೆ ಈ ಪಂದ್ಯ ಕನ್ನಡಿಯಾಯಿತು.

ಭಾರತ ತಂಡದ ಆಕ್ರಮಣದ ಸೂಚನೆಯರಿತ ಆತಿಥೇಯರು ಹೋರಾಟಕ್ಕೆ ಅಣಿಯಾಯಿತು. ಆದರೆ ಭಾರತ ನಿಯಮಿತವಾಗಿ ನೀಡಿದ ಹೊಡೆತಗಳನ್ನು ಸುಧಾರಿಸಿಕೊಳ್ಳಲು ಆತಿಥೇಯರು ತಡಕಾಡಿದರು. ಲಂಚ್ ವೇಳೆಗೆ ತಂಡ 98 ರನ್‌ಗಳಾಗುವಷ್ಟರಲ್ಲಿ 4 ವಿಕೆಟ್‌ಗಳನ್ನು ಕಳೆದುಕೊಂಡಿತು. ನಾಯಕ ಬೆನ್ ಸ್ಟೋಕ್ಸ್ (33) ಮತ್ತು ಜೋ ರೂಟ್ (40) ಅವರು ಪ್ರತಿಹೋರಾಟಕ್ಕೆ ಯತ್ನಿಸಿದರು. ಆದರೆ ಚಹಾ ವಿರಾಮ ಕಳೆದು 10 ಓವರುಗಳ ನಂತರ ಇಂಗ್ಲೆಂಡ್ 192 ರನ್‌ಗಳಿಗೆ ಆಲೌಟ್ ಆಯಿತು.

ಆದರೆ ಇಂಗ್ಲೆಂಡ್ ಕೂಡ ಪ್ರತಿಹೋರಾಟ ನಡೆಸಿ ಬೆನ್ನಟ್ಟುವ ಕೆಲಸ ಸುಲಭವಾಗದಂತೆ ನೋಡಿಕೊಂಡಿದೆ. ಆತಿಥೇಯ ತಂಡದ ವೇಗದ ಬೌಲರ್‌ಗಳೂ ಕೊನೆಯ ಎಸೆತದ ತನಕ ಆಕ್ರಮಣಕಾರಿಯಾಗಿಯೇ ಬೌಲಿಂಗ್ ಮಾಡಿದರು. ಯಶಸ್ವಿ ಜೈಸ್ವಾಲ್ ಅವರ ವಿಕೆಟ್‌ಅನ್ನು ಎರಡನೇ ಓವರಿನಲ್ಲೇ ಜೋಫ್ರಾ ಆರ್ಚರ್ ಪಡೆದರು. ಮೊದಲ ಇನಿಂಗ್ಸ್‌ನ ಶತಕ ವೀರ ಕೆ.ಎಲ್.ರಾಹುಲ್ (ಔಟಾಗದೇ 33) ಮತ್ತು ಅವರ ಬಾಲ್ಯ ಸ್ನೇಹಿತ ಕರುಣ್ ನಾಯರ್ (14) ಎರಡನೇ ವಿಕೆಟ್‌ಗೆ 36 ರನ್ ಸೇರಿಸಿ ಕುಸಿತ ತಡೆಗಟ್ಟಲು ತೊಡಗಿದರು. ಆದರೆ ಬ್ರೈಡನ್ ಕಾರ್ಸ್ (11ಕ್ಕೆ 2) ಅವರ ಉರಿದಾಳಿಯಲ್ಲಿ ಭಾರತ ಮತ್ತೆರಡು ವಿಕೆಟ್ ಕಳೆದುಕೊಂಡಿತು. ದಿನದಾಟ ಮುಗಿದಾಗ ಭಾರತದ ಮೊತ್ತ 58ಕ್ಕೆ4. ಸರಣಿಯಲ್ಲಿ 2–1 ಮುನ್ನಡೆ ಪಡೆಯಲು ಇನ್ನೂ 135 ರನ್ ಗಳಿಸಬೇಕಾಗಿದೆ.

ಬೂಮ್ರಾ ಅವರ ಎಸೆತಗಳನ್ನು ನಿಭಾಯಿಸಲು ಇಂಗ್ಲೆಂಡ್ ಆಟಗಾರರಿಗೆ ಸಾಧ್ಯವಾಗಲಿಲ್ಲ. ಸಿರಾಜ್ ಸಹ ಅಷ್ಟೇ ಆಕ್ರಮಣಕಾರಿಯಾಗಿದ್ದರು. ಕೊನೆಗೂ ದಾಳಿಗೆ ಪ್ರತಿದಾಳಿಯೇ ಉತ್ತಮ ತಂತ್ರ ಎಂದು ಜಾಕ್ ಕ್ರಾಲಿ ಮತ್ತು ಬೆನ್ ಡಕೆಟ್ ಅರಿತರು. ಆದರೆ ಇದು ಇಬ್ಬರ ಪತನಕ್ಕೆ ಕಾರಣವಾಯಿತು. ಭಾರತಕ್ಕೆ ಅಗತ್ಯವಿದ್ದ ಆರಂಭ ದೊರೆಯಿತು. ಸಿರಾಜ್ ಅವರು ನಂತರ ಓಲಿ ಪೋಪ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಆಕ್ರಮಣಕಾರಿಯಾಗಿದ್ದ ಹ್ಯಾರಿ ಬ್ರೂಕ್ ಅವರನ್ನು ಲಂಚ್‌ಗೆ ಕೆಲವೇ ನಿಮಿಷ ಮೊದಲು ಆಕಾಶ್ ದೀಪ್ ಪೆವಿಲಿಯನ್‌ಗೆ ಮರಳಿಸಿದರು.

ತಮ್ಮ ಬ್ಯಾಟಿಂಗ್ ಸಾಮರ್ಥ್ಯದಿಂದಾಗಿಯೇ, ಕುಲದೀಪ್ ಅವರನ್ನು ಹಿಂದೆ ಹಾಕಿ ತಂಡದಲ್ಲಿ ಅವಕಾಶ ಪಡೆದ ಆಫ್ ಸ್ಪಿನ್ನರ್ ಸುಂದರ್ ಇಂಥ ನಿಧಾಗತಿಯ ಪಿಚ್‌ನಲ್ಲಿ ತಾವು ಅಪಾಯಕಾರಿ ಎಂಬುದನ್ನು ತೋರಿದರು. ಲೆಂಗ್ತ್‌ಗಳಲ್ಲಿ ಕೊಂಚ ವೈವಿಧ್ಯ ತೋರಿದರು. ಸ್ವೀಪ್ ಮಾಡಲು ಯತ್ನಿಸಿದ ರೂಟ್ ಬೌಲ್ಡ್ ಆದರು. ನಂತರ ಅಪಾಯಕಾರಿ ಆಟಗಾರ ಜೇಮಿ ಸ್ಮಿತ್ ಅವರು ಸ್ವಲ್ಪ ಕೆಳಮಟ್ಟದಲ್ಲಿ ಹೊರಳಿದ ಎಸೆತಕ್ಕೆ ಬೌಲ್ಡ್ ಆದರು. ಇಂಗ್ಲೆಂಡ್ ಒತ್ತಡಕ್ಕೆ ಸಿಲುಕಿತು.

ನಾಲ್ಕು ವಿಕೆಟ್ ಪಡೆದ ವಾಷಿಂಗ್ಟನ್ ಸುಂದರ್ (ಬಲದಿಂದ ಮೂರನೇಯವರು) ಅವರನ್ನು ಭಾರತ ತಂಡದ ಸಹ ಆಟಗಾರರು ಅಭಿನಂದಿಸಿದರು ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಒಂದನೇ ಇನಿಂಗ್ಸ್: ಇಂಗ್ಲೆಂಡ್: 387 (112.3 ಓವರುಗಳಲ್ಲಿ). ಭಾರತ: 387 (119.2 ಓವರುಗಳಲ್ಲಿ)
ಎರಡನೇ ಇನಿಂಗ್ಸ್: ಇಂಗ್ಲೆಂಡ್: 192 (62.1 ಓವರುಗಳಲ್ಲಿ) (ಶನಿವಾರ: ವಿಕೆಟ್ ನಷ್ಟವಿಲ್ಲದೇ 2)
ಕ್ರಾಲಿ ಸಿ ಯಶಸ್ವಿ ಬಿ ನಿತೀಶ್ 22 (49ಎ, 4x3)
ಡಕೆಟ್ ಸಿ ಬೂಮ್ರಾ ಬಿ ಸಿರಾಜ್ 12 (12ಎ, 4x1)
ಪೋಪ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 4 (17ಎ, 4x1)
ರೂಟ್ ಬಿ ಸುಂದರ್ 40 (96ಎ, 4x1)
ಬ್ರೂಕ್ ಬಿ ಆಕಾಶ್ 23 (19ಎ, 4x4, 6x1)
ಸ್ಟೋಕ್ಸ್ ಬಿ ಸುಂದರ್ 33 (96ಎ, 4x3)
ಸ್ಮಿತ್ ಬಿ ಸುಂದರ್ 8 (14ಎ)
ವೋಕ್ಸ್ ಬಿ ಬೂಮ್ರಾ 10 (33ಎ, 4x1)
ಕಾರ್ಸ್ ಬಿ ಬೂಮ್ರಾ 1 (4ಎ)
ಆರ್ಚರ್ ಔಟಾಗದೇ 5 (25ಎ, 4x1)
ಬಶೀರ್ ಬಿ ಸುಂದರ್ 2 (9ಎ)
ಇತರೆ: 32 (ಬೈ 25, ಲೆಗ್‌ಬೈ 6, ನೋಬಾಲ್ 1)
ವಿಕೆಟ್ ಪತನ: 1–22 (ಬೆನ್ ಡಕೆಟ್, 5.5), 2–42 (ಓಲಿ ಪೋಪ್, 11.6), 3–50 (ಜಾಕ್ ಕ್ರಾಲಿ, 14.4), 4–87 (ಹ್ಯಾರಿ ಬ್ರೂಕ್, 21.3), 5–154 (ಜೋ ರೂಟ್, 42.4), 6–164 (ಜೇಮಿ ಸ್ಮಿತ್, 46.2), 7–181 (ಬೆನ್ ಸ್ಟೋಕ್ಸ್, 54.3), 8–182 (ಬ್ರೈಡನ್ ಕಾರ್ಸ್, 55.1), 9–185 (ಕ್ರಿಸ್ ವೋಕ್ಸ್, 57.3), 10–192 (ಶೋಯೆಬ್ ಬಶೀರ್, 62.1)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 16–3–38–2; ಮೊಹಮ್ಮದ್ ಸಿರಾಜ್ 13–2–31–2; ನಿತೀಶ್ ಕುಮಾರ್ ರೆಡ್ಡಿ 5–1–20–1; ಆಕಾಶ್ ದೀಪ್ 8–2–30–1; ರವೀಂದ್ರ ಜಡೇಜ 8–1–20–0; ವಾಷಿಂಗ್ಟನ್ ಸುಂದರ್ 12.1–2–22–4

ಭಾರತ: 4 ವಿಕೆಟ್‌ಗೆ 58 (17.4 ಓವರುಗಳಲ್ಲಿ)
ಜೈಸ್ವಾಲ್ ಸಿ ಸ್ಮಿತ್ ಬಿ ಆರ್ಚರ್ 0 (7ಎ)
ರಾಹುಲ್ ಬ್ಯಾಟಿಂಗ್ 33 (47ಎ, 4x6)
ಕರುಣ್ ಎಲ್‌ಬಿಡಬ್ಲ್ಯು ಬಿ ಕಾರ್ಸ್ 14 (33ಎ, 4x1)
ಗಿಲ್ ಎಲ್‌ಬಿಡಬ್ಲ್ಯು ಬಿ ಕಾರ್ಸ್ 6 (9ಎ, 4x1)
ಆಕಾಶ್ ದೀಪ್ ಬಿ ಸ್ಟೋಕ್ಸ್ 1 (11ಎ)
ಇತರೆ: 4 (ಲೆಗ್‌ಬೈ 3, ನೋಬಾಲ್ 1)
ವಿಕೆಟ್ ಪತನ: 1–15 (ಯಶಸ್ವಿ ಜೈಸ್ವಾಲ್, 1.4), 2–41 (ಕರುಣ್ ನಾಯರ್, 12.3), 3–53 (ಶುಭಮನ್ ಗಿಲ್, 14.6), 4–58 (ಆಕಾಶ್ ದೀಪ್, 17.4)
ಬೌಲಿಂಗ್: ವೋಕ್ಸ್ 5–2–11–0; ಆರ್ಚರ್ 4–0–18–1; ಬೆನ್ ಸ್ಟೋಕ್ಸ್ 4.4–0–15–1; ಬ್ರೈಡ್ ಕಾರ್ಸ್ 4–1–11–2

ಹ್ಯಾಟ್ರಿಕ್ ಪ್ರಶಸ್ತಿಯ ಕನಸಿನಲ್ಲಿದ್ದ ಅಲ್ಕರಾಜ್‌ಗೆ ನಿರಾಸೆ

ಸಿನ್ನರ್‌ಗೆ ವಿಂಬಲ್ಡನ್ ಕಿರೀಟ

ಲಂಡನ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಟೆನಿಸ್ ಆಟಗಾರ ಯಾನಿಕ್ ಸಿನ್ನರ್ ಅವರು ಭಾನುವಾರ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಎರಡು ಬಾರಿಯ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರನ್ನು ಹಿಮ್ಮೆಟ್ಟಿಸಿ, ತಮ್ಮ ಚೊಚ್ಚಲ ವಿಂಬಲ್ಡನ್ ಪ್ರಶಸ್ತಿಗೆ ಮುತ್ತಿಕ್ಕಿದರು.

ಇಟಲಿಯ 23 ವರ್ಷದ ಸಿನ್ನರ್ ಆರಂಭಿಕ ಸೆಟ್‌ನ ಹಿನ್ನಡೆಯಿಂದ ಚೇತರಿಸಿಕೊಂಡು 4-6, 6-4, 6-4, 6-4ರಲ್ಲಿ ನಾಲ್ಕು ಸೆಟ್‌ಗಳ ಹೋರಾಟದಲ್ಲಿ ಎರಡನೇ ಶ್ರೇಯಾಂಕದ ಅಲ್ಕರಾಜ್ ಅವರನ್ನು ಮಣಿಸಿದರು. ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಹ್ಯಾಟ್ರಿಕ್ ಪ್ರಶಸ್ತಿ ಗೆಲುವಿನ ನಿರೀಕ್ಷೆಯಲ್ಲಿದ್ದ ಸ್ಪೇನ್‌ನ ಆಟಗಾರನಿಗೆ ನಿರಾಸೆಯಾಯಿತು.

ಐದು ವಾರಗಳ ಹಿಂದೆ (ಜೂನ್ 8) ಫ್ರೆಂಚ್ ಓಪನ್‌ನ ರೋಚಕ ಫೈನಲ್‌ನಲ್ಲಿ ಅಲ್ಕರಾಜ್ ವಿರುದ್ಧ ಐದು ಸೆಟ್‌ಗಳಲ್ಲಿ ಸೋತಿದ್ದ ಸಿನ್ನರ್ ಇಲ್ಲಿ ಮುಯ್ಯಿ ತೀರಿಸಿಕೊಂಡರು. ಇಟಲಿಯ ಆಟಗಾರನಿಗೆ ಇದು ನಾಲ್ಕನೇ ಗ್ರ್ಯಾನ್‌ಸ್ಲಾಮ್ ಕಿರೀಟವಾಗಿದೆ. ಈ ಮೊದಲು ಎರಡು ಬಾರಿ ಆಸ್ಟ್ರೇಲಿಯಾ ಓಪನ್, ಒಂದು ಬಾರಿ ಅಮೆರಿಕ ಓಪನ್ ಪ್ರಶಸ್ತಿ ಗೆದ್ದಿದ್ದಾರೆ.

ಏಪ್ರಿಲ್‌ನಿಂದ ಇದುವರೆಗೆ ಸತತ 24 ಪಂದ್ಯಗಳನ್ನು ಗೆದ್ದಿದ್ದ ಅಲ್ಕರಾಜ್ ಯಶಸ್ಸಿನ ಪಯಣಕ್ಕೆ ಈ ಸೋಲು ತಡೆಯೊಡ್ಡಿತು. ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲೂ ಸತತ 20 ಪಂದ್ಯಗಳ ಗೆಲುವಿನ ನಾಗಾಲೋಟಕ್ಕೂ ಪೂರ್ಣ ವಿರಾಮ ಬಿತ್ತು. 2023 ಮತ್ತು 2024ರ ಆವೃತ್ತಿಯಲ್ಲಿ ಅಲ್ಕರಾಜ್ ಅವರು ಸರ್ಬಿಯಾದ ತಾರೆ ನೊವಾಕ್ ಜೊಕೊವಿಚ್ ಅವರನ್ನು ಮಣಿಸಿ ಎರಡು ಬಾರಿ ಪ್ರಶಸ್ತಿ ಗೆದ್ದಿದ್ದರು.

ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಆರನೇ ಬಾರಿ ಫೈನಲ್ ತಲುಪಿದ್ದ ಸ್ಪೇನ್ ಆಟಗಾರನಿಗೆ ಇದು ಮೊದಲ ಸೋಲಾಗಿದೆ. ಐದು ಫೈನಲ್‌ಗಳಲ್ಲಿ ಅವರು ಗೆದ್ದು ಬೀಗಿದ್ದರು.

'ಪ್ಯಾರಿಸ್‌ನಲ್ಲಿ ನನಗೆ ರೋಚಕ ಸೋಲು ಎದುರಾಯಿತು. ಪಂದ್ಯವನ್ನೂ ಹೇಗೆ ಸೋತರೂ ನಮ್ಮ ತಪ್ಪನ್ನು ಅರ್ಥಮಾಡಿಕೊಂಡು, ಸರಿಪಡಿಸಲು ಪ್ರಯತ್ನಿಸಬೇಕು. ಅದನ್ನು ಮಾಡಿದ್ದರಿಂದಲೇ ಈ ಪ್ರಶಸ್ತಿ ಗೆಲ್ಲಲು ಸಾಧ್ಯವಾಯಿತು. ಈ ಟ್ರೋಫಿ ನನಗೆ ಅತ್ಯಂತ ವಿಶೇಷವಾದುದು' ಎಂದು ಗೆಲುವಿನ ನಂತರ ಸಿನ್ನರ್ ಪ್ರತಿಕ್ರಿಯಿಸಿದರು.

'ಸೋಲನ್ನು ಸ್ವೀಕರಿಸುವುದು ಕಷ್ಟ. ಆದರೆ, ಈ ವೇಳೆ ಸಿನ್ನರ್ ಅವರನ್ನು ಅಭಿನಂದಿಸಲೇಬೇಕು. ಅವರಿಗೆ ಇದು ನಿಜವಾಗಿಯೂ ಅರ್ಹವಾದ ಟ್ರೋಫಿ' ಎಂದು ಅಲ್ಕರಾಜ್ ಹೇಳಿದರು.

ವಿಂಬಲ್ಡನ್ ಪ್ರಶಸ್ತಿ ಗೆದ್ದ ಇಟಲಿಯ ಯಾನಿಕ್ ಸಿನ್ನರ್ ಎಎಫ್‌ಪಿ ಚಿತ್ರ

ವೆರೋನಿಕಾ–ಎಲಿಸ್ ಜೋಡಿಗೆ ಪ್ರಶಸ್ತಿ

ಲಂಡನ್ (ಎಎಫ್‌ಪಿ): ರಷ್ಯಾದ ವೆರೋನಿಕಾ ಕುಡೆರ್ಮೆಟೋವಾ ಮತ್ತು ಬೆಲ್ಜಿಯಂನ ಎಲಿಸ್ ಮೆರ್ಟೆನ್ಸ್ ಜೋಡಿಯು ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಮಹಿಳೆಯರ ಡಬಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಭಾನುವಾರ ನಡೆದ ಫೈನಲ್‌ನಲ್ಲಿ ಎಂಟನೇ ಶ್ರೇಯಾಂಕದ ವೆರೋನಿಕಾ–ಎಲಿಸ್ ಜೋಡಿಯು ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು 3-6, 6-2, 6-4ರಿಂದ ನಾಲ್ಕನೇ ಶ್ರೇಯಾಂಕದ ಹ್ಸೀಹ್ ಸು-ವೀ (ತೈವಾನ್) ಮತ್ತು ಜೆಲೆನಾ ಒಸ್ಟಾಪೆಂಕೊ (ಲಾಟ್ವಿಯಾ) ಅವರಿಗೆ ಆಘಾತ ನೀಡಿತು. 28 ವರ್ಷದ ವೆರೋನಿಕಾಗೆ ಇದು ಚೊಚ್ಚಲ ಗ್ರ್ಯಾನ್‌ಸ್ಲಾಮ್ ಕಿರೀಟವಾಗಿದೆ. 29 ವರ್ಷದ ಎಲಿಸ್‌ಗೆ ಇದು ಐದನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ.

ಟಿ20 ಸರಣಿ 3–2ರಿಂದ ಗೆದ್ದ ಭಾರತದ ವನಿತೆಯರು

ಇಂಗ್ಲೆಂಡ್‌ಗೆ ಸಮಾಧಾನದ ಜಯ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಇಂಗ್ಲೆಂಡ್ ವಿರುದ್ಧದ ಐತಿಹಾಸಿಕ ಟಿ20 ಕ್ರಿಕೆಟ್ ಸರಣಿ ಗೆಲುವನ್ನು ಭಾರತ ಈ ಮೊದಲೇ ದಾಖಲಿಸಿದ್ದರೂ, ಶನಿವಾರ ಆ ಸಂಭ್ರಮ ಹೆಚ್ಚಿಸಲು ಆಗಲಿಲ್ಲ. ರೋಚಕವಾಗಿದ್ದ ಐದನೇ ಹಾಗೂ ಅಂತಿಮ ಪಂದ್ಯವನ್ನು ಇಂಗ್ಲೆಂಡ್ ಐದು ವಿಕೆಟ್‌ಗಳಿಂದ ಗೆದ್ದುಕೊಂಡಿತು.

ಆದರೆ ಸರಣಿಯನ್ನು ಭಾರತ 3–2 ರಿಂದ ಗೆದ್ದುಕೊಂಡಿತು.

ಶಫಾಲಿ ವರ್ಮಾ ಅವರ 75 ರನ್‌ಗಳ (41ಎ, 4x13, 6x1) ನೆರವಿನಿಂದ ಭಾರತ 7 ವಿಕೆಟ್‌ಗೆ 167 ರನ್ ಹೊಡೆಯಿತು. ಇಂಗ್ಲೆಂಡ್ ಐದು ವಿಕೆಟ್ ಕಳೆದುಕೊಂಡು ಕೊನೆಯ ಎಸೆತದಲ್ಲಿ ವಿಜಯದ ರನ್ ಗಳಿಸಿತು.

ಇಂಗ್ಲೆಂಡ್ ತಂಡಕ್ಕೆ ಕೊನೆಯ ಓವರಿನಲ್ಲಿ ಗೆಲುವಿಗೆ ಆರು ರನ್‌ಗಳು ಬೇಕಿದ್ದವು. ವೇಗದ ಬೌಲರ್ ಅರುಂಧತಿ ರೆಡ್ಡಿ ಮಾಡಿದ ಆ ಓವರಿನಲ್ಲಿ ಎರಡು ವಿಕೆಟ್‌ಗಳನ್ನು (ಬ್ಯೂಮಾಂಟ್ ಮತ್ತು ಆಮಿ ಜೋನ್ಸ್) ಪಡೆದರು. ನಂತರ ಮೂರು ಎಸೆತಗಳಲ್ಲಿ ಐದು ರನ್‌ಗಳು ಬೇಕಿದ್ದವು. ಈ ವೇಳೆ ಸೋಫಿಯಾ ಎಕ್ಲೆಸ್ಟೋನ್ (ಅಜೇಯ 4, 2 ಎ) ಮತ್ತು ಪೇಯ್ಜ್ ಷೋಲ್‌ಫೀಲ್ಡ್ (ಅಜೇಯ 2) ಅವರು ತಂಡವನ್ನು ಗೆಲುವಿನ ದಡ ಸೇರಿಸಿದರು.

ಭಾರತ ಮತ್ತು ಇಂಗ್ಲೆಂಡ್ ಮಹಿಳಾ ತಂಡಗಳು ಮೂರು ಪಂದ್ಯಗಳ ಏಕದಿನ ಸರಣಿಯನ್ನು ಆಡಲಿವೆ. ಮೊದಲ ಪಂದ್ಯ ಇದೇ 16ರಂದು ಸೌತಾಂಪ್ಟನ್‌ನಲ್ಲಿ ನಡೆಯಲಿದೆ.

ಸ್ಕೋರುಗಳು: ಭಾರತ: 20 ಓವರುಗಳಲ್ಲಿ 7ಕ್ಕೆ 167 (ಶಫಾಲಿ ವರ್ಮಾ 75, ರಿಚಾ ಘೋಷ್ 24; ಸೋಫಿ ಎಕ್ಲೆಸ್ಟೋನ್ 28ಕ್ಕೆ2, ಚಾರ್ಲಿ ಡೀನ್ 23ಕ್ಕೆ3); ಇಂಗ್ಲೆಂಡ್: 20 ಓವರುಗಳಲ್ಲಿ 5ಕ್ಕೆ 168 (ಸೋಫಿಯಾ ಡಂಕ್ಲಿ 46, ಡಾನಿ ವ್ಯಾಟ್ ಹಾಜ್ 56, ಟಾಮಿ ಬ್ಯೂಮಾಂಟ್ 30; ದೀಪ್ತಿ ಶರ್ಮಾ 31ಕ್ಕೆ2, ಅರುಂಧತಿ ರೆಡ್ಡಿ 47ಕ್ಕೆ2, ರಾಧಾ ಯಾದವ್ 20ಕ್ಕೆ1).

ಬಸವನಗುಡಿ ಈಜು ಕೇಂದ್ರ ತಂಡಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರೀಕ್ಷೆಯಂತೆ ಆತಿಥೇಯ ಬಸವನಗುಡಿ ಈಜು ಕೇಂದ್ರ (ಬಿಎಸಿ) ತಂಡ, ಭಾನುವಾರ ಇಲ್ಲಿ ಮುಕ್ತಾಯಗೊಂಡ ಎನ್‌ಆರ್‌ಜೆ ರಾಜ್ಯ ಸಬ್ ಜೂನಿಯರ್ ಮತ್ತು ಜೂನಿಯರ್ ಈಜು ಚಾಂಪಿಯನ್‌ಷಿಪ್‌ನ ಎರಡೂ ವಿಭಾಗಗಳಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು.

ಬಸವನಗುಡಿಯ ಬಿಎಸಿಯಲ್ಲಿ ನಡೆದ ಈ ಕೂಟದಲ್ಲಿ ಡಾಲ್ಫಿನ್ ಕ್ಲಬ್ ತಂಡ ರನ್ನರ್ ಅಪ್ ಸ್ಥಾನ ಪಡೆಯಿತು. ಸಬ್ ಜೂನಿಯರ್ ವಿಭಾಗದಲ್ಲಿ ನೆಟ್ಟಕಲ್ಲಪ್ಪ ಈಜು ಕೇಂದ್ರ (ಎನ್‌ಎಸಿ) ರನ್ನರ್ ಅಪ್ ಸ್ಥಾನ ಗಳಿಸಿತು. ಐದು ದಿನಗಳ ಈ ಕೂಟದಲ್ಲಿ ಒಟ್ಟು 23 ಕೂಟ ದಾಖಲೆಗಳು ನಿರ್ಮಾಣವಾದವು.

ಸಬ್ ಜೂನಿಯರ್ ಬಾಲಕರ ಒಂದನೇ ಎ ಗುಂಪಿನಲ್ಲಿ ದಕ್ಷಣ್ ಎಸ್. (ಬಿಎಸಿ), ಒಂದನೇ ಬಿ ಗುಂಪಿನಲ್ಲಿ ಸಮರ್ಥ ಗೌಡ ಬಿ.ಎಸ್. (ಬಿಎಸಿ), ಎರಡನೇ ಎ ಗುಂಪಿನಲ್ಲಿ ಶರಣ್ ಎಸ್. (ಬಿಎಸಿ), ಎರಡನೇ ಬಿ ಗುಂಪಿನಲ್ಲಿ ಜೈ ಸಿಂಗ್ (ಎಸಿಇ) ಮತ್ತು ಎಸ್. ಕ್ರಿಷ್ (ಬಿಎಸಿ), ಮೂರನೇ ಎ ಗುಂಪಿನಲ್ಲಿ ಎಚ್.ಅಮಿತ್ ಪವನ್ (ಜೆಬಿಆರ್‌ಎಸ್), ಮೂರನೇ ಬಿ ಗುಂಪಿನಲ್ಲಿ ಅವೀಕ್ ನಮಿತ್ ಗೌಡ (ಮತ್ಸ್ಯ) ಅವರು ವೈಯಕ್ತಿಕ ಪ್ರಶಸ್ತಿ ಪಡೆದರು.

ಸಬ್ ಜೂನಿಯರ್ ಬಾಲಕಿಯರ ಒಂದನೇ ಎ ಗುಂಪಿನಲ್ಲಿ ತಾನ್ಯಾ ಎಸ್. (ಜೆಬಿಆರ್‌ಎಸ್), ಒಂದನೇ ಬಿ ಗುಂಪಿನಲ್ಲಿ ತನಿಶಿ ಗುಪ್ತಾ (ಡಾಲ್ಫಿನ್), ಎರಡನೇ ಎ ಗುಂಪಿನಲ್ಲಿ ತ್ರಿಷಾ ಸಿಂಧು (ಗ್ಲೋಬಲ್) ಮತ್ತು ಮೀರಾ ನಂಬಿಯಾರ್ (ಕೆಎಸ್‌ಎ), ಎರಡನೇ ಬಿ ಗುಂಪಿನಲ್ಲಿ ಸುಮನ್ವಿ ವಿ (ಡಿಕೆವಿ), ಮೂರನೇ ಎ ಗುಂಪಿನಲ್ಲಿ ನೈರಾ ಬೋಪಣ್ಣ ಕೆ (ಸ್ವಿಮ್‌ಲೈಫ್) ಮತ್ತು ಸ್ತುತಿ ಸಿಂಗ್ (ಬಿಎಸ್‌ಎ), ಮೂರನೇ ಬಿ ಗುಂಪಿನಲ್ಲಿ ಝುರಣಾ ಸಿಸೋಡಿಯಾ (ಏಕಲವ್ಯ) ಅವರು ವೈಯಕ್ತಿ ಚಾಂಪಿಯನ್‌ಗಳಾದರು.

ಭಾನುವಾರ ನಾಲ್ಕು ಕೂಟ ದಾಖಲೆಗಳಾದವು. ಇದರಲ್ಲಿ ಎರಡು ದಾಖಲೆಗಳ ಗೌರವ ಶರಣ್ ಅವರದಾಯಿತು. ಬಾಲಕರ ಎರಡನೇ ಗುಂಪಿನ 100 ಮೀ. ಫ್ರೀಸ್ಟೈಲ್ ಸ್ಪರ್ಧೆಯನ್ನು ಅವರು 54.72 ಸೆ.ಗಳಲ್ಲಿ ಪೂರೈಸಿ, ಇಶಾನ್ ಮೆಹ್ರಾ ಹೆಸರಿನಲ್ಲಿ 54.92 ಸೆ.ಗಳ ದಾಖಲೆ ಮುರಿದರು.

ಸಬ್ ಜೂನಿಯರ್ ವಿಭಾಗದಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡ ಬಿಎಸಿ ತಂಡ.

ವಿಚ್ಛೇದನ ಘೋಷಿಸಿದ ಸೈನಾ–ಕಶ್ಯಪ್ ದಂಪತಿ

ನವದೆಹಲಿ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್ ಮತ್ತು ಪರುಪಳ್ಳಿ ಕಶ್ಯಪ್ ದಂಪತಿ ಪರಸ್ಪರ ಬೇರ್ಪಡುವ ನಿರ್ಧಾರವನ್ನು ಭಾನುವಾರ ಪ್ರಕಟಿಸಿದ್ದಾರೆ.

35 ವರ್ಷ ವಯಸ್ಸಿನ ಸೈನಾ ಅವರು ಇನ್‌ಸ್ಟಾಗ್ರಾಮ್‌ನಲ್ಲಿ ತಮ್ಮ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಂಡಿದ್ದಾರೆ. 2018ರಲ್ಲಿ ಸೈನಾ ಅವರು ಬ್ಯಾಡ್ಮಿಂಟನ್ ಆಟಗಾರನಾಗಿದ್ದ ಕಶ್ಯಪ್ ಅವರನ್ನು ವರಿಸಿದ್ದರು.

'ಜೀವನವು ಕೆಲವೊಮ್ಮೆ ನಮ್ಮನ್ನು ವಿಭಿನ್ನ ದಿಕ್ಕುಗಳಲ್ಲಿ ಕರೆದೊಯ್ಯುತ್ತದೆ. ಸಾಕಷ್ಟು ಯೋಚಿಸಿ ಕಶ್ಯಪ್ ಮತ್ತು ನಾನು ಬೇರೆಯಾಗಲು ನಿರ್ಧರಿಸಿದ್ದೇವೆ. ನಮ್ಮ ಖಾಸಗಿತನವನ್ನು ಗೌರವಿಸುತ್ತೀರಿ ಎಂದು ಭಾವಿಸುವೆ' ಎಂದು ಸೈನಾ ಬರೆದುಕೊಂಡಿದ್ದಾರೆ.

ಸತ್ಯಶೋಧನಾ ಸಮಿತಿ ರಚಿಸಿದ ಉಷಾ

ನವದೆಹಲಿ (ಪಿಟಿಐ): ಭಾರತ ಬಾಕ್ಸಿಂಗ್ ಫೆಡರೇಷನ್ ಚುನಾವಣೆ ವಿಳಂಬಕ್ಕೆ ಕಾರಣಗಳನ್ನು ಕಂಡುಕೊಳ್ಳಲು ಮತ್ತು ನ್ಯಾಯಸಮ್ಮತವಾಗಿ ಚುನಾವಣೆ ನಡೆಸಲು ಏನು ಮಾಡಬಹುದೆಂದು ಶಿಫಾರಸುಗಳನ್ನು ಮಾಡಲು, ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ. ಉಷಾ ಅವರು ಮೂವರು ಸದಸ್ಯರ ಸತ್ಯಶೋಧನಾ ಸಮಿತಿ ರಚಿಸಿದ್ದಾರೆ.

ಐಒಎ ಖಜಾಂಚಿ ಸಹದೇವ್ ಯಾದವ್ ಅವರು ಅಧ್ಯಕ್ಷರಾಗಿರುವ ಈ ಸಮಿತಿಗೆ, ಕಾರ್ಯಕಾರಿ ಸಮಿತಿ ಸದಸ್ಯ ಭೂಪೆಂದರ್ ಸಿಂಗ್ ಬಾಜ್ವಾ ಮತ್ತು ವಕೀಲ ಪಾಯಲ್ ಕಾಕ್ರ ಅವರು ಸದಸ್ಯರಾಗಿದ್ದಾರೆ. ವಾರದ ಒಳಗೆ ವರದಿ ಸಲ್ಲಿಸುವಂತೆಯೂ ತಿಳಿಸಲಾಗಿದೆ.

'ಬಾಕ್ಸಿಂಗ್ ಫೆಡರೇಷನ್‌ನ ಹಾಲಿ ಪದಾಧಿಕಾರಿಗಳ ಅವಧಿ ಫೆ. 2ರಂದು ಮುಗಿದಿದ್ದು, ನಂತರ ಹೊಸದಾಗಿ ಚುನಾವಣೆ ನಡೆದಿಲ್ಲ' ಎಂದು ಉಷಾ ಅವರು ಜುಲೈ 11ರ ಐಒಎ ಕಚೇರಿ ಆದೇಶದಲ್ಲಿ ತಿಳಿಸಿದ್ದಾರೆ.

ಪಿ.ಟಿ. ಉಷಾ

ಹರಿಕೃಷ್ಣ ಎ.ಆರ್. 87ನೇ ಜಿಎಂ

ನವದೆಹಲಿ (ಪಿಟಿಐ): ಹರಿಕೃಷ್ಣ ಎ.ಆರ್. ದೇಶದ 87ನೇ ಚೆಸ್ ಗ್ರ್ಯಾಂಡ್ ಮಾಸ್ಟರ್ ಎನಿಸಿದರು. ಫ್ರಾನ್ಸ್‌ನಲ್ಲಿ ಲಾ ಪ್ಲಾನ್ಯ ಚೆಸ್ ಫೆಸ್ಟಿವಲ್‌ನಲ್ಲಿ ಅವರು ಮೂರನೇ ಜಿಎಂ ನಾರ್ಮ್ ಪಡೆದರು.

ಹರಿಕೃಷ್ಣ 2018ರಲ್ಲಿ ಇಂಟರ್‌ನ್ಯಾಷನಲ್ ಮಾಸ್ಟರ್ ಆಗಿದ್ದರು. ಸ್ವಿಜರ್ಲೆಂಡ್‌ನಲ್ಲಿ 2023ರಲ್ಲಿ ನಡೆದ ಬೀಲ್ ಚೆಸ್ ಫೆಸ್ಟಿವಲ್‌ನಲ್ಲಿ ಮೊದಲ ಜಿಎಂ ನಾರ್ಮ್ ಪಡೆದ ಅವರು ಸ್ಪೇನ್‌ನ ಲಿನ್ಸ್ ಅಂದುಜಾರ್ ಓಪನ್ ಟೂರ್ನಿಯಲ್ಲಿ ಎರಡನೇ ನಾರ್ಮ್ ಪಡೆದಿದ್ದರು.

*ಕೊಡುಗೆಗಳು 2025 ಜುಲೈ 31ರ ವರೆಗೆ ಮಾತ್ರ. Hy - CNG Duo Hyundai EXTER ಮತ್ತು Grand i10 NIOSನಲ್ಲಿ ಲಭ್ಯವಿದೆ. ಸ್ಥಳಾವಕಾಶ ಇದೆ. ಮೈಲೇಜ್ ಇದೆ.
##ಮಾನ್ಯತೆ ಹೊಂದಿದ ಪ್ರಮಾಣಪತ್ರವನ್ನು ನೀಡಿದರೆ ಹೆಚ್ಚುವರಿ ಸ್ಕ್ರಾಪೇಜ್ ಬೋನಸ್ ಸಿಗಲಿದೆ. #CSD ಮತ್ತು KPKB ಗ್ರಾಹಕರಿಗೆ ಹೆಚ್ಚುವರಿ ಲಾಭಗಳು.

Hyundai Cl!ck to Buy Scan here | 3 YEAR Unlimited** Kilometer Warranty — Up to 7 years extended warranty^ | 3 YEAR Road Side Assistance(RSA)*** | UP TO 5 YEAR Shield of Trust Service Packages~ | Hy - CNG Duo | HYUNDAI

For Information Contact: Toll Free:1800114645 **Bangalore:** Advaith Hyundai, Residency Road, Ph: 9606076451 Marathahalli, Outer Ring Road, Ph: 9606076452 Vasanthnagar, Ph: 9606076453 Bannerghatta Road, Ph: 9606076454 Koramangala, Ph: 9606076455 Avalahalli, Ph: 9606076456, Sarjapura Ph: 9606076458 Bilekahalli, Ph: 9606076457, Trident Hyundai, Sankey Road, Ph: 7353762526, K R Puram, Ph: 9844266873, Hosur Road, Ph: 9743786716, Indiranagar, Ph: 9743107927, Yelahanka, Ph: 7353750677, Yeshwanthpur, Ph: 9844701452, Blue Hyundai, Mysore Road, Ph: 9591100001, Rajajinagar, Ph: 9591200001, Magadi Road, Ph: 9513200033, New Bel Road, Ph: 9513000800, Basavanagudi, Ph: 9591211118, Lakshmi Hyundai, Hebbal Ph: 9900037900, Kalyan Nagar, Ph: 8494913303, HBR Layout, Ph: 8884441111, Whitefield, Ph: 8884497700, Devanahalli, Ph: 8884499037, Pavan Hyundai, Kanakpura Road, Ph: 7337882522, Electronic City, Ph: 7337882522, Dhruvdesh Hyundai, Ph: 9205770577 **Mangalore:** Kanchana Hyundai, Ph: 9900144113, Advaith Hyundai, Ph: 7760962815 **Udupi:** Kanchana Hyundai, Ph: 9972440758 **Mysore:** Advaith Hyundai, Belavadi, Ph: 9620257012 JLB Road, Ph: 9606938831, KPR Hyundai, Mysore Ph: 9606470291 **Hassan:** Advaith Hyundai, Ph: 9606938828 **Shimoga:** Rahul Hyundai, Ph: 6364465441 **Hubli:** Bellad Hyundai, Ph: 9900553490, Raam Hyundai, Ph: 7337785999, **Kanakpura:** Pavan Hyundai, Ph: 7892718572 **Belgaum:** Nagshanti Hyundai, Ph: 9844890456, 9844890459 **Bijapur:** Narayan Hyundai, Ph: 9742272157, 9742272153 **Bagalkot:** Narayan Hyundai, Ph: 9742253245 **Jamkhandi:** Narayan Hyundai, Ph: 9742272179 **Davanagere:** K J Hyundai, Ph: 7022001201, **Chitradurga:** K J Hyundai, Ph: 7022898488, **Channagiri:** K J Hyundai, Ph: 9945059764, **Ranebennur:** K J Hyundai, Ph: 7022992350, **Gulbarga:** Shah Hyundai, Ph: 9108049250 **Tumkur:** Pavan Hyundai, Ph: 7337882522 **Bellari:** Anika Hyundai, Ph: 8884484020 **Ramanagara:** Advaith Hyundai, Ph: 9900095504 **Kolar:** Advaith Hyundai, Ph: 9620229885, **Chintamani:** Ph: 8147994737 **Mandya:** Advaith Hyundai, Ph: 9740060075 **Coorg:** Advaith Hyundai, Madikeri, Ph: 9538971151 Gonikoppal, Ph: 9945774088 Kushalnagar, Ph: 9538971149 **Tiptur:** Advaith Hyundai, Ph: 7619577050 **Chikodi:** Nagshanti Hyundai, Ph: 8951947001 **Gokak:** Nagshanti Hyundai, Ph: 8147978240 **Savadatti:** Nagshanti Hyundai, Ph: 8007228679 **Athani:** Nagshanti Hyundai, Ph: 9620341451, **Belthangady:** Advaith Hyundai, Ph: 7760962819 **Sullia:** Advaith Hyundai Ph: 7760962813 **Dharwad:** Bellad Hyundai, Ph: 6364333461, **Hunsur:** KPR Hyundai, Ph: 9538879235 **Channarayapatna:** KPR Hyundai, Ph: 9538879238 **Kollegala:** KPR Hyundai, Ph: 9606478215 **Sakleshpura:** KPR Hyundai, Ph: 9035708716 **Raichur:** Shah Hyundai, Ph: 9108049252 **Bidar:** Shah Hyundai, Ph: 7625093556 **Yadgir:** Shah Hyundai, Ph: 9108049262 **Sindhanur:** Shah Hyundai, Ph: 9071411136/9513897444 **Basavakalyan:** Shah Hyundai, Ph: 7353307776 **Madikeri:** Advaith Hyundai, Ph: 9538971151 **Kushalnagar:** Advaith Hyundai, Ph: 9538971149 **Gonikoppa:** Advaith Hyundai, Ph: 9945774088 **Belthangady:** Advaith Hyundai, Ph: 77609 62819 **Sullia:** Advaith Hyundai, Ph: 7760962813 **Chikmagalur:** Rahul Hyundai, Ph: 7795800038 **Sagara:** Rahul Hyundai, Ph: 7625080180 **Thirthahalli:** Rahul Hyundai, Ph: 7625080183 **Shikaripura:** Rahul Hyundai, Ph: 9108843230 **Kadur:** Rahul Hyundai, Ph: 9844261050 **Puttur:** Kanchana Hyundai, Ph: 9740873450 **Surathkal:** Kanchana Hyundai, Ph: 9482574530 **Karkala:** Kanchana Hyundai, Ph: 8762464853, **Kundapura:** Kanchana Hyundai, Ph: 9900145948 **Kumta:** Kanchana Hyundai, Ph: 9535855966 **Sirsi:** Kanchana Hyundai, Ph: 9731856300 **Karwara:** Kanchana Hyundai, Ph: 6364860518, **Hospet:** Anika Hyundai, Ph: 8884484018 **Ballari:** Anika Hyundai, Ph: 8884484020 **Koppal:** Anika Hyundai, Ph: 8884484031

my Hyundai app | Hyundai Promise Certified Pre-Owned Car | Scan to chat with us or give a missed call at 9555295868

*Terms & Conditions apply. For more details, visit your nearest Hyundai showroom. Benefits mentioned include cash, corporate, either exchange or scrappage benefits as applicable. Benefits mentioned may vary from city to city. ##Scrappage bonus will be available against a valid certificate of deposit (issued by government approved and operational scrappage center) and exchange of old car. In case the customer is giving certificate of deposit but not physically exchanging his old car and buying a new car - then only scrappage bonus of ₹5 000 will be paid. Benefits may vary with variants. **3-year warranty or upto 100 000 km whichever is earlier for Grand i10 NIOS, AURA, i20 & i20 N Line. 3-year unlimited km warranty is applicable for EXTER, VENUE, VENUE N Line, CRETA, CRETA N Line, CRETA Electric, ALCAZAR, TUCSON, VERNA and IONIQ 5. ^Upto 7 Years extended warranty is available for Grand i10 NIOS, i20, i20 N Line, AURA, VERNA, EXTER, VENUE, VENUE N Line, CRETA, CRETA N Line, CRETA Electric, ALCAZAR & TUCSON in all variants (Petrol/Diesel/CNG) and subject to payment. ***3 years Roadside Assistance (with taxi support & introduction of 10 year retail program). ~For detailed T&C of RSA, Shield of Trust & Super, kindly visit Hyundai India website. This advertisement and car shown here is for creative representation purposes only and the depictions are for illustrative purposes. Features and specifications shown may vary or may not be a part of standard fitment and are subject to change without prior notice. Hyundai Motor India Limited reserves the right to change specifications, colour, equipment and schemes at any time without prior notice. The black shade on glasses are due to lighting effect. Size and colour may appear to vary due to lighting and position effect. Extended Warranty and Shield of Trust & Super are on payable basis. For more details on warranty, please refer owners' manual. #CSD: Canteen Stores Department, KPKB: Kendriya Police Kalyan Bhandar.
INNOCEAN-039/25 KAN